ಬುಧವಾರ, ನವೆಂಬರ್ 3, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾತುಕತೆ

ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿ ಹವಾಮಾನ ಬದಲಾವಣೆ ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು

ಬುಧವಾರ, ನವೆಂಬರ್ 3, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೆಲುವಿನ ಸಂಭ್ರಮ

ಪಶ್ಚಿಮ ಬಂಗಾಳದ ಶಾಂತಿಪುರ ಕ್ಷೇತ್ರದ ವಿಧಾನಸಭಾ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ಟಿಎಂಸಿ ಅಭ್ಯರ್ಥಿ ಬ್ರಜಕಿಶೋರ್ ಗೋಸ್ವಾಮಿ ಅವರು ಸಂಸದೆ ಮಹುವಾ ಮೊಯಿತ್ರಾ ಜತೆಗೆ ವಿಜಯದ ಚಿಹ್ನೆ ತೋರಿಸಿ ಸಂಭ್ರಮಿಸಿದರು

ಈ ದೀಪಾವಳಿಯ ಸಂದರ್ಭದಲ್ಲಿ ನಿಮ್ಮ ಮನೆಯನ್ನು ಬೆಳಗಿಸಿ ಬಿಪಿಎಲ್ ಎಲೆಕ್ಟ್ರಾನಿಕ್ಸ್‌ನ ವಿಶಾಲ ಶ್ರೇಣಿಯೊಂದಿಗೆ. ಇವನ್ನು ತಯಾರಿಸಲಾಗಿದೆ ನಿಮ್ಮ ಜೀವನವನ್ನು ಇನ್ನಷ್ಟು ಸಮೃದ್ಧವಾಗಿಸಲೆಂದು!

bpl.in | /bplindia | /bpl.india | /bpl_india | /bplindia

BPL is a registered trademark of BPL Limited and is used under license by Reliance Retail Limited.

ASSURED GIFTS
UP TO WORTH ₹2099*

UP TO ₹3500 CASHBACK*
HDFC BANK | kotak

Offer Valid from 3rd October to 15th November 2021

AVAILABLE AT: Reliance digital (PERSONALISING TECHNOLOGY) | ADISHWAR ELECTRO WORLD (gadget for every budget!) | MY JIO STORE Jio DIGITAL LIFE | Shop online at: reliancedigital.in

For Trade Enquiry: Sharjeel Ahmed - 9739994047 • **Adishwar India Limited: Rajajinagar:** 9731306572 • **Banashankari:** 9731307254 • **Chandralayout:** 9731306558 • **HRBR Layout:** 9591997251 • **Marathalli:** 9731306703 • **HSR Layout:** 9731306550 • **Premium RJN:** 9731306731 • **Rammurthy Nagar:** 8861007307 • **Jayanagar:** 9731306617 • **Nagarbhavi:** 9731306616 • **Mathikere:** 7702203252 • **Sarjapur:** 9731307230 • **Puttenahalli:** 8861007298 • **Sunkadakkatte:** 9686680764 • **Vidyaranyapura:** 9731306692 • **Hosur Road:** 9591997265 • **Vijaynagar:** 9731306631 • **Hulimavu:** 9731306625 • **Peenyadasarahalli:** 9731306684 • **Channasandra:** 9731306766 • **Amruthalli:** 9731306614 • **Thanisandra:** 9731306763 • **Kengeri:** 9731306634 • **Hegganahalli:** 9591997257 • **Heebagodi:** 9731307257 • **Yelahanka:** 9731306702 • **White Field:** 9513499851 • **Uttarahalli:** 9731306547 • **Hennur:** 9731306571 • **KR Puram:** 9108023817 • **Hoskote:** 9731306767 • **R T Nagar:** 9731306593 • **Madevpura:** 9148151731 • **Begur Road:** 9731306604 • **Konanakunte:** 9916777822 • **Authorised Retailers: Bangalore: Jayanagar:** M/s. Devi International - 7204707152/9844207628 • **Yashwantpur:** M/s. Neminath Electronics - 9036957599 • **Authorised Dealer: Hubli:** Yatindra Electronics - 9886255003 • **Belgaum:** Galaxy Refrigeration - 8147441564 • **Authorised Distributor: Bangalore City And Rural:** M/s. Kromo Technologies Private Limited - 9945277710 • **Kolar/KGF:** M/s. Ravi Enterprises - 9845229626/9008296101 • **Mysore/Mandya/CR Nagar/Coorg:** M/s. Manthram - 9590044900/9620039100 • **Shivamogga/Chikmangalore:** Vijaya Agencies - 9845939536/9740909992 • **North Canara:** Jayashree Inc. Kumta - 8746991111/9449955955 • **Hubli/Belgaum/Bagalkot/Davanagere/Chitradurga:** Neminath Electronics - 9880411004/9945431542 • **Gulbarga/Bidar /Yadgir:** M/s. Namoshi Enterprise - 9980543432

*Terms and conditions apply. Up to ₹3500 Cashback: HDFC Bank – 10% Cashback up to ₹3500 on BPL range of products through HDFC Bank Credit / Debit Card EMI. Offer valid once per card per calendar month from 3rd October to 15th November 2021. Kotak Mahindra Bank - 10% Cashback up to ₹3500 on BPL range of products through Kotak Mahindra Bank Credit Cards (Non EMI & EMI) and Debit Card EMI. Offer valid once per card per calendar month from 3rd October to 31st December 2021. Offers are applicable on selected models only. Offer applicable on a minimum purchase value of ₹12,000. Offer applicable through Pine Labs terminals only. The visuals are only for indication purpose. Comprehensive warranty of 2 years only on TV. Assured gifts on select models. For service & installation - 18008891047 | customercare@bpl.in

ಬುಧವಾರ • ನವೆಂಬರ್ 3, 2021 ಪ್ರಜಾವಾಣಿ

ಗ್ಲಾಸ್ಗೋ ಹವಾಮಾನ ವೈಪರೀತ್ಯ ತಡೆ ಸಮಾವೇಶ • ಪ್ರಧಾನಿ ನರೇಂದ್ರ ಮೋದಿ ಘೋಷಣೆ

‘2070ಕ್ಕೆ ಭಾರತದಿಂದ ನೆಟ್ ಝೀರೋ ಗುರಿ’

ಗ್ಲಾಸ್ಗೋ (ಪಿಟಿಐ): ‘ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸುವ ನೆಟ್ ಝೀರೋ ಗುರಿಯನ್ನು ಭಾರತವು 2070ಕ್ಕೆ ತಲುಪಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿ ನಡೆಯುತ್ತಿರುವ ಹವಾಮಾನ ವೈಪರೀತ್ಯ ತಡೆ ಸಮಾವೇಶದಲ್ಲಿ ಘೋಷಿಸಿದ್ದಾರೆ.

ಅಮೆರಿಕ ಮತ್ತು ಐರೋಪ್ಯ ದೇಶಗಳು 2050ರ ವೇಳೆಗೆ ನೆಟ್ ಝೀರೋ ಗುರಿಯನ್ನು ತಲುಪುವುದಾಗಿ ಹೇಳಿದ್ದರೆ, ಚೀನಾವು 2060ಕ್ಕೆ ಈ ಗುರಿ ತಲುಪುವುದಾಗಿ ಹೇಳಿದೆ. ಭಾರತವು ಈ ಗುರಿ ತಲುಪಲು ಇನ್ನೂ 10 ವರ್ಷ ಹೆಚ್ಚುವರಿ ಸಮಯಾವಕಾಶ ತೆಗೆದುಕೊಳ್ಳಲಿದೆ ಎಂದು ಮೋದಿ ಹೇಳಿದ್ದಾರೆ.

ಅಭಿವೃದ್ಧಿಶೀಲ ದೇಶಗಳಲ್ಲಿ ಈ ಗುರಿ ಹಾಕಿಕೊಂಡ ಮೊದಲ ದೇಶ ಭಾರತವಾಗಿದೆ. 2015ರ ಪ್ಯಾರಿಸ್ ಶೃಂಗಸಭೆಯಲ್ಲಿ ಹಾಕಿಕೊಂಡಿದ್ದ ಗುರಿಗಳನ್ನು ಪೂರ್ಣಪ್ರಮಾಣದಲ್ಲಿ ತಲುಪುವಲ್ಲಿ ಭಾರತವು ವಿಫಲವಾಗಿದೆ. ಹೀಗಾಗಿ ಈ ನೂತನ ಕಾರ್ಯಯೋಜನೆಯನ್ನು ಪ್ರಕಟಿಸಿದೆ. ಈ ಮೂಲಕ ನೆಟ್ ಝೀರೋ ಗುರಿಯನ್ನು ತಲುಪಲು ಅವಕಾಶ ಮಾಡಿಕೊಂಡಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

‘2070ರ ವೇಳೆಗೆ ಭಾರತವು ನೆಟ್ ಝೀರೋ ಗುರಿ ತಲುಪಲು ಅಭಿವೃದ್ಧಿ ಹೊಂದಿದ ದೇಶಗಳು ಆರ್ಥಿಕ ನೆರವು ನೀಡಬೇಕಿದೆ. ಇದಕ್ಕಾಗಿ ಅಭಿವೃದ್ಧಿಶೀಲ ದೇಶಗಳಿಗೆ ₹75 ಲಕ್ಷ ಕೋಟಿ (1 ಲಕ್ಷ ಕೋಟಿ ಡಾಲರ್) ನೆರವು ನೀಡಬೇಕಿದೆ. ಆದರೆ ಈವರೆಗೆ ಆರ್ಥಿಕ ನೆರವು ನೀಡುವುದಾಗಿ ಶ್ರೀಮಂತ ದೇಶಗಳು ನೀಡಿದ್ದ ಭರವಸೆಗಳು ಟೊಳ್ಳು ಎಂಬುದು ಎಲ್ಲರಿಗೂ ಗೊತ್ತಾಗಿದೆ. ಆದರೆ ಈಗ ಈ ಗುರಿಯನ್ನು ತಲುಪಲು, ಒಂದೊಂದೇ ಮೈಲುಗಲ್ಲು ಮುಟ್ಟದಂತೆ ಆರ್ಥಿಕ ನೆರವು ಹರಿದುಬರಬೇಕು’ ಎಂದು ಮೋದಿ ಒತ್ತಾಯಿಸಿದ್ದಾರೆ.

ಗ್ಲಾಸ್ಗೋ ಸಮಾವೇಶದಲ್ಲಿ 1.5 ಎಂಬ ಸಂಕೇತ ಪ್ರದರ್ಶಿಸಿದ ಇಂಗ್ಲೆಂಡ್ ಪ್ರಧಾನಿ ಬೋರಿಸ್ ಜಾನ್ಸನ್ ಎಎಫ್‌ಪಿ ಚಿತ್ರ

ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ

ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ಭಾರತವು ಶ್ರಮಿಸುತ್ತಿದೆ. ಈ ಹೋರಾಟದಲ್ಲಿ ಭಾರತವು ನಮಗೆ ಪ್ರಮುಖ ಪಾಲುದಾರ

ಉರ್ಸುಲಾ ವಾನ್ ಡೆರ್ ಲೇಯೆನ್, ಐರೋಪ್ಯ ಆಯೋಗದ ಅಧ್ಯಕ್ಷ

ಭಾರತವು ಬಹಳ ದೊಡ್ಡ ಪ್ರತಿಜ್ಞೆ ಸ್ವೀಕರಿಸಿದೆ. 2030ಕ್ಕೆ ಇಂಗಾಲ ಹೊರಸೂಸುವಿಕೆಯಲ್ಲಿ 100 ಕೋಟಿ ಟನ್ ಕಡಿತ ಮಾಡುವುದು ಮಹತ್ವದ ಕ್ರಮ

ಅಜಯ್ ಮಾಥುರ್, ಅಂತರರಾಷ್ಟ್ರೀಯ ಸೌರಶಕ್ತಿ ಒಕ್ಕೂಟದ ಪ್ರಧಾನ ನಿರ್ದೇಶಕ

2070ರ ವೇಳೆಗೆ ನೆಟ್ ಝೀರೋ ಸಾಧಿಸುತ್ತೇವೆ ಎಂಬುದು ಮಹತ್ವಾಕಾಂಕ್ಷಿ ಘೋಷಣೆ. ಈ ಗುರಿಯನ್ನು ತಲುಪುವುದು ಸವಾಲಿನ ಕೆಲಸ

ಸುನಿತಾ ನಾರಾಯಣ್, ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್ ನಿರ್ದೇಶಕಿ

ಮೋದಿ ಅವರು ಈ ಗುರಿಯನ್ನು ಘೋಷಿಸುವ ಮೂಲಕ, ಅಭಿವೃದ್ಧಿ ಹೊಂದಿದ ದೇಶಗಳ ಮೇಲೆ ಒತ್ತಡ ಸೃಷ್ಟಿಸಲು ಯತ್ನಿಸಿದ್ದಾರೆ. ಅಭಿವೃದ್ಧಿ ಹೊಂದಿದ ದೇಶಗಳು ಈಗ ಆರ್ಥಿಕ ನೆರವು ನೀಡಲೇಬೇಕಾದ ಒತ್ತಡದ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಮೋದಿ ಘೋಷಣೆಗಳು

- 2030ರ ವೇಳೆಗೆ ದೇಶದಲ್ಲಿ 450-500 ಗಿಗಾವಾಟ್‌ನಷ್ಟು ವಿದ್ಯುತ್ ಅನ್ನು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸಲಾಗುವುದು
- 2030ರ ವೇಳೆಗೆ ದೇಶಕ್ಕೆ ಅಗತ್ಯವಿರುವ ವಿದ್ಯುತ್‌ನಲ್ಲಿ ಶೇ 50ರಷ್ಟನ್ನು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸಲಾಗುವುದು
- 2030ರ ವೇಳೆಗೆ ಇಂಗಾಲ ಹೊರಸೂಸುವಿಕೆಯನ್ನು ಶೇ 45ರಷ್ಟು ಕಡಿತ ಮಾಡಲಾಗುವುದು (ಈ ಹಿಂದೆ 2030ರ ವೇಳೆಗೆ ಶೇ 35ರಷ್ಟು ಕಡಿತ ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು)
- 2030ರ ವೇಳೆಗೆ ರೈಲ್ವೆಯ ಇಂಗಾಲ ಹೊರಸೂಸುವಿಕೆಯನ್ನು ಶೇ 100ರಷ್ಟು ಕಡಿತ ಮಾಡಲಾಗುವುದು. ಇದರಿಂದ ವಾರ್ಷಿಕ 6 ಕೋಟಿ ಟನ್ ಇಂಗಾಲದ ಮಾಲಿನ್ಯ ಕಡಿಮೆಯಾಗಲಿದೆ
- 2030ರ ವೇಳೆಗೆ ಭಾರತದ ವಾರ್ಷಿಕ ಇಂಗಾಲ ಹೊರಸೂಸುವಿಕೆಯಲ್ಲಿ 100 ಕೋಟಿ ಟನ್‌ನಷ್ಟು ಕಡಿಮೆ ಮಾಡಲಾಗುವುದು

ಗುರಿ ತಲುಪುವ ಹಾದಿ

ಭಾರತವು 2070ರ ವೇಳೆಗೆ ನೆಟ್ ಝೀರೋ ಗುರಿ ತಲುಪಲು ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯನ್ನು ಶೇ 99.99ರಷ್ಟು ಕಡಿತಗೊಳಿಸಬೇಕು ಎಂದು ತಜ್ಞರು ಹೇಳಿದ್ದಾರೆ. ಈ ಗುರಿ ತಲುಪಲು ಏನೇನು ಮಾಡಬೇಕು ಎಂಬುದನ್ನು ದೆಹಲಿಯ ‘ಕೌನ್ಸಿಲ್ ಆನ್ ಎನರ್ಜಿ, ಎನ್ವಿರಾನ್‌ಮೆಂಟ್ ಅಂಡ್ ವಾಟರ್’ ಸಂಘಟನೆಯು ಪಟ್ಟಿ ಮಾಡಿದೆ.

- ಸೌರಶಕ್ತಿ ಆಧಾರಿತ ವಿದ್ಯುತ್ ಉತ್ಪಾದನೆ ಸಾಮರ್ಥ್ಯವನ್ನು 2050ರ ವೇಳೆಗೆ 1,689 ಗಿಗಾವಾಟ್, 2070ರ ವೇಳೆಗೆ 5,630 ಗಿಗಾವಾಟ್‌ಗೆ ಹೆಚ್ಚಿಸಬೇಕು
- ಪವನ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 2050ರ ವೇಳೆಗೆ 557 ಗಿಗಾವಾಟ್ ಮತ್ತು 2070ರ ವೇಳೆಗೆ 1,792 ಗಿಗಾವಾಟ್‌ಗೆ ಹೆಚ್ಚಿಸಬೇಕು
- 2070ರ ವೇಳೆಗೆ ದೇಶದ ಶೇ 79ರಷ್ಟು ಟ್ರಕ್‌ಗಳು ವಿದ್ಯುತ್ ಚಾಲಿತವಾಗಿರಬೇಕು. ಶೇ 21ರಷ್ಟು ಟ್ರಕ್‌ಗಳು ಜಲಜನಕದ ಸೆಲ್ ಚಾಲಿತವಾಗಿರಬೇಕು
- 2070ರ ವೇಳೆಗೆ ಕಾರು, ಟ್ರಕ್, ಬಸ್ ಮತ್ತು ವಿಮಾನಗಳಲ್ಲಿ ಬಳಕೆಯಾಗುವ ಇಂಧನದಲ್ಲಿ ಶೇ 84ರಷ್ಟು ಜೈವಿಕ ಇಂಧನವಾಗಿರಬೇಕು
- ಕೈಗಾರಿಕಾ ವಲಯದಲ್ಲಿ ಕಲ್ಲಿದ್ದಲು ಬಳಕೆ ಪ್ರಮಾಣವು 2040ರಿಂದ ಇಳಿಕೆಯಾಗಬೇಕು ಮತ್ತು 2065ರ ವೇಳೆಗೆ ಶೇ 97ರಷ್ಟು ಕಡಿಮೆಯಾಗಬೇಕು
- ಕಚ್ಚಾತೈಲ ಬಳಕೆ ಪ್ರಮಾಣವು 2050-2070ರ ಮಧ್ಯ ಶೇ 90ರಷ್ಟು ಕಡಿಮೆಯಾಗಬೇಕು

ಪ್ರಧಾನಿ ಮೋದಿ ಅವರು ಗ್ಲಾಸ್ಗೋ ಸಮಾವೇಶದಲ್ಲಿ ನೇಪಾಳ ಪ್ರಧಾನಿ ಮತ್ತು ಇಸ್ರೇಲ್ ಪ್ರಧಾನಿಯ ಜತೆಗೆ ಮಾತುಕತೆ ನಡೆಸಿದರು. ಗೇಟ್ಸ್ ಪ್ರತಿಷ್ಠಾನದ ಬಿಲ್ ಗೇಟ್ಸ್ ಅವರ ಜತೆಯೂ ಮೋದಿ ಮಾತುಕತೆ ನಡೆಸಿದರು.

ದ್ವೀಪ ರಾಷ್ಟ್ರಗಳಿಗೆ ನೆರವು

ಹವಾಮಾನ ಬದಲಾವಣೆಯಿಂದ ಅಪಾಯ ಎದುರಿಸುತ್ತಿರುವ ಸಣ್ಣ ದ್ವೀಪ ರಾಷ್ಟ್ರಗಳ ನೆರವಿಗಾಗಿ ಭಾರತವು ‘ರೆಸಿಲಿಯಂಟ್ ಐಲ್ಯಾಂಡ್ ಸ್ಟೇಟ್ಸ್’ (ಐಆರ್‌ಐಎಸ್) ಕಾರ್ಯಕ್ರಮಕ್ಕೆ ಇಲ್ಲಿ ಚಾಲನೆ ನೀಡಿದೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ಹವಾಮಾನ ಬದಲಾವಣೆಯಿಂದ ಹೆಚ್ಚು ಅಪಾಯ ಎದುರಿಸುತ್ತಿರುವುದು ಸಣ್ಣ ದ್ವೀಪ ರಾಷ್ಟ್ರಗಳು. ಈ ರಾಷ್ಟ್ರಗಳಲ್ಲಿ ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ಮತ್ತು ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಡೆಗಟ್ಟಲು ದೊಡ್ಡ ರಾಷ್ಟ್ರಗಳು ಶ್ರಮಿಸಬೇಕಿದೆ’ ಎಂದು ಕರೆ ನೀಡಿದ್ದಾರೆ.

ಈ ದೇಶಗಳಲ್ಲಿ ಚಂಡಮಾರುತದ ಮಾಹಿತಿ, ಹವಳದ ದಿಬ್ಬಗಳ ಮೇಲ್ವಿಚಾರಣೆ, ಕರಾವಳಿ ಮೇಲ್ವಿಚಾರಣೆಗೆ ನೆರವು ನೀಡಲಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಪ್ರತ್ಯೇಕ ಘಟಕವನ್ನು ಆರಂಭಿಸಿದೆ ಎಂದು ಮೋದಿ ಹೇಳಿದ್ದಾರೆ. ಐಆರ್‌ಐಎಸ್ ಕಾರ್ಯಕ್ರಮವನ್ನು ಭಾರತ ಮತ್ತು ಬ್ರಿಟನ್ ಸಹಭಾಗಿತ್ವದಲ್ಲಿ ಜಾರಿಗೆ ತರಲಾಗುತ್ತದೆ.

ಸುದ್ದಿ 2 ನಿಮಿಷ

ಕಾಂಗ್ರೆಸ್‌ಗೆ ಅಮರಿಂದರ್ ರಾಜೀನಾಮೆ ಹೊಸ ಪಕ್ಷದ ಘೋಷಣೆ

ಚಂಡೀಗಡ (ಪಿಟಿಐ): ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಮಂಗಳವಾರ ಕಾಂಗ್ರೆಸ್‌ಗೆ ರಾಜೀನಾಮೆ ಸಲ್ಲಿಸಿದ್ದು, ಅದರ ಬೆನ್ನಲ್ಲೇ ಹೊಸ ಪಕ್ಷದ ಸ್ಥಾಪನೆಯನ್ನು ಘೋಷಿಸಿದ್ದಾರೆ.

ಸಿಂಗ್ ಅವರು ಸ್ಥಾಪಿಸಲಿರುವ ಪಕ್ಷದ ಹೆಸರು ‘ಪಂಜಾಬ್ ಲೋಕ್ ಕಾಂಗ್ರೆಸ್’ ಎನ್ನಲಾಗಿದೆ. ಚುನಾವಣಾ ಆಯೋಗವು ಹೊಸ ಪಕ್ಷಕ್ಕೆ ಮಾನ್ಯತೆಯನ್ನು ನೀಡಿ ಚಿಹ್ನೆಯನ್ನು ಹಂಚಿಕೆ ಮಾಡಬೇಕಾಗಿದೆ.

ರಾಜೀನಾಮೆ ಜೊತೆಗೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಸುದೀರ್ಘ ಪತ್ರವನ್ನು ಸಿಂಗ್ ಅವರು ಬರೆದಿದ್ದು, ‘ನನ್ನನ್ನು ಪಕ್ಷದಿಂದ ಹೊರಹಾಕಲು ನೀವು ಸಂಚು ನಡೆಸಿದ್ದೀರಿ’ ಎಂದಿದ್ದಾರೆ.

ಏಳು ಪುಟಗಳಷ್ಟಿರುವ ಪತ್ರವನ್ನು ಟ್ವಿಟರ್‌ನಲ್ಲಿ ಬಹಿರಂಗಪಡಿಸಲಾಗಿದೆ. ಪಂಜಾಬ್ ಕಾಂಗ್ರೆಸ್‌ನ ಅಧ್ಯಕ್ಷ ನವಜೋತ್ ಸಿಂಗ್ ಸಿಧು, ಎಐಸಿಸಿ ಮಾಜಿ ಉಸ್ತುವಾರಿ ಹರೀಶ್ ರಾವತ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದು, ಇಬ್ಬರನ್ನು ‘ಸಂಶಯಾಸ್ಪದ ವ್ಯಕ್ತಿಗಳು’ ಎಂದು ಟೀಕಿಸಲಾಗಿದೆ.

‘ಸೋನಿಯಾ ಅವರಿಗೆ ಬರೆದಿರುವ ಪತ್ರದಲ್ಲಿ ಗಾಂಧಿ ಕುಟುಂಬದ ಜೊತೆಗಿನ ಬಾಂಧವ್ಯವನ್ನು ಮೆಲುಕುಹಾಕಿರುವ ಸಿಂಗ್ ಅವರು, ನೀವು ಮತ್ತು ನಿಮ್ಮ ಮಕ್ಕಳ ವರ್ತನೆಯಿಂದ ನನಗೆ ನೋವಾಗಿದೆ. ಇನ್ನೂ ಅವರನ್ನು ನನ್ನ ಮಕ್ಕಳಂತೆಯೇ ಪ್ರೀತಿಸುತ್ತೇನೆ. ಅವರ ತಂದೆ ನನಗೆ 1954ರಿಂದ, ಶಾಲಾ ಹಂತದಿಂದಲೇ ತಿಳಿದಿದ್ದು, ಆ ಬಾಂಧವ್ಯಕ್ಕೆ 67 ವರ್ಷಗಳಾಗಿವೆ’ ಎಂದರು.

ಕೆ–ಸೆಟ್: 4,779 ಮಂದಿಗೆ ಅರ್ಹತೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯ ಜುಲೈ 25 ರಂದು ನಡೆಸಿದ್ದ ಕರ್ನಾಟಕ ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆಯ (ಕೆ–ಸೆಟ್) ಫಲಿತಾಂಶ ಪ್ರಕಟಗೊಂಡಿದ್ದು, ಒಟ್ಟು 4,779 ಅಭ್ಯರ್ಥಿಗಳು ಸಹಾಯಕ ಪ್ರಾಧ್ಯಾಪಕರಾಗಲು ಅರ್ಹತೆ ಪಡೆದುಕೊಂಡಿದ್ದಾರೆ.

‘2,470 ಪುರುಷರು ಮತ್ತು 2,309 ಮಹಿಳೆಯರು ಅರ್ಹತೆ ಗಳಿಸಿದ್ದು, ಪರೀಕ್ಷೆ ಬರೆದವರಲ್ಲಿ ಒಟ್ಟಾರೆ ಶೇ 6.84 ಮಂದಿ ತೇರ್ಗಡೆ ಹೊಂದಿದ್ದಾರೆ’ ಎಂದು ಕೆ–ಸೆಟ್ ಮುಖ್ಯಸ್ಥರೂ ಆಗಿರುವ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯದ 11 ಕೇಂದ್ರಗಳಲ್ಲಿ 41 ವಿಷಯಗಳಿಗೆ ಪರೀಕ್ಷೆ ನಡೆಸಲಾಗಿತ್ತು. ಅರ್ಜಿ ಸಲ್ಲಿಸಿದ್ದ 83,907 ಮಂದಿಯಲ್ಲಿ 69,857 ಅಭ್ಯರ್ಥಿಗಳು ಹಾಜರಾಗಿದ್ದರು. ವಾಣಿಜ್ಯ ವಿಷಯದಲ್ಲಿ ಅತಿ ಹೆಚ್ಚು ಮಂದಿ (888) ಅರ್ಹತೆ ಪಡೆದುಕೊಂಡಿದ್ದಾರೆ,’ ಎಂದರು.

‘ಮುಂದಿನ ಪರೀಕ್ಷೆಯನ್ನು 2022ರ ಫೆಬ್ರುವರಿ ಅಥವಾ ಮಾರ್ಚ್ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಯುಜಿಸಿಯು ಮೂರು ವರ್ಷಗಳ ಅವಧಿಗೆ (2020 ರಿಂದ 2022ರ ವರೆಗೆ) ಕೆ–ಸೆಟ್ ಆಯೋಜಿಸುವ ಅವಕಾಶವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ನೀಡಿದೆ. 2022ರ ಬಳಿಕ ಮತ್ತೆ ಮೂರು ವರ್ಷಗಳ ಅವಧಿಗೆ ವಿಸ್ತರಿಸುವಂತೆ ಕೋರಿ ಯುಜಿಸಿಗೆ ಅರ್ಜಿ ಸಲ್ಲಿಸಲಾಗುವುದು’ ಎಂದು ಕೆ–ಸೆಟ್ ಸಂಯೋಜಕ ಪ್ರೊ.ಎಚ್.ರಾಜಶೇಖರ್ ತಿಳಿಸಿದರು.

ಗ್ಲಾಸ್ಗೋ: ಹವಾಮಾನ ವೈಪರೀತ್ಯ ತಡೆ ಸಮಾವೇಶದಲ್ಲಿ ನಿರ್ಧಾರ

ಮೀಥೇನ್ ಹೊರಸೂಸುವಿಕೆ ಶೇ 30 ಕಡಿತ

ಗ್ಲಾಸ್ಗೋ (ರಾಯಿಟರ್ಸ್): ಹವಾಮಾನ ಬದಲಾವಣೆಗೆ ಕಾರಣವಾಗುವ ಹಸಿರುಮನೆ ಅನಿಲ ಮೀಥೇನ್ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಗ್ಲಾಸ್ಗೋದಲ್ಲಿ ನಡೆಯುತ್ತಿರುವ ಹವಾಮಾನ ವೈಪರೀತ್ಯ ತಡೆ ಸಮಾವೇಶದಲ್ಲಿ 100ಕ್ಕೂ ಹೆಚ್ಚು ಜಾಗತಿಕ ನಾಯಕರು ಪ್ರತಿಜ್ಞೆ ಮಾಡಿದ್ದಾರೆ.

ಮೀಥೇನ್ ಹೊರಸೂಸುವಿಕೆಯನ್ನು ಕಡಿತಗೊಳಿಸುವ ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ನೇತೃತ್ವದ ನಿರ್ಧಾರವನ್ನು ನೂರು ದೇಶಗಳು ಬೆಂಬಲಿಸಿವೆ. 2030ರ ವೇಳೆಗೆ ಶೇ 30ರಷ್ಟು ಮೀಥೇನ್ ಕಡಿತಗೊಳಿಸಲು ದೇಶಗಳು ಒಪ್ಪಿಕೊಂಡಿವೆ ಎಂದು ಅಮೆರಿಕ ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇಂಗಾಲದ ಡೈಆಕ್ಸೈಡ್‌ಗಿಂತ ಮೀಥೇನ್ ಅನಿಲವು ವಾತಾವರಣದಲ್ಲಿ ಅಲ್ಪಾವಧಿಗೆ ಉಳಿದರೂ, ಭೂಮಿಯನ್ನು ಬೆಚ್ಚಗಾಗಿಸುವಲ್ಲಿ 80 ಪಟ್ಟು ಹೆಚ್ಚು ಕೆಲಸ ಮಾಡುತ್ತದೆ. ಅನಿಲ ಹೊರಸೂಸುವಿಕೆಯನ್ನು ಕಡಿತಗೊಳಿಸುವುದು, ಹವಾಮಾನ ಬದಲಾವಣೆಯನ್ನು ನಿಧಾನಗೊಳಿಸುವ ಅತ್ಯಂತ ಪರಿಣಾಮಕಾರಿ ಮಾರ್ಗಗಳಲ್ಲಿ ಒಂದಾಗಿದೆ.

ಹಸುಗಳ ಜೀರ್ಣಾಂಗ ವ್ಯವಸ್ಥೆ, ಭೂತ್ಯಾಜ್ಯ ಮತ್ತು ತೈಲ–ಅನಿಲ ಉತ್ಪಾದನೆಯಲ್ಲಿ ಮೀಥೇನ್ ಹೆಚ್ಚಾಗಿ ಉತ್ಪತ್ತಿಯಾಗುತ್ತದೆ. ಜಾಗತಿಕ ಮೀಥೇನ್ ಹೊರಸೂಸುವಿಕೆಯ ಐದು ಪ್ರಮುಖ ದೇಶಗಳಲ್ಲಿ ಬ್ರೆಜಿಲ್ ಪ್ರಮುಖವಾಗಿದೆ. ಚೀನಾ, ರಷ್ಯಾ ಮತ್ತು ಭಾರತ ಇನ್ನೂ ಇದಕ್ಕೆ ಸಹಿ ಮಾಡಿಲ್ಲ. ಘೋಷಣೆಯನ್ನು ಬೆಂಬಲಿಸುವುದಿಲ್ಲಎಂದು ಆಸ್ಟ್ರೇಲಿಯಾ ಹೇಳಿದೆ.

ಜಾಗತಿಕ ಮೀಥೇನ್ ಪ್ರತಿಜ್ಞೆಯನ್ನು ಸೆಪ್ಟೆಂಬರ್‌ನಲ್ಲಿ ಮೊದಲು ಘೋಷಿಸಲಾಗಿತ್ತು. ವಿಶ್ವದ ಅತಿದೊಡ್ಡ ಮೀಥೇನ್ ಹೊರಸೂಸುವ ದೇಶಗಳನ್ನು ಈ ಪ್ರತಿಜ್ಞೆಯ ಪಾಲುದಾರರನ್ನಾಗಿ ಸೇರಿಸಲು ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ಶ್ರಮವಹಿಸಿವೆ.

‘ಈ ಘೋಷಣೆಯು ನಮ್ಮ ಆರ್ಥಿಕತೆಯನ್ನು ಹೆಚ್ಚಿಸಲು, ಕಂಪನಿಗಳ ಹಣವನ್ನು ಉಳಿಸಲು, ಮೀಥೇನ್ ಸೋರಿಕೆಯನ್ನು ಕಡಿಮೆ ಮಾಡಲು, ಮೀಥೇನ್ ಅನ್ನು ಹೊಸ ಆದಾಯದ ಮಾರ್ಗವಾಗಿ ಪರಿವರ್ತಿಸಲು ನೆರವಾಗುತ್ತದೆ’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಈ ದಶಕದಲ್ಲಿ ಮೀಥೇನ್ ಹೊರಸೂಸುವಿಕೆಯನ್ನು ಕಡಿತಗೊಳಿಸುವುದರಿಂದ 2040ರ ವೇಳೆಗೆ ಸುಮಾರು 0.3 ಡಿಗ್ರಿ ಸೆಲ್ಸಿಯಸ್‌ನಷ್ಟು ಜಾಗತಿಕ ತಾಪಮಾನವನ್ನು ಕಡಿತ ಮಾಡಬಹುದು ಎಂದು ಮೇ ತಿಂಗಳಲ್ಲಿ ವಿಶ್ವಸಂಸ್ಥೆ ವರದಿ ಹೇಳಿತ್ತು.

ಅರಣ್ಯೀಕರಣಕ್ಕೆ ಪ್ರತಿಜ್ಞೆ

2020ರಲ್ಲಿ ಪ್ರಪಂಚವು 2,58,000 ಚದರ ಕಿ.ಮೀ ಅರಣ್ಯವನ್ನು ಕಳೆದುಕೊಂಡಿದೆ. ಇದು ಇಂಗ್ಲೆಂಡ್‌ನ ಭೂಪ್ರದೇಶಕ್ಕಿಂತ ದೊಡ್ಡದು ಎಂದು ಡಬ್ಲ್ಯುಆರ್‌ಐ ತಿಳಿಸಿದೆ. ಸಂರಕ್ಷಣಾ ಸಂಸ್ಥೆ ಡಬ್ಲ್ಯುಡಬ್ಲ್ಯುಎಫ್ ಅಂದಾಜಿನ ಪ್ರಕಾರ ಪ್ರತಿ ನಿಮಿಷಕ್ಕೆ 27 ಫುಟ್ಬಾಲ್ ಮೈದಾನಗಳಷ್ಟು ಅರಣ್ಯ ಕಳೆದುಹೋಗುತ್ತಿದೆ. ಹೀಗಾಗಿ 100ಕ್ಕೂ ಹೆಚ್ಚು ದೇಶಗಳ ನಾಯಕರು ಅರಣ್ಯನಾಶ ತಡೆಗೆ ಗ್ಲಾಸ್ಗೋ ಸಮಾವೇಶದಲ್ಲಿ ಪಣ ತೊಟ್ಟಿದ್ದಾರೆ.

ಈ ದಶಕದ ಅಂತ್ಯದ ವೇಳೆಗೆ ಅರಣ್ಯಗಳನ್ನು ರಕ್ಷಿಸಲು ಸಾರ್ವಜನಿಕ ಮತ್ತು ಖಾಸಗಿ ನಿಧಿಗಳಲ್ಲಿ ₹1.42 ಲಕ್ಷ ಕೋಟಿ ಹೂಡಿಕೆ ಮಾಡಲಾಗುತ್ತದೆ. 2014ರ ನ್ಯೂಯಾರ್ಕ್ ಅರಣ್ಯ ಘೋಷಣೆಯ ಭಾಗವಾಗಿ 40 ದೇಶಗಳು ತಳೆದಿದ್ದ ಬದ್ಧತೆಯನ್ನು ಈ ಒಪ್ಪಂದ ವಿಸ್ತರಿಸುತ್ತದೆ. ಇದಕ್ಕಾಗಿ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವ ಭರವಸೆ ನೀಡುತ್ತದೆ.

‘ಅರಣ್ಯೀಕರಣಕ್ಕೆ ಪಣ ತೊಡುವ ಮೂಲಕ ಅರಣ್ಯ ನಾಶವನ್ನು ಕೊನೆಗೊಳಿಸೋಣ. ದೀರ್ಘಾವಧಿಯ ಸುಸ್ಥಿರ ಉದ್ಯೋಗಗಳು ಮತ್ತು ಬೆಳವಣಿಗೆಯನ್ನು ಸಾಧಿಸೋಣ’ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಹೇಳಿದ್ದಾರೆ.

ಮೀಥೇನ್ ನಾವು ವೇಗವಾಗಿ ಕಡಿತಗೊಳಿಸಬಹುದಾದ ಅನಿಲಗಳಲ್ಲಿ ಒಂದಾಗಿದೆ. ಇದರಿಂದ ಹವಾಮಾನ ಬದಲಾವಣೆ ತಕ್ಷಣವೇ ನಿಧಾನಗೊಳ್ಳುತ್ತದೆ

ಉರ್ಸುಲಾ ವಾನ್ ಡೆರ್ ಲೇಯೆನ್, ಐರೋಪ್ಯ ಆಯೋಗದ ಅಧ್ಯಕ್ಷ

ನಾವೆಲ್ಲ ಒಟ್ಟಾಗಿ 2030ರ ವೇಳೆಗೆ ನಮ್ಮ ಮೀಥೇನ್ ಅನ್ನು ಶೇ 30ರಷ್ಟು ಕಡಿಮೆ ಮಾಡಲು ಬದ್ಧರಾಗಿದ್ದೇವೆ. ನಾವು ಬಹುಶಃ ಅದನ್ನು ಮೀರಿ ಸಾಧಿಸಲಿದ್ದೇವೆ

ಜೋ ಬೈಡನ್, ಅಮೆರಿಕ ಅಧ್ಯಕ್ಷ

‘ಪುನೀತ್‌ಗೆ ಪದ್ಮಶ್ರೀ: ಪ್ರಸ್ತಾವ’

ಎಚ್.ಡಿ.ಕೋಟೆ (ಮೈಸೂರು): ‘ಪುನೀತ್ ರಾಜ್‌ಕುಮಾರ್ ಅವರಿಗೆ ಪದ್ಮಶ್ರೀ ನೀಡಬೇಕೆಂದು ಟ್ವೀಟ್ ಮಾಡಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಸ್ತಾವ ಸಲ್ಲಿಸಲಿ. ಪದ್ಮಶ್ರೀ ನೀಡಲು ನಮಗೂ ಒಪ್ಪಿಗೆ ಇದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಇಲ್ಲಿನ ಕಬಿನಿ ಜಲಾಶಯಕ್ಕೆ ಮಂಗಳವಾರ ಬಾಗಿನ ಅರ್ಪಿಸಿ ಮಾತನಾಡಿದ ಅವರು, ‘ಎಲ್ಲದ್ದಕ್ಕೂ ಒಂದು ನಿಯಮವಿರುತ್ತದೆ. ಸರ್ಕಾರ ಸಂದರ್ಭ ನೋಡಿಕೊಂಡು, ನಿಯಮಗಳನ್ನು ಪರಿಶೀಲಿಸಿ ನಿರ್ಧಾರ ಕೈಗೊಳ್ಳುತ್ತದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಆದಷ್ಟು ಬೇಗ ಗೇಟ್ ಅಳವಡಿಸಿ’

ಕೆಆರ್‌ಎಸ್ ಜಲಾಶಯದ ಸುರಕ್ಷತೆಗಾಗಿ ಬಸವರಾಜ ಬೊಮ್ಮಾಯಿ ಸೂಚನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಕೆಆರ್‌ಎಸ್ ಜಲಾಶಯದ ಸುರಕ್ಷತೆಗಾಗಿ ಗೇಟ್ ಅಳವಡಿಕೆ ಕಾರ್ಯ ಸಮರೋಪಾದಿಯಲ್ಲಿ ನಡೆಯಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಜಲಾಶಯಕ್ಕೆ ಮಂಗಳವಾರ ಬಾಗಿನ ಅರ್ಪಿಸಿ ಮಾತನಾಡಿದ ಅವರು, ‘ಮೈಸೂರು ಮಹಾರಾಜರು ಜಲಾಶಯ ಕಟ್ಟಿಸಿದ ನಂತರ ಇಲ್ಲಿಯವರೆಗೂ ಗೇಟ್ ಬದಲಾಯಿಸಿರಲಿಲ್ಲ, ಎಲ್ಲಾ ಗೇಟ್‌ಗಳ ಅವಧಿ ಮುಗಿದಿದೆ. ಮೊದಲ ಹಂತದ ಕಾಮಗಾರಿಯಲ್ಲಿ 21 ಗೇಟ್ ಅಳವಡಿಸಲಾಗಿದೆ. 2ನೇ ಹಂತದ ಕಾಮಗಾರಿಯಲ್ಲಿ 136 ಗೇಟ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು ಶೀಘ್ರ ಪೂರ್ಣಗೊಳ್ಳಬೇಕು’ ಎಂದು ಸ್ಪಷ್ಟಪಡಿಸಿದರು.

‘ಕಾವೇರಿ ನೀರಾವರಿ ನಿಗಮ 2ನೇ ಹಂತದ ಕಾಮಗಾರಿಯನ್ನು 2030ಕ್ಕೆ ಪೂರ್ಣಗೊಳಿಸುವುದಾಗಿ ಯೋಜನೆ ಹಾಕಿಕೊಂಡಿದೆ. ಆದರೆ ಇದು ಬಹಳ ತಡವಾಯಿತು. ಜಲಾಶಯದ ರಕ್ಷಣೆ ಹಾಗೂ ನೀರು ಪೋಲಾಗುವುದನ್ನು ತಡೆಯಲು ನಿಗದಿತ ಅವಧಿಗೂ ಮೊದಲೇ ಕಾಮಗಾರಿ ಪೂರ್ಣಗೊಳಿಸಬೇಕು. ಅದಕ್ಕೆ ಬೇಕಾದ ಎಲ್ಲಾ ರೀತಿಯ ನೆರವು ನೀಡಲಾಗುವುದು’ ಎಂದರು.

ಭರ್ತಿಯಾಗಿರುವ ಕೆಆರ್‌ಎಸ್ ಜಲಾಶಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಬಾಗಿನ ಅರ್ಪಿಸಿದರು. ಸಚಿವರಾದ ಕೆ.ಸಿ. ನಾರಾಯಣಗೌಡ, ಎಸ್‌ಟಿ.ಸೋಮಶೇಖರ್ ಇದ್ದಾರೆ

‘ಮೇಕೆದಾಟು ಯೋಜನೆ ಜಾರಿಗೆ ಸರ್ಕಾರ ಬದ್ಧವಾಗಿದೆ. ತಮಿಳುನಾಡು ಪಾಲಿನ ನೀರು ಹರಿಸಿ ಉಳಿಯುವ ಹೆಚ್ಚುವರಿ ನೀರಿಗೆ ಯೋಜನೆ ರೂಪಿಸುವುದು ನಮ್ಮ ಹಕ್ಕು. ತಮಿಳುನಾಡು ತಕರಾರಿನ ವಿರುದ್ಧ ಕಾನೂನು ಹೋರಾಟ ಮುಂದುವರಿದಿದೆ. ಈ ಕುರಿತು ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ), ಕಾವೇರಿ ನದಿ ಪ್ರಾಧಿಕಾರದ ಅಧಿಕಾರಿಗಳನ್ನು ಈಚೆಗೆ ದೆಹಲಿಯಲ್ಲಿ ಭೇಟಿಯಾಗಿ ಚರ್ಚೆ ನಡೆಸಿದ್ದೇನೆ’ ಎಂದರು.

ಎಚ್.ಡಿ.ಕೋಟೆ ವರದಿ (ಮೈಸೂರು): ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡುವ ಮುನ್ನ ಮುಖ್ಯಮಂತ್ರಿ ಬೊಮ್ಮಾಯಿ, ಇಲ್ಲಿನ ಕಬಿನಿ ಜಲಾಶಯಕ್ಕೆ ಭೇಟಿ ನೀಡಿ ಬಾಗಿನ ಅರ್ಪಿಸಿದರು.

ಮುಂಗಾರಿನಲ್ಲಿ ಜಲಾಶಯ ತುಂಬಿದಾಗ ಬಾಗಿನ ಅರ್ಪಿಸುವುದು ವಾಡಿಕೆ. ಅದರಂತೆ, ಮುಂಗಾರಿನಲ್ಲೇ ಜಲಾಶಯವೂ ತುಂಬಿತ್ತು. ಆದರೆ, ಕೆಆರ್‌ಎಸ್ ಜಲಾಶಯ ತುಂಬದ ಕಾರಣ ಬಾಗಿನ ಅರ್ಪಿಸಿರಲಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಅವರು, ‘ಇದರಲ್ಲಿ ವಿಶೇಷವೇನಿಲ್ಲ. ನಾಡಿನ ಜನತೆಗೆ, ರೈತರಿಗೆ ಒಳ್ಳೆಯದಾಗಲಿ ಎಂದು ಬಾಗಿನ ಅರ್ಪಿಸಿದ್ದೇನೆ’ ಎಂದರು.

ಕೊಚ್ಚಿ ಹೋದ ಕೇರಳಾಪುರ– ಬಸವನಹಳ್ಳಿ ರಸ್ತೆ

ಪ್ರಜಾವಾಣಿ ವಾರ್ತೆ

ಕೊಣನೂರು (ಅರಕಲಗೂಡು ತಾಲ್ಲೂಕು): ಸೋಮವಾರ ಸಂಜೆ ಸುರಿದ ಧಾರಾಕಾರ ಮಳೆಯಿಂದಾಗಿ ಕೇರಳಾಪುರ ಮತ್ತು ಬಸವನಹಳ್ಳಿ ನಡುವಿನ ತಾತ್ಕಾಲಿಕ ಸಂಪರ್ಕ ರಸ್ತೆಯು ಕೊಚ್ಚಿಹೋಗಿದ್ದು ಪ್ರಯಾಣಿಕರು ಪರದಾಡುತ್ತಿದ್ದಾರೆ.

ಜಿಟ್ಟೇನಹಳ್ಳಿಯ ಬಳಿಯ ಹಾರಂಗಿ ಬಲದಂಡೆ ನಾಲೆಯ ಹೆಚ್ಚುವರಿ ನೀರು ರಾಮನಾಥಪುರ ಹೋಬಳಿಯ ಕಾಳೇನಹಳ್ಳಿ ದೊಡ್ಡಕೆರೆಗೆ ಹರಿದು ಬಂದಿದ್ದು ಹಲವು ಸಮಸ್ಯೆಗಳಿಗೆ ದಾರಿ ಮಾಡಿದೆ.

ಕೆಲ ದಿನಗಳ ಹಿಂದೆ ಕೊಚ್ಚಿ ಹೋಗಿದ್ದ ತಾತ್ಕಾಲಿಕ ರಸ್ತೆಯನ್ನು ದುರಸ್ತಿಗೊಳಿಸಲಾಗಿತ್ತು. ನೀರಿನ ರಭಸಕ್ಕೆ ಮತ್ತೆ ಹೊಸ ಪೈಪ್‌ಗಳ ಸಮೇತ ಕೊಚ್ಚಿ ಹೋಗಿದೆ. 1 ಕಿ.ಮೀ ದೂರದ ಕೇರಳಾಪುರಕ್ಕೆ ತೆರಳಲು ಈಗ ಕಾಳೇನಹಳ್ಳಿಯ ಮಾರ್ಗವಾಗಿ ಸುಮಾರು 8 ಕಿ.ಮೀ ಸಂಚರಿಸಬೇಕಾಗಿದೆ. ಮಂಗಳವಾರ ಮಧ್ಯಾಹ್ನದವರೆಗೂ ಇದೇ ಸ್ಥಿತಿ ಇತ್ತು. ಹೆದ್ದಾರಿ ಕಾಮಗಾರಿಗಾಗಿ ರಸ್ತೆಯ ಮೇಲೆ ಸುರಿದಿದ್ದ ಮಣ್ಣಿನಲ್ಲಿ ಸಿಲುಕಿದ್ದ ವಾಹನಗಳನ್ನು ಸ್ಥಳೀಯರ ನೆರವಿನಿಂದ ಮೇಲೆಕ್ಕೆತ್ತಿ ಸಾಗಿಸಲಾಯಿತು.

ರಾಮನಾಥಪುರ ಹೋಬಳಿಯ ಕೇರಳಾಪುರ– ಬಸವನಹಳ್ಳಿ ಬಳಿ ನಿರ್ಮಿಸಿದ್ದ ತಾತ್ಕಾಲಿಕ ರಸ್ತೆಯು ಕೊಚ್ಚಿಹೋಗಿದೆ

ತಾತ್ಕಾಲಿಕ ರಸ್ತೆಯಲ್ಲಿ ಅಳವಡಿಸಿರುವ ಪೈಪ್‌ಗಳಲ್ಲಿ ನೀರು ಹರಿಯದೆ ಅಕ್ಕಪಕ್ಕದ ತೋಟಗಳಿಗೂ ನುಗ್ಗಿತ್ತು. ಈ ತಿಂಗಳಲ್ಲಿ ಮೂರು ಬಾರಿ ತೋಟಗಳಿಗೆ ನೀರು ನುಗ್ಗಿದ್ದು ವೀಳ್ಯದೆಲೆ ಬಳ್ಳಿಗಳು ಒಣಗಲಾರಂಭಿಸಿವೆ. ನೀರು ನಿಲ್ಲುತ್ತಿರುವುದರಿಂದ ಫಸಲು ಮತ್ತು ಮರಗಳ ಮೇಲೆ ಮಾರಕ ಪರಿಣಾಮ ಬೀರುವ ಆತಂಕವೂ ಎದುರಾಗಿದೆ.

ರಸ್ತೆಕೊಚ್ಚಿಹೋಗಿರುವಸ್ಥಳಕ್ಕೆನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಜಯರಾಮ ಭೇಟಿ ನೀಡಿ ಪರಿಶೀಲಿಸಿದರು. ‘ವಿಷಯವನ್ನು ಮೇಲಧಿಕಾರಿಗಳಿಗೆ ಗಮನಕ್ಕೆ ತಂದಿದ್ದು, ರಸ್ತೆ ದುರಸ್ತಿಗಾಗಿ ಮನವಿ ಮಾಡಲಾಗಿದೆ’ ಎಂದರು.

ಸಿಡಿಲು ಬಡಿದು ಜಾನುವಾರು ಸಾವು (ಉಡುಪಿವರದಿ): ಕುಂದಾಪುರತಾಲ್ಲೂಕಿನ ಇಡೂರು ಕುಂಜ್ಞಾಡಿ ಗ್ರಾಮದಲ್ಲಿ ಸಿಡಿಲು ಬಡಿದು ಜಾನುವಾರು ಮೃತಪಟ್ಟಿದೆ. ಕಾರ್ಕಳ ತಾಲ್ಲೂಕಿನ ಬೆಳ್ಮಣ್‌ನಲ್ಲಿ ಮನೆಯ ಚಾವಣಿ, ವಿದ್ಯುತ್ ಉಪಕರಣಗಳಿಗೆ ಹಾನಿಯಾಗಿದೆ. ಬ್ರಹ್ಮಾವರ ತಾಲ್ಲೂಕಿನ ಹನೆಹಳ್ಳಿಯಲ್ಲಿ ಮನೆಗೆ ಹಾನಿಯಾಗಿದೆ. ನ. 6ರವರೆಗೆ ಬಿರುಸಿನ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	4,924	4,863
ಹಾರಂಗಿ	2,859	2,857.33	800	1,450
ಕಬಿನಿ	2284.00	2,283.97	2,030	700
ಹೇಮಾವತಿ	2,922	2,909.58	3,318	3,606
ಲಿಂಗನಮಕ್ಕಿ	1,819	1,814.55	1,619	-
ಸೂಪಾ (ಮೀ)	564	556.11	821	1,261
ಮಾಣಿ	594	586.86	139	-
ತುಂಗಭದ್ರಾ	1,633	1,632.80	5,390	10,614
ಮಲಪ್ರಭಾ	2079.5	2,078.20	208	1,794
ಘಟಪ್ರಭಾ	2175	2,172.20	-	3,151
ಭದ್ರಾ	186	185.10	3,120	3,792
ಆಲಮಟ್ಟಿ (ಮೀ)	519.6	519.03	-	13,171
ನಾರಾಯಣಪುರ (ಮೀ)	492.25	491.48	11,015	11,370

* ನೆಲಮಟ್ಟದಿಂದ

ನಿಧನ ವಾರ್ತೆ

ಬಿ.ಪಿ. ಜಿನದತ್ತ ಗೌಡ



ಹೊನ್ನಾವರ: ರಾಜಕೀಯ ಹಾಗೂ ಸಹಕಾರ ಕ್ಷೇತ್ರದಲ್ಲಿ ಹಲವು ವರ್ಷಗಳ ಕಾಲ ಕೆಲಸ ಮಾಡಿರುವ ಹಿರಿಯ ಸಾಮಾಜಿಕ ಕಾರ್ಯಕರ್ತ ಬಿ.ಪಿ.ಜಿನದತ್ತ ಗೌಡ (98) ಮಂಕಿ ವಡಗೆರೆಯ ತಮ್ಮ ಸ್ವಗೃಹದಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಕಾಂಗ್ರೆಸ್ ಮುಖಂಡ ಚಂದ್ರಶೇಖರ ಗೌಡ ಸೇರಿದಂತೆ ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ.

ಜನತಾ ಪಕ್ಷದ ಕಾರ್ಯಕರ್ತರಾಗಿದ್ದ ಅವರು ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಅವರ ಬೆಂಬಲಿಗರಾಗಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದರು.

ಜಿನದತ್ತ ಗೌಡ ಸತತ 28 ವರ್ಷ ಮಂಕಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ದಾಖಲೆ ನಿರ್ಮಿಸಿದ್ದಾರೆ. ಎಪಿಎಂಸಿ ಹೊನ್ನಾವರ ತಾಲ್ಲೂಕು ಘಟಕದ ಅಧ್ಯಕ್ಷರಾಗಿ, ರಾಜ್ಯ ಸಮಿತಿ ಹಾಗೂ ಫೆಡರೇಷನ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. ಎಂ.ಪಿ.ಇ.ಸೊಸೈಟಿಯ ಉಪಾಧ್ಯಕ್ಷ, ಪಿ.ಎಲ್.ಡಿ ಬ್ಯಾಂಕ್ ಹೊನ್ನಾವರ ತಾಲ್ಲೂಕು ಘಟಕದ ಅಧ್ಯಕ್ಷ, ತಾಲ್ಲೂಕು ಬೋರ್ಡ್‌ನ ಉಪಾಧ್ಯಕ್ಷ ಹಾಗೂ ಮಾರ್ಕೆಟಿಂಗ್ ಸೊಸೈಟಿಯ ನಿರ್ದೇಶಕರಾಗಿ ಅವರು ಸೇವೆ ಸಲ್ಲಿಸಿದ್ದಾರೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಆಳ್ವಾಸ್‌ನ ಹರ್ಷಿತಾಗೆ 4ನೇ ರ್‍ಯಾಂಕ್

ಮೂಡುಬಿದಿರೆ: ಇಲ್ಲಿನ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿ ಹರ್ಷಿತಾ ಗಂಗಾಧರಪ್ಪ ನೆಗಲೂರು ಅವರು ನೀಟ್ ಪರೀಕ್ಷೆಯ ಎಸ್‌.ಟಿ. ವಿಭಾಗದಲ್ಲಿ 661 ಅಂಕ ಗಳಿಸಿ 4ನೇ ರ್‍ಯಾಂಕ್ ಹಾಗೂ ಶೈಕ್ಷಾ ನಾಯಕ್ ಬಿ.ಪಿ. 651 ಅಂಕಗಳೊಂದಿಗೆ 8ನೇ ರ್‍ಯಾಂಕ್ ಪಡೆದಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ‘1538 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಕಾಲೇಜಿನ 20 ವಿದ್ಯಾರ್ಥಿಗಳು 720 ಅಂಕಗಳಲ್ಲಿ 650ಕ್ಕಿಂತ ಹೆಚ್ಚು ಅಂಕ ಗಳಿಸಿ ಸಾಧನೆ ಮಾಡಿದ್ದಾರೆ’ ಎಂದರು.

‘62 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಮತ್ತು 312 ವಿದ್ಯಾರ್ಥಿಗಳು 500ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಸಂಸ್ಥೆಯ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸರ್ಕಾರಿ ಸಾಮಾನ್ಯ ಕೋಟಾದಡಿ ದೇಶದ ಪ್ರಮುಖ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅರ್ಹರಾಗಿದ್ದಾರೆ’ ಎಂದರು.

‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಗ್ರಾಮೀಣ, ಕನ್ನಡ ಮಾಧ್ಯಮ, ಹೈದರಾಬಾದ್ ಕರ್ನಾಟಕ, ಅಂಗವಿಕಲರ ವಿಭಾಗದಲ್ಲೂ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ದಾಖಲಿಸಿದ್ದು, 400ಕ್ಕೂ ಹೆಚ್ಚು ಮಂದಿಗೆ ಸರ್ಕಾರಿ ಕೋಟಾದಡಿ ಪ್ರವೇಶ ಪಡೆಯಲು ಅವಕಾಶ ಲಭಿಸಿದೆ’ ಎಂದು ಅವರು ತಿಳಿಸಿದರು.



ಹರ್ಷಿತಾ, ದೀಕ್ಷಾ, ರಘುನಂದನ್, ಶೈಕ್ಷಾ ನಾಯಕ್, ಧನುಷ್ ಎಂ, ವೃದ್ಧಿ ಎಚ್‌.ರೈ, ಶಶಾಂಕ್, ಸುಜ್ಞಾನ್

‘ವೈದ್ಯನಾಗಿ ಜನರ ಪ್ರಾಣ ಉಳಿಸುವೆ’

ಮಂಗಳೂರು: ‘ವೈದ್ಯರು ರೋಗಿ ಪ್ರಾಣ ಉಳಿಸಲು ಪಡುವ ಕಷ್ಟವನ್ನು ಕಂಡಿದ್ದು, ನನಗೆ ವೈದ್ಯನಾಗಲು ಪ್ರೇರಣೆ ನೀಡಿದೆ. ಏಮ್ಸ್‌ನಲ್ಲಿ ಶಿಕ್ಷಣ ಪಡೆದು, ಮುಂದೆ ಹೃದ್ರೋಗ ಅಥವಾ ತುರ್ತು ಚಿಕಿತ್ಸೆಗೆ ಸಂಬಂಧಿಸಿ, ವೈದ್ಯನಾಗಿ ರೋಗಿಗಳ ಜೀವ ರಕ್ಷಣೆ ಮಾಡುವುದು ನನ್ನ ಗುರಿ’ ಎಂದು ನೀಟ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಐದನೇ ರ್‍ಯಾಂಕ್ ಪಡೆದಿರುವ ಜಶಾನ್ ಛಾಬ್ರಾ ಹೇಳಿದರು.

ಜಶಾನ್ ಛಾಬ್ರಾ

ಮಂಗಳೂರಿನ ಮೌಂಟ್ ಕಾರ್ಮೆಲ್ ಸಿಬಿಎಸ್‌ಸಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಯಾಗಿದ್ದ ಜಶಾನ್, ಆಕಾಶ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೋಚಿಂಗ್ ಪಡೆದಿದ್ದರು.

ಕೃಷಿಕ ಕುಟುಂಬದ ಬಾಲಕಿಯ ಸಾಧನೆ (ಪುತ್ತೂರು ವರದಿ): ಇಲ್ಲಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಸಿಂಚನಾ ಲಕ್ಷ್ಮಿ ನೀಟ್ ಪರೀಕ್ಷೆಯಲ್ಲಿ ಪಿ.ಎಚ್ ಕೆಟಗರಿ ವಿಭಾಗದಲ್ಲಿ ರಾಷ್ಟ್ರಮಟ್ಟದಲ್ಲಿ 2ನೇ ರ್‍ಯಾಂಕ್ ಗಳಿಸಿದ್ದಾರೆ. ಸಿಂಚನಾಲಕ್ಷ್ಮಿ 720 ಅಂಕಗಳಲ್ಲಿ 658 ಅಂಕಗಳನ್ನು ಪಡೆದಿದ್ದಾರೆ. ಇವರು ಪುತ್ತೂರಿನ ಬಂಗಾರಡ್ಕದ ಮುರಳೀಧರ ಭಟ್ ಮತ್ತು ಶೋಭಾ ಬಿ. ದಂಪತಿ ಪುತ್ರಿ.

ಸಿಂಚನಾಲಕ್ಷ್ಮಿ

‘ಏಮ್ಸ್‌ನಲ್ಲಿ ಎಂಬಿಬಿಎಸ್; ಈಡೇರಿದ ಕನಸು’

ಮೈಸೂರು: ‘ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಏಮ್ಸ್) ಎಂಬಿಬಿಎಸ್ ಮಾಡಬೇಕೆಂಬ ನನ್ನ ಕನಸು ಈಗ ನನಸಾಗಿದೆ. ಅಗ್ರ 20 ರೊಳಗಿನ ಸ್ಥಾನ ನಿರೀಕ್ಷಿಸಿದ್ದೆ. 5ನೇ ರ್‍ಯಾಂಕ್ ಬಂದಿದ್ದು ಖುಷಿ ನೀಡಿದೆ’

–ವೈದ್ಯಕೀಯ ಶಿಕ್ಷಣ ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) 5ನೇ ರ್‍ಯಾಂಕ್ ಪಡೆದ ಎಚ್‌.ಕೆ.ಮೇಘನ್ ಅವರು ‘ಪ್ರಜಾವಾಣಿ’ ಜತೆ ಹೀಗೆ ಸಂತಸ ಹಂಚಿಕೊಂಡರು. ನೀಟ್ ಫಲಿತಾಂಶ ಸೋಮವಾರ ಪ್ರಕಟಗೊಂಡಿದ್ದು, ಮೇಘನ್ ಇತರ 11 ಮಂದಿಯ ಜತೆ ಐದನೇ ರ್‍ಯಾಂಕ್ ಗಳಿಸಿದ್ದಾರೆ.

ಪ್ರಮತಿ ಹಿಲ್ ವ್ಯೂ ಅಕಾಡೆಮಿಯ ವಿದ್ಯಾರ್ಥಿ ಮೇಘನ್, ಸಿಇಟಿಯ ಎಲ್ಲ 5 ವಿಭಾಗಗಳಲ್ಲೂ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿ ಹೊಸ ದಾಖಲೆ ಬರೆದಿದ್ದರು. ಅವರು ಇಲ್ಲಿನ ನೃಪತುಂಗ ಕನ್ನಡ ಮಾಧ್ಯಮ ವಿಜ್ಞಾನ ಪಿಯು ಕಾಲೇಜಿನ ಪ್ರಾಂಶುಪಾಲರಾದ ಲೀಲಾವತಿ ಹಾಗೂ ಕೆ.ಆರ್.ನಗರ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲರಾದ ಕೃಷ್ಣಯ್ಯ ದಂಪತಿಯ ಪುತ್ರ.



ಮೇಘನ್

‘ನವದೆಹಲಿಯ ಏಮ್ಸ್‌ನಲ್ಲಿ ಕಲಿತು ವೈದ್ಯನಾಗಬೇಕೆಂದು ಎಂಟನೇ ತರಗತಿಯಲ್ಲಿದ್ದಾಗಲೇ ನಿರ್ಧರಿಸಿದ್ದೆ. ಆ ಗುರಿ ಈಡೇರಿಸಲು ಕಷ್ಟಪಟ್ಟು ಓದಿದೆ. 720 ರಲ್ಲಿ 715 ಅಂಕಗಳು ಬಂದಿದೆ. ಹೆತ್ತವರು, ಕಾಲೇಜಿನ ಉಪನ್ಯಾಸಕರ ಪ್ರೋತ್ಸಾಹದಿಂದ ಇದು ಸಾಧ್ಯವಾಗಿದೆ. ಮನೆಯಲ್ಲಿ ಕಲಿಕೆಗೆ ಪೂರಕ ವಾತಾವರಣವಿತ್ತು’ ಎಂದು ಮೇಘನ್ ಹೇಳಿದರು.

‘ಎಂಬಿಬಿಎಸ್ ಮಾಡಿ ಆಂಕಾಲಜಿಯಲ್ಲಿ (ಕ್ಯಾನ್ಸರ್ ಚಿಕಿತ್ಸೆ) ಹೆಚ್ಚಿನ ಅಧ್ಯಯನ ಮಾಡಬೇಕೆಂದಿದ್ದೇನೆ. ಕ್ಯಾನ್ಸರ್‌ಗೆ ತುತ್ತಾದವರು ಜೀವನದಲ್ಲಿ ಸಾಕಷ್ಟು ಸಂಕಷ್ಟ ಅನುಭವಿಸುವರು. ಅವರ ಸೇವೆ ಮಾಡುವುದು ನನ್ನ ಬಯಕೆ’ ಎಂದರು.

ಬುಧವಾರ, ನವೆಂಬರ್ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 305 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಆನ್‌ಲೈನ್ ಶಾಪಿಂಗ್ ಎಂಬುದರ ಹಿಂದೆ ಎಷ್ಟೆಲ್ಲ ಕಸರತ್ತು ಇರುತ್ತದೆ, ಏನೆಲ್ಲಾ ವರಸೆಗಳಿರುತ್ತವೆ ಅಂತ ಗೊತ್ತಾದರೆ ಶಾಪಿಂಗ್ ಮಾಡಲಿಕ್ಕೆ ಹೆದರಿಕೆಯಾದೀತೇನೋ!



ಆಳ-ಅಗಲ
ನಿಸರ್ಗದ ಕೋಪ ಜಗತ್ತಿಗೆ ತಾಪ

ನೀರಜ್, ಮನ್‌ಪ್ರೀತ್ ಸಿಂಗ್‌ಗೆ ಖೇಲ್ ರತ್ನ 13

ಶ್ರೀಕೃಷ್ಣ ದೋಚಿದ್ದ '900 ಬಿಟಿಸಿ' ಮಾರಿದ್ದ ರಾಬಿನ್! 6

ಸೆನ್ಸೆಕ್ಸ್	ನಿಫ್ಟಿ	₹/$
60,029 ▼	17,888 ▼	74.68 ▲

'ಲೆಕ್ಕಪತ್ರ ಇಲ್ಲದ ₹ 300 ಕೋಟಿ ಆದಾಯ ಪತ್ತೆ'

ನವದೆಹಲಿ (ಪಿಟಿಐ): ಪಶು ಆಹಾರಉತ್ಪಾದನೆ ಹಾಗೂ ಮೊಟ್ಟೆ ಉತ್ಪನ್ನಗಳ ರಫ್ತು ವ್ಯವಹಾರ ನಡೆಸುತ್ತಿರುವ ತಮಿಳುನಾಡು ಮೂಲದ ಕುಕ್ಕುಟೋದ್ಯಮ ಸಮೂಹದ ಮೇಲೆ ಈಚೆಗೆ ನಡೆದ ದಾಳಿ ವೇಳೆ ಲೆಕ್ಕಪತ್ರ ಇಲ್ಲದ ₹ 300 ಕೋಟಿಗೂ ಅಧಿಕ ಆದಾಯ ಪತ್ತೆ ಮಾಡಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಮಂಗಳವಾರ ಹೇಳಿದೆ.

ಲೆಕ್ಕಪತ್ರ ಇಲ್ಲದ ₹ 3.3 ಕೋಟಿ ನಗದನ್ನು ಸಹ ಜಪ್ತಿ ಮಾಡಲಾಗಿದೆ ಎಂದು ಇಲಾಖೆ ತಿಳಿಸಿದೆ.

ತಮಿಳುನಾಡು, ಕೇರಳ ಹಾಗೂ ಕರ್ನಾಟಕದಲ್ಲಿರುವ, ಸಮೂಹಕ್ಕೆ ಸೇರಿದ 40 ಸ್ಥಳಗಳಲ್ಲಿ ಅಕ್ಟೋಬರ್ 27ರಂದು ಶೋಧ ಕಾರ್ಯ ಕೈಗೊಳ್ಳಲಾಗಿತ್ತು. ಈ ಸಮೂಹವು ಖಾದ್ಯ ತೈಲವನ್ನು ಸಹ ಉತ್ಪಾದಿಸುತ್ತದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ತಮ್ಮ ನಾಯಕತ್ವದ ಮೊದಲ ಚುನಾವಣೆಯಲ್ಲೇ ಮುಗ್ಗರಿಸಿದ ಬೊಮ್ಮಾಯಿ

ಕೈ–ಕಮಲ ಗಟ್ಟಿ: ದಳ ಪಟ್ಟಿ

• ವೈ.ಗ. ಜಗದೀಶ್

ಬೆಂಗಳೂರು: ಎರಡು ಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶ ಪ್ರಕಟವಾಗಿದ್ದು, ಗೆದ್ದೇ ಗೆಲ್ಲುವ ಹುಮ್ಮಸಿನಲ್ಲಿದ್ದ ಬಿಜೆಪಿಗೆ ಮಂಕು ಕವಿಸಿದ್ದರೆ, ಕಮಲ ತೆಕ್ಕೆಯಲ್ಲಿದ್ದ ಒಂದು ಕ್ಷೇತ್ರವನ್ನು ಕಿತ್ತುಕೊಂಡ ಕಾಂಗ್ರೆಸ್‌ನಲ್ಲಿ ಹೊಸ ಹುರುಪು ಮೂಡಿಸಿ ದಂತಾಗಿದೆ.

ಅನ್ಯರಿಗೆ ನೆರವಾಗಲು ಅಥವಾ ಮತ್ತೊಬ್ಬರನ್ನು ಸೋಲಿಸಲು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗಿದೆ ಎಂಬ ಅಪವಾದ ಹೊತ್ತುಕೊಂಡಿದ್ದ ಜೆಡಿಎಸ್ ಎರಡೂ ಕಡೆ ಮಕಾಡೆ ಮಲಗಿದ್ದು, ನಿರೀಕ್ಷೆಯ ಮತ ಗಿಟ್ಟಿಸಲೂ ಸಾಧ್ಯವಾಗದಂತಹ ದುರ್ಬಲ ಸಾಧನೆ ತೋರಿದೆ.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಬಸವರಾಜ ಬೊಮ್ಮಾಯಿ ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ನಡೆದ ಮೊದಲ ಉಪ ಚುನಾವಣೆ ಇದಾಗಿದೆ. ತಮ್ಮ ನಾಯಕತ್ವದಲ್ಲಿ ಎದುರಾದ ಮೊದಲ ಚುನಾವಣೆಯಲ್ಲಿ ಗೆಲ್ಲಲೇಬೇಕೆಂಬ ಪಣ ತೊಟ್ಟು, ಕ್ಷೇತ್ರದಲ್ಲೇ ಮೊಕ್ಕಾಂ ಹೂಡಿದ್ದ ಬೊಮ್ಮಾಯಿ ತಮ್ಮ ತವರು ಜಿಲ್ಲೆ, ಅದರಲ್ಲೂ ಅವರೇ ಪ್ರತಿನಿಧಿಸುವ (ಶಿಗ್ಗಾಂವಿ) ಕ್ಷೇತ್ರದ ಮಗ್ಗುಲಿನಲ್ಲೇ ಇರುವ ಹಾನಗಲ್‌ನಲ್ಲಿ ಮುಗ್ಗರಿಸಿದ್ದಾರೆ. ಆದರೆ, ಸಿಂದಗಿಯಲ್ಲಿ 31,185 ಮತಗಳಿಂದ ಬಿಜೆಪಿ ಜಯಭೇರಿ ಬಾರಿಸಿರುವುದು ಅವರ ಪಾಲಿಗೆ ಸಮಾಧಾನ ತರುವ ಅಂಶ.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಈ ಚುನಾವಣೆಗಳೂ ಸೇರಿ 21 ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಿದೆ. 16 ಕ್ಷೇತ್ರಗಳಲ್ಲಿ ಬಿಜೆಪಿ ವಿಜಯ ಸಾಧಿಸಿದೆ. ಕಾಂಗ್ರೆಸ್ 4, ಪಕ್ಷೇತರ ಅಭ್ಯರ್ಥಿ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ. ಜೆಡಿಎಸ್ ಕಳೆದುಕೊಂಡಿದ್ದು ಬಿಟ್ಟರೆ ಗಳಿಕೆ ಶೂನ್ಯ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ನಡೆದ 19 ಉಪ ಚುನಾವಣೆಗಳಲ್ಲಿ 15 ರಲ್ಲಿ ಬಿಜೆಪಿಯೇ ಗೆದ್ದಿತ್ತು. ಬಿಜೆಪಿಯ ಅಸ್ತಿತ್ವವೇ ಕ್ಷೀಣವಾಗಿದ್ದ ಕೆ.ಆರ್. ಪೇಟೆ, ಶಿರಾ, ಚಿಕ್ಕಬಳ್ಳಾಪುರದಲ್ಲಿ ಕೂಡ 'ಪಕ್ಷಾಂತರಿ'ಗಳು ವಿಜಯ ಸಾಧಿಸಿದ್ದರು. ಆದರೆ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹೊಸಕೋಟೆಯಲ್ಲಿ ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ಪುತ್ರ ಶರತ್ ಬಚ್ಚೇಗೌಡ ಪಕ್ಷೇತರರಾಗಿ ಜಯಗಳಿಸಿದ್ದರು. ಆಗೆಲ್ಲ ಕಾಂಗ್ರೆಸ್ ಗೆದ್ದುಕೊಂಡಿದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು.

ಬಿಜೆಪಿಯ ಸಿ.ಎಂ. ಉದಾಸಿ ಹಾಗೂ ಜೆಡಿಎಸ್‌ನ ಎಂ.ಸಿ. ಮನಗೂಳಿ ಅವರ ಅಕಾಲಿಕ ನಿಧನದಿಂದಾಗಿ ಈ ಎರಡು ಕ್ಷೇತ್ರಗಳಿಗೆ ಚುನಾವಣೆಗಳು ನಡೆದವು. ಹಾನಗಲ್ ಗೆಲ್ಲುವುದು ಬೊಮ್ಮಾಯಿಗೆ ಸವಾಲಿನ ಕೆಲಸವೂ ಆಗಿತ್ತು. ಶಿಗ್ಗಾಂವಿಯಲ್ಲಿ ಮುಸ್ಲಿಂ ಮತದಾರರು ತಮ್ಮ ಕೈಹಿಡಿಯುತ್ತಿರುವಂತೆ ಹಾನಗಲ್‌ನಲ್ಲೂ ಬೆಂಬಲಕ್ಕೆ ನಿಲ್ಲಲಿದ್ದಾರೆ ಎಂಬ ಬೊಮ್ಮಾಯಿ ಲೆಕ್ಕಾಚಾರ ಉಲ್ಟಾ ಆಗಿದೆ. ಇಲ್ಲಿ ಬಿಜೆಪಿ ಸೋತಿದ್ದು, ಕಾಂಗ್ರೆಸ್‌ನ ಶ್ರೀನಿವಾಸ ಮಾನೆ ಗೆದ್ದು ವಿಧಾನಸಭೆ ಪ್ರವೇಶಿಸಿದ್ದಾರೆ.

ಯಡಿಯೂರಪ್ಪ ಅವರನ್ನು ಅವಧಿಗೆ ಮುನ್ನವೇ ಕೆಳಗಿಳಿಸಿರುವುದು, ಅಭ್ಯರ್ಥಿ ಆಯ್ಕೆಯಲ್ಲಿ ಕೈಗೊಂಡ ನಿರ್ಧಾರಗಳು ಚುನಾವಣೆ ಮೇಲೆ ಪ್ರಭಾವ ಬೀರಿರುವುದು ಮೇಲ್ನೋಟಕ್ಕೆ ಸ್ಪಷ್ಟ. ಉದಾಸಿ ಕುಟುಂಬಕ್ಕೆ ಟಿಕೆಟ್ ನೀಡಬೇಕು ಎಂಬುದು ಬಿಜೆಪಿಯ ರಾಜ್ಯ ಪ್ರಮುಖರ ಬೇಡಿಕೆಯಾಗಿತ್ತು. ಅಭ್ಯರ್ಥಿ ಆಯ್ಕೆಯಲ್ಲಿ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮೇಲುಗೈ ಸಾಧಿಸಿದ್ದರು.

5ನೇ ಪುಟ ನೋಡಿ

ಸಿಂದಗಿ		
ಪಕ್ಷ	ಅಭ್ಯರ್ಥಿ	ಪಡೆದ ಮತಗಳು
ಬಿಜೆಪಿ	ರಮೇಶ ಭೂಸನೂರ	93,865
ಕಾಂಗ್ರೆಸ್	ಅಶೋಕ ಮನಗೂಳಿ	62,680
ಜೆಡಿಎಸ್	ನಾಜಿಯಾ ಅಂಗಡಿ	4,353

1,031 ನೋಟಾ | 31,088 ಗೆಲುವಿನ ಅಂತರ | 380 ತಿರಸ್ಕೃತ

ಹಾನಗಲ್		
ಕಾಂಗ್ರೆಸ್	ಶ್ರೀನಿವಾಸ ಮಾನೆ	87,490
ಬಿಜೆಪಿ	ಶಿವರಾಜ ಸಜ್ಜನರ	80,117
ಜೆಡಿಎಸ್	ನಿಯಾಜ್ ಶೇಖ್	927

529 ನೋಟಾ | 7,373 ಗೆಲುವಿನ ಅಂತರ | 11 ತಿರಸ್ಕೃತ

ರಮೇಶ ಭೂಸನೂರ

ಶ್ರೀನಿವಾಸ ಮಾನೆ

ಸುದ್ದಿ ವಿಶ್ಲೇಷಣೆ

ಸಿಂದಗಿಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಹಾನಗಲ್‌ನಲ್ಲಿ ನಮ್ಮ ನಿರೀಕ್ಷೆ ಮಟ್ಟಕ್ಕೆ ಮತಗಳು ಸಿಕ್ಕಿಲ್ಲ. ಸಿ.ಎಂ ಉದಾಸಿ ಅವರಿಗಿದ್ದ ಬೆಂಬಲವನ್ನು ಪಡೆಯಲು ನಮಗೆ ಸಾಧ್ಯವಾಗಿಲ್ಲ
ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ಮುಖ್ಯಮಂತ್ರಿ, ಸಚಿವರು ಉಪ ಚುನಾವಣೆ ನಡೆದ ಎರಡೂ ಕ್ಷೇತ್ರಗಳಲ್ಲಿ ಬೀಡು ಬಿಟ್ಟಿದ್ದರು. ಆದರೂ ಜನರು ಬಿಜೆಪಿಗೆ ಮತ ನೀಡದೆ, ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ. ಜನರು ಬದಲಾವಣೆ ಬಯಸಿರುವುದಕ್ಕೆ ಸಾಕ್ಷಿ
ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕ

ಈ ಫಲಿತಾಂಶಕ್ಕೆ ಮಹತ್ವ ನೀಡುವುದಿಲ್ಲ. ನಮ್ಮ ಗುರಿ 2023 ರ ಚುನಾವಣೆ ಮೇಲೆ ಕೇಂದ್ರೀಕೃತವಾಗಿದೆ. ನಮ್ಮನ್ನು ಬಿಜೆಪಿಯ 'ಬಿ' ಟೀಮ್ ಎಂದು ಕಾಂಗ್ರೆಸ್ ನಡೆಸಿದ ಅಪಪ್ರಚಾರಕ್ಕೆ ಈ ಫಲಿತಾಂಶವೇ ಉತ್ತರ
ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಕೈ'ಗೆ ಹುರುಪು, ಕಮಲಕ್ಕೆ ಮಿಶ್ರಫಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಮೂರು ಕ್ಷೇತ್ರಗಳು ಮತ್ತು ವಿವಿಧ ರಾಜ್ಯಗಳ ವಿಧಾನಸಭೆಯ 29 ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಫಲಿತಾಂಶವು ಕಾಂಗ್ರೆಸ್‌ಗೆ ಹುರುಪು ತುಂಬಿದ್ದರೆ, ಬಿಜೆಪಿಗೆ ಮಿಶ್ರಫಲ ಕೊಟ್ಟಿದೆ.

ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರವನ್ನು ಬಿಜೆಪಿಯಿಂದ ಕಾಂಗ್ರೆಸ್ ಕಸಿದುಕೊಂಡಿದೆ. ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳೂ ಕಾಂಗ್ರೆಸ್ ಪಾಲಾಗಿವೆ. ಇದು ಆಡಳಿತಾರೂಢ ಬಿಜೆಪಿಗೆ ದೊಡ್ಡ ಹೊಡೆತ. ರಾಜಸ್ಥಾನದ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಗಳಿಸಿದೆ. ಮಧ್ಯ ಪ್ರದೇಶದ ರಾಯ್‌ಗಾಂವ್ ಮತ್ತು ಮಹಾರಾಷ್ಟ್ರದ ದೇಗಲೂರ್ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆದ್ದಿದೆ.

ಮಧ್ಯಪ್ರದೇಶದ ಖಂಡ್ವಾ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿದೆ. ಇಲ್ಲಿ ಉಪಚುನಾವಣೆ ನಡೆದ ವಿಧಾನಸಭೆಯ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಜಯಗಳಿಸಿದೆ. ಉಪ ಚುನಾವಣೆ ನಡೆದ ಅಸ್ಸಾಂನ ಐದೂ ವಿಧಾನಸಭಾ ಕ್ಷೇತ್ರಗಳನ್ನು ಬಿಜೆಪಿ ಮತ್ತು ಅದರ ಮಿತ್ರ ಪಕ್ಷ ಬಾಚಿಕೊಂಡಿವೆ. ಬಿಜೆಪಿ ಮೂರು ಮತ್ತು ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ ಎರಡು ಕ್ಷೇತ್ರಗಳಲ್ಲಿ ಗೆದ್ದಿವೆ.

5ನೇ ಪುಟ ನೋಡಿ

ಪುನೀತ್ ರಾಜ್‌ಕುಮಾರ್ ಅವರ ಸಮಾಧಿಗೆ ಪುತ್ರಿಯರಾದ ವಂದಿತಾ, ಧೃತಿ ಅವರು ಮಂಗಳವಾರ ಹಾಲು, ತುಪ್ಪ ಅರ್ಪಿಸಿದರು. ಪುನೀತ್ ಪತ್ನಿ ಅಶ್ವಿನಿ ಇದ್ದರು –ಪ್ರಜಾವಾಣಿ ಚಿತ್ರ

ಅಗಲಿದ 'ಅಪ್ಪು'ವಿಗೆ ಹಾಲು, ತುಪ್ಪ ಅರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಹದಿಂದ ಅಗಲಿ ಮಣ್ಣಿನಡಿ ತಣ್ಣನೆ ಮಲಗಿದ ನಟ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಗೆ ಮಂಗಳವಾರ ಹಾಲು ತುಪ್ಪ ಎರೆದ ಕುಟುಂಬದವರು ಹೃದಯದಲ್ಲಿ ಚಿರಸ್ಥಾಯಿ ಆಗಿರುವ ಅವರನ್ನು ನೆನೆದು ಭಾವುಕರಾದರು.

ಪುನೀತ್ ರಾಜ್‌ಕುಮಾರ್ ಅವರ ಅಂತ್ಯಕ್ರಿಯೆ ನಡೆದ ಕಂಠೀರವ ಸ್ಟುಡಿಯೊದ ಆವರಣದಲ್ಲಿ ದುಃಖ ಮಡುಗಟ್ಟಿದ ಮೌನ, ಗಂಭೀರ, ಭಾವುಕ ಸನ್ನಿವೇಶದ ನಡುವೆ ಸಮಾಧಿಗೆ ಹಾಲು ತುಪ್ಪ ಎರೆಯಲಾಯಿತು. ಸಿನಿಕ್ಷೇತ್ರದ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

6ನೇ ಪುಟ ನೋಡಿ

ಅಜಿತ್ ಪವಾರ್‌ಗೆ ಸೇರಿದ ₹1,400 ಕೋಟಿ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ, ಎನ್‌ಸಿಪಿ ನಾಯಕ ಅಜಿತ್ ಪವಾರ್ ಹಾಗೂ ಅವರ ಕುಟುಂಬದವರಿಗೆ ಸಂಬಂಧಿಸಿದ್ದು ಎನ್ನಲಾದ, ₹1,400 ಕೋಟಿ ಮೌಲ್ಯದ ಆಸ್ತಿಯನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮಂಗಳವಾರ ಜಪ್ತಿ ಮಾಡಿದ್ದಾರೆ.

6ನೇ ಪುಟ ನೋಡಿ

ಬುಧವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ: ಗುರುವಾರ 27° 20° | ಶುಕ್ರವಾರ 28° 20° | ಶನಿವಾರ 28° 20°

ಸೂರ್ಯೋದಯ: 6:13 ಸೂರ್ಯಾಸ್ತ : 5:52 ಚಂದ್ರೋದಯ: ರಾ. 3:35 ಚಂದ್ರಾಸ್ತ: ಸಂ. 4:03 ಮಂಗಳವಾರದ ಹವಾಮಾನ : ಗರಿಷ್ಠ 27° ಕನಿಷ್ಠ 20°

ಪೌಷ್ಟಿಕ ಆಹಾರ ಸೇವಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೋವಿಡ್: 239 ಜನರಿಗೆ ಸೋಂಕು; 5 ಮಂದಿ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 239 ಜನರಿಗೆ ಸೋಂಕು ತಗುಲಿದೆ. ಬೆಂಗಳೂರಿನಲ್ಲಿ ಮೂವರು ಸೇರಿ ಒಟ್ಟು 5 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಈವರೆಗೆ ಸೋಂಕಿಗೊಳಪಟ್ಟವರ ಸಂಖ್ಯೆ 29.88 ಲಕ್ಷ ಏರಿದ್ದು, ಮೃತರ ಒಟ್ಟು ಸಂಖ್ಯೆ 38,089 ರಷ್ಟಿದೆ. ಕೋವಿಡ್ ದೃಢ ಪ್ರಮಾಣ ಹಾಗೂ ಮರಣ ಪ್ರಮಾಣ ದರವು ಕ್ರಮವಾಗಿ ಶೇ 0.39 ಮತ್ತು ಶೇ 2.09ರಷ್ಟು ವರದಿಯಾಗಿದೆ.

ಒಂದು ದಿನದಲ್ಲಿ 376 ಜನ ಗುಣಮುಖರಾಗಿದ್ದು ಈವರೆಗೆ ಒಟ್ಟು 29.42 ಲಕ್ಷ ಮಂದಿ ಚೇತರಿಸಿಕೊಂಡಂತಾಗಿದೆ. ಸಕ್ರಿಯ ಪ್ರಕರಣಗಳು ಇಳಿಕೆಯಾಗಿದ್ದು, ಪ್ರಸ್ತುತ 8,370 ಜನ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಹಿಂದಿನ 24 ಗಂಟೆಗಳಲ್ಲಿ 139 ಜನರಿಗೆ ಹೊಸದಾಗಿ ಸೋಂಕು ತಗುಲಿರುವುದು ಖಾತರಿಯಾಗಿದೆ. ದಕ್ಷಿಣ ಕನ್ನಡ (18) ಮತ್ತು ಮೈಸೂರಿನಲ್ಲಿ (31) ಇದು ಎರಡಂಕಿಯಷ್ಟಿದೆ. ಬಾಗಲಕೋಟೆ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಗದಗ, ಹಾವೇರಿ, ಕೋಲಾರ, ಕೊಪ್ಪಳ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣಗಳು ದಾಖಲಾಗಿಲ್ಲ. 12 ಜಿಲ್ಲೆಗಳಲ್ಲಿ ಇದು ಒಂದಂಕಿ ಇದೆ.

ತುಮಕೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. 27 ಜಿಲ್ಲೆಗಳಲ್ಲಿ ಹೊಸ ಮರಣ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 34 ವರ್ಷದ ಮಹಿಳೆಯೊಬ್ಬರು ಕೆಮ್ಮು, ಜ್ವರ ಹಾಗೂ ಉಸಿರಾಟದ ಸಮಸ್ಯೆಯಿಂದ ಸಾವಿಗೀಡಾಗಿದ್ದಾರೆ. ಉಳಿದ ನಾಲ್ವರು 70 ವರ್ಷ ಮೇಲ್ಪಟ್ಟವರಾಗಿದ್ದಾರೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಮಂಗಳವಾರ 60,711 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆ
ಕೋವಿಡ್ ಅಂಕಿ–ಅಂಶ

12,52,106 ಒಟ್ಟು ಸೋಂಕಿತರು

6,424	12,29,397	16,284
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	139
ಗುಣಮುಖ	190
ಸಾವು	3

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸೆಪ್ಟೆಂಬರ್–ಅಕ್ಟೋಬರ್: 125 ಸಲ ಭಾರಿ ಮಳೆ

ನವದೆಹಲಿ (ಪಿಟಿಐ): ನೈರುತ್ಯ ಮಾನ್ಸೂನ್ ಮಾರುತಗಳು ಅಂತ್ಯಗೊಳ್ಳುವುದರಲ್ಲಿ ಆದ ವಿಳಂಬ ಮತ್ತು ಸಾಮಾನ್ಯಕ್ಕಿಂತಲೂ ಹೆಚ್ಚಿನ ಒತ್ತಡದ ಪರಿಸ್ಥಿತಿ ಸೃಷ್ಟಿಯಾದ ಹಿನ್ನೆಲೆಯಲ್ಲಿ ಈ ವರ್ಷದ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ವಿಪರೀತ ಮಳೆಯಾಗಿದೆ. ಈ ಎರಡು ತಿಂಗಳ ಅವಧಿಯಲ್ಲಿ 125 ಸಲ ಭಾರಿ ಮಳೆ ಸುರಿದಿದೆ. ಇದು ಇತ್ತೀಚಿನ ಐದು ವರ್ಷಗಳಲ್ಲೇ ಅಧಿಕ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ಹೇಳಿದೆ.

ಸೆಪ್ಟೆಂಬರ್‌ನಲ್ಲಿ 89 ಸಲ ಭಾರಿ ಮಳೆಯಾಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ 61 ಸಲ ಭಾರಿ ಮಳೆಯಾಗಿತ್ತು. 2019ರಲ್ಲಿ 59, 2018ರಲ್ಲಿ 44 ಮತ್ತು 2017ರಲ್ಲಿ 29 ಸಲ ಮಳೆಯಾಗಿತ್ತು. ಅಲ್ಲದೆ, ಅಕ್ಟೋಬರ್‌ನಲ್ಲಿ 36 ಬಾರಿ ಹೆಚ್ಚಿನ ಮಳೆಯಾಗಿದೆ. 2020ರ ಅಕ್ಟೋಬರ್‌ನಲ್ಲಿ 10 ಬಾರಿ ಆಗಿತ್ತು. 2019ರಲ್ಲಿ 16, 2018ರಲ್ಲಿ 17 ಮತ್ತು 2017ರಲ್ಲಿ 12 ಸಲ ಭಾರಿ ಮಳೆಯಾಗಿತ್ತು.

ಈ ಅವಧಿಯಲ್ಲಿ ಎರಡು ಚಂಡಮಾರುತಗಳು ಸೇರಿದಂತೆ 9 ಬಾರಿ ವಾಯುಭಾರ ಕುಸಿತ ಉಂಟಾಗಿದೆ ಎಂದೂ ಹವಾಮಾನ ಇಲಾಖೆ ಹೇಳಿದೆ.

ಮಧುಮೇಹ ಜಾಗೃತಿ ಓಟ

ಬೆಂಗಳೂರು: ಮಧುಮೇಹದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಕಾವೇರಿ ಆಸ್ಪತ್ರೆ ನ.14 ರಿಂದ 20ರವರೆಗೆ 'ಕಾವೇರಿ ಬೆಂಗಳೂರು ರನ್' ಎಂಬ 'ವರ್ಚುವಲ್ ಮ್ಯಾರಥಾನ್' ಆಯೋಜಿಸಿದೆ.

ಈ ಕುರಿತು ಮಾಹಿತಿ ನೀಡಿದ ಆಸ್ಪತ್ರೆ ನಿರ್ದೇಶಕ ಡಾ. ವಿಜಯ ಭಾಸ್ಕರನ್, 'ನಗರ ಪ್ರದೇಶಗಳಲ್ಲಿ ಶೇ 11.2 ಮಧುಮೇಹಿಗಳಿದ್ದಾರೆ. ಇದರಿಂದ ದೂರ ಇರುವ ಬಗ್ಗೆ ಜಾಗೃತಿ ಮೂಡಿಸಲು ಮ್ಯಾರಥಾನ್ ಆಯೋಜಿಸಲಾಗಿದೆ. ಕೋವಿಡ್ ಸಾಂಕ್ರಾಮಿಕದ ಕಾರಣ ಈ ವರ್ಚುವಲ್ ಮ್ಯಾರಥಾನ್ ನಡೆಸಲಾಗುತ್ತಿದೆ' ಎಂದರು.

ಕಾವೇರಿ ಆಸ್ಪತ್ರೆ ನಿರ್ದೇಶಕ ವಿಲ್ಸನ್ ಸ್ವಾಮಿನ್ ಮಾತನಾಡಿ, 'ನ. 14ರಿಂದ ಒಂದು ವಾರ ಈ ಮ್ಯಾರಥಾನ್ ನಡೆಯಲಿದೆ. ಆಸಕ್ತರು http://www.kauverybangalorerun.com ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬಹುದು. ಈ ಮ್ಯಾರಥಾನ್ ನಾಲ್ಕು ವಿಭಾಗದಲ್ಲಿ ನಡೆಸಲಾಗುತ್ತದೆ. ಪ್ರತಿ ವಿಭಾಗದಲ್ಲಿ ಗೆದ್ದ ಮೂವರಿಗೆ ಪ್ರಶಸ್ತಿ ನೀಡಲಾಗುವುದು' ಎಂದರು.

'ಭಾಗವಹಿಸುವ ಪ್ರತಿಯೊಬ್ಬರಿಗೂ ಪ್ರಮಾಣಪತ್ರ ಹಾಗೂ ಪದಕ ವಿತರಿಸಲಾಗುತ್ತದೆ. ಆಸಕ್ತರು ಸಮಯ ಹಾಗೂ ಕಿಲೋ ಮೀಟರ್ ಟ್ರ್ಯಾಕಿಂಗ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

‘ಡೆಲ್ಟಾ ತಳಿ ಸೋಂಕಿಗೆ ಮೊನೊಕ್ಲೋನಲ್ ಆಂಟಿಬಾಡಿ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ’

ಹೈದರಾಬಾದ್: ಕೋವಿಡ್ -19 ಡೆಲ್ಟಾ ತಳಿಯ ಸೋಂಕಿನ ವಿರುದ್ಧ ಮೊನೊಕ್ಲೋನಲ್ ಆಂಟಿಬಾಡಿ ಚಿಕಿತ್ಸೆಯು ಹೆಚ್ಚು ಪರಿಣಾಮಕಾರಿಯಾಗಿದೆ ಎಂದು ಸಂಶೋಧನೆ ಹೇಳಿದೆ.

ಮೊನೊಕ್ಲೋನಲ್ ಆಂಟಿಬಾಡಿ ಥೆರಪಿಯು ಡೆಲ್ಟಾ ರೂಪಾಂತರದ ಸೋಂಕಿಗೆ ಒಳಗಾದ ಹೆಚ್ಚಿನ ಅಪಾಯದ ವ್ಯಕ್ತಿಗಳಲ್ಲಿ ತೀವ್ರ ರೋಗ ಮತ್ತು ಸಾವನ್ನು ಶೇ 100ರಷ್ಟು ಕಡಿಮೆ ಮಾಡುತ್ತದೆ ಎಂದು ಹೈದರಾಬಾದ್ ಮೂಲದ ಎಐಜಿ ಆಸ್ಪತ್ರೆಗಳು, ಸಿಎಸ್‌ಐಆರ್ – ಸೆಂಟರ್ ಫಾರ್ ಸೆಲ್ಯೂಲಾರ್ ಅಂಡ್ ಮಾಲೆಕ್ಯೂಲರ್ ಬಯಾಲಜಿ ಹಾಗೂ ಇತರ ಸಂಸ್ಥೆಗಳು ಸೇರಿ ನಡೆಸಿದ ಅಧ್ಯಯನವು ಹೇಳಿದೆ.

ಡೆಲ್ಟಾ ರೂಪಾಂತರದ ವಿರುದ್ಧ ಡ್ರಗ್ ಕಾಕ್‌ಟೈಲ್‌ನ ಪರಿಣಾಮಕಾರಿತ್ವವನ್ನು ಪರೀಕ್ಷಿಸಲು ಜಾಗತಿಕವಾಗಿ ನಡೆಸಿದ ಮೊದಲ ವಿಶ್ಲೇಷಣೆಯ ಅಧ್ಯಯನವಿದು ಎಂದು ಸಂಶೋಧಕರು ಹೇಳಿದ್ದಾರೆ.

ಎಐಜಿ ಆಸ್ಪತ್ರೆಗಳ ಅಧ್ಯಕ್ಷ ಡಾ.ನಾಗೇಶ್ವರ ರೆಡ್ಡಿ, ತಮ್ಮ ಅಧ್ಯಯನದ ಫಲಿತಾಂಶಗಳನ್ನು ‘ವಿಸ್ಮಯಕಾರಿ’ ಎಂದು ಬಣ್ಣಿಸಿದ್ದಾರೆ. ‘ವಿಶೇಷವಾಗಿ ಗರ್ಭಿಣಿಯರು, ಮಧುಮೇಹ, ಅಧಿಕ ರಕ್ತದೊತ್ತಡ, ಸ್ಥೂಲಕಾಯ ಮತ್ತು ದೀರ್ಘಕಾಲದ ಅನಾರೋಗ್ಯ ಅನುಭವಿಸುತ್ತಿರುವ ವಯೋವೃದ್ಧರಂತಹ ಹೆಚ್ಚಿನ ಅಪಾಯದ ವ್ಯಕ್ತಿಗಳಲ್ಲಿ ಕೋವಿಡ್ -19 ಚಿಕಿತ್ಸೆಗಾಗಿ ಸಾರ್ವಜನಿಕ ಆರೋಗ್ಯ ನೀತಿಯನ್ನು ಮರುರೂಪಿಸುವ ಸಾಮರ್ಥ್ಯ ಈ ಅಧ್ಯಯನದ ಫಲಿತಾಂಶದಲ್ಲಿದೆ’ ಎಂದು ಅವರು ಹೇಳಿದ್ದಾರೆ.

‘ಸಮಯಕ್ಕೆ ಸರಿಯಾಗಿ ಮೊನೊಕ್ಲೋನಲ್ ಥೆರಪಿಯು ರೋಗದ ತೀವ್ರತೆಯನ್ನು ಸಂಪೂರ್ಣವಾಗಿ ನಿವಾರಿಸುತ್ತದೆ ಎಂಬುದನ್ನು ನಾವು ನಮ್ಮ ಸಂಶೋಧನೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದೇವೆ’ ಎಂದು ಡಾ. ರೆಡ್ಡಿ ಹೇಳಿದರು.

ಸಾರ್ಸ್– ಕೋವಿಡ್ –2 ವೈರಸ್ ರೂಪಾಂತರಗಳಲ್ಲಿ ಡೆಲ್ಟಾ ರೂಪಾಂತರಿ ವೈರಸ್ ಅತ್ಯಂತ ಅಪಾಯಕಾರಿಯಾಗಿ ವಿಕಸನಗೊಂಡಿದೆ. ಈ ಸೋಂಕಿನ ಹೆಚ್ಚಿನ ಪ್ರಸರಣವು ಈ ವರ್ಷದ ಆರಂಭದಲ್ಲಿ ದೇಶದಲ್ಲಿ ವಿನಾಶವನ್ನೇ ಉಂಟು ಮಾಡಿದೆ.



ಎನ್ ಜಿ ಇ ಎಫ್ ಲಿ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN:U31102KA1970SGC001568
ನಂ.49, 3ನೇ ಮಹಡಿ, ಖನಿಜ ಭವನ (ಸೌತ್ ವಿಂಗ್), ರೇಸ್‌ಕೋರ್ಸ್ ರಸ್ತೆ, ಬೆಂಗಳೂರು -560 001. ಫೋನ್: 080-22203339 ಇ-ಮೇಲ್: md-ngef@karnataka.gov.in
ಸಂಖ್ಯೆ : ಎನ್‌ಜಿಇಎಫ್/76/ಸ.ಪಂ./2020-21 ದಿನಾಂಕ : 02.11.2021

ಇ-ಹರಾಜು ಪ್ರಕಟಣೆ

ಎನ್ ಜಿ ಇ ಎಫ್ ಲಿ. ಸಂಸ್ಥೆಯು ಹೆಚ್ಚುವರಿ ನಿಧಿಯನ್ನು ಸಾರ್ವಜನಿಕ ಹಾಗೂ ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಒಂದು ವರ್ಷಗಳ ಅವಧಿಗೆ ಠೇವಣಿ ಇಡಲು ಉದ್ದೇಶಿಸಿದೆ.
ಇ-ಹರಾಜಿಗೆ ಸಂಬಂಧಿಸಿದ ವೇಳಾಪಟ್ಟಿ ಈ ಕೆಳಗಿನಂತಿದೆ:
ಇ-ಹರಾಜು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ **ದಿನಾಂಕ: 02.11.2021**
ನೇರ ಹರಾಜು **ದಿನಾಂಕ: 24.11.2021**
ಇ-ಹರಾಜಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು https://eproc.karnataka.gov.in ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು, ಎನ್‌ಜಿಇಎಫ್ ಲಿ.

ಕಾರ್ಯಪಾಲಕ ಅಭಿಯಂತರ ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕೋಲಾರ ವಿಭಾಗ, ಕೋಲಾರ.
"ವಿಜಯಶ್ರೀ ನಿಲಯ" 14ನೇ ವಾರ್ಡ್, ಪೇಟೆಚಾಮನಹಳ್ಳಿ, ಬೈಪಾಸ್, ಕೋಲಾರ–563102
ದೂ: 08152–222331 | ಇ–ಮೇಲ್: eerdwsd.klr@gmail.com
ಸಂಖ್ಯೆ:ಕಾಪಾಅ/ಗ್ರಾಕುನೀ&ಕೋ/ಕಿ.ಇಂ/ಟೆಂಡರ್/635/2021–22 ದಿನಾಂಕ:27.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (ದ್ವಿ–ಲಕೋಟೆ ಪದ್ಧತಿ & ಕೆಡಬ್ಲ್ಯೂ–4)
(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರ ನಿಬಂಧನೆಗೊಳಪಟ್ಟಂತೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ 4215–ಎನ್.ಆರ್.ಡಿ.ಡಬ್ಲ್ಯೂಪಿ ಶುದ್ಧ ಕುಡಿಯುವ ನೀರು ಘಟಕ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಒ) ಯೋಜನೆಗಳ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. **01) ಪ್ಯಾಕೇಜ್ ನಂ. ಕೆಎಲ್‌ಆರ್–ಕೆಎಲ್‌ಆರ್–ಬಿಪಿಟಿ–ಕೆಜಿಎಫ್–01 (33 ಘಟಕಗಳು) 02) ಪ್ಯಾಕೇಜ್ ನಂ. ಕೆಎಲ್‌ಆರ್–ಎಸ್‌ವಿಪಿ–ಎಂಬಿಎಲ್–ಎಂಎಲ್‌ಆರ್–02 (35 ಘಟಕಗಳು)** ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ರ ಮೂಲಕ ಸಲ್ಲಿಸಲು ಕೋರಲಾಗಿದೆ. 1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 10.11.2021 ರಂದು 17.00 ಗಂಟೆಗೆ,** 2) ತಾಂತ್ರಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ: **12.11.2021 ರಂದು 11:00 ಗಂಟೆಗೆ.** 3) ಆರ್ಥಿಕ ಬಿಡ್ ಟೆಂಡರ್ ತೆರೆಯುವ **ದಿನಾಂಕ: 15.11.2021 ರಂದು** ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ. (ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ).

ಸೂಚನೆ: ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹಾಗೂ ಈ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾವಾಣಿ ಸಂಖ್ಯೆ: +91 8025501216 ಮತ್ತು +91 802551227ನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ವಾಸಾಸಂಇ/ಕೋಲಾರ/ಜಿಎ/247/2021–22 ಕಾರ್ಯಪಾಲಕ ಅಭಿಯಂತರರು

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಪ್ರಧಾನ ಕಛೇರಿ: ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ದೂ:Ph: 26677552, 26679041, 42047786, 7411414285
Website: www.gmcbank.net, E-mail gmc@gmcbank.net,

92ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನೋಟೀಸ್
“Video Conference/Virtual Meeting”

ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದನ್ವಯ ಬ್ಯಾಂಕಿನ 2020-21 ನೇ ಸಾಲಿನ 92 ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು “Video Conference/ Virtual Meeting” (ಸದಸ್ಯರು ವೈಯಕ್ತಿಕವಾಗಿ ಭಾಗವಹಿಸಲು ಅವಕಾಶವಿರುವುದಿಲ್ಲ) ಮುಖಾಂತರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ರಾಮಚಂದ್ರರವರ ಅಧ್ಯಕ್ಷತೆಯಲ್ಲಿ ದಿನಾಂಕ 07.11.2021 ನೇ ಭಾನುವಾರ ಬೆಳಗ್ಗೆ 10.00 ಕ್ಕೆ ನಡೆಸಲು ತೀರ್ಮಾನಿಸಲಾಗಿದೆ.

ಈಗಾಗಲೇ ಸದಸ್ಯರುಗಳಿಗೆ ಅಂಚೆ ಮೂಲಕ ನೋಟೀಸನ್ನು ಸಕಾಲದಲ್ಲಿ ಕಳುಹಿಸಲಾಗಿದ್ದು, ತಲುಪದೇ ಇದ್ದಲ್ಲಿ ಇದನ್ನೇ ಸರ್ವಸದಸ್ಯರ ಸಭೆಯ ನೋಟೀಸ್ ಎಂದು ಪರಿಗಣಿಸಿ, ಆನ್‌ಲೈನ್ ಮೂಲಕ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಕೋರುತ್ತೇವೆ.

ವಾರ್ಷಿಕ ವರದಿಯನ್ನು ಶಾಖೆಗಳಲ್ಲಿ ಪಡೆಯಬಹುದಾಗಿದ್ದು, ಇದಲ್ಲದೇ ಬ್ಯಾಂಕಿನ ವೆಬ್‌ಸೈಟ್ www.gmcbank.net ನಲ್ಲೂ ಪ್ರಕಟಿಸಲಾಗಿದೆ.

ಎಂ.ರಾಮಚಂದ್ರ ಅಧ್ಯಕ್ಷರು | ಆಡಳಿತ ಮಂಡಳಿ ಅಪ್ಪಣೆ ಮೇರೆಗೆ ಆನಂದ್ ಎಸ್.ಆರ್. ಪ್ರಭಾರ ಕಾರ್ಯದರ್ಶಿ

Virtual Meeting Link:
https://viewnow.in/GMCBANK/AGM/

ಪ್ರತಿಭಾ ಪುರಸ್ಕಾರ
2020-21ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದಿನಾಂಕ 05.12.2021ರಂದು ಪ್ರಧಾನ ಕಛೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ದಿನಾಂಕ 30.11.2021ರೊಳಗೆ ಅರ್ಜಿ ಸಲ್ಲಿಸಲು ಕೋರಿದೆ.

ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ನಂ.73/1, ಗಾಂಧಿಬಜಾರ್ ಮುಖ್ಯ ರಸ್ತೆ, ಬೆಂಗಳೂರು-560004
Ph: 080-22421998, 26619955, 26619093
Website: https://ncbl.org.in

ತಿದ್ದುಪಡಿ
ನಮ್ಮ ಬ್ಯಾಂಕಿನ ಜಾಹೀರಾತು ದಿನಾಂಕ: 27–10–2021 ರಂದು ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವಿಳಾಸ: ನಂ.71/1 ಎಂದು ತಪ್ಪಾಗಿ ಪ್ರಕಟವಾಗಿತ್ತು. ಸರಿಯಾದ ವಿಳಾಸ: ನಂ. 73/1 ಎಂದು ಓದಿಕೊಳ್ಳಬೇಕಾಗಿ ವಿನಂತಿ.
ಸಹಿ/–
ನೇಮಕಾತಿ ಸಮಿತಿ ಹಾಗೂ ಆಡಳಿತ ಮಂಡಳಿಯ ಆದೇಶದ ಮೇರೆಗೆ
ವ್ಯವಸ್ಥಾಪಕ ನಿರ್ದೇಶಕರು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ: ರಾಗಾವಿ/ಪ್ರೊಕ್/ಡೈರಿ& ಕ್ಯಾಲೆಂಡರ್/70/2021–22 ದಿನಾಂಕ: 02.11.2021

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ಆರ್‌ಜಿಯುಹೆಚ್‌ಎಸ್‌ಗೆ 2021–22ರ ಸಾಲಿಗೆ ಕ್ಯಾಲೆಂಡರ್, ಡೆಸ್ಕ್ ಟಾಪ್ ಕ್ಯಾಲೆಂಡರ್ ಮತ್ತು ಡೈರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ. (ME/2021-22/IND4109)

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	30/10/2021 ಸಂಜೆ 6:04 ಗಂಟೆಗೆ
ಪೂರ್ವ ಬಿಡ್ ಸಭೆಯ ದಿನಾಂಕ	09/11/2021 ಸಂಜೆ 03:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	18/11/2021 ಸಂಜೆ 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	20/11/2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/–
ವಾ.ಸಾ.ಸಂ.ಇ/2057/2021–22 ಕುಲಸಚಿವರು

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು – 55.
8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್
ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55** ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 9449842016.

ಸುಸಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀ.ವೆಂಕಟೇಶ್ವರ ನಾಯ್ಡು. ಜಿ 	ಜಿ.ಆರ್.ಡಿ/ಯು.ಬಿ.ಎಫ್/ 52 & 53 2021–22	ಹಳೆ ನಂ.31, ಹಳೆ ಖಾತಾ ನಂ.781 ಸರ್ವೆ ನಂ.55/1, ಹೊಸ ಬಿ.ಬಿ.ಎಮ್.ಪಿ ಖಾತಾ ನಂ.1022/781/31, ಉತ್ತರಹಳ್ಳಿ ವಿಲೇಜ್, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಬಿ.ಬಿ.ಎಮ್.ಪಿ ವಾರ್ಡ್ ನಂ.184 (ಉತ್ತರಹಳ್ಳಿ) ಪಿ.ಐ.ಡಿ.ನಂ.184–ಫ0645–3. ಇಲ್ಲಿರುವ ಪೂರ್ವ ಪಶ್ಚಿಮ: 40 ಅಡಿಗಳು ಮತ್ತು ಉತ್ತರ ದಕ್ಷಿಣ : 30 ಅಡಿಗಳು ಈ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ : 30ಅಡಿ ಮುಖ್ಯರಸ್ತೆ. ಪಶ್ಚಿಮಕ್ಕೆ : ಸೈಟ್ ನಂ.46 ಉತ್ತರಕ್ಕೆ : ಸೈಟ್ ನಂ.30 ದಕ್ಷಿಣಕ್ಕೆ : ಸೈಟ್ ನಂ.32	ಹಳೆ ನಂ.31, ಹಳೆ ಖಾತಾ ನಂ.781 ಸರ್ವೆ ನಂ.55/1, ನ್ಯೂ ಬಿ.ಬಿ.ಎಮ್.ಪಿ ಖಾತಾ ನಂ.1022/781/31, ಉತ್ತರಹಳ್ಳಿ ವಿಲೇಜ್, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು. ದಿನಾಂಕ: 10.11.2021.ರ ಬುಧವಾರ ಬೆಳಿಗ್ಗೆ 11–30 ಘಂಟೆಗೆ ರೂ.62,00,000/– (ದಿನಾಂಕ.20.09.2021 ವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)
ಶ್ರೀ.ಪ್ರೇಮಚಂದ್ರ ಕೆ ಇವರು ಮರಣಹೊಂದಿದ್ದು, ಇವರ ಕಾನೂನುವಾರಸುದಾರರಾದ 1(ಎ) ಶ್ರೀಮತಿ. ದೇವಿ.ಕೆ, ಕೋಂ.ಲೇಟ್.ಶ್ರೀ.ಪ್ರೇಮಚಂದ್ರ ಕೆ, 1(ಬಿ) ಶ್ರೀ.ಕಾಂತರಾಜು.ಡಿ, ಶ್ರೀ.ಪ್ರೇಮಚಂದ್ರ ಕೆ, ಇವರ ತಂದೆ 1(ಸಿ) ಶ್ರೀಮತಿ.ದೇವಿ.ಎಮ್, ಶ್ರೀ.ಪ್ರೇಮಚಂದ್ರ ಕೆ ಇವರ ತಾಯಿ 	ಎ.ಆರ್.ಡಿ/ಯು.ಬಿ.ಎಫ್/54/ 2021–22	ನಂ.450/87/2, ಹಳೆ ನಂ.87/2, ಖಾತಾ ನಂ.964/87/2, ಎ ನಾರಾಯಣಪುರ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೋಕು, ಬಿ.ಬಿ.ಎಮ್.ಪಿ ವಾರ್ಡ್ ನಂ.81, (ಮಹಾದೇವಪುರ) ಹೊಸ ಪಿ.ಐ.ಡಿ.ನಂ.W081–0169–1–1. ಇಲ್ಲಿರುವ ಪೂರ್ವ ಪಶ್ಚಿಮ 40 ಅಡಿಗಳು ಮತ್ತು ಉತ್ತರ ದಕ್ಷಿಣ 40 ಅಡಿಗಳ ಈ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ–ರಸ್ತೆ ಪಶ್ಚಿಮಕ್ಕೆ–ಮುನಿಸ್ವಾಮಿನವರ ಮನೆ ಉತ್ತರಕ್ಕೆ–ಅಶ್ವತ್ ಕಟ್ಟೆ ದಕ್ಷಿಣಕ್ಕೆ– ನಾಸಲಪ್ಪನವರ ಮನೆ	ನಂ.450/87/2, ಹಳೆ ನಂ.87/2, ಖಾತಾ ನಂ.964/87/2, ಎ ನಾರಾಯಣಪುರ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೋಕು, ಬಿ.ಬಿ.ಎಮ್.ಪಿ ವಾರ್ಡ್ ನಂ.81, (ಮಹಾದೇವಪುರ) ದಿನಾಂಕ:12.11.2021 ರ ಶುಕ್ರವಾರ ಬೆಳಿಗ್ಗೆ 11–30 ಘಂಟೆಗೆ ರೂ.49,00,000/– (ದಿನಾಂಕ.20.09.2021 ವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡಯಾವರೀತಿಯಲ್ಲಿದೆಯೋಅದೇರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,00,000/– ಗಳ ಕೆಳಗೆ ಬಾಕಿ ಇರುವ ಪ್ರಕರಣಗಳಲ್ಲಿ ರೂ.50,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ರೂ.50,00,001/– ಮೇಲೆ ಬಾಕಿಯಿರುವ ಪ್ರಕರಣಗಳಲ್ಲಿ ರೂ.1,00,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
5. **ಹರಾಜಿನಲ್ಲಿ ಬಿಡ್ ನಿಂತತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವಅಥವಾತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತಾರೆ.
7. ಹರಾಜಿನಲ್ಲಿಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
8. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತುಅಂದಾಜು ವಿಸ್ತೀರ್ಣದ ವಿಷಯದಲ್ಲಿಯಾವುದಾದರೂ ತಪುಗಳಿದ್ದರೆ ಸರ್ಕಾದವರುಜವಾಬ್ದಾರರಾಗುವುದಿಲ್ಲ.
9. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವೆ ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
10. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀಅಥವಾಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆಠೇವಣಿ ಮಾಡಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಮೊತ್ತ ಮತ್ತುಅದರಮೇಲೆ ಶೇ 5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವಾಗಿರುತ್ತಾರೆ ಹಾಗೂ ಹರಾಜಿನಲ್ಲಿಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 24.09.2021
ಬೆಂಗಳೂರು.
ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು –55.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಇ–ಮೇಲ್:nelamangala.pa@gmail.com
ಸಂಖ್ಯೆ:ನೆಯೋಪ್ರಾ: CLU:21:2017–18 ದಿನಾಂಕ: 02.11.2021

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ವಡೇರಹಳ್ಳಿ ಗ್ರಾಮದ ಸ.ನಂ.3/4ಬಿ ರಲ್ಲಿ 00ಎಕರೆ–22 ಗುಂಟೆ, ಸ.ನಂ.9/1 ರಲ್ಲಿ 00 ಎಕರೆ–21ಗುಂಟೆ, ಸ.ನಂ.10/1 ರಲ್ಲಿ 00ಎಕರೆ–27ಗುಂಟೆ, ಸ.ನಂ.11/8 (ಹಳೇ ಸ.ನಂ.11/3) ರಲ್ಲಿ 00ಎಕರೆ–12ಗುಂಟೆ, ಸ.ನಂ.16 ರಲ್ಲಿ 00ಎಕರೆ–03½ಗುಂಟೆ, ಸ.ನಂ.16 ರಲ್ಲಿ 00ಎಕರೆ–03½ಗುಂಟೆ, ಸ.ನಂ.17/4 ರಲ್ಲಿ 00ಎಕರೆ–09ಗುಂಟೆ, ಸ.ನಂ.17/4 ರಲ್ಲಿ 01ಎಕರೆ–03ಗುಂಟೆ, ಸ.ನಂ.32/2 ರಲ್ಲಿ 00ಎಕರೆ–04½ಗುಂಟೆ, ಸ.ನಂ.32/7 ರಲ್ಲಿ 00ಎಕರೆ–06ಗುಂಟೆ, ಸ.ನಂ.32/8 ರಲ್ಲಿ 00ಎಕರೆ–24ಗುಂಟೆ, ಸ.ನಂ.32/9 ರಲ್ಲಿ 00ಎಕರೆ–26ಗುಂಟೆ, ಸ.ನಂ.32/10ಎ ರಲ್ಲಿ 00ಎಕರೆ–10ಗುಂಟೆ, ಸ.ನಂ.33/7 ರಲ್ಲಿ 00ಎಕರೆ–09ಗುಂಟೆ, ಸ.ನಂ.33/9 ರಲ್ಲಿ 00ಎಕರೆ–10ಗುಂಟೆ, ಸ.ನಂ.33/10 (ಹಳೇ ಸ.ನಂ.33/7) ರಲ್ಲಿ 00ಎಕರೆ–09ಗುಂಟೆ ಮತ್ತು ಸ.ನಂ.33/11 (ಹಳೇ ಸ.ನಂ.33/7) ರಲ್ಲಿ 00ಎಕರೆ–09ಗುಂಟೆ **ಒಟ್ಟು 06ಎಕರೆ–08½ಗುಂಟೆ ಮತ್ತು ಮತ್ತಹಳ್ಳಿ** ಗ್ರಾಮದ ಸ.ನಂ.22/3ಬಿ ರಲ್ಲಿ 00ಎಕರೆ–09ಗುಂಟೆ, ಸ.ನಂ.22/3ಸಿ ರಲ್ಲಿ 00ಎಕರೆ–10ಗುಂಟೆ, ಸ.ನಂ.22/4ರಲ್ಲಿ 00ಎಕರೆ–18ಗುಂಟೆ, ಸ.ನಂ.22/6ರಲ್ಲಿ 00ಎಕರೆ–06½ಗುಂಟೆ, ಸ.ನಂ.22/7 ರಲ್ಲಿ 00ಎಕರೆ–18ಗುಂಟೆ (00ಎಕರೆ–01ಗುಂಟೆ 'ಎ' ಖರಾಬು ಸೇರಿ), ಸ.ನಂ.27/1 ರಲ್ಲಿ 01ಎಕರೆ–00ಗುಂಟೆ (00ಎಕರೆ–01ಗುಂಟೆ 'ಎ' ಖರಾಬು ಸೇರಿ), ಸ.ನಂ.28/3 ರಲ್ಲಿ 01ಎಕರೆ–29ಗುಂಟೆ (00ಎಕರೆ–01ಗುಂಟೆ 'ಎ' ಖರಾಬು ಸೇರಿ), ಸ.ನಂ.28/5 ರಲ್ಲಿ 01ಎಕರೆ–26ಗುಂಟೆ (00ಎಕರೆ–01ಗುಂಟೆ 'ಎ' ಖರಾಬು ಸೇರಿ), ಸ.ನಂ.28/6 ರಲ್ಲಿ 01ಎಕರೆ–37ಗುಂಟೆ (00ಎಕರೆ–01ಗುಂಟೆ 'ಎ' ಖರಾಬು ಸೇರಿ) ಮತ್ತು ಸ.ನಂ.37 ರಲ್ಲಿ 06ಎಕರೆ–13ಗುಂಟೆ (00ಎಕರೆ–35ಗುಂಟೆ 'ಎ' ಖರಾಬು ಸೇರಿ) **ಒಟ್ಟು 14ಎಕರೆ–06½ಗುಂಟೆ ಒಟ್ಟಾರೆ 20ಎಕರೆ–15ಗುಂಟೆ** ವಿಸ್ತೀರ್ಣದ ಜಮೀನು ಅನುಮೋದಿತ ಮಹಾ ಯೋಜನೆಯನ್ವಯ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲ್ಪಟ್ಟಿದ್ದು, ಸದರಿ ಜಮೀನನ್ನು **“ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ“** ಭೂ ಉಪಯೋಗ ಬದಲಾವಣೆ ಮಾಡಲು ಕೋರಿ **ಶ್ರೀ ಹೆಚ್.ಎಂ.ಕುಮಾರ್, ಶ್ರೀ ಎಂ.ಜಯಪ್ರಕಾಶ್, ಶ್ರೀ ಜೆ.ಮುನ್ನಾಗಪ್ಪ, ಶ್ರೀ ಎಂ.ಹುಚ್ಚೇಗೌಡ, ಮತ್ತು ಶ್ರೀ ಹೆಚ್.ಎಂ.ಕುಮಾರ್,** ಜಿಪಿಎ ಪ್ರತಿನಿಧಿ (**ಶ್ರೀ ಚಿಕ್ಕಗಂಗಪ್ಪ ಮತ್ತು ಇತರರು, ಹಾಗೂ ಶ್ರೀ ಗಂಗಬೈರಪ್ಪ ಮತ್ತು ಇತರರು ಇವರ ಪರವಾಗಿ) ಶ್ರೀ ಜೆ.ಮುನ್ನಾಗಪ್ಪ,** ಜಿಪಿಎ ಪ್ರತಿನಿಧಿ **(ಶ್ರೀ ಎ.ಬಾಲಕೃಷ್ಣ ಇವರ ಪರವಾಗಿ)** ರವರು **ದಿನಾಂಕ:22.10.2021** ರ ಅರ್ಜಿಯಲ್ಲಿ ಕೋರಿರುತ್ತಾರೆ. ಹಾಗೂ ಪ್ರಶ್ನಿತ ಸರ್ವೆ ನಂಬರ್ ಜಮೀನುಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾದ ವಸತಿ ಬಡಾವಣೆಯನ್ನು ನಿರ್ಮಿಸಿ, **ಬಿ.ಇ.ಎಂ.ಎಲ್ ಎಂಪ್ಲಾಯೀಸ್ ಹೌಸಿಂಗ್ ಕೋ–ಅಪರೇಟಿವ್ ಸೊಸೈಟಿಯ** ಸದಸ್ಯರುಗಳಿಗೆ ಕಡಿಮೆ ದರದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿದ್ದು, ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ. ಪ್ರಶ್ನಿತ ಸರ್ವೆ ನಂಬರ್‌ಗಳ ಜಮೀನು ಸರ್ಕಾರದಿಂದ **ದಿನಾಂಕ:01.06.2015** ರಂದು ಅನುಮೋದನೆಯಾಗಿರುವ ಮಹಾಯೋಜನೆಯನ್ವಯ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲ್ಪಟ್ಟಿದೆ. ಮತ್ತು TGRನ ವಲಯ–1 ರಲ್ಲಿ ಬರುತ್ತಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಅರ್ಜಿದಾರರ ಮನವಿ ಬಗ್ಗೆ 15 ದಿನಗಳ ಕಾಲಾವಕಾಶವನ್ನು ನೀಡಿ ಸಾರ್ವಜನಿಕರಿಂದ ಸಲಹೆ / ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸಲು ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಈ ಸಂಬಂಧ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ / ಸಲಹೆ ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ದಿನಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಲುಪುವಂತೆ ಲಿಖಿತವಾಗಿ ಬರೆದು ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. 15 ದಿನಗಳ ನಂತರ ಬಂದ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/264/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು
ದೂರವಾಣಿ ಸಂಖ್ಯೆ: 080–26632884, ಫ್ಯಾಕ್ಸ್ ಸಂಖ್ಯೆ: 080–26532884
ಸಂ. ಕಾಇಂ:ಸನೀಮತ್ತುಅಂಅವಿ:/ಸಇ–1/ಟೆಂಡರ್/07/2021–22 ದಿನಾಂಕ: 02–11–2021

ಐಟಂವಾರು ಟೆಂಡರ್/ಅಲ್ಪಾವಧಿ ಟೆಂಡರ್–01 (ಕೆ.ಡಬ್ಲ್ಯೂ–4)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ಇವರಿಂದ ಈ ಕೆಳಕಂಡ ಲೆಕ್ಕ ಶೀರ್ಷಿಕೆ 4702–A&B ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ – 2000ರ KW 4 ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್ ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು ಟಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ಚಿಕ್ಕಮರಳವಾಡಿ ಗ್ರಾಮದ ಹತ್ತಿರ ದೊಡ್ಡಹಳ್ಳಕ್ಕೆ ಚೆಕ್ ಡ್ಯಾಂ ಕಮ್ ಪಾತ್‌ವೇ, ಮುರಳಿದೊಡ್ಡಿ ಗ್ರಾಮದ ಹತ್ತಿರ ಮತ್ತು ಎಸ್.ಎಲ್.ಎನ್. ದೊಡ್ಡಿ ಗ್ರಾಮದ ಹತ್ತಿರ ದೊಡ್ಡಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ (ಪ್ಯಾಕೇಜ್).
ಲೆಕ್ಕ ಶೀರ್ಷಿಕೆ: 4702 ಅಣೆಕಟ್ಟು, ಪಿಕಪ್–ಪ್ರಧಾನ ಕಾಮಗಾರಿಗಳು
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 400.00 ಲಕ್ಷಗಳು
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 6 ತಿಂಗಳು (ಮಳೆಗಾಲ ಸೇರಿ).
(1) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **25/11/2021 ರ 16.30 ಗಂಟೆಯವರೆಗೆ.** (2) ಭರ್ತಿ ಮಾಡಿದ ಟಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾದ ದಿನಾಂಕ ಮತ್ತು ವೇಳೆ : **26/11/2021 ರ 16.30 ಗಂಟೆಯವರೆಗೆ.** (3) ಪೂರ್ವ ಟೆಂಡರ್ ಸಭೆಯ : **23/11/2021ರ 11.30 ಗಂಟೆಯವರೆಗೆ** (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ: **29/11/2021 ರ 11.30 ಗಂಟೆಯವರೆಗೆ.** (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ: ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು. (6) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್‌ನಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. (7) ಎಲ್ಲಾ ಟೆಂಡರನ್ನು ಅಥವಾ ಯಾವುದಾದರೂ ಟೆಂಡರನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. (8) ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಮುಖಾಂತರ ವೆಬ್‌ಸೈಟ್ ವಿಳಾಸ https://www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. (9) ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ. (10) ಸರ್ಕಾರದ ಆದೇಶ ಸಂ:ಆಇ 675 ವೆಚ್ಚ–12/2020 ಬೆಂಗಳೂರು ದಿನಾಂಕ: 22/12/2020ರ ಪ್ರಕಾರ ಇ.ಎಂ.ಡಿ ಬದಲಾಗಿ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ಇ.ಎಂ.ಡಿ ಡಿಕ್ಲರೇಷನ್ ನಮೂನೆಯನ್ನು ಇ–ಪ್ರಾಕ್ ನಲ್ಲಿ ಅಪ್ಲೋಡ್ ಮಾಡತಕ್ಕದ್ದು.

ಸಹಿ/– ಕಾರ್ಯಪಾಲಕ ಅಭಿಯಂತರರು
DIPR/DDU/Shirdi Sai/2073/2021-22 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೋವಿಡ್‌ನಿಂದ ಮೃತಪಟ್ಟ ವ್ಯಾಪಾರಿಗಳ ಕುಟುಂಬ ಬೀದಿಪಾಲು

ದೊರಕದ ನೆರವು: ಮರೀಚಿಕೆಯಾದ ಪರಿಹಾರ

• ವಿಜಯಕುಮಾರ್ ಎಸ್.ಕೆ.

ಗಾಂಧಿ ನಗರದಲ್ಲಿ ಬೀದಿ ಬದಿ ಬಟ್ಟೆ ಮಾರಾಟಕ್ಕೆ ಗ್ರಾಹಕರಿಲ್ಲದಿರುವುದು –ಪ್ರಜಾವಾಣಿ ಚಿತ್ರ /ಪ್ರಶಾಂತ್ ಎಚ್‌.ಜಿ.

'ಬೀದಿ ವ್ಯಾಪಾರ– ಬದುಕು ದುಸ್ತರ' ಭಾಗ - 2

ಬೆಂಗಳೂರು: ಗೋಗರೆದರೂ ಸಿಗದ ಹೊಸ ಸಾಲ, ಕಣ್ಮರೆಯಾದ ಬಡವರ ಬಂಧು ಯೋಜನೆ, ಕೋವಿಡ್‌ನಿಂದ ಮೃತಪಟ್ಟ ಕುಟುಂಬದವರಿಗೆ ಮರೀಚಿಕೆಯಾದ ಪರಿಹಾರ... ಇದು ಬೆಂಗಳೂರಿನ ಬೀದಿ ಬದಿ ವ್ಯಾಪಾರಿಗಳ ಸ್ಥಿತಿ.

ಕೋವಿಡ್ ಬಳಿಕ ಸಂಕಷ್ಟದ ಸುಳಿಯಲ್ಲಿ ಮುಳುಗಿರುವ ಬೀದಿ ಬದಿ ವ್ಯಾಪಾರಿಗಳು ಚೇತರಿಸಿಕೊಳ್ಳಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ. ಸರ್ಕಾರದ ನೆರವಿನ ನಿರೀಕ್ಷೆಗಳೂ ಹುಸಿಯಾಗಿ ಕಂಗಾಲಾಗಿದ್ದಾರೆ. ಅಂದೇ ದುಡಿದು ತಿನ್ನಬೇಕಾದ ಸ್ಥಿತಿಯಲ್ಲಿರುವ ವ್ಯಾಪಾರಿಗಳಿಗೆ ದುಡಿಮೆಯೇ ಇಲ್ಲದೆ ಕೈಗಳನ್ನು ಕಟ್ಟಿ ಹಾಕಿದ ಸ್ಥಿತಿಯಲ್ಲಿದ್ದಾರೆ.

ಕೋವಿಡ್ ಎರಡು ಅಲೆಗಳು ಹಲವು ವ್ಯಾಪಾರಿಗಳ ಬದುಕನ್ನು ಮತ್ತಷ್ಟು ಬೀದಿಗೆ ತಳ್ಳಿದ್ದರೆ, ಕೆಲವರ ಜೀವವನ್ನೇ ಬಲಿ ಪಡೆದಿದೆ. ಕುಟುಂಬಕ್ಕೆ ಆಧಾರ ಆಗಿದ್ದವರನ್ನೇ ಕಳೆದುಕೊಂಡು ಬೀದಿ ಬದಿ ವ್ಯಾಪಾರಿಗಳ ಕುಟುಂಬಗಳು ಅನಾಥವಾಗಿವೆ. ಗಾಂಧಿ ಬಜಾರ್‌ನಲ್ಲಿ ಮಹಾದೇವ ಎಂಬ ಬೀದಿ ವ್ಯಾಪಾರಿ ಕೋವಿಡ್ ಎರಡನೇ ಅಲೆಯಲ್ಲಿ ಚಿಕಿತ್ಸೆ ಸಿಗದೆ ಮೃತಪಟ್ಟರು. ಅವರ ಕುಟುಂಬ ಈಗ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದೆ.

ಗಾಂಧಿ ಬಜಾರ್‌ನಲ್ಲಿ ತಳ್ಳು ಗಾಡಿಯ ಮೇಲೆ ಹಣ್ಣುಗಳನ್ನು ಜೋಡಿಸಿಕೊಂಡು ಮಹಾದೇವ ಜೀವನ ಕಟ್ಟಿಕೊಂಡಿದ್ದರು. ಇಬ್ಬರು ಪುಟಾಣಿ ಮಕ್ಕಳು ಮತ್ತು ಹೆಂಡತಿ ಈಗ ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಸಾವಿನ ಆಘಾತದಿಂದ ಕುಟುಂಬ ಸದಸ್ಯರು ಇನ್ನೂ ಹೊರಗೆ ಬಂದಿಲ್ಲ.

'ಇಡೀ ಕುಟುಂಬಕ್ಕೆ ಮಹಾದೇವ ಆಧಾರಸ್ಥಂಭವಾಗಿದ್ದರು. ಹೆಂಡತಿಗೆ ವ್ಯಾಪಾರ ವಹಿವಾಟಿನ ಬಗ್ಗೆ ಅರಿವಿಲ್ಲ. ಮಕ್ಕಳನ್ನು ಶಾಲೆಗೆ ಸೇರಿಸಲು ಆಗದ ಸ್ಥಿತಿಯಲ್ಲಿ ಇದ್ದೇವೆ. ಏನು ಮಾಡಬೇಕು ಎಂಬುದೇ ತೋಚದಾಗಿದೆ' ಎಂದು ಮಹಾದೇವ ಅವರ ಸಹೋದರಿ ನಂಜಾಮಣಿ ಗದ್ಗದಿತರಾದರು.

'ಇದೇ ರೀತಿ ಒಂದೇ ಕುಟುಂಬದಲ್ಲಿ ಮೂವರನ್ನು ಕಳೆದುಕೊಂಡು ವ್ಯಾಪಾರಿಗಳು ಗಾಂಧಿ ಬಜಾರ್‌ನಲ್ಲಿದ್ದಾರೆ. ಯಾರೊಬ್ಬರಿಗೂ ಸರ್ಕಾರದಿಂದ ಪರಿಹಾರ ಬಂದಿಲ್ಲ. ಜೀವನವೇ ಸಾಕು ಎನ್ನುವಷ್ಟು ಬೇಸರವಾಗಿದೆ' ಎಂದು ಅವರು ಕಣ್ಣೀರು ಹಾಕಿದರು.

'ವ್ಯಾಪಾರ ವಹಿವಾಟು ಮುಂದುವರಿಸಲು ₹5 ಸಾವಿರ, ₹10 ಸಾವಿರ ಸಾಲ ಕೇಳಿ ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಲಾಗಿದೆ. ಸಾಲ ಕೊಡಲು ಬ್ಯಾಂಕ್ ಅಧಿಕಾರಿಗಳು ಸತಾಯಿಸುತ್ತಿದ್ದು, ದಿನವೂ ಬ್ಯಾಂಕ್‌ಗಳಿಗೆ ಎಡತಾಕಿ ಸಾಕಾಗಿದೆ' ಎಂದು ಗಾಂಧಿನಗರದ ವ್ಯಾಪಾರಿಗಳು ಅಳಲು ತೋಡಿಕೊಳ್ಳುತ್ತಾರೆ.

ಸಾಲ ಕೇಳಲು ಬ್ಯಾಂಕ್‌ಗಳಿಗೆ ಹೋದರೆ ನಾಳೆ, ನಾಡಿದ್ದು ಎಂದು ಅಲೆದಾಡಿಸುತ್ತಿದ್ದಾರೆ. ಸರ್ಕಾರದ ₹2 ಸಾವಿರ ನೆರವನ್ನು ಸಾಲಕ್ಕೆ ಚುಕ್ತಾ ಮಾಡಿಕೊಂಡರು. ಈಗ ಬರಿಗೈ ಆಗಿದ್ದೇವೆ

ಕೇಶವಮೂರ್ತಿ, ಗಾಂಧಿನಗರ ಪಟ್ಟಣ ವ್ಯಾಪಾರ ಸಮಿತಿ ಸದಸ್ಯ

ಕೋವಿಡ್‌ನಿಂದ ಜೀವ ಕಳೆದುಕೊಂಡವರ ಕುಟುಂಬಕ್ಕೆ ಪರಿಹಾರ ಸಿಕ್ಕಿಲ್ಲ. ಕೆಲವರಿಗೆ ₹2 ಸಾವಿರ ನೆರವೂ ದೊರೆತಿಲ್ಲ. ಗಾಂಧಿ ಬಜಾರ್‌ನಲ್ಲಿ 200 ವ್ಯಾಪಾರಿಗಳಿದ್ದೇವೆ, ಮೂವರಿಗೆ ನೆರವು ದೊರೆತರೆ ಸಾಕೇ?

ವನಜಾಕ್ಷಿ, ಗಾಂಧಿ ಬಜಾರ್ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷೆ

ರಾಜ್ಯದ ನೆರವು ಕೇಂದ್ರ ಸಾಲಕ್ಕೆ ಚುಕ್ತಾ

ವಿನಯ ಶ್ರೀನಿವಾಸ್

ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ ಬೀದಿ ಬದಿ ವ್ಯಾಪಾರಿಗಳಿಗೆ ರಾಜ್ಯ ಸರ್ಕಾರ ನೀಡಿದ ₹2 ಸಾವಿರ ನೆರವು ಕೇಂದ್ರ ಸರ್ಕಾರವು ಕಳೆದ ವರ್ಷ ನೀಡಿದ್ದ ಸಾಲಕ್ಕೆ ಚುಕ್ತಾ ಆಗಿದೆ.

ಕೇಂದ್ರ ಸರ್ಕಾರ ಪಿಎಂ ಸ್ವನಿಧಿ ಯೋಜನೆಯಡಿ ₹10 ಸಾವಿರ ಸಾಲವನ್ನು ಕಳೆದ ಸಾಲಿನಲ್ಲಿ ನೀಡಿತ್ತು. ಅದನ್ನು ಕಂತು ರೂಪದಲ್ಲಿ ವ್ಯಾಪಾರಿಗಳು ಮರುಪಾವತಿ ಮಾಡಬೇಕಿತ್ತು. ಆದರೆ, ಸಂಕಷ್ಟದ ದಿನಗಳಲ್ಲಿ ಮರು ಪಾವತಿ ಮಾಡಲು ವ್ಯಾಪಾರಿಗಳಿಂದ ಸಾಧ್ಯವಾಗಿಲ್ಲ.

ಅನ್ನಕ್ಕೂ ಗತಿ ಇಲ್ಲದ ಸ್ಥಿತಿಯಲ್ಲಿದ್ದ ವ್ಯಾಪಾರಿಗಳಿಗೆ ರಾಜ್ಯ ಸರ್ಕಾರದಿಂದ ₹2 ಸಾವಿರ ನೆರವು ನೀಡಿತು. ಅದನ್ನು ಬ್ಯಾಂಕ್ ಖಾತೆಗಳನ್ನು ಸರ್ಕಾರ ಜಮಾ ಮಾಡಿತು. ರಾಜ್ಯ ಸರ್ಕಾರದಿಂದ ನೆರವು ಜಮಾ ಆದ ಕೂಡಲೇ ಬ್ಯಾಂಕ್‌ಗಳು ಅದನ್ನು ಸಾಲಕ್ಕೆ ಚುಕ್ತಾ ಮಾಡಿಕೊಂಡಿವೆ.

'ಎಲ್ಲ ವ್ಯಾಪಾರಿಗಳಿಗೆ ₹2 ಸಾವಿರ ನೆರವು ಸಿಗಲಿಲ್ಲ. ಕೆಲವರ ಖಾತೆಗೆ ಜಮಾ ಆದರೂ, ವ್ಯಾಪಾರಿಗಳ ಕೈಗೆ ಸಿಗಲಿಲ್ಲ. ರಾಜ್ಯ ಸರ್ಕಾರದ ನೆರವಿನ ಮೊತ್ತ ಕೇಂದ್ರ ಸರ್ಕಾರದ ಪಾಲಾಯಿತು' ಎಂದು ಬೀದಿ ಬದಿ ವ್ಯಾಪಾರಿಗಳ ಪರ ಹೋರಾಟಗಾರ ವಿನಯ ಶ್ರೀನಿವಾಸ್ ಹೇಳಿದರು.

ಕಣ್ಮರೆಯಾದ ಬಡವರ ಬಂಧು

ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಬಡವರ ಬಂಧು ಯೋಜನೆ ಜಾರಿಗೆ ತಂದಿದ್ದರು. ಅದರ ಅಡಿಯಲ್ಲಿ ₹5 ಸಾವಿರದಿಂದ ₹10 ಸಾವಿರ ನೆರವು ಘೋಷಿಸಿದ್ದರು. ಕೆಲವರಿಗೆ ಅದರ ಲಾಭ ದೊರೆಯಿತು.

'ಈ ಯೋಜನೆಯ ಲಾಭ ಪಡೆಯುವ ಪ್ರಕ್ರಿಯೆ ಕೂಡ ಸುಲಭವಾಗಿತ್ತು. ಆದರೆ, ಎಚ್‌.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಹುದ್ದೆಯಿಂದ ಇಳಿದ ಕೂಡಲೇ ಯೋಜನೆಯೂ ಸ್ಥಗಿತಗೊಂಡಿತು' ಎಂದು ವಿನಯ ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.

ಅಭಿಮಾನಿಯ ಪ್ರೀತಿ...

ಕಂಠೀರವ ಸ್ಟುಡಿಯೋದಲ್ಲಿನ ಪುನೀತ್ ರಾಜ್‌ಕುಮಾರ್ ಸಮಾಧಿ ಬಳಿ ತಮ್ಮ ಪ್ರೀತಿಯ 'ಅಪ್ಪು' ಅವರ ಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಿದ ಅಭಿಮಾನಿ ಅಕ್ಷಯ್ ಜಾಲಿಹಾಳ್ –ಪ್ರಜಾವಾಣಿ ಚಿತ್ರ

8ರಿಂದ ಅಂಗನವಾಡಿ ಆರಂಭ: ಸಚಿವ ಹಾಲಪ್ಪ



ಹಾಲಪ್ಪ ಆಚಾರ್

ಕೊಪ್ಪಳ: 'ಕೊರೊನಾ ಕಾರಣದಿಂದಾಗಿ ಒಂದೂವರೆ ವರ್ಷದಿಂದ ಬಂದ್ ಆಗಿರುವ ಅಂಗನವಾಡಿ ಕೇಂದ್ರಗಳನ್ನು ಇದೇ 8 ರಿಂದ ಪೂರ್ಣ ಪ್ರಮಾಣದಲ್ಲಿ ಆರಂಭಿಸಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

'ರಾಜ್ಯಮಟ್ಟದ ಕೋವಿಡ್ ಸಲಹಾ ಸಮಿತಿ ಅಭಿಪ್ರಾಯ ಪಡೆದಿದ್ದೇವೆ. ಮೂರನೇ ಅಲೆಯ ಆತಂಕ ಶೇ 99ರಷ್ಟು ಕಡಿಮೆಯಾಗಿದ್ದು, ಅಂಗನವಾಡಿ ಆರಂಭಕ್ಕೆ ಯಾವುದೇ ತೊಂದರೆ ಇಲ್ಲ ಎಂದು ಸಮಿತಿ ಸಲಹೆ ನೀಡಿದೆ' ಎಂದರು.

'ಆರಂಭದ ಒಂದು ವಾರ ಎರಡು ತಾಸು ಮಾತ್ರ ಅಂಗನವಾಡಿಗಳನ್ನು ನಡೆಸಲಾಗುತ್ತದೆ. ಯಾವುದೇ ಸಮಸ್ಯೆಯಾಗದಿದ್ದರೆ ಮತ್ತೆ ಎರಡು ತಾಸು ಹೆಚ್ಚಿಸಲಾಗುವುದು. ಪೌಷ್ಟಿಕ ಆಹಾರ ವಿತರಣೆ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಮಕ್ಕಳಿಗೆ ನೀಡಲಾಗುವುದು' ಎಂದು ಹೇಳಿದರು.

ಅನ್ಯ ಯೋಜನೆಗೆ ಪರಿಶಿಷ್ಟರ ಜಮೀನು ಬಳಕೆಗೆ ವಿರೋಧ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟಿರುವ 29 ಎಕರೆ 7 ಗುಂಟೆ ಜಮೀನನ್ನು ಬೇರೆ ಯೋಜನೆಗಳಿಗೆ ಬಳಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಆಮ್ ಆದ್ಮಿ ಪಕ್ಷ (ಎಎಪಿ) ವಿರೋಧಿಸಿದೆ.

'ಬಿಡಿಎ ಅಧ್ಯಕ್ಷ ಎಸ್‌.ಆರ್. ವಿಶ್ವನಾಥ್ ಹಾಗೂ ವಸತಿ ಸಚಿವ ವಿ.ಸೋಮಣ್ಣ ಅವರ ಹಸ್ತಕ್ಷೇಪದಿಂದ ದಲಿತರಿಗೆ ಅನ್ಯಾಯವಾಗುತ್ತಿದೆ' ಎಂದೂ ಆರೋಪಿಸಿದೆ.

ಎಎಪಿ ಮುಖಂಡ ಎಚ್‌. ಡಿ.ಬಸವರಾಜು, 'ದಾಸನಪುರ ಹೋಬಳಿಯ ಲಕ್ಷ್ಮೀಪುರ ಗ್ರಾಮ ಹಾಗೂ ಕೆಂಗೇರಿ ಹೋಬಳಿಯ ಆರಗ ಗ್ರಾಮದಲ್ಲಿ ಒಟ್ಟು 29 ಎಕರೆ 7 ಗುಂಟೆ ಜಮೀನನ್ನು ಎಸ್‌ಸಿ-ಎಸ್‌ಟಿ ಸಮುದಾಯದ ವಸತಿರಹಿತರಿಗಾಗಿ ಮೀಸಲಿಡಲಾಗಿತ್ತು. ಇದಕ್ಕೆ 1,110 ಫಲಾನುಭವಿಗಳ ಆಯ್ಕೆಯೂ ನಡೆದಿದೆ. ಆದರೆ, ಈಗಿನ ಬಿಜೆಪಿ ಸರ್ಕಾರ ಆ ಜಮೀನನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳಲು ಮುಂದಾಗಿದ್ದು, ದಲಿತ ವಿರೋಧಿ ಸರ್ಕಾರ ಎಂಬುದು ಸಾಬೀತಾಗಿದೆ' ಎಂದು ದೂರಿದ್ದಾರೆ.

'ವಸತಿ ಸಚಿವ ವಿ.ಸೋಮಣ್ಣ ಅವರು ಪರಿಶಿಷ್ಟರಿಗೆ ಮೀಸಲಾಗಿರುವ ಜಮೀನನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ನೀಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಬಿಡಿಎ ಅಧ್ಯಕ್ಷ ಎಸ್‌.ಆರ್. ವಿಶ್ವನಾಥ್ ಅವರು ಜಮೀನು ನೀಡುವ ಪ್ರಕ್ರಿಯೆಯನ್ನೇ ರದ್ದು ಮಾಡಬೇಕು ಎಂದಿದ್ದರು. ಇವರಿಬ್ಬರೂ ಪರಿಶಿಷ್ಟ ಸಮುದಾಯಗಳ ವಿರೋಧಿಗಳು' ಎಂದು ಆರೋಪಿಸಿದ್ದಾರೆ.

'ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಶೋಷಿತ ಸಮುದಾಯಗಳ ಏಳಿಗೆಗೆ ಅಡ್ಡಗಾಲು ಹಾಕುತ್ತಿದ್ದಾರೆ. ಬಿಜೆಪಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಸರ್ಕಾರದ ನಿಲುವನ್ನು ವಿರೋಧಿಸಿದ್ದರೂ ಎಚ್ಚೆತ್ತುಕೊಂಡಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸೋಮಣ್ಣ ಅವರ ಯೋಚನೆಯ ಹಿಂದೆ ಭಾರಿ ಭ್ರಷ್ಟಾಚಾರದ ಹುನ್ನಾರವಿದೆ. ವಸತಿ ಇಲಾಖೆಯಡಿ ನಿರ್ಮಾಣವಾದ ಬಹುತೇಕ ಕಟ್ಟಡಗಳು ಕಳಪೆ ಕಾಮಗಾರಿಯಿಂದ ಕೂಡಿವೆ. ಆದ್ದರಿಂದ ಪರಿಶಿಷ್ಟರಿಗೆ ನಿವೇಶನ ನೀಡುವ ಯೋಜನೆಯನ್ನು ಯಾವುದೇ ಕಾರಣಕ್ಕೂ ಬದಲಿಸಬಾರದು' ಎಂದು ಆಗ್ರಹಿಸಿದರು.

'ಟಿಡಿಪಿ ಮಾನ್ಯತೆ ರದ್ದುಪಡಿಸಿ'

ನವದೆಹಲಿ: ಆಂಧ್ರಪ್ರದೇಶದ ಆಡಳಿತಾರೂಢ ವೈಎಸ್‌ಆರ್‌ಸಿಪಿ ಪಕ್ಷದ ನಿಯೋಗವು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಭೇಟಿ ಮಾಡಿ ತೆಲುಗು ದೇಶಂ ಪಕ್ಷದ (ಟಿಡಿಪಿ)ಮಾನ್ಯತೆ ರದ್ದುಪಡಿಸಬೇಕೆಂದು ಕೋರಿದೆ.

ಆಂಧ್ರದ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರ ವಿರುದ್ಧ ಟಿಡಿಪಿಯ ನಾಯಕರು ನಿಂದನೀಯ ಭಾಷೆ ಬಳಸಿದ್ದಾರೆ. ಈ ಕಾರಣಕ್ಕಾಗಿ ಟಿಡಿಪಿಯ ಮಾನ್ಯತೆ ರದ್ದುಪಡಿಸಬೇಕೆಂದು ವೈಎಸ್‌ಆರ್‌ಸಿಪಿ ನಿಯೋಗವು ಒತ್ತಾಯಿಸಿದೆ.

'ಉದ್ದೇಶಪೂರ್ವಕ ಮತ್ತು ದುರುದ್ದೇಶಪೂರಿತ ಕೃತ್ಯಗಳಿಗೆ ನಿರ್ದಿಷ್ಟವಾಗಿ ದಂಡ ವಿಧಿಸುವ ನ್ಯಾಯಾಂಗ ನಿಂದನೆ ಕಾಯ್ದೆಯಂತಹ ಕಾನೂನನ್ನು ಸಂಸತ್ತಿನಲ್ಲಿ ರೂಪಿಸುವಂತೆ ಕೇಂದ್ರ ಕಾನೂನು ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು' ಎಂದು ಪಕ್ಷದ ನಿಯೋಗದ ನೇತೃತ್ವ ವಹಿಸಿದ್ದ ವೈಎಸ್‌ಆರ್‌ಸಿಪಿ ಪ್ರಧಾನ ಕಾರ್ಯದರ್ಶಿ ವಿ.ವಿಜಯ್ ಸಾಯಿರೆಡ್ಡಿ ಅವರು ರಾಷ್ಟ್ರಪತಿ ಅವರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಚಿವಾಲಯದಲ್ಲಿ ಕಡತ ವಿಲೇವಾರಿ ವಿಳಂಬ

ಹೆಜ್ಜೆ ಮುಂದಿಡದ ಕಡತಗಳು: ನಗರದ ಶಾಸಕರ ಮುನಿಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆಲವು ಅಭಿವೃದ್ಧಿ ಕಾಮಗಾರಿಗಳು ಹಾಗೂ ನೀತಿ ನಿರೂಪಣೆಗೆ ಸಂಬಂಧಿಸಿ ಮುಖ್ಯಮಂತ್ರಿ ಸಚಿವಾಲಯದ ಮಂಜೂರಾತಿಗಾಗಿ ಕಳುಹಿಸಿದ ಕೆಲವು ಕಡತಗಳು ತಿಂಗಳಿಂದ ಅನುಮೋದನೆ ಸಿಗದೇ ಇರುವುದು ನಗರದ ಕೆಲವು ಶಾಸಕರ ಬೇಸರಕ್ಕೆ ಕಾರಣವಾಗಿದೆ.

ಕೆಲವು ಕಡತಗಳಿಗೆ ಮುಖ್ಯಮಂತ್ರಿ ಅವರ ಕಚೇರಿ ತಲುಪಿ ತಿಂಗಳು ಕಳೆದ ನಂತರವೂ ಮುಕ್ತಿ ಸಿಕ್ಕಿಲ್ಲ. ತಾವು ಶಿಫಾರಸು ಮಾಡಿರುವ ಕೆಲಸಗಳಿಗೆ ಸಮ್ಮತಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೀನಮೇಷ ಎಣಿಸುತ್ತಿದ್ದಾರೆ ಎಂದೂ ಬಿಜೆಪಿಯ ಕೆಲ ಶಾಸಕರೂ ದೂರಿದ್ದಾರೆ.

ಬಿಎಂಎಲ್‌ಟಿಎ ಮಸೂದೆ 2021, ಬಿಬಿಎಂಪಿ ವೃಂದ ಮತ್ತು ನೇಮಕಾತಿ ನಿಯಮ ಪರಿಷ್ಕರಣೆ ಮತ್ತು ತಿದ್ದುಪಡಿ, ಬಿಬಿಎಂಪಿ ವ್ಯಾಪ್ತಿಯ ನಗರೋತ್ಥಾನ ಯೋಜನೆಯ ಕಾಮಗಾರಿಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್‌ಗಳಿಗೆ ಅನುಮೋದನೆ, 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಕೈಗೊಳ್ಳಬೇಕಾದ ಕಸ ನಿರ್ವಹಣೆ ಕುರಿತ ಕೆಲಸಗಳು, ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ –7ರಲ್ಲಿ ಹೆಬ್ಬಾಳ ರಸ್ತೆಯಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪರ್ಯಾಯವಾಗಿ ನ್ಯೂ ಏರ್‌ಪೋರ್ಟ್ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸುವುದು, ಉದ್ಯಾನ ಅಭಿವೃದ್ಧಿ, ಬಿಬಿಎಂಪಿ ಯೋಜನಾ ವಿಭಾಗಕ್ಕೆ 39 ಹುದ್ದೆ ಸೃಜಿಸುವುದೂ ಸೇರಿದಂತೆ 50ಕ್ಕೂ ಅಧಿಕ ಕಡತಗಳು ಮುಖ್ಯಮಂತ್ರಿಯವರ ಅನುಮೋದನೆಗೆ ಬಾಕಿ ಇವೆ.

'ಬಿಜೆಪಿ ಶಾಸಕರು ಶಿಫಾರಸು ಮಾಡಿದ ಕಡತಗಳನ್ನು ವಿಲೇ ಮಾಡುವುದಕ್ಕೂ ಮುಖ್ಯಮಂತ್ರಿ ಸಚಿವಾಲಯದಲ್ಲಿ ತಡ ಮಾಡಲಾಗುತ್ತಿದೆ. ನಗರದ ಹಿರಿಯ ಸಚಿವರೊಬ್ಬರು ಶಿಫಾರಸು ಮಾಡುವ ಕಡತಗಳು ತಕ್ಷಣವೇ ವಿಲೇವಾರಿಯಾಗುತ್ತವೆ. ನಗರದ ಕ್ಷೇತ್ರಗಳನ್ನು ಪ್ರತಿನಿಧಿಸುವ ಇತರ ಸಚಿವರ ಬೇಡಿಕೆಗಳನ್ನು ಕಡೆಗಣಿಸಲಾಗುತ್ತಿದೆ. ಈ ಹಿಂದೆ, ಸಿದ್ದರಾಮಯ್ಯ ಹಾಗೂ ಎಚ್‌.ಡಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಕಡತ ವಿಲೇವಾರಿ ಇಷ್ಟೊಂದು ವಿಳಂಬವಾಗುತ್ತಿರಲಿಲ್ಲ. ಬಿ.ಎಸ್‌.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಪ್ರಮುಖ ಕಡತಗಳನ್ನು ವಾರದೊಳಗೆ ವಿಲೇವಾರಿ ಮಾಡುತ್ತಿದ್ದರು. ನಗರದ ಅಭಿವೃದ್ಧಿಗೆ ಸಂಬಂಧಿಸಿದ ಕೆಲವೊಂದು ಕಡತಗಳು ಒಂದೂವರೆ ತಿಂಗಳಿಂದ ಮುಖ್ಯಮಂತ್ರಿ ಸಚಿವಾಲಯದಲ್ಲೇ ಬಾಕಿ ಉಳಿದಿವೆ' ಎಂದು ಬಿಜೆಪಿ ಶಾಸಕರೊಬ್ಬರು ದೂರಿದರು.

'ಯಾವುದೇ ಕಡತವನ್ನೂ ಕೂಲಂಕಷವಾಗಿ ಪರಿಶೀಲಿಸದೆ ಮುಖ್ಯಮಂತ್ರಿಯವರು ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಪ್ರಸ್ತಾವನೆಯ ದೂರಗಾಮಿ ಪರಿಣಾಮಗಳ ಬಗ್ಗೆಯೂ ಸಮಗ್ರವಾಗಿ ಸಮಾಲೋಚನೆ ನಡೆಸುತ್ತಾರೆ. ಹಾನಗಲ್ ಹಾಗೂ ಸಿಂಧಗಿ ಕ್ಷೇತ್ರಗಳ ಉಪ ಚುನಾವಣೆಯ ಕಾರಣದಿಂದಾಗಿ ಕಡತಗಳ ವಿಲೇವಾರಿ ಸ್ವಲ್ಪ ವಿಳಂಬವಾಗಿರಬಹುದು. ಈಗ ಚುನಾವಣೆಯ ಫಲಿತಾಂಶ ಬಂದಿದೆ. ಬೆಂಗಳೂರಿಗೆ ಸಂಬಂಧಿಸಿದ ಪ್ರಮುಖ ಕಡತಗಳ ಬಗ್ಗೆ 10 ದಿನಗಳಲ್ಲೇ ಮುಖ್ಯಮಂತ್ರಿಯವರು ತೀರ್ಮಾನ ಕೈಗೊಳ್ಳುವ ನಿರೀಕ್ಷೆ ಇದೆ' ಎಂದು ಅವರ ಆಪ್ತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ರಸ್ತೆ ದುರಸ್ತಿ ಕಾಮಗಾರಿಗಳಿಗೂ ಸಿಕ್ಕಿಲ್ಲ ಮುಕ್ತಿ

ಬಿಬಿಎಂಪಿಗೆ ಹೊಸತಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳಿಗೆ ಕಾವೇರಿ ನೀರು ಸರಬರಾಜು ಹಾಗೂ ಒಳಚರಂಡಿ ಕೊಳವೆ ಅಳವಡಿಕೆಗಾಗಿ ರಸ್ತೆಗಳನ್ನು ಅಗೆಯಲಾಗಿದೆ. ಈ ರಸ್ತೆಗಳ ಪುನರುಜ್ಜೀವನ ಕಾಮಗಾರಿಗಳಿಗೆ ಸಂಬಂಧಿಸಿದ ಹಲವಾರು ಕಡತಗಳಿಗೂ ಮುಖ್ಯಮಂತ್ರಿಯವರ ಅನುಮೋದನೆ ಅಗತ್ಯವಿದೆ. ಹೊರವಲಯದಲ್ಲಿ ಅಧ್ವಾನ ಸ್ಥಿತಿ ತಲುಪಿರುವ ರಸ್ತೆಗಳಿಂದಾಗಿ ಜನ ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಕುರಿತು ಬಿಬಿಎಂಪಿಗೆ ಹಾಗೂ ಶಾಸಕರಿಗೆ ಹಿಡಿಶಾಪ ಹಾಕುತ್ತಿದ್ದಾರೆ.

'ಹೊರವಲಯದ ಬಹುತೇಕ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಶಾಸಕರೇ ಇದ್ದಾರೆ. ನಮ್ಮದೇ ಪಕ್ಷದ ಸರ್ಕಾರವಿದ್ದರೂ ರಸ್ತೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಿಲ್ಲ' ಎಂದು ಹೊರವಲಯದ ಬಿಜೆಪಿ ಶಾಸಕರೊಬ್ಬರು ಹೇಳಿದರು.

ಕಸ ನಿರ್ವಹಣೆ ಪ್ರಸ್ತಾವನೆಗಳೂ ವಿಳಂಬ

ವೈಜ್ಞಾನಿಕ ಕಸ ವಿಲೇವಾರಿಗೆ ಸಂಬಂಧಿಸಿದಂತೆ ಕೆಲವೊಂದು ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಳ್ಳುವುದಾಗಿ ಬಿಬಿಎಂಪಿ ಹಾಗೂ ಸರ್ಕಾರ ಹೈಕೋರ್ಟ್‌ನಲ್ಲಿ ಪ್ರಮಾಣಪತ್ರ ಸಲ್ಲಿಸಿವೆ. ಈ ಕುರಿತ ಪ್ರಸ್ತಾವನೆಗಳೂ ಮುಖ್ಯಮಂತ್ರಿ ಅವರ ಅನುಮೋದನೆಗೆ ಬಾಕಿ ಉಳಿದಿವೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ಅಸಮರ್ಪಕ ಕಸ ವಿಲೇವಾರಿಗೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ವೇಳೆ ಹೈಕೋರ್ಟ್ 'ಬಿಬಿಎಂಪಿಯನ್ನೇ ಏಕೆ ಬರ್ಕಾಸ್ತುಗೊಳಿಸಬಾರದು' ಎಂದು ಕಟುವಾಗಿ ಪ್ರಶ್ನಿಸಿತ್ತು. ಆ ಬಳಿಕ ಬಿಬಿಎಂಪಿ ಕೆಲವೊಂದು ಪ್ರಸ್ತಾವನೆಗಳನ್ನು ಸಿದ್ಧಪಡಿಸಿತ್ತು.

MBBS

Ministry Of Health Of Russia

SMOLENSK STATE MEDICAL UNIVERSITY, RUSSIA

Invites Indian students for direct Government Admissions

Recognized by India, WHO, USA & UK, Min. Qual. 50% in XII in PCB

UNIVERSITY - Founded in 1920, 101 years old, Smolensk is 380 km west of Moscow, Very high standards of education, strict disciplinary system. **1500** Indian students (**650** Girls) studying, **167** got degree in **2021**, English Medium in all years, Closed type campus system, **8** attached hospitals (**6000** Beds). **MCI SCREENING TEST** – Our graduates of **2008** to **2020** have given **BEST** results among graduates of all foreign medical colleges (Official web sites of Indian Embassy, Moscow and National Board of Examination, New Delhi who conducts MCI Screening Test confirm this).

SPECIAL HOSTELS ONLY FOR INDIAN STUDENTS WITH INDIAN MESS

Fee (Tuition+Hostel+Med.Ins.) – **USD 6000** (Approx. Rs. 4,50,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.

Scholarship to all Indian students.

Bank loans from Indian banks are available.

Contact Foreign advisor to Chancellor: Dr.Alok Aeron+79605805555(Russia)

Official web site: www.sgmu.info DM us on insta: @sgmu.info

Admission details: admission.sgmu.live

INFORMATION CENTERS (Parents of Students or Our Graduates):

Bangalore & Manglore: Mrs. Sudha Kamath - 9740622038

Chitradurga: Mr. R. Venkatashiva – 9448839235

Mysore: Dr. Mothukar – 8105616675, Mr. Ganesh S. - 8073709996

Hubli-Dharwad & Belgavi: Dr. Suchita Halli - 9916187559

Karwar: Mrs. Bhat – 8884057559; **Hassan:** Ms. Nayana B.R. – 9606265744

JSS MAHAVIDYAPEETHA

Jagadguru Dr. Sri Shivarathri Rajendra Circle, Mysore-570 004. Ph.: 0821-2548201 Fax: 0821-2548218

e-mail: dce@jssonline.org, www.jssonline.org

FACULTY REQUIRED

No. CED-I/EST/02/2019-20 Dt: 03.11.2021

Applications are invited for the post of **Assistant Professors** in the following subjects, for **Undergraduate / Postgraduate Departments** in Degree Colleges (Unaided):

Sl.No.	Name of the Subject		
1.	Physics	8.	Bio chemistry
2.	Chemistry	9.	Computer Science
3.	Botany	10.	Mathematics
4.	Biotechnology	11.	Animation
5.	Micro Biology	12.	Master of Computer Application
6.	English	13.	Food Processing & Engineering (B Voc & M Voc)
7.	Zoology	14.	Software Development (B Voc & M Voc)

Qualifications as per UGC norms

Please send your detailed profile along with the certificates to dce@jssonline.org within 15 days of this notification.

For More Details Visit: www.jssonline.org

Sd/- Executive Secretary

ಪಟಾಕಿ: ಹೆಚ್ಚಿಸದಿರಲಿ ಪರಿಸರ ಮಾಲಿನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಕಿನ ಹಬ್ಬ ದೀಪಾವಳಿ ಸಮೀಪಿಸಿದೆ. ಅದರ ಬೆನ್ನಲ್ಲೇ ಪಟಾಕಿಗಳ ಬಳಕೆಯಿಂದ ನಗರದ ಮಾಲಿನ್ಯದ ಪ್ರಮಾಣ ಹೆಚ್ಚುವ ಭೀತಿಯೂ ಎದುರಾಗಿದೆ. ಮಾಲಿನ್ಯ ಹೆಚ್ಚಿಸದಂತಹ ಪಟಾಕಿಗಳನ್ನು ಬಳಸಿ ದೀಪಾವಳಿ ಹಬ್ಬ ಆಚರಿಸಿದರೆ ಬೆಂಗಳೂರಿಗರಿಗೇ ಒಳಿತು ಎಂಬ ಅಭಿಪ್ರಾಯವಿದೆ.

ಈ ಬಾರಿಯ ದೀಪಾವಳಿಯಲ್ಲಿ ಪಟಾಕಿಗಳ ಬಳಕೆ ಹೇಗಿರಬೇಕು? ಮಾಲಿನ್ಯ ಹೆಚ್ಚಿಸದಂತೆ ಹೇಗೆ ಹಬ್ಬ ಆಚರಿಸಬೇಕು? ಪಟಾಕಿಗಳ ಆಯ್ಕೆ ಹೇಗಿರಲಿ? ಎಂಬುದರ ಕುರಿತು ತಜ್ಞ ವೈದ್ಯರು ಮತ್ತು ಸಾರ್ವಜನಿಕರು ‘ಪ್ರಜಾವಾಣಿ’ ಜತೆ ಹಂಚಿಕೊಂಡ ಅಭಿಪ್ರಾಯ ಇಲ್ಲಿದೆ.

ರಾಜಧಾನಿ ಒಡಲದನಿ

ಸ್ವಯಂ ನಿಯಂತ್ರಣವಿರಲಿ

ದೀಪಾವಳಿ ಹೆಸರಿನಲ್ಲಿ ಪಟಾಕಿ ಸ್ಫೋಟದ ಅಬ್ಬರ ಬೇಡ. ಹಿಂದಿನಂತೆ ಒಂದೇ ದಿನ ಪಟಾಕಿ ಸಿಡಿಸುವುದು ಸೂಕ್ತ. ನಿಗದಿತ ಸಮಯದವರೆಗೆ, ಚಿಕ್ಕ ಪಟಾಕಿಗಳನ್ನು ಸಿಡಿಸುವಂತಹ ಸ್ವಯಂ ನಿಯಂತ್ರಣಗಳನ್ನು ನಾವೇ ಹಾಕಿಕೊಳ್ಳಬೇಕು. ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದ ಹಿರಿಯರು, ರೋಗಿಗಳು, ಮಕ್ಕಳಿಗೆ ಆಗುವ ಅಪಾಯಗಳ ಅರಿವಿಲ್ಲದೇ ಹಬ್ಬದ ಹೆಸರಿನಲ್ಲಿ ಅತಿರೇಕ ಪ್ರದರ್ಶನ ಬೇಡ. ಹಬ್ಬದ ಹೆಸರಿನಲ್ಲಿ ಯಾರೊಂದಿಗೂ ಪೈಪೋಟಿ ನಡೆಸಬೇಕಿಲ್ಲ. ಈಗಾಗಲೇ ಮಾಲಿನ್ಯದಿಂದ ನಲುಗುತ್ತಿರುವ ನಗರವನ್ನು ಮತ್ತಷ್ಟು ಮಲಿನ ಮಾಡುವುದು ಬೇಡ ಎಂಬ ಹೊಣೆಗಾರಿಕೆಯಿಂದಲೇ ದೀಪಾವಳಿ ಆಚರಿಸಬೇಕು.

– **ಅರವಿಂದ್ ರಾವ್,** ಚಿತ್ರನಟ

‘ಹಸಿರು ಪಟಾಕಿ’ಯೂ ಮಿತವಾಗಿರಲಿ

ಬೆಳಕಿನ ಹಬ್ಬಕ್ಕೆ ಮೆರುಗು ತರುವ ಪಟಾಕಿಗಳು, ಮಾಲಿನ್ಯ ದೃಷ್ಟಿಯಿಂದ ಒಳ್ಳೆಯದಲ್ಲ. ಅಪಾಯಕಾರಿ ಪಟಾಕಿಗಳ ಬಳಕೆ ನಿಯಂತ್ರಿಸಲು ಹಸಿರು ಪಟಾಕಿಗಳನ್ನು ಮಾತ್ರ ಬಳಸಲು ಸರ್ಕಾರಗಳೇ ಅನುಮತಿ ನೀಡಿರುವುದು ಸ್ವಾಗತಾರ್ಹ. ಕಡಿಮೆ ಮಾಲಿನ್ಯ ಉಂಟು ಮಾಡುವುದರಿಂದ ಹಸಿರು ಪಟಾಕಿ ಸಿಡಿಸುವುದು ತಪ್ಪೇನಲ್ಲ. ಹಬ್ಬ ಎಂದು ಭಾರಿ ಪ್ರಮಾಣದ ಪಟಾಕಿ ಸಿಡಿಸುವ ಮಿತಿಯನ್ನು ಕಡಿಮೆ ಮಾಡಿಕೊಂಡರೆ, ಭವಿಷ್ಯದ ದೃಷ್ಟಿಯಿಂದ ಎಲ್ಲರಿಗೂ ಒಳ್ಳೆಯದು. ಮಕ್ಕಳು ಪಟಾಕಿ ಸಿಡಿಸುವಾಗ ಮನೆಯವರು ಎಚ್ಚರ ವಹಿಸಿ.

–**ಉಮಾಕುಮಾರಿ,** ಶಾಂತಿನಗರ, ಬೆಂಗಳೂರು

ಮಾಲಿನ್ಯ ತರುವ ಸಂಕಷ್ಟದ ಅರಿವಿರಲಿ

ದೀಪಾವಳಿ ಹಬ್ಬದಲ್ಲಿ ಪಟಾಕಿ ಸಿಡಿಸುವುದು ಸಂಪ್ರದಾಯದ ಭಾಗವಾಗಿ ಬೆಳೆದು ಬಂದಿದೆ. ಆದರೆ, ದೊಡ್ಡ ಪಟಾಕಿಗಳ ಬಳಕೆಯಿಂದ ಕಿವಿ ಮತ್ತು ಕಣ್ಣು ಎರಡಕ್ಕೂ ಅಪಾಯವಾಗುತ್ತಿದೆ. ಅತಿಯಾದ ಶಬ್ದ ಮಾಡುವ ಮತ್ತು ಹೆಚ್ಚು ಹೊಗೆಯುಗುಳುವ ಪಟಾಕಿಗಳಿಂದ ಎಲ್ಲರಿಗೂ ತೊಂದರೆ. ಬೃಹತ್ ಪಟಾಕಿಗಳನ್ನು ಸಿಡಿಸುವುದರಿಂದ ಪ್ರತಿ ವರ್ಷವೂ ನೂರಾರು ಮಂದಿ ಶಾಶ್ವತವಾಗಿ ಶ್ರವಣದೋಷದ ಸಮಸ್ಯೆಗೆ ಸಿಲುಕುತ್ತಿದ್ದಾರೆ. ಪಟಾಕಿಗಳ ಕುರಿತು ಸರಿಯಾಗಿ ಅರಿಯದೇ ಬಳಕೆ ಮಾಡುತ್ತಿರುವುದು ಈ ಸಮಸ್ಯೆಗೆ ಕಾರಣ.

ಕೆಲವು ಪಟಾಕಿಗಳಲ್ಲಿ ಅತ್ಯಧಿಕ ಪ್ರಮಾಣದ ರಾಸಾಯನಿಕಗಳು ಇರುತ್ತವೆ. ಅವುಗಳನ್ನು ಉರಿಸಿದಾಗ ವಾಯು ಮಾಲಿನ್ಯ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತದೆ. ಹೆಚ್ಚು ಶಬ್ದ ಮಾಡುವ ಮತ್ತು ಹೊಗೆ ಉಗುಳುವ ಎರಡೂ ಬಗೆಯ ಪಟಾಕಿಗಳ ಬಳಕೆಯಿಂದ ದೂರವಿದ್ದರೆ ಮಾತ್ರ ನಗರದ ಜನತೆಯ ಪಾಲಿಗೆ ದೀಪಾವಳಿ ಹಬ್ಬ ಸುರಕ್ಷಿತವಾಗಿರುತ್ತದೆ. ಬೆಂಗಳೂರು ದೇಶದಲ್ಲೇ ಅತ್ಯಧಿಕ ಅಲರ್ಜಿ ಪ್ರಕರಣಗಳು ವರದಿಯಾಗುತ್ತಿರುವ ನಗರ. ಪಟಾಕಿಗಳನ್ನು ಮಿತಿಯಾಗಿ ಬಳಸದಿದ್ದರೆ ಈ ಸಂಖ್ಯೆ ಮತ್ತಷ್ಟು ಹೆಚ್ಚುತ್ತದೆ.

ಹೆಚ್ಚು ಹೊಗೆ ಸೃಷ್ಟಿಸುವ ಪಟಾಕಿಗಳಿಂದ ದೂರವಿರಬೇಕು. ದೊಡ್ಡ ಪಟಾಕಿಗಳನ್ನು ಖಾಲಿ ಸ್ಥಳದಲ್ಲೇ ಸಿಡಿಸಬೇಕು. ಆಗ ಮಾತ್ರ ಮಾಲಿನ್ಯದ ಅಪಾಯಗಳಿಂದ ಜನರು ಸುರಕ್ಷಿತವಾಗಿರಬಹುದು.

ಡಾ. ಶ್ರೀನಿವಾಸ್ ಕೆ., ಕಿವಿ, ಮೂಗು ಮತ್ತು ಗಂಟಲು ತಜ್ಞ, ವಿಕ್ರಂ ಆಸ್ಪತ್ರೆ

ದೊಡ್ಡ ಪಟಾಕಿಗಳಿಂದ ದೂರವಿರಿ

ದೀಪಾವಳಿ ಹಬ್ಬದಲ್ಲಿ ಪಟಾಕಿ ಸಿಡಿಸುವುದು ನೂರಾರು ವರ್ಷಗಳಿಂದ ಆಚರಣೆಯಲ್ಲಿರುವ ಸಂಪ್ರದಾಯ. ಪಟಾಕಿ ಸಿಡಿಸುವುದು ತಪ್ಪಲ್ಲ. ಆದರೆ, ಎಂತಹ ಪಟಾಕಿಗಳನ್ನು ಸಿಡಿಸಬಹುದು ಎಂಬುದು ಮುಖ್ಯ. ಪಟಾಕಿಗಳ ಬಳಕೆಯಿಂದ ಪರಿಸರ ಮಾಲಿನ್ಯ ಹೆಚ್ಚುತ್ತದೆ. ಸಾಮಾನ್ಯ ದಿನಗಳಿಗೆ ಹೋಲಿಸಿದರೆ ದೀಪಾವಳಿ ವೇಳೆ ಬೆಂಗಳೂರಿನ ವಾಯು ಮಾಲಿನ್ಯದ ಪ್ರಮಾಣ 1,000 ಪಟ್ಟು ಹೆಚ್ಚಾಗಿರುತ್ತದೆ ಎಂಬುದು ಈ ಹಿಂದೆ ನಡೆಸಿದ ಅಧ್ಯಯನದಲ್ಲಿ ಕಂಡುಬಂದಿದೆ.

ಪಟಾಕಿಯಿಂದ ಉಂಟಾಗುವ ವಾಯು ಮಾಲಿನ್ಯದಿಂದ ಆಸ್ತಮಾ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಮೊದಲೇ ಇರುವ ಶ್ವಾಸಕೋಶ ಸಂಬಂಧಿ ಸೋಂಕುಗಳು ಉಲ್ಬಣವಾಗುತ್ತವೆ. ಕೋವಿಡ್ ಸೋಂಕಿತರಾದ ವ್ಯಕ್ತಿಗಳಲ್ಲಿ ಶ್ವಾಸಕೋಶ ದುರ್ಬಲಗೊಂಡಿದ್ದರೆ ವಾಯು ಮಾಲಿನ್ಯ ಹೆಚ್ಚಾದಾಗ ಅಪಾಯಗಳು ಜಾಸ್ತಿ. ದೊಡ್ಡ ಪಟಾಕಿಗಳ ಬಳಕೆಯಿಂದ ವಾಯು ಮಾಲಿನ್ಯದ ಜತೆಗೆ ಶಬ್ದ ಮಾಲಿನ್ಯವೂ ಇರುತ್ತದೆ. ಪಟಾಕಿ ಸಿಡಿಸುವಾಗ ಗಾಯಗಳಾಗುವ ಅಪಾಯವೂ ಇರುತ್ತದೆ.

ಕಡಿಮೆ ಪ್ರಮಾಣದ ಹೊಗೆ ಸೂಸುವ ಮತ್ತು ಹೆಚ್ಚು ಮಾಲಿನ್ಯಕ್ಕೆ ಕಾರಣವಾಗದಂತಹ ಪಟಾಕಿಗಳನ್ನೇ ಜನರು ಆಯ್ಕೆ ಮಾಡಿಕೊಳ್ಳಬೇಕು. ವಾಯು ಮಾಲಿನ್ಯ ಹೆಚ್ಚಿದಂತೆಲ್ಲಾ ಮನುಷ್ಯರ ಶ್ವಾಸಕೋಶಗಳು ದುರ್ಬಲಗೊಳ್ಳುವುದೂ ಹೆಚ್ಚುತ್ತಿದೆ ಎಂಬ ಎಚ್ಚರ ಇರಬೇಕು. ಈ ಕುರಿತು ಜಾಗೃತಿಯೂ ಹೆಚ್ಚಬೇಕಿದೆ.

– **ಡಾ.ಕೆ.ಎಸ್. ಸತೀಶ್,** ಕರ್ನಾಟಕ ಶ್ವಾಸಕೋಶ ತಜ್ಞರ ಸಂಘದ ಅಧ್ಯಕ್ಷ

ನಿರೂಪಣೆ: ವಿ.ಎಸ್.ಸುಬ್ರಹ್ಮಣ್ಯ

ಸುದ್ದಿ 2 ನಿಮಿಷ

ಪೊಲೀಸರಿಗೆ 15 ದಿನಗಳಲ್ಲಿ ವಿಶೇಷ ಭತ್ಯೆ: ಆರಗ ಸೂಚನೆ

ಬೆಂಗಳೂರು: ವಿಶೇಷ ಕರ್ತವ್ಯ ನಿರ್ವಹಣೆಗಾಗಿ ಪೊಲೀಸರಿಗೆ ನೀಡುವ ಭತ್ಯೆ ಮತ್ತು ಇನ್ನಿತರ ಸವಲತ್ತುಗಳನ್ನು 15 ದಿನಗಳೊಳಗೆ ಪಾವತಿಸುವಂತೆ ಗೃಹ ಸಚಿವ ಆರಗ ಜ್ಞಾನೇಂದ್ರ ಸೂಚನೆ ನೀಡಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಮಂಗಳವಾರ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ತಡವಾಗಿ ಪಾವತಿಸುವ ಪದ್ಧತಿಯನ್ನು ಕೈಬಿಡಬೇಕು ಎಂದು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಮಾತನಾಡಿ, ‘ಪುನೀತ್ ಅಕಾಲಿಕ ನಿಧನದಿಂದ ಪರಿಸ್ಥಿತಿ ನಿಭಾಯಿಸುವುದು ಸವಾಲಿನದ್ದಾಗಿತ್ತು. ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಒಂದು ತಂಡವಾಗಿ ಪರಿಸ್ಥಿತಿಯನ್ನು ನಿಭಾಯಿಸಿದರು’ ಎಂದು ಹೇಳಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಮಾತನಾಡಿದರು.

ಪ್ರಕ್ರಿಯಾ ಆಸ್ಪತ್ರೆ: ಸುಟ್ಟಗಾಯಗಳ ಆರೈಕೆ ಕೇಂದ್ರ ಉದ್ಘಾಟನೆ

ಬೆಂಗಳೂರು: ಸುಟ್ಟ ಗಾಯಗಳ ಚಿಕಿತ್ಸೆಗಾಗಿ ಪ್ರಕ್ರಿಯಾ ಆಸ್ಪತ್ರೆಯಲ್ಲಿ ಸ್ಥಾಪಿಸಿರುವ ಸುಧಾರಿತ ಸುಟ್ಟಗಾಯಗಳ ಆರೈಕೆ ಕೇಂದ್ರವನ್ನು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಮಂಗಳವಾರ ಉದ್ಘಾಟಿಸಿದರು.

‘ತೀವ್ರ ಸುಟ್ಟಗಾಯಗಳ ಆರೈಕೆ ಸೌಲಭ್ಯಗಳನ್ನು ಈ ಕೇಂದ್ರದಲ್ಲಿ ಸ್ಥಾಪಿಸಲಾಗಿದೆ. ಈ ನೂತನ ಸೌಲಭ್ಯವು ಸುಟ್ಟ ಗಾಯಗಳಿಂದ ನರಳುತ್ತಿರುವವರಿಗೆ ಉಪಯುಕ್ತವಾಗಿದ್ದು, ತ್ವರಿತವಾಗಿ ಚಿಕಿತ್ಸೆ ಒದಗಿಸಲು ನೆರವಾಗಲಿದೆ. ನಗರದ ಮತ್ತು ಗಡಿ ಜಿಲ್ಲೆಗಳ ರೋಗಿಗಳೂ ಪ್ರಕ್ರಿಯಾ ಆಸ್ಪತ್ರೆಯ ಈ ಸೌಲಭ್ಯವನ್ನು ಸುಲಭವಾಗಿ ಪಡೆಯಬಹುದು’ ಎಂದು ಅಖ್ತರ್ ತಿಳಿಸಿದರು.

ಪ್ರಕ್ರಿಯಾ ಆಸ್ಪತ್ರೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಶ್ರೀನಿವಾಸ್ ಚಿರುಕುರಿ, ‘ಈ ಆರೈಕೆ ಕೇಂದ್ರದಲ್ಲಿ ಎಲ್ಲ ರೀತಿಯ ಸುಟ್ಟ ಗಾಯಗಳಿಗೆ ಚಿಕಿತ್ಸೆ ಸಿಗಲಿದೆ’ ಎಂದು ತಿಳಿಸಿದರು.

ಪೀಣ್ಯ ಕೈಗಾರಿಕೆಗಳ ಸಂಘದ ಅಧ್ಯಕ್ಷ ಪ್ರಕಾಶ್, ‘ಸುಟ್ಟ ಗಾಯಗಳ ಚಿಕಿತ್ಸೆಗಾಗಿ ನಗರದ ವಿಕ್ಟೋರಿಯಾ ಸೇರಿದಂತೆ ಕೆಲವೇ ಆಸ್ಪತ್ರೆಗಳನ್ನು ಆಶ್ರಯಿಸುವ ಅನಿವಾರ್ಯ ಇತ್ತು. ಕೈಗಾರಿಕಾ ಪ್ರದೇಶದ ಸಮೀಪದಲ್ಲೇ ಪ್ರಕ್ರಿಯಾ ಆಸ್ಪತ್ರೆ ಇರುವುದರಿಂದ ಸುಟ್ಟ ಗಾಯಾಳುಗಳಿಗೆ ಶೀಘ್ರವೇ ಚಿಕಿತ್ಸೆ ಕೊಡಿಸಲು ಅನುಕೂಲವಾಗಿದೆ’ ಎಂದರು.

ವ್ಯಾಪಾರಿಗಳಿಗೆ ತಳಮಳ; ಹೆಚ್ಚು ದಿನ ಮಾರಾಟಕ್ಕೆ ಅನುಮತಿ ನೀಡುವಂತೆ ಮನವಿ

ಪಟಾಕಿ ಮಾರಾಟಕ್ಕೆ ಕಡಿಮೆ ಕಾಲಾವಕಾಶ

• ಮನೋಹರ್ ಎಂ.

ಬೆಳಕಿನ ಹಬ್ಬ ದೀಪಾವಳಿ ಸಂಭ್ರಮಾಚರಣೆಗಾಗಿ ನಗರದ ಬಸವನಗುಡಿಯ ಉದಯ ಭಾನು ಕಲಾಸಂಘದ ಆಟದ ಮೈದಾನದಲ್ಲಿ ಮಂಗಳವಾರ ಪಟಾಕಿ ಖರೀದಿಯಲ್ಲಿ ತೊಡಗಿರುವ ಜನ ಪ್ರಜಾವಾಣಿ ಚಿತ್ರ/ರಂಜು ಪಿ

ಬಸವನಗುಡಿಯಲ್ಲಿ ಮಂಗಳವಾರ ಪಟಾಕಿ ಖರೀದಿಯಲ್ಲಿ ತೊಡಗಿರುವ ಜನ ಪ್ರಜಾವಾಣಿ ಚಿತ್ರ

ಬೆಂಗಳೂರು: ಪಟಾಕಿ ವ್ಯಾಪಾರ ಮಂಗಳವಾರದಿಂದ ಗರಿಗೆದರಿದೆ. ಆದರೆ, ಪಟಾಕಿ ಮಾರಾಟಕ್ಕೆ ಕೆಲವೇ ದಿನಗಳಷ್ಟೇ ಅವಕಾಶ ನೀಡಿರುವುದರಿಂದ ಪಟಾಕಿ ವ್ಯಾಪಾರಿಗಳು ತಳಮಳ ಅನುಭವಿಸುತ್ತಿದ್ದಾರೆ.

ಕಳೆದ ದೀಪಾವಳಿ ಸಮಯದಲ್ಲಿ ಕೋವಿಡ್ ನಿರ್ಬಂಧವಿತ್ತು. ಪಟಾಕಿ ಮಾರಾಟದ ಮೇಲೂ ಸರ್ಕಾರಗಳು ನಿರ್ಬಂಧ ವಿಧಿಸಿ, ‘ಹಸಿರು ಪಟಾಕಿ’ಗೆ ಮಾತ್ರ ಅನುಮತಿ ನೀಡಿದ್ದರಿಂದ ಮಾರಾಟಗಾರರು ಸಂಕಷ್ಟ ಅನುಭವಿಸಿದ್ದರು.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಈ ಬಾರಿಯೂ ‘ಹಸಿರು ಪಟಾಕಿ’ಗಳನ್ನು ಬಿಟ್ಟು ಉಳಿದ ಯಾವುದೇ ಇತರ ಅಪಾಯಕಾರಿ ಹಾಗೂ ಮಾಲಿನ್ಯ ಉಂಟು ಮಾಡುವ ಪಟಾಕಿಗಳನ್ನು ಮಾರಾಟ ಮಾಡುವುದು ಹಾಗೂ ಹಚ್ಚುವುದು ನಿಷಿದ್ಧ’ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಬಾರಿ ನಿರ್ಬಂಧಗಳು ಕೊಂಚ ಸಡಿಲಗೊಂಡಿರುವುದರಿಂದ ನಗರದ ವಿವಿಧ ವಾರ್ಡ್‌ನ ಮೈದಾನಗಳಲ್ಲಿ ಮಂಗಳವಾರದಿಂದಲೇ ಪಟಾಕಿ ಮಳಿಗೆಗಳು ತಲೆ ಎತ್ತಿವೆ. ಆದರೆ, ‘ಕೇವಲ ಮೂರೇ ದಿನ ವ್ಯಾಪಾರಕ್ಕೆ ಅನುಮತಿ ನೀಡಲಾಗಿದ್ದು, ಈ ಅವಧಿಗೆ ವ್ಯಾಪಾರ ನಡೆಸಿದರೂ ನಮಗೆ ಲಾಭ ದೂರದ ಮಾತು’ ಎಂದು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

‘ಕೋವಿಡ್‌ಗೂ ಹಿಂದಿನ ವರ್ಷಗಳಲ್ಲಿ ಪಟಾಕಿ ವ್ಯಾಪಾರಕ್ಕೆ ಕನಿಷ್ಠ 6 ದಿನಗಳವರೆಗೆ ಅವಕಾಶ ಇರುತ್ತಿತ್ತು. ಹಬ್ಬದ ಆಸುಪಾಸಿನ ದಿನಗಳಲ್ಲಿ ಪಟಾಕಿ ವ್ಯಾಪಾರ ನೀರಸವಾಗಿರುತ್ತದೆ. ಬಹುತೇಕರು ಹಬ್ಬಕ್ಕೂ ಮುನ್ನ ಒಂದು ವಾರದಿಂದಲೇ ಪಟಾಕಿ ಖರೀದಿಸುತ್ತಾರೆ. ಈ ಬಾರಿ ನ.5ರವರೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಮೂರು ದಿನ ನಡೆಯುವ ವ್ಯಾಪಾರದಿಂದ ಲಾಭ ಕಾಣುವುದು ಅನುಮಾನ’ ಎಂದು ನಗರದ ಪಟಾಕಿ ವ್ಯಾಪಾರಿ ದಿನೇಶ್ ಅಳಲು ತೋಡಿಕೊಂಡರು.

‘ಪ್ರತಿ ವರ್ಷ ದೀಪಾವಳಿ ಸಮಯದಲ್ಲಿ ಪಟಾಕಿ ವ್ಯಾಪಾರಿಗಳಿಗೆ ತೊಡಕುಗಳು ಹೆಚ್ಚಾಗುತ್ತಿವೆ. ಮುಕ್ತವಾದ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟರೆ ನಮಗೆ ಹಾಗೂ ಗ್ರಾಹಕರಿಗೂ ಅನುಕೂಲ. ಮುಂದಿನ ವರ್ಷವಾದರೂ ಪಟಾಕಿ ಮಾರಾಟದ ದಿನಗಳನ್ನು ವಿಸ್ತರಿಸಬೇಕು’ ಎಂದು ಮನವಿ ಮಾಡಿದರು.

ಪಟಾಕಿ ಮಳಿಗೆ ತೆರೆಯಲು ತಗುಲುವ ವೆಚ್ಚ	
ಮುಂಗಡ ಠೇವಣಿ	₹25 ಸಾವಿರ
ಪರವಾನಗಿ ಶುಲ್ಕ	₹5 ಸಾವಿರ (ಪೊಲೀಸ್)
ಅಗ್ನಿಶಾಮಕ ದಳ	₹5 ಸಾವಿರ (ಎನ್‌ಒಸಿ)
ಬಾಡಿಗೆ	₹500ರಿಂದ ₹2 ಸಾವಿರ (ಒಂದು ದಿನಕ್ಕೆ)

ಮಲ್ಲೇಶ್ವರಕ್ಕೆ ಸಿಗದ ಅನುಮತಿ: ಈ ಬಾರಿ ಮಲ್ಲೇಶ್ವರದಲ್ಲಿ ಪಟಾಕಿ ಮಳಿಗೆಗಳನ್ನು ತೆರೆಯಲು ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ. ಇದರಿಂದ ಮಲ್ಲೇಶ್ವರದಲ್ಲಿ ಪ್ರತಿ ವರ್ಷ ಮಳಿಗೆಗಳನ್ನು ತೆರೆಯುತ್ತಿದ್ದ ಪಟಾಕಿ ವ್ಯಾಪಾರಿಗಳು ದಿಕ್ಕುತೋಚದ ಸ್ಥಿತಿಯಲ್ಲಿದ್ದಾರೆ.

ಅಂಕಿ-ಅಂಶಗಳು

₹30 ಸಾವಿರ
ಒಂದು ಮಳಿಗೆ ನಿರ್ಮಾಣ-ನಿರ್ವಹಣೆ ವೆಚ್ಚ

₹50 ಕೋಟಿ
ಬೆಂಗಳೂರಿನ ವಾರ್ಷಿಕ ಪಟಾಕಿ ವಹಿವಾಟು (ಅಂದಾಜು)

500
ಬೆಂಗಳೂರಿನಲ್ಲಿರುವ ಪಟಾಕಿ ವರ್ತಕರು

‘ಪಟಾಕಿ ವ್ಯಾಪಾರಿಗಳು ಮಳಿಗೆ ತೆರೆಯುವ ಪರವಾನಗಿ ಪಡೆಯಲು ಆನ್‌ಲೈನ್ ವ್ಯವಸ್ಥೆ ಕಲ್ಪಿಸಿರುವುದು ಸ್ವಾಗತಾರ್ಹ. ಆದರೆ, ಈ ಪ್ರಕ್ರಿಯೆ ಪೂರೈಸಲು ತಡವಾಗಿದ್ದರಿಂದ ಮಲ್ಲೇಶ್ವರ ಭಾಗದ ಪಟಾಕಿ ವರ್ತಕರಿಗೆ ಈ ಬಾರಿ ಮಳಿಗೆ ತೆರೆಯಲು ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ. ಇದು ಖಂಡನೀಯ’ ಎಂದು ಬೆಂಗಳೂರು ಚಿಲ್ಲರೆ ಪಟಾಕಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಆರ್.ಚಂದ್ರಶೇಖರ್ ದೂರಿದರು.

‘ಆನ್‌ಲೈನ್ ಪ್ರಕ್ರಿಯೆ ನಮಗೂ ಹೊಸದಾಗಿದ್ದರಿಂದ ಅವರು ನೀಡಿದ ಗಡುವಿನಲ್ಲಿ ಅರ್ಜಿ ಸಲ್ಲಿಕೆ ಸಾಧ್ಯವಾಗಲಿಲ್ಲ. ಮಾರಾಟಗಾರರಿಗೆ ಕನಿಷ್ಠ ಬೇರೆ ಸ್ಥಳದಲ್ಲಾದರೂ ವ್ಯಾಪಾರಕ್ಕೆ ಅನುಮತಿ ನೀಡಬಹುದಿತ್ತು. ವ್ಯಾಪಾರಿಗಳು ವರ್ಷಪೂರ್ತಿ ಕಾದು, ಲಕ್ಷಾಂತರ ಬಂಡವಾಳದೊಂದಿಗೆ ಪಟಾಕಿ ತರಿಸಿಕೊಂಡಿದ್ದು, ಪರವಾನಗಿ ಸಿಗದಿರುವುದರಿಂದ ನಷ್ಟಕ್ಕೆ ಸಿಲುಕಿದ್ದಾರೆ. ವ್ಯಾಪಾರಕ್ಕೆ ಇಲಾಖೆ ಅನುಮತಿ ನೀಡಬೇಕು’ ಎಂದು ಒತ್ತಾಯಿಸಿದರು.

‘ಹಸಿರು ಪಟಾಕಿ’ ಪತ್ತೆ ಹೇಗೆ?

ಹಸಿರು ಪಟಾಕಿಗಳನ್ನು ಪತ್ತೆ ಹಚ್ಚಲು ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಕಳೆದ ವರ್ಷ ಪ್ರಾಯೋಗಿಕವಾಗಿ ಜಾರಿ ಮಾಡಲಾಗಿತ್ತು. ಈ ಬಾರಿ ಮಾರುಕಟ್ಟೆಗೆ ಬಂದಿರುವ ಹಸಿರು ಪಟಾಕಿಗಳ ಮೇಲೆ ಭಾರತೀಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ, ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಗಳು (ಸಿಎಸ್‌ಐಆರ್-ನೀರಿ) ಪ್ರಮಾಣಿಸಿರುವ ‘ಹಸಿರು ಮುದ್ರೆ’ ಹಾಗೂ ಕ್ವಿಕ್ ರೆಸ್ಪಾನ್ಸ್ (ಕ್ಯುಆರ್) ಕೋಡ್ ಇರಲಿದೆ. ಗ್ರಾಹಕರು ಇವುಗಳ ಸಹಾಯದಿಂದ ಹಸಿರು ಪಟಾಕಿಯನ್ನು ದೃಢಪಡಿಸಿಕೊಳ್ಳಬಹುದು.

ಪಟಾಕಿ ದರ–ಪೂರೈಕೆ ವೆಚ್ಚ ಏರಿಕೆ

‘ಡೀಸೆಲ್ ದರ ಏರಿಕೆಯು ಈ ಬಾರಿ ಪಟಾಕಿಗಳ ಸರಬರಾಜಿನ ಮೇಲೂ ಪರಿಣಾಮ ಬೀರಿದೆ. ಕ್ರಮೇಣ ಪಟಾಕಿಗಳ ದರವೂ ಕಳೆದ ಬಾರಿಗಿಂತ ಶೇ 20ರಷ್ಟು ಹೆಚ್ಚಾಗಿದೆ. ಜೊತೆಗೆ ಪಟಾಕಿ ಕಾರ್ಖಾನೆಗಳಿಂದ ಮಳಿಗೆಗಳಿಗೆ ಪಟಾಕಿ ತಲುಪಿಸುವ ವೆಚ್ಚವೂ ಏರಿಕೆಯಾಗಿದೆ. ಪಟಾಕಿ ವ್ಯಾಪಾರ ನಡೆಸುವುದು ಪ್ರತಿ ವರ್ಷ ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ’ ಎಂದು ಪಟಾಕಿ ವ್ಯಾಪಾರಿ ಅರುಣ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಪರವಾನಗಿಗೆ ಆನ್‌ಲೈನ್ ವ್ಯವಸ್ಥೆ: ಸ್ವಾಗತಾರ್ಹ

‘ಪಟಾಕಿ ವ್ಯಾಪಾರಿಗಳು ಪ್ರತಿ ವರ್ಷ ಮಳಿಗೆ ತೆರೆಯುವ ಪರವಾನಗಿ ಪಡೆಯಲು ವಿವಿಧ ಇಲಾಖೆಗಳಿಗೆ ಅಲೆದಾಡಬೇಕಿತ್ತು. ಆದರೆ, ಈ ವರ್ಷದಿಂದ ಆನ್‌ಲೈನ್ ಮೂಲಕವೇ ಪರವಾನಗಿ ಪಡೆದುಕೊಳ್ಳುವ ವ್ಯವಸ್ಥೆ ಮಾಡಿರುವುದು ಸ್ವಾಗತಾರ್ಹ. ‘ಸೇವಾ ಸಿಂಧು’ ಮೂಲಕ ಅರ್ಜಿ ಸಲ್ಲಿಸಿ ಸುಲಭವಾಗಿ ಪರವಾನಗಿ ಪಡೆದುಕೊಳ್ಳುವುದರಿಂದ ವ್ಯಾಪಾರಿಗಳ ಅಲೆದಾಟ ನಿಲ್ಲಲಿದೆ’ ಎಂದು ಸುವರ್ಣ ಕರ್ನಾಟಕ ಕ್ರ್ಯಾಕರ್ಸ್ ಅಸೋಸಿಯೇಷನ್‌ನ ಖಜಾಂಚಿ ಸಿ.ಮಂಜುನಾಥ್ ಹೇಳಿದರು.

ದೀಪಾವಳಿಯಲ್ಲಿ ಪಟಾಕಿ ಸಿಡಿಸಿ ಕಣ್ಣಿಗೆ ಹಾನಿಮಾಡಿಕೊಳ್ಳಬಹುದಾದ ಜನರಿಗೆ ಶೀಘ್ರವೇ ಚಿಕಿತ್ಸೆ ನೀಡುವ ಸಲುವಾಗಿ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ವಿಶೇಷ ವಾರ್ಡ್ ಸಿದ್ಧಪಡಿಸಲಾಗಿದೆ. ಶುಶ್ರೂಷಕರು ವಾರ್ಡ್‌ನಲ್ಲಿ ಹಾಸಿಗೆ ಹಾಗೂ ಔಷಧ ಪರಿಕರ ಜೋಡಿಸುತ್ತಿದ್ದ ದೃಶ್ಯ ಮಂಗಳವಾರ ಕಂಡುಬಂತು –ಪ್ರಜಾವಾಣಿ ಚಿತ್ರ

‘ಪರವಶ’ ಕಾದಂಬರಿಗೆ ಚಡಗ ಪ್ರಶಸ್ತಿ

ದವನ ಸೊರಬ

ಪ್ರೇಮಾ ಭಟ್

ಉಡುಪಿ: ಕೋಟೇಶ್ವರದ ಎನ್‌ಆರ್‌ಎಎಂಎಚ್ ಪ್ರಕಾಶನ ಮತ್ತು ಸ್ಥಿತಿಗತಿ ತ್ರೈಮಾಸಿಕ ಪತ್ರಿಕೆಯ ಆಶ್ರಯದಲ್ಲಿ ಕಾದಂಬರಿಕಾರ, ಸಂಘಟಕ ಪಾಂಡೇಶ್ವರ ಸೂರ್ಯನಾರಾಯಣ ಚಡಗರ ನೆನಪಿನಲ್ಲಿ ಕೊಡಮಾಡುವ 12ನೇ ವರ್ಷದ ‘ಚಡಗ ಕಾದಂಬರಿ ಪ್ರಶಸ್ತಿ’ಗೆ ದವನ ಸೊರಬ ಅವರ ‘ಪರವಶ’ ಕಾದಂಬರಿ ಆಯ್ಕೆಯಾಗಿದೆ ಎಂದು ಸಂಚಾಲಕ ಪ್ರೊ.ಉಪೇಂದ್ರ ಸೋಮಯಾಜಿ ತಿಳಿಸಿದ್ದಾರೆ.

ಪ್ರಶಸ್ತಿಯು ಸ್ಮರಣಿಕೆ ಹಾಗೂ ₹ 10,000 ನಗದು ಪುರಸ್ಕಾರ ಒಳಗೊಂಡಿದ್ದು, ನವೆಂಬರ್‌ನಲ್ಲಿ ಕೋಟದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಚಡಗರ ಸಾಹಿತ್ಯ ಒಡನಾಡಿಯಾಗಿದ್ದ ಹಿರಿಯ ಲೇಖಕಿ ಪ್ರೇಮಾ ಭಟ್ ಅವರ ಜೀವಮಾನ ಸಾಧನೆ ಪರಿಗಣಿಸಿ ಅವರಿಗೆ ‘ಚಡಗ ಸಂಸ್ಮರಣಾ ಪುರಸ್ಕಾರ’ ನೀಡಲಾಗುತ್ತಿದೆ ಎಂದು ಪ್ರಶಸ್ತಿ ಸಮಿತಿಯ ಅಧ್ಯಕ್ಷ ಡಾ. ಭಾಸ್ಕರ ಆಚಾರ್ಯ ತಿಳಿಸಿದ್ದಾರೆ.

ಚಿತ್ರಾವಳಿ

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಮತ್ತು ರಾಜ್ಯೋತ್ಸವದ ಅಂಗವಾಗಿ ವಿಕಾಸ ಟ್ರಸ್ಟ್ ಹಮ್ಮಿಕೊಂಡಿರುವ ‘ಕಾಸರಗೋಡು ಕನ್ನಡ ವಿಕಾಸ ಮಾಹಿತಿ ಅಭಿಯಾನ’ವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಉದ್ಘಾಟಿಸಿದರು. ವಿಕಾಸ ಟ್ರಸ್ಟ್ ಅಧ್ಯಕ್ಷ ರವಿನಾರಾಯಣ ಗುಣಾಜೆ, ಸದಸ್ಯರಾದ ಸುಖೇಶ್ ರೈ, ಧನ್ಯಶ್ರೀ ಇದ್ದರು. ಜನವರಿ 14ರವರೆಗೆ ಈ ಅಭಿಯಾನ ನಡೆಯಲಿದೆ.

ಯುಪಿಎಸ್‌ಸಿ ಪರೀಕ್ಷೆಯಲ್ಲಿ 385ನೇ ರ್‍ಯಾಂಕ್ ಪಡೆದ ಸಾಗರ್ ಎ.ವಾಡಿ ಅವರನ್ನು ಟಾಪರ್ ಐಎಎಸ್ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಸಂಸ್ಥೆಯ ನಿರ್ದೇಶಕ ಸೋಮಶೇಖರ ಹುಲ್ಮನಿ, ನಿವೃತ್ತ ಐಎಎಸ್ ಅಧಿಕಾರಿ ಜೈರಾಜ್ ಕೆ, ಎಲ್‌ಎಚ್‌ಶಾಂತಾ, ಬಿ.ವಿ.ಗಂಗಾಧರ ಹಾಗೂ ಇತರರು ಇದ್ದರು.

ಬೆಳಕಿನ ಹಬ್ಬಕ್ಕೆ ಜನರಲ್ಲಿ ಖರೀದಿ ಸಂಭ್ರಮ

ಪ್ರಜಾವಾಣಿ ವಾರ್ತೆ

ನಗರದ ಗಾಂಧಿ ಬಜಾರ್‌ನ ಹಣತೆಯ ಮಳಿಗೆಯಲ್ಲಿ ಮಹಿಳೆಯರು ಹಾಗೂ ಯುವತಿಯರು ಹಣತೆಗಳನ್ನು ಖರೀದಿಸಿದರು ಪ್ರಜಾವಾಣಿ ಚಿತ್ರ/ರಂಜು ಪಿ

ದೀಪಾವಳಿ ವೇಳೆ ಮನೆಗಳಲ್ಲಿ ತೂಗು ಹಾಕುವ ಆಕಾಶ ಬುಟ್ಟಿಗಳನ್ನು ಯುವತಿಯೊಬ್ಬರು ಕುತೂಹಲದಿಂದ ವೀಕ್ಷಿಸುತ್ತಿದ್ದ ದೃಶ್ಯ ಗಾಂಧಿ ಬಜಾರ್‌ನಲ್ಲಿ ಮಂಗಳವಾರ ಕಂಡು ಬಂತು ಪ್ರಜಾವಾಣಿ ಚಿತ್ರ

ಬೆಂಗಳೂರು: ದೀಪಾವಳಿ ಆಚರಣೆಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲು ಜನರು ನಗರದ ಮಾರುಕಟ್ಟೆಗಳಲ್ಲಿ ಮಂಗಳವಾರ ನೆರೆದಿದ್ದರು. ಬೆಳಕಿನ ಹಬ್ಬಕ್ಕೆ ಮೆರುಗು ಹೆಚ್ಚಿಸುವ ಹೂವು, ಹಣ್ಣು, ಹಣತೆ, ಅಲಂಕಾರಿಕ ವಸ್ತುಗಳ ಖರೀದಿಗೆ ಜನ ಮಳಿಗೆಗಳಲ್ಲಿ ಮುಗಿಬಿದ್ದರು.

ಕಳೆದ ವರ್ಷ ಕೋವಿಡ್ ಕಾರಣದಿಂದ ಎಲ್ಲರೂ ಸರಳವಾದ ದೀಪಾವಳಿ ಆಚರಿಸಿದ್ದರು. ಈ ವರ್ಷ ಕೋವಿಡ್ ತೀವ್ರತೆ ತಗ್ಗಿರುವುದರಿಂದ ಬೆಂಗಳೂರಿಗರಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ.

ಹಬ್ಬಕ್ಕೆ ಎಂದಿನಂತೆ ಹೂವಿನ ದರಗಳು ಏರಿಕೆ ಕಂಡಿವೆ. ಕೆ.ಆರ್. ಮಾರುಕಟ್ಟೆ, ಬಸವನಗುಡಿ, ಹೆಬ್ಬಾಳ, ರಾಜಾಜಿನಗರ, ಮಲ್ಲೇಶ್ವರ, ಜಯನಗರ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿ ಹೂವು ಹಾಗೂ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವ ಕಿರು ಮಾರುಕಟ್ಟೆಗಳು ತಲೆ ಎತ್ತಿವೆ.

ಬುಧವಾರದಿಂದ ಶುಕ್ರವಾರದವರೆಗೆ ವಿವಿಧ ಧಾರ್ಮಿಕ ಆಚರಣೆಗಳು ನಡೆಯುವ ಕಾರಣದಿಂದ ಹಬ್ಬಕ್ಕೆ ಬೇಕಾದ ವಸ್ತುಗಳನ್ನು ಮಂಗಳವಾರವೇ ಕೊಂಡೊಯ್ದರು.

‘ದೀಪಾವಳಿಗೆಹೆಚ್ಚುಖರೀದಿಯಾಗುವುದು ಸೇವಂತಿಗೆ ಹಾಗೂ ಚೆಂಡು ಹೂ. ಆದರೆ, ಈ ಹಬ್ಬಕ್ಕೆ ಗುಣಮಟ್ಟದ ಹೂಗಳು ಮಾರುಕಟ್ಟೆಗೆ ಬರುತ್ತಿಲ್ಲ. ಮಳೆಯಿಂದಾಗಿ ಸೇವಂತಿಗೆ ಹಾಗೂ ಚೆಂಡು ಹೂ ಭಾರಿ ಹಾನಿಗೆ ಒಳಗಾಗಿದೆ. ಹಾಗಾಗಿ ಬೆಲೆಗಳು ಅಷ್ಟೇನೂ ಏರಿಕೆಯಾಗಿಲ್ಲ. ಉಳಿದ ಹೂಗಳ ದರ ಎಂದಿನಂತೆ ಸ್ವಲ್ಪ ಹೆಚ್ಚಾಗಿದ್ದು, ಗುರುವಾರದ ವೇಳೆಗೆ ಮತ್ತಷ್ಟು ಏರಬಹುದು’ ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕ ದಿವಾಕರ್ ತಿಳಿಸಿದರು.

ಪೂಜಾ ಸಾಮಗ್ರಿಗಳ ಖರೀದಿ ಭರಾಟೆ: ದೀಪಾವಳಿಯನ್ನು ವಿವಿಧ ಸಮುದಾಯಗಳಲ್ಲಿ ತಮ್ಮದೇ ವಿಶೇಷ ಶೈಲಿಗಳಲ್ಲಿ ಆಚರಿಸಲಾಗುತ್ತದೆ. ಬಹುತೇಕರು ಹಿಂದಿನಿಂದಲೂ ಈ ಹಬ್ಬಕ್ಕೆ ನೋಮುವ ಸಂಪ್ರದಾಯ ಉಳಿಸಿಕೊಂಡಿದ್ದಾರೆ. ಇದಕ್ಕೆಂದೇ ಕೈಗೆ ನೋಮುದಾರ ಕಟ್ಟಿಕೊಂಡು ಆಚರಣೆಯಲ್ಲಿ ತೊಡಗುತ್ತಾರೆ. ಪೂಜೆಯ ವೇಳೆ ನೋಮುದಾರ, ಅರಿಶಿನ-ಕುಂಕುಮ, ಅಡಿಕೆ, ವೀಳ್ಯದ ಎಲೆಗಳನ್ನು ಬಾಗಿನ ರೂಪದಲ್ಲಿ ಪ್ರಧಾನವಾಗಿ ಇಡುತ್ತಾರೆ. ಹಾಗಾಗಿ, ಪೂಜಾ ಸಾಮಗ್ರಿಗಳ ಮಳಿಗೆಗಳ ಬಳಿಯೂ ಜನರ ದಂಡು ಬೀಡುಬಿಟ್ಟಿತ್ತು.

ಬೀದಿಗಳಲ್ಲಿ ಹಣತೆಯ ರಾಶಿ: ದೀಪಾವಳಿಯ ಸೂಚಕವಾಗಿ ಮನೆಯ ಹೊರ ಮತ್ತು ಒಳಭಾಗಗಳಲ್ಲಿ ದೀಪಗಳನ್ನು ಬೆಳಗುವುದರಿಂದ ಮಣ್ಣಿನ ಹಣತೆಗಳನ್ನು ರಸ್ತೆ ಬದಿಗಳಲ್ಲಿ ರಾಶಿ ಹಾಕಲಾಗಿದ್ದು, ಹಬ್ಬಕ್ಕಾಗಿ ಸಿದ್ಧಪಡಿಸಿರುವ ತರಹೇವಾರಿ ವಿನ್ಯಾಸದ ಹಣತೆಗಳು ಜನರನ್ನು ಆಕರ್ಷಿಸುತ್ತಿದ್ದವು. ದೀಪವೊಂದರ ಬೆಲೆ ₹5ರಿಂದ ಆರಂಭಗೊಂಡು ₹300ವರೆಗೆ ಮಾರಾಟವಾಗುತ್ತಿದೆ.

ಸೊಪ್ಪಿನ ದರಪಟ್ಟಿ

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಮೆಂತ್ಯೆ	35	147
ಕೊತ್ತಂಬರಿ	30	100
ಸಬ್ಬಕ್ಕಿ	30	100
ಪಾಲಕ್	25	104
ದಂಟು	15	64

ಹಣ್ಣಿನ ದರಪಟ್ಟಿ

ಹಣ್ಣು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಸೇಬು	120	140
ದಾಳಿಂಬೆ	150	192
ಕಿತ್ತಳೆ	70	50
ದ್ರಾಕ್ಷಿ	50	54
ಸೀಬೆ	50	53
ಸಪೋಟ	40	40
ಸೀತಾಫಲ	40	51
ಮೂಸಂಬಿ	60	65
ಅನಾನಸ್	40	41
ಏಲಕ್ಕಿ ಬಾಳೆ	50	54

ತರಕಾರಿ ದರಪಟ್ಟಿ

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬಟಾಣಿ	180	250
ಬೆಳ್ಳುಳ್ಳಿ	90	136
ಟೊಮೆಟೊ	40	48
ಕ್ಯಾರೆಟ್	50	62
ಶುಂಠಿ	60	78
ಈರುಳ್ಳಿ	45	52
ಬೀನ್ಸ್	40	50
ಬದನೆ	40	54
ಮೆಣಸಿನಕಾಯಿ	40	50
ಬೆಂಡೆಕಾಯಿ	30	46
ಹೂಕೋಸು	50	67
ಆಲೂಗಡ್ಡೆ	30	36
ಮೂಲಂಗಿ	35	48
ಎಲೆಕೋಸು	20	23

ಹೂವಿನ ದರಪಟ್ಟಿ (ಪ್ರತಿ ಕೆ.ಜಿಗೆ ₹ಗಳಲ್ಲಿ)

ಮಲ್ಲಿಗೆ	1,000
ಕನಕಾಂಬರ	1,200
ಕಾಕಡ	500
ಗುಲಾಬಿ	200
ಸೇವಂತಿಗೆ	100
ಸುಗಂಧರಾಜ	80
ಚೆಂಡುಹೂವು	50

ಆಪತ್ಬಾಂಧವನ 'ಕೈ' ಹಿಡಿದ ಮತದಾರ

ಸಿಎಂ ತವರು ಜಿಲ್ಲೆಯಲ್ಲಿ ಬಿಜೆಪಿಗೆ ಮುಖಭಂಗ: ಠೇವಣಿ ಕಳೆದುಕೊಂಡ ಜೆಡಿಎಸ್

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ತೀವ್ರ ಕುತೂಹಲ ಕೆರಳಿಸಿದ್ದ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದೆ. 'ಸಿಎಂ ತವರು ಜಿಲ್ಲೆ'ಯಲ್ಲೇ ಬಿಜೆಪಿ ಮುಖಭಂಗ ಅನುಭವಿಸಿದರೆ, ಜೆಡಿಎಸ್ ಠೇವಣಿ ಕಳೆದುಕೊಂಡಿದೆ.

ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಅವರು ಬಿಜೆಪಿಯ ಶಿವರಾಜ ಸಜ್ಜನರ ಅವರನ್ನು 7,373 ಮತಗಳ ಅಂತರದಿಂದ ಸೋಲಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿ ನಿಯಾಜ್ ಶೇಖ್ ಮತ್ತು ಕೆಆರ್‌ಎಸ್ ಪಕ್ಷದ ಅಭ್ಯರ್ಥಿ ಉಡಚಪ್ಪ ಉದ್ದನಕಾಲ ಅವರು ನಾಲ್ಕಂಕಿ ಮುಟ್ಟುವಲ್ಲೂ ವಿಫಲರಾದರು.

ಹಾನಗಲ್ 'ಕೈ' ವಶ: ಕೊರೊನಾ ಸಂಕಷ್ಟದಲ್ಲಿ ಸಹಾಯಹಸ್ತ ಚಾಚಿದ್ದ ಶ್ರೀನಿವಾಸ ಮಾನೆ ಅವರ 'ಕೈ'ಗೆ ಮತದಾರರು ಗೆಲುವಿನ ಹೂ ನೀಡಿದ್ದಾರೆ. 2018ರ ವಿಧಾನಸಭಾ ಚುನಾವಣೆಯಲ್ಲಿ 6,514 ಮತಗಳ ಅಂತರದಿಂದ ಸಿ.ಎಂ. ಉದಾಸಿ ವಿರುದ್ಧ ಸೋತಿದ್ದ ಮಾನೆ ಅವರಿಗೆ ಈ ಬಾರಿ ಗೆಲುವು ಒಲಿದಿದೆ.

'ವಿರಾಟ ನಗರಿ' ಹಾನಗಲ್‌ನಲ್ಲಿ ಗೆಲುವಿಗೆ ಬಿಜೆಪಿ ರಣತಂತ್ರ ರೂಪಿಸಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ 8–10 ಸಚಿವರು ಕ್ಷೇತ್ರದಲ್ಲೇ ಬೀಡು ಬಿಟ್ಟು ಕಸರತ್ತು ನಡೆಸಿದ್ದರು. 'ಹಾನಗಲ್ ಅಳಿಯ' ಬೊಮ್ಮಾಯಿ ಅವರನ್ನು ಮತದಾರರು ಕೈ ಬಿಟ್ಟು, 'ಮನೆ ಮಗ' ಎಂದು ಹೇಳಿಕೊಳ್ಳುತ್ತಿದ್ದ ಮಾನೆ ಅವರಿಗೆ ಮಣೆ ಹಾಕಿದ್ದಾರೆ.

ಉಪಚುನಾವಣೆಯಲ್ಲಿ ಗೆದ್ದ ಬಳಿಕ ಹಾವೇರಿಯಿಂದ ಹಾನಗಲ್‌ಗೆ ಬರುವ ಮಾರ್ಗದಲ್ಲಿ ಮಂಗಳವಾರ ಶ್ರೀನಿವಾಸ ಮಾನೆ ಅವರು ವರ್ದಿ ಗ್ರಾಮದ ಬಳಿ ಕ್ಷೇತ್ರದ ನೆಲಕ್ಕೆ ನಮಸ್ಕರಿಸಿದ ಕ್ಷಣ... —ಪ್ರಜಾವಾಣಿ ಚಿತ್ರ

ಜೋಡೆತ್ತು ಭರಾಟೆ

'ಬಿಜೆಪಿ ಸಚಿವರು ಗೋಣಿಚೀಲದಲ್ಲಿ ಹಣ ತಂದು ಹಂಚುತ್ತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪಿಸಿದರೆ, ಸಂಗೂರಿನ ಶುಗರ್ ಫ್ಯಾಕ್ಟರಿ ಎಂಬ ಬಿಜೆಪಿಯ ಜೇನುಗೂಡಿಗೆ ಸಿದ್ದರಾಮಯ್ಯ ಅವರು ಆರೋಪಗಳ ಕಲ್ಲು ಬೀರಿದ್ದರು. 'ಬಿಜೆಪಿ ನೋಟು–ಕಾಂಗ್ರೆಸ್‌ಗೆ ವೋಟು' ಎಂದು ಅಬ್ಬರದ ಪ್ರಚಾರ ಮಾಡಿದ್ದ 'ಸಿದ್ದು–ಡಿಕೆಶಿ' ಎಂಬ ಜೋಡೆತ್ತು ಕೂಡ ಮಾನೆ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಆರೂ ವಿಧಾನಸಭಾ ಕ್ಷೇತ್ರಗಳನ್ನು ಗೆದ್ದಿದ್ದ ಬಿಜೆಪಿಗೆ, ಹಾವೇರಿ ಜಿಲ್ಲೆ ಭದ್ರಕೋಟೆ ಎನಿಸಿತ್ತು. 'ಶಿವರಾಜ ಸಜ್ಜನರಿಗೆ ಕೊಡುವ ಮತ ಸಿ.ಎಂ. ಉದಾಸಿ ಅವರ ಆತ್ಮಕ್ಕೆ ಶಾಂತಿ ತರುತ್ತದೆ' ಎಂದು ಭಾವನಾತ್ಮಕವಾಗಿ ಪ್ರಚಾರ ಮಾಡಿದ್ದ ಬಿಜೆಪಿ, ಮತದಾರರ ಅನುಕಂಪ ಗಿಟ್ಟಿಸುವಲ್ಲೂ ಮುಗ್ಗರಿಸಿದೆ.

ಆರಂಭದಿಂದಲೂ ಮುನ್ನಡೆ: ಹಾನಗಲ್ ಕ್ಷೇತ್ರದಲ್ಲಿ ಶೇ 83.76 ದಾಖಲೆಯ ಮತದಾನವಾಗಿತ್ತು. ಆರಂಭಿಕ ಸುತ್ತಿನಿಂದ 19ನೇ ಸುತ್ತಿನವರೆಗೂ ನಿರಂತರವಾಗಿ ಮುನ್ನಡೆ ಕಾಯ್ದುಕೊಂಡ ಮಾನೆ ಅವರು ಅಂತಿಮವಾಗಿ ಗೆಲುವಿನ ಕಹಳೆ ಊದಿದರು. ಮತ ಎಣಿಕೆ ಆರಂಭಕ್ಕೂ ಮುನ್ನವೇ, ಹಾವೇರಿ ತಾಲ್ಲೂಕಿನ ದೇವಗಿರಿಯ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದ್ದ ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಗೆಲುವಿನ ವಿಶ್ವಾಸದಲ್ಲಿದ್ದರು. ಸೋಲು ಖಚಿತವಾದ ನಂತರ 'ಸೋಲಿನ ಹೊಣೆ ಹೊರುತ್ತೇನೆ' ಎಂದು ಬೇಸರದಲ್ಲೇ ಪಕ್ಷದ ಮುಖಂಡರೊಂದಿಗೆ ಹೊರನಡೆದರು.

11ನೇ ಸುತ್ತಿನಲ್ಲಿ 6,459 ಮತಗಳ ಅಂತರದ ಮುನ್ನಡೆಯ ನಂತರ, ಮತ ಎಣಿಕೆ ಕೇಂದ್ರಕ್ಕೆ ಬಂದ ಶ್ರೀನಿವಾಸ ಮಾನೆ ಫಲಿತಾಂಶ ಹೊರಬೀಳುವ ಮುನ್ನವೇ 'ಹಣ ಬಲದ ಮುಂದೆ ಜನ ಬಲ ಗೆದ್ದಿದೆ' ಎಂದು ವಿಜಯದ ನಗೆ ಬೀರಿದರು.

> **ಬಿಜೆಪಿ ಸರ್ಕಾರದ ಜನವಿರೋಧಿ ನೀತಿಯಿಂದ ಬೇಸತ್ತು ಕಾಂಗ್ರೆಸ್‌ಗೆ ಜನರು ಮತ ನೀಡಿದ್ದಾರೆ. ಹಣಬಲ ಸೋತು, ಜನಬಲ ಗೆದ್ದಿದೆ**
> **ಶ್ರೀನಿವಾಸ ಮಾನೆ,** ಕಾಂಗ್ರೆಸ್ ಅಭ್ಯರ್ಥಿ

> **ಯಾರನ್ನೂ ಹೊಣೆ ಮಾಡದೆ, ಸೋಲಿನ ಹೊಣೆಯನ್ನು ನಾನೇ ಹೊರುತ್ತೇನೆ. ಅತಿಯಾದ ಆತ್ಮವಿಶ್ವಾಸವೇ ನಮಗೆ ಮುಳುವಾಯಿತು ಎನಿಸುತ್ತದೆ**
> **ಶಿವರಾಜ ಸಜ್ಜನರ,** ಬಿಜೆಪಿ ಅಭ್ಯರ್ಥಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3k21mKm

ಸಿಂದಗಿ ವಿಧಾನಸಭೆ ಉಪ ಚುನಾವಣೆ; ಲಕ್ಷ್ಮಣ ಸವದಿ ತಂತ್ರಕ್ಕೆ ಗೆಲುವು

ಜಾತಿ ಸಮೀಕರಣಕ್ಕೆ ಅರಳಿದ 'ಕಮಲ'

• ಬಸವರಾಜ್ ಸಂಪಳ್ಳಿ

ವಿಜಯಪುರ: ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿದ್ದ ಸಿಂದಗಿ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಭರ್ಜರಿ ಗೆಲುವು ದಾಖಲಿಸಿದ್ದಾರೆ.

ಕ್ಷೇತ್ರಕ್ಕೆ ಇದುವರೆಗೆ ನಡೆದ ಚುನಾವಣೆಯಲ್ಲಿಅಭ್ಯರ್ಥಿಗಳ ಸೋಲು– ಗೆಲುವು ಅಂತರ ಏಳೆಂಟು ಸಾವಿರಕ್ಕೆ ಸೀಮಿತವಾಗಿತ್ತು. ಆದರೆ, ಪ್ರಥಮ ಬಾರಿಗೆ 31,088 ಮತಗಳಿಂದ ಭೂಸನೂರ ಗೆಲುವು ಸಾಧಿಸಿ, ಮೂರನೇ ಬಾರಿ ಶಾಸಕರಾಗಿದ್ದಾರೆ.

ಸಿಂದಗಿ ಚುನಾವಣಾ ಉಸ್ತುವಾರಿ ಲಕ್ಷ್ಮಣ ಸವದಿ ಸಿಂದಗಿ ಪಟ್ಟಣದ ಜವಾಬ್ದಾರಿ ಜೊತೆಗೆ ಕ್ಷೇತ್ರದಲ್ಲಿ ಸಮುದಾಯ ಸಮೀಕರಣಕ್ಕೆ ಆದ್ಯತೆ ನೀಡಿದ ಫಲ ಗೆಲುವು ಸುಲಭವಾಗಿದೆ.

ಸಚಿವರಾದ ಗೋವಿಂದ ಕಾರಜೋಳ, ವಿ.ಸೋಮಣ್ಣ, ಸಿ.ಸಿ.ಪಾಟೀಲ, ಶಶಿಕಲಾ ಜೊಲ್ಲೆ ಅವರಿಗೆ ಸಿಂದಗಿ ವಿಧಾನಸಭಾ ವ್ಯಾಪ್ತಿಯಲ್ಲಿರುವ ಏಳು ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳ ಉಸ್ತುವಾರಿಯನ್ನು ವಹಿಸಿ, ಒಂದು ತಿಂಗಳು ಕ್ಷೇತ್ರದ ಹಳ್ಳಿ, ಹಳ್ಳಿಯನ್ನು ಸುತ್ತಿ ಎಲ್ಲ ಸಮುದಾಯದ ಮುಖಂಡರು, ಮತದಾರರ ಬೇಕು, ಬೇಡಗಳನ್ನು ಆಲಿಸಿ, ಬೇಡಿಕೆ ಈಡೇರಿಸಿದರು. ಬಹುಸಂಖ್ಯೆಯಲ್ಲಿರುವ ತಳವಾರ ಸಮುದಾಯಕ್ಕೆ ಎಸ್‌.ಟಿ.ಮೀಸಲಾತಿ ನೀಡುವುದಾಗಿ ಭರವಸೆ ನೀಡಿ ಆ ಸಮುದಾಯದ ಮತಗಳನ್ನು ಸೆಳೆದು ಗೆಲುವನ್ನು ಸುಲಭವಾಗಿಸಿದರು.

ಭೂಸನೂರ ಅವರ ಸರಳ ವ್ಯಕ್ತಿತ್ವ ಮತ್ತು 2018ರಲ್ಲಿ ಸೋತರೂ ಜನರೊಂದಿಗಿನ ನಿರಂತರ ಸಂಪರ್ಕ ಹಾಗೂ ಕಡಿಮೆ ಅಂತರದ ಸೋಲಿನ ಅನುಕಂಪ ಈ ಬಾರಿ ಗೆಲುವಿಗೆ ಸೋಪಾನವಾಯಿತು.

ಕೈಹಿಡಿಯದ ಅನುಕಂಪ, ಅಹಿಂದ: ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಅವರಿಗೆ ತಂದೆ, ಮಾಜಿ ಸಚಿವ ಎಂ.ಸಿ.ಮನಗೂಳಿ ಸಾವಿನ ಅನುಕಂಪ ಚುನಾವಣೆಯಲ್ಲಿ ಕೈಹಿಡಿಯಲಿಲ್ಲ. ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದ ಅವರಿಗೆ ಮೂಲ ಕಾಂಗ್ರೆಸ್ಸಿಗರು ಚುನಾವಣೆಯಲ್ಲಿ ಕೈಕೊಟ್ಟಿರುವುದು ಫಲಿತಾಂಶ ಸಾಬೀತುಪಡಿಸಿದೆ.

ಸಿಂದಗಿಯಲ್ಲಿ ಇದುವರೆಗೆ ಹಿಂದುಳಿದ ವರ್ಗದವರಿಗೆ ಟಿಕೆಟ್ ನೀಡುತ್ತಾ ಬಂದಿದ್ದ ಕಾಂಗ್ರೆಸ್, ಮೊದಲ ಸಲ ಲಿಂಗಾಯತ ಅಭ್ಯರ್ಥಿಗೆ ಮಣೆ ಹಾಕಿತ್ತು. ಮತಗಳಿಕೆಯಲ್ಲಿ ಎರಡನೇ ಸ್ಥಾನಕ್ಕೇರಿದರೂ 'ಅಹಿಂದ' ಮತದಾರರ ವಿಶ್ವಾಸ ಗಳಿಸುವಲ್ಲಿ ವಿಫಲವಾಯಿತು.

ಕಾಂಗ್ರೆಸ್ ಮುಖಂಡರು ಬೃಹತ್ ಸಮಾವೇಶಕ್ಕೆ ಸೀಮಿತವಾದರು. ತಳಮಟ್ಟದಲ್ಲಿ ಜನರ ಮನವೊಲಿಸುವ ಕಾರ್ಯಕ್ಕೆ ಆದ್ಯತೆ ನೀಡಲಿಲ್ಲ. ಮತದಾನ ಸಮೀಪಿಸುವಾಗ ಮಾಡಿದ ಜಾತಿ ಮುಖಂಡರ ಸಮಾವೇಶ ಪ್ರಯೋಜನವಾಗಲಿಲ್ಲ.

ಬೆಲೆ ಏರಿಕೆ, ಕೋವಿಡ್ ಪರಿಸ್ಥಿತಿ ನಿರ್ವಹಣೆಯಲ್ಲಿ ರಾಜ್ಯ, ಕೇಂದ್ರ ಸರ್ಕಾರದ ವೈಫಲ್ಯ, ರಾಜ್ಯ ಸರ್ಕಾರದ ಭ್ರಷ್ಟಾಚಾರ, ಪೊಲೀಸ್ ಕೇಸರೀಕರಣ, ಕಂಬಳಿ ವಿವಾದಗಳು ಮತದಾರರ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

ಕ್ಷೇತ್ರ ಕಳೆದುಕೊಂಡ ಜೆಡಿಎಸ್: ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಕುಟುಂಬವೇ ಸಿಂದಗಿಯಲ್ಲಿ ಬೀಡುಬಿಟ್ಟು ಪ್ರಚಾರ ನಡೆಸಿದರೂ ಮತದಾರರ ಒಲವು ತೋರಲಿಲ್ಲ.

ರಾಜಕೀಯದ ಗಂಧಗಾಳಿ ಗೊತ್ತಿಲ್ಲದ ಅಭ್ಯರ್ಥಿ ನಾಜಿಯಾ ಅಂಗಡಿ ಕನಿಷ್ಠ ಸ್ಪರ್ಧೆಯನ್ನೂ ಒಡ್ಡದೇ ಠೇವಣಿ ಕಳೆದುಕೊಂಡಿದ್ದಾರೆ. ಜೊತೆಗೆ ಜೆಡಿಎಸ್ ತನ್ನ ಕ್ಷೇತ್ರವನ್ನು ಕಳೆದುಕೊಂಡಿದೆ.

ಜೆಡಿಎಸ್ ಎರಡು ಭಾರಿ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದೂ ಎಂ.ಸಿ ಮನಗೂಳಿ ಅವರ ವರ್ಚಸ್ಸಿನಿಂದ ಎಂಬುದು ಈ ಚುನಾವಣೆಯಲ್ಲಿ ಸಾಬೀತಾಗಿದೆ.

'ಜೆಡಿಎಸ್‌ಗೆ ಈ ಕ್ಷೇತ್ರದಲ್ಲಿ ಗೆಲ್ಲುವುದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಸೋಲಿಸಬೇಕು ಎಂಬುದೇ ಒಂದಂಶದ ಕಾರ್ಯಕ್ರಮವಾಗಿತ್ತು' ಎಂಬ ಕಾಂಗ್ರೆಸ್ ಮುಖಂಡರ ಮಾತಿಗೆ ಮುಸ್ಲಿಂ ಮತದಾರರು ಓಗೊಟ್ಟ ಪರಿಣಾಮ ಜೆಡಿಎಸ್ ಹೀನಾಯ ಸೋಲು ಅನುಭವಿಸಬೇಕಾಯಿತು.

ಸಿಂದಗಿ ವಿಧಾನಸಭಾ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸುತ್ತಿದ್ದಂತೆ ವಿಜಯಪುರ ಸೈನಿಕ ಶಾಲೆ ಎದುರು ಪಕ್ಷದ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು —ಪ್ರಜಾವಾಣಿ ಚಿತ್ರ/ ಸಂಜೀವ ಅಕ್ಕಿ

> **ಮುಖ್ಯಮಂತ್ರಿ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ, ಲಕ್ಷ್ಮಣ ಸವದಿ, ಪಕ್ಷದ ಅಧ್ಯಕ್ಷರು, ಸಚಿವರು, ಎಲ್ಲ ನಾಯಕರ ಶ್ರಮವಹಿಸಿ ನನ್ನನ್ನು ಗೆಲ್ಲಿಸಿದ್ದಾರೆ**
> **ರಮೇಶ ಭೂಸನೂರ,** ವಿಜೇತ ಬಿಜೆಪಿ ಅಭ್ಯರ್ಥಿ,ಸಿಂದಗಿ

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ

ಶಾಸಕರು, ಹೈಕಮಾಂಡ್‌ನಿಂದ ಸಿಎಂ ಆಯ್ಕೆ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆ ಬಳಿಕ ಪಕ್ಷದ ಹೆಚ್ಚಿನ ಶಾಸಕರ ಅಭಿಪ್ರಾಯ ಮತ್ತು ಹೈಕಮಾಂಡ್ ತೀರ್ಮಾನದ ಆಧಾರದಲ್ಲಿ ಮುಖ್ಯಮಂತ್ರಿಯ ಆಯ್ಕೆ ನಡೆಯಲಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಉಪ ಚುನಾವಣೆ ಫಲಿತಾಂಶ ಮಂಗಳವಾರ ಪ್ರಕಟವಾದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಕ್ಷದ ಯಾವುದೇ ನಾಯಕರು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷೆ ವ್ಯಕ್ತಪಡಿಸಿದರೂ ತಪ್ಪಲ್ಲ. ಆದರೆ, ಶಾಸಕರು ಮತ್ತು ಹೈಕಮಾಂಡ್ ಬೆಂಬಲವೇ ಅಂತಿಮವಾಗಲಿದೆ' ಎಂದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವನತಿ ಆರಂಭವಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆಯೂ ಕಡಿಮೆಯಾಗುತ್ತಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಈ ಕಾರಣದಿಂದ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಪ್ರಾರಂಭವಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆಯ ಹಾನಗಲ್ ಕ್ಷೇತ್ರದಲ್ಲೇ ಬಿಜೆಪಿ ಸೋಲು ಕಂಡಿದೆ. ಮುಖ್ಯಮಂತ್ರಿಯವರ ಭಾವನಾತ್ಮಕ ಮಾತುಗಳಿಗೆ ಜನರು ಮರುಳಾಗಿಲ್ಲ. ಬಿ.ಎಸ್‌. ಯಡಿಯೂರಪ್ಪ ಮತ್ತು ಅವರ ಮಗ ಕೂಡ ಎರಡೂ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದರು. ಆದರೂ, ಬಿಜೆಪಿಗೆ ಬೆಂಬಲ ಸಿಕ್ಕಿಲ್ಲ ಎಂದರು.

ಎರಡೂ ಕ್ಷೇತ್ರಗಳಲ್ಲಿ ಜೆಡಿಎಸ್ ಹೀನಾಯವಾಗಿ ಸೋತಿದೆ. ಹಾನಗಲ್‌ನಲ್ಲಿ ನಾಲ್ಕಂಕಿ ಮತ ಪಡೆಯಲೂ ಸಾಧ್ಯವಾಗಿಲ್ಲ. ಅವರ ಪಕ್ಷದ ಸೋಲಿಗೆ ಕಾರಣವೇನು ಎಂಬುದನ್ನು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರನ್ನೇ ಕೇಳಬೇಕು ಎಂದು ಸಿದ್ದರಾಮಯ್ಯ ಹೇಳಿದರು.

'ಸಿಂದಗಿಯಲ್ಲಿ ಜೆಡಿಎಸ್‌ನಿಂದ ಬಂದವರು ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವಿನ ಸಮನ್ವಯದ ಕೊರತೆ ಸೋಲಿಗೆ ಕಾರಣ ಎಂಬ ಚರ್ಚೆ ಇದೆ. ಆದರೆ, ಪರಿಶೀಲಿಸಿದ ಬಳಿಕವೇ ಗೊತ್ತಾಗಬೇಕು. ನಾನು ಕೂಡ ಜೆಡಿಎಸ್‌ನಿಂದ ಬಂದು ಗೆದ್ದಿದ್ದೇನೆ. ಜಮೀರ್ ಅಹಮ್ಮದ್, ಅಖಂಡ ಶ್ರೀನಿವಾಸಮೂರ್ತಿ, ಭೀಮಾ ನಾಯ್ಕ್ ಕೂಡ ಗೆದ್ದಿದ್ದಾರೆ' ಎಂದರು.

ಅಲ್ಪಸಂಖ್ಯಾತರು ಹಿಂದೆಯೂ ಜೆಡಿಎಸ್ ಪಕ್ಷವನ್ನು ನಂಬಿರಲಿಲ್ಲ, ಮುಂದೆಯೂ ನಂಬುವುದಿಲ್ಲ. ಅದೊಂದು ಅವಕಾಶವಾದಿ ಪಕ್ಷ ಎಂಬುದು ಅವರಿಗೆ ಗೊತ್ತಿದೆ ಎಂದು ಹೇಳಿದರು.

ಹಾನಗಲ್ ಗೆಲುವು 2023 ಕ್ಕೆ ಮುನ್ಸೂಚನೆ: ಡಿಕೆಶಿ

ಶಿವಕುಮಾರ್

ರಾಜ್ಯದಲ್ಲಿ ಬಿಜೆಪಿಯು ಮತದಾರರ ವಿಶ್ವಾಸವನ್ನು ಕಳೆದುಕೊಂಡಿದ್ದು, 2023ರಲ್ಲಿ ಕಾಂಗ್ರೆಸ್ ಮತ್ತೆ ಆಡಳಿತ ಸೂತ್ರವನ್ನು ಹಿಡಿಯಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಸಿಂದಗಿಯಲ್ಲಿ ಹಿಂದೆ ನಾವು ಮೂರನೇ ಸ್ಥಾನದಲ್ಲಿ ಇದ್ದೆವು. ಈಗ ಎರಡನೇ ಸ್ಥಾನಕ್ಕೆ ಬಂದಿದ್ದು, ಹಿಂದಿಗಿಂತ ಹೆಚ್ಚು ಮತಗಳನ್ನು ಪಡೆದಿದ್ದೇವೆ. ಈ ಕ್ಷೇತ್ರದಲ್ಲಿ ಸೋತರೂ ಸಮಾಧಾನವಿದೆ. ಆದರೆ, ಹಾನಗಲ್‌ನಲ್ಲಿ ಜಯಗಳಿಸಿದ್ದೇವೆ. ಬಿಜೆಪಿ ತೆಕ್ಕೆಯಲ್ಲಿ ಇದ್ದ ಕ್ಷೇತ್ರವನ್ನು ಗೆದ್ದಿದ್ದೇವೆ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

'ಈ ಎರಡೂ ಫಲಿತಾಂಶಗಳನ್ನು ನೋಡಿದಾಗ ರಾಜ್ಯದಲ್ಲಿ ಜನ ಬದಲಾವಣೆ ಬಯಸುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಹಾನಗಲ್‌ನಲ್ಲಿ ಮುಖ್ಯಮಂತ್ರಿ, ಅವರ ಇಡೀ ಮಂತ್ರಿಮಂಡಲ ಬೀಡು ಬಿಟ್ಟಿದ್ದರೂ ಅವರು ಅಲ್ಲಿ ಗೆಲ್ಲಲು ಸಾಧ್ಯವಾಗಿಲ್ಲ. ಸ್ವಾಭಿಮಾನಿ ಜನತೆ ಕಾಂಗ್ರೆಸ್‌ಗೆ ಮತ ನೀಡಿದ್ದಾರೆ. ಮತದಾರರು ಬಿಜೆಪಿ ಮೇಲೆ ವಿಶ್ವಾಸ ಕಳೆದುಕೊಂಡಿರುವುದಕ್ಕೆ ಇದು ಸಾಕ್ಷಿ' ಎಂದು ಶಿವಕುಮಾರ್ ಹೇಳಿದರು.

'ಮತದಾರರು ಕಾಂಗ್ರೆಸ್ ಕಡೆಗೆ ವಿಶ್ವಾಸ ಮತ್ತು ನಂಬಿಕೆಯಿಂದ ನೋಡುತ್ತಿದ್ದಾರೆ. ಅವರ ನಂಬಿಕೆ ಮತ್ತು ವಿಶ್ವಾಸ ಉಳಿಸಿಕೊಳ್ಳುವ ಕೆಲಸ ಮಾಡುತ್ತೇವೆ. ಬಿಜೆಪಿ ಆಡಳಿತದಲ್ಲಿ ಕರ್ನಾಟಕ 20 ವರ್ಷಗಳಷ್ಟು ಹಿಂದಕ್ಕೆ ಹೋಗಿದೆ. ಅದನ್ನು ವಾಪಸ್ ತರುವ ಕೆಲಸ ಆಗಬೇಕಾಗಿದೆ. 2023 ರಲ್ಲಿ ಕರ್ನಾಟಕ ಬೆಳಕು ಕಾಣಲಿದೆ' ಎಂದರು.

'ಹಾನಗಲ್‌ನಲ್ಲಿ ಬಿಜೆಪಿಯ ಸೋಲು ಮುಖ್ಯಮಂತ್ರಿಗೆ ಆದ ಹಿನ್ನಡೆ ಎನ್ನುವುದಕ್ಕಿಂತ ಬಿಜೆಪಿಗೆ ಆಗಿರುವ ಮುಖಭಂಗ. ಯಡಿಯೂರಪ್ಪ ಅವರ ಕಣ್ಣೀರಿನಿಂದ ಬಿಜೆಪಿಯು ಮುಂದಿನ ಚುನಾವಣೆಯಲ್ಲಿ ಕೊಚ್ಚಿ ಹೋಗಲಿದೆ ಎಂಬ ನನ್ನ ಮಾತಿಗೆ ಬದ್ಧನಾಗಿದ್ದೇನೆ' ಎಂದೂ ಅವರು ಹೇಳಿದರು.

'ಅಭ್ಯರ್ಥಿ ಬಗ್ಗೆ ಅಪಸ್ವರವಿತ್ತೋ ಗೊತ್ತಿಲ್ಲ'

ಶಂಕರಪಾಟೀಲ ಮುನೇನಕೊಪ್ಪ

ಹುಬ್ಬಳ್ಳಿ: 'ಉಪ ಚುನಾವಣೆ ನಡೆದ ಹಾನಗಲ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಬಗ್ಗೆ ಕ್ಷೇತ್ರದಲ್ಲಿ ಅಪಸ್ವರವಿತ್ತೋ ಗೊತ್ತಿಲ್ಲ. ಆದರೆ, ಮತದಾರರ ನಿರ್ಣಯಕ್ಕೆ ತಲೆ ಬಾಗುತ್ತೇವೆ' ಎಂದು ಸಚಿವ ಶಂಕರಪಾಟೀಲ ಮುನೇನಕೊಪ್ಪ ಪ್ರತಿಕ್ರಿಯಿಸಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಶಿವರಾಜ ಸಜ್ಜನರ ಅವರಿಗೆ ಪಕ್ಷ ಟಿಕೆಟ್ ನೀಡಿದ್ದಕ್ಕಾಗಿ, ಎಲ್ಲ ನಾಯಕರು ನಿಷ್ಠೆಯಿಂದ ಪ್ರಚಾರದಲ್ಲಿ ಪಾಲ್ಗೊಂಡು ಚುನಾವಣೆ ಎದುರಿಸಿದ್ದಾರೆ. ಆದರೆ ಕ್ಷೇತ್ರದ ಮತದಾರರು ತಿರಸ್ಕರಿಸಿದ್ದಾರೆ. ಇದಕ್ಕೆ ಕಾರಣವೇನು ಎನ್ನುವ ಕುರಿತು ಪರಿಶೀಲಿಸಲಾಗುವುದು' ಎಂದರು.

'ಪ್ರಜಾಪ್ರಭುತ್ವದಲ್ಲಿ ಮತದಾರರ ನಿರ್ಣಯ ಅಂತಿಮ. ರಾಜಕಾರಣದಲ್ಲಿ ಸೋಲು, ಗೆಲುವು ಸಾಮಾನ್ಯ. ಮುಖ್ಯಮಂತ್ರಿಗೆ ಮುಖಭಂಗ ಎನ್ನುವುದೇನೂ ಇಲ್ಲ. ಬಿಜೆಪಿಗೆ ಇದು ಹಿನ್ನಡೆಯೂ ಅಲ್ಲ. ಈ ಸೋಲನ್ನೇ ಸವಾಲಾಗಿ ಸ್ವೀಕರಿಸಿ ಮುಂದಿನ ದಿನಗಳಲ್ಲಿ ಗೆಲುವನ್ನಾಗಿ ಮಾಡಿಕೊಳ್ಳುತ್ತೇವೆ' ಎಂದರು.

ಸೋಲಿನ ಆತ್ಮಾವಲೋಕನ ಅಗತ್ಯ: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ

ಬೆಂಗಳೂರು: 'ಹಾನಗಲ್ ಸೋಲಿನ ನಿರೀಕ್ಷೆ ಇರಲಿಲ್ಲ. ಈ ಬಗ್ಗೆ ಎಲ್ಲ ನಾಯಕರೂ ಕೂತು ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ' ಎಂದು ಬಿಜೆಪಿಯ ಶಾಸಕ ಬಿ.ಎಸ್‌. ಯಡಿಯೂರಪ್ಪ ಹೇಳಿದರು.

ಚುನಾವಣೆ ಫಲಿತಾಂಶದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಅವರು, 'ಸಿಂದಗಿಯಲ್ಲಿ ರಮೇಶ ಭೂಸನೂರ ಅವರು ನಮ್ಮ ನಿರೀಕ್ಷೆಗೂ ಮೀರಿ ಅಧಿಕ ಮತಗಳಿಂದ ಗೆಲುವು ಸಾಧಿಸಿದ್ದಾರೆ. ಆದರೆ, ಹಾನಗಲ್‌ನಲ್ಲಿ ಗೆಲ್ಲುವ ನಿರೀಕ್ಷೆ ಇತ್ತು. ಪರಿಸ್ಥಿತಿಯೂ ಅನುಕೂಲಕರವಾಗಿತ್ತು. ಅಲ್ಲಿ ಏನಾಯಿತು ಎಂಬ ಬಗ್ಗೆ ಎಲ್ಲ ನಾಯಕರೂ ಸೇರಿ ಚರ್ಚೆ ಮಾಡುತ್ತೇವೆ' ಎಂದರು.

'ಹಾನಗಲ್ ಗೆದ್ದ ಮಾತ್ರಕ್ಕೆ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಬೀಗಬೇಕಾಗಿಲ್ಲ. ಮುಂದಿನ 15 ದಿನಗಳ ಬಳಿಕ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಪ್ರವಾಸ ಮಾಡಿ ಕಾರ್ಯಕರ್ತರನ್ನು ಸಂಘಟಿಸುವ ಕೆಲಸ ಮಾಡುತ್ತೇನೆ. ಮುಂದಿನ ಚುನಾವಣೆಯಲ್ಲಿ 140 ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಮತ್ತೆ ಅಧಿಕಾರ ಹಿಡಿಯುವುದು ನಿಶ್ಚಿತ' ಎಂದು ಯಡಿಯೂರಪ್ಪ ಹೇಳಿದರು.

'ಮತಗಳಿಕೆಯಲ್ಲಿ ಬಿಜೆಪಿ ಮುಂದು'

ರವಿಕುಮಾರ್

ಬೆಂಗಳೂರು: ಎರಡು ಉಪ ಚುನಾವಣೆಯಲ್ಲಿ ಒಂದರಲ್ಲಿ ಗೆದ್ದು, ಇನ್ನೊಂದರಲ್ಲಿ ಸೋತಿದ್ದರೂ ಬಿಜೆಪಿ ಮತ ಗಳಿಕೆ ಪ್ರಮಾಣ ಹೆಚ್ಚಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್ ತಿಳಿಸಿದ್ದಾರೆ.

ಸಿಂದಗಿಯಲ್ಲಿ ರಮೇಶ ಭೂಸನೂರು ಅವರು 30 ಸಾವಿರಕ್ಕೂ ಅಧಿಕ ಮತಗಳಿಂದ ಗೆಲುವು ಸಾಧಿಸಿದ್ದಾರೆ. ಜನರು ಬಿಜೆಪಿ ಪರವಾಗಿದ್ದಾರೆ ಎಂಬುದಕ್ಕೆ ಫಲಿತಾಂಶವೇ ಸಾಕ್ಷಿ. ಪ್ರಧಾನಿ ಮೋದಿ, ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಉತ್ತಮ ಕಾರ್ಯಗಳು ಮತ್ತು ಆಡಳಿತವನ್ನು ಮೆಚ್ಚಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಮಿಶ್ರ ಫಲಿತಾಂಶ: ಸಿ.ಟಿ. ರವಿ



ಸಿ.ಟಿ. ರವಿ

ಚಿಕ್ಕಮಗಳೂರು: 'ರಾಜ್ಯದ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿಗೆ ಮಿಶ್ರ ಫಲಿತಾಂಶ ಲಭಿಸಿದೆ. ಫಲಿತಾಂಶವನ್ನು ಮುಖ್ಯಮಂತ್ರಿ ಅಥವಾ ಆಡಳಿತ ಪಕ್ಷದ ವಿರುದ್ಧದ ಜನಾದೇಶ ಎಂದು ಭಾವಿಸಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಕ್ರಿಯಿಸಿದರು.

'ಹಾನಗಲ್ ಕ್ಷೇತ್ರದಲ್ಲಿ ಶ್ರೀನಿವಾಸ ಮಾನೆ ಈ ಹಿಂದೆ ಸೋತಿದ್ದರೂ ನಿರಂತರವಾಗಿ ಜನರ ಸಂಪರ್ಕದಲ್ಲಿ ಇದ್ದದ್ದು ಅವರ ಗೆಲುವಿಗೆ ಪೂರಕವಾಯಿತು. ಬಿಜೆಪಿಯು ಅಭ್ಯರ್ಥಿಯ ಆಯ್ಕೆಗೆ ವಿಳಂಬ ಮಾಡಿದ್ದು ಫಲಿತಾಂಶದ ಮೇಲೆ ಭಾಗಶಃ ಪರಿಣಾಮ ಬೀರಿವೆ. ಸಂಘಟನೆ, ಸಿದ್ಧಾಂತ, ನೇತೃತ್ವ ಇಲ್ಲದಾಗ ಏನು ಆಗಬೇಕು ಅದು ಜೆಡಿಎಸ್‌ಗೆ ಆಗಿದೆ' ಎಂದು ವಿಶ್ಲೇಷಿಸಿದರು.

'ಕಾಂಗ್ರೆಸ್ ನಾಯಕರಿಗೆ ಮತದಾರರಿಂದಲೇ ಉತ್ತರ'

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ರಾಮನಗರ: 'ಎರಡೂ ಕ್ಷೇತ್ರಗಳಲ್ಲಿ ನಮ್ಮ ಪಕ್ಷವು ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಸ್ಪರ್ಧೆ ಮಾಡಿತ್ತು ಎಂದು ಹೇಳಿದ್ದ ಕಾಂಗ್ರೆಸ್‌ಗೆ ಸಿಂದಗಿ ಮತ್ತು ಹಾನಗಲ್ ಕ್ಷೇತ್ರಗಳಲ್ಲಿ ಸಿಕ್ಕಿರುವ ಮತಗಳೇ ಉತ್ತರ ನೀಡಿವೆ. ಈ ಫಲಿತಾಂಶದಿಂದ ನಾನು ಅಧೀರನೂ ಆಗಿಲ್ಲ, ನನಗೆ ಆತಂಕವೂ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಬಿಡದಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಸಿಂದಗಿ ವಿಧಾನಸಭೆ ಕ್ಷೇತ್ರಕ್ಕೆ ನಮ್ಮ ಪಕ್ಷ ಸಾಕಷ್ಟು ಕೊಡುಗೆ ನೀಡಿದೆ. ಪ್ರಚಾರದ ವೇಳೆ ನಾನು ಐವತ್ತಕ್ಕೂ ಹೆಚ್ಚು ಹಳ್ಳಿಗಳಿಗೆ ಭೇಟಿ ನೀಡಿದ್ದೆ. ಜನರ ಸ್ಪಂದನೆ ಉತ್ತಮವಾಗಿತ್ತು. ದೇವೇಗೌಡರು ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ ನೀಡಿದ್ದ ನೀರಾವರಿ ಯೋಜನೆಗಳ ಬಗ್ಗೆ, ನಾನು ಮುಖ್ಯಮಂತ್ರಿ ಆಗಿದ್ದಾಗ ನೀಡಿದ ಕಾರ್ಯಕ್ರಮಗಳು ಹಾಗೂ ಸಾಲ ಮನ್ನಾ ಬಗ್ಗೆ ಪ್ರತಿ ಹಳ್ಳಿಯಲ್ಲೂ ಜನ ಮಾತನಾಡಿದ್ದರು. ಸ್ವತಃ ಜನರೇ ನನ್ನ ಬಳಿಗೆ ಬಂದು ಈ ಬಗ್ಗೆ ಮಾತನಾಡುತ್ತಿದ್ದರು. ಆದರೂ ಈ ರೀತಿಯ ಫಲಿತಾಂಶ ಬಂದಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು

8ರಿಂದ ಜಿಲ್ಲಾವಾರು ಸಭೆ: ಇದೇ 8ರಿಂದ 16ರವರೆಗೆ ಪಕ್ಷದ ಕಚೇರಿಯಲ್ಲಿ ಪ್ರತಿ ಜಿಲ್ಲಾವಾರು ಸಭೆಗಳನ್ನು ಕರೆಯಲಾಗಿದೆ. ಪ್ರತಿದಿನ ನಾಲ್ಕು ಜಿಲ್ಲೆಗಳ ಮುಖಂಡರ ಜತೆ ಸಮಾಲೋಚನೆ ನಡೆಸಲಿದ್ದೇನೆ. ಪದಾಧಿಕಾರಿಗಳು ಹಾಗೂ ಸಂಭವನೀಯ ಅಭ್ಯರ್ಥಿಗಳು ಈ ಸಭೆಗಳಲ್ಲಿ ಭಾಗಿಯಾಗಲಿದ್ದಾರೆ. ತಳಮಟ್ಟದಿಂದ ಪಕ್ಷವನ್ನು ಕಟ್ಟುವುದು ಹಾಗೂ ವಿಷಯಾಧಾರಿತವಾಗಿ ಹೋರಾಟ ನಡೆಸುವುದು ನಮ್ಮ ಗುರಿ. ಈ ನಿಟ್ಟಿನಲ್ಲಿ 2023ಕ್ಕೆ ಪಕ್ಷವನ್ನು ಸಜ್ಜುಗೊಳಿಸುತ್ತಿದ್ದೇವೆ ಎಂದು ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದರು.

ಕೆಲಸ ಮಾಡಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿದ್ದಾರೆ: ಈಶ್ವರಪ್ಪ

ದಾವಣಗೆರೆ: 'ಹಾನಗಲ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ಮಾನೆ ಅತ್ಯುತ್ತಮ ಕೆಲಸ ಮಾಡಿದ್ದರಿಂದ ಗೆದ್ದಿದ್ದಾರೆ. ನಮ್ಮ ಅಭ್ಯರ್ಥಿ ಕೆಲಸ ಮಾಡಿಲ್ಲ. ಅದಕ್ಕೆ ಸೋತಿದ್ದಾರೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವಿಶ್ಲೇಷಿಸಿದ್ದಾರೆ.

'ಚುನಾವಣೆಯಲ್ಲಿ ಸೋಲು, ಗೆಲುವು ಸಾಮಾನ್ಯ. ಸಿದ್ದರಾಮಯ್ಯ, ಇಂದಿರಾಗಾಂಧಿ ಸೋತಿರಲಿಲ್ವ? ಹಾನಗಲ್‌ನಲ್ಲಿ ನಾವು ಸೋತಿದ್ದೇವೆ. ಸಿಂದಗಿಯಲ್ಲಿ ದಿಗ್ವಿಜಯ ಸಾಧಿಸಿದ್ದೇವೆ. ಎಲ್ಲ ಚುನಾವಣೆಯಲ್ಲಿ ಎಲ್ಲರೂ ಗೆಲ್ಲಲು ಸಾಧ್ಯವಿಲ್ಲ. ಭವಿಷ್ಯದ ಚುನಾವಣೆಗಳಲ್ಲಿ ತಪ್ಪುಗಳನ್ನು ತಿದ್ದಿಕೊಳ್ಳುತ್ತೇವೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಸಿಎಂ ಗೆ ಹಿನ್ನಡೆಯಲ್ಲ'

ಮಂಗಳೂರು: ಹಾನಗಲ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯ ಸೋಲು ಮುಖ್ಯಮಂತ್ರಿಗೆ ಹಿನ್ನಡೆಯಲ್ಲ. ಹಾನಗಲ್‌ನಲ್ಲಿ ಸಣ್ಣ ಅಂತರದಲ್ಲಿ ಸೋಲಾಗಿದ್ದು, ಇದನ್ನು ಸವಾಲಾಗಿ ಸ್ವೀಕರಿಸುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

'ಸಿಂದಗಿಯಲ್ಲಿ ಬಿಜೆಪಿಗೆ ಅಭೂತಪೂರ್ವ ಗೆಲುವಾಗಿದ್ದು, ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದು ಸಂಘಟಿತ ಪ್ರಯತ್ನದ ಫಲ' ಎಂದರು.

'ಹಾನಗಲ್‌ನಲ್ಲಿ ಸೂಟ್‌ಕೇಸ್ ಕೆಲಸ ಮಾಡಿಲ್ಲ ಎಂಬ ಡಿ.ಕೆ. ಶಿವಕುಮಾರ್ ಆರೋಪಕ್ಕೆ ಪ್ರತಿಕ್ರಿಯಿಸಿ, 'ಹಾಗಾದರೆ ಕನಕಪುರದಲ್ಲಿ ಶಿವಕುಮಾರ್ ಗೆಲುವಿಗೆ ಸೂಟ್‌ಕೇಸ್ ಕೆಲಸ ಮಾಡಿದೆಯೇ' ಎಂದು ಪ್ರಶ್ನಿಸಿದರು.

ಕೈ–ಕಮಲ ಗಟ್ಟಿ: ದಳ ಪಟ್ಟಿ

ಒಂದನೇ ಪುಟದಿಂದ

ಕುಟುಂಬ ರಾಜಕಾರಣ ಬೇಡ ಎಂಬ ಲೆಕ್ಕಾಚಾರ ಹಾಗೂ ಬಸವಕಲ್ಯಾಣದ ಗೆಲುವಿನ ಉಮೇದಿನಲ್ಲಿ ಶಿವರಾಜ ಸಜ್ಜನರ ಅವರಿಗೆ ಟಿಕೆಟ್ ಕೊಟ್ಟಿದ್ದು, ಸೋಲಿನ ರುಚಿ ಉಣಿಸಿತು ಎಂಬ ಚರ್ಚೆ ಪಕ್ಷದೊಳಗೆ ನಡೆದಿದೆ. ಅದರಲ್ಲೂ ಬಿಜೆಪಿಯ ಸಂಸದ ಶಿವಕುಮಾರ ಉದಾಸಿ ಪ್ರತಿನಿಧಿಸುವ ಹಾಗೂ ಬೊಮ್ಮಾಯಿ ತವರು ಜಿಲ್ಲೆಯಲ್ಲಿ ಸೋಲು ಕಂಡಿರುವುದು ಕಮಲ ಪಾಳೆಯಕ್ಕೆ ದೊಡ್ಡ ಹಿನ್ನಡೆ.

ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗೆ ಭರ್ಜರಿ ತಯಾರಿಯಲ್ಲಿರುವ ಕಾಂಗ್ರೆಸ್ ನಾಯಕರ ಉತ್ಸಾಹವನ್ನು ಹಾನಗಲ್ ಫಲಿತಾಂಶ ಇಮ್ಮಡಿಗೊಳಿಸಿದೆ. ಬಿಜೆಪಿ ತೆಕ್ಕೆಯಿಂದ ಕ್ಷೇತ್ರವನ್ನು ವಶಪಡಿಸಿಕೊಂಡಿದ್ದು, ಮುಂದಿನ ಚುನಾವಣೆ ಗೆಲುವಿನ ಮೊದಲ ಮೆಟ್ಟಿಲು ಎಂದವರು ಭಾವಿಸಲೂ ಕಾರಣವಾಗಿದೆ.

ಸಿಂದಗಿಯಲ್ಲಿ ಮನಗೂಳಿ ಪುತ್ರ ಅಶೋಕ ಮನಗೂಳಿ ಅವರನ್ನು ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಕರೆತಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಗೆಲುವಿನ ನಿರೀಕ್ಷೆಯಲ್ಲಿದ್ದರು. ಆದರೆ, ಅದು ಫಲಕೊಟ್ಟಿಲ್ಲ. ತಂದೆಯ ಮರಣದ ಅನುಕಂಪ ಅಶೋಕ ಕೈಹಿಡಿದಿಲ್ಲ. ಈ ಕ್ಷೇತ್ರದಲ್ಲಿ ಯಾವಾಗಲೂ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುತ್ತಿದ್ದ ಕಾಂಗ್ರೆಸ್, 62,680 (ಶೇ 38.27) ಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಅಸ್ತಿತ್ವವೇ ಇಲ್ಲದ ಕ್ಷೇತ್ರದಲ್ಲಿ ಪೈಪೋಟಿ ನೀಡುವಷ್ಟರ ಮಟ್ಟಿಗೆ ಕಾಂಗ್ರೆಸ್ ಯಶ ಸಾಧಿಸಿರುವುದು ಆ ಪಕ್ಷದ ನಾಯಕರ ವಿಶ್ವಾಸವನ್ನು ಹೆಚ್ಚಿಸಿದೆ.

ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿಯ ಸಚಿವರ ದಂಡೇ ಬೀಡುಬಿಟ್ಟಿತ್ತು. ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ.ವಿಜಯೇಂದ್ರ ಕ್ಷೇತ್ರದಲ್ಲಿ ಪ್ರಚಾರ ಮಾಡಿದ್ದರು. ಹಾಗಿದ್ದರೂ ಲಿಂಗಾಯತ ಮತ ಬಾಹುಳ್ಯವಿರುವ ಹಾನಗಲ್‌ನಲ್ಲಿ ಸೋಲು ಕಂಡಿದೆ. 2018ರ ಚುನಾವಣೆಯಲ್ಲಿ ಅತಿ ಕಡಿಮೆ ಅಂತರದಿಂದ ಸಿಂದಗಿಯಲ್ಲಿ ರಮೇಶ ಭೂಸನೂರು ಅವರನ್ನು ಸೋಲಿಸಿದ್ದ ಅನುಕಂಪವೂ ಅವರ ಈಗಿನ ಗೆಲುವಿಗೆ ದಾರಿ ಮಾಡಿಕೊಟ್ಟಿದೆ.

ಜೆಡಿಎಸ್ ಎರಡೂ ಕ್ಷೇತ್ರಗಳಲ್ಲಿ ಮುಸ್ಲಿಂ ಸಮುದಾಯದ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಿತ್ತು. ಎಚ್‌.ಡಿ. ದೇವೇಗೌಡರು ಸಿಂದಗಿಯಲ್ಲಿ ಉಳಿದುಕೊಂಡು ಮತ ಸೆಳೆಯುವ ಕಸರತ್ತು ನಡೆಸಿದ್ದರು. ಆರೆಸ್ಸೆಸ್ ವಿರುದ್ಧ ಟೀಕಾಸ್ತ್ರದ ಮಹಾಪ್ರಯೋಗ ಮಾಡಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಭಾರಿ ಸಂಖ್ಯೆಯ ಮತಗಿಟ್ಟಿಸುವ ಅಂದಾಜಿನಲ್ಲಿದ್ದರು. ಹಾನಗಲ್‌ನಲ್ಲಿ ಜೆಡಿಎಸ್‌ಗೆ ಅಷ್ಟಾಗಿ ನೆಲೆ ಇಲ್ಲದೇ ಇದ್ದರೂ (1994 ಚುನಾವಣೆವರೆಗೂ ಇದ್ದ ರೀತಿಯೊಳಗೆ) ಸಿಂದಗಿಯಲ್ಲೇ ಯಾವಾಗಲೂ ಬಿಜೆಪಿ, ಜೆಡಿಎಸ್ ಮಧ್ಯೆಯೇ ಪೈಪೋಟಿ ಇತ್ತು. ಈ ಬಾರಿ ಜೆಡಿಎಸ್ ಕಡೆಗೆ ಮತದಾರ ಒಲವು ತೋರಲೇ ಇಲ್ಲ. ಸಿಂದಗಿಯ ಜೆಡಿಎಸ್ ಅಭ್ಯರ್ಥಿ ನಾಜಿಯಾ ಅಂಗಡಿ 4,353(ಶೇ 2.66) ಮತ ಪಡೆದಿದ್ದರೆ, ಹಾನಗಲ್‌ನಲ್ಲಿ ನಿಯಾಜ್ ಶೇಖ್ 927 (ಶೇ 0.54) ಮತ ಗಿಟ್ಟಿಸಿದ್ದಾರೆ. ಈ ಚುನಾವಣೆಯಲ್ಲಿ ದಳಪತಿಗಳು ಅತ್ಯಂತ ಕಳಪೆ ಸಾಧನೆ ಮಾಡಿದ್ದು, ಇದ್ದ ಕಡೆಯೂ ನೆಲೆ ಕಳೆದುಕೊಂಡು ತಬ್ಬಲಿಯಾಗಿದ್ದಾರೆ.

ಹೋರಾಟದ ಕಸುವು ತೋರಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಮಂಡಿ ಲೋಕಸಭಾ ಕ್ಷೇತ್ರದಲ್ಲಿ ಗೆದ್ದ ಕಾಂಗ್ರೆಸ್‌ನ ಪ್ರತಿಭಾ ಸಿಂಗ್ ಅವರ ಸಂಭ್ರಮ ಪಿಟಿಐ ಚಿತ್ರ

ನವದೆಹಲಿ: 13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ನಡೆದ ಉಪಚುನಾವಣೆಯ ಫಲಿತಾಂಶವು ಕಾಂಗ್ರೆಸ್ ಪಕ್ಷದಲ್ಲಿ ಸಂಭ್ರಮಕ್ಕೆ ಕಾರಣವಾಗಿದೆ. ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಬಿಜೆಪಿಯ ಕ್ಷೇತ್ರಗಳನ್ನು ಕಾಂಗ್ರೆಸ್ ಕಸಿದುಕೊಂಡಿದೆ. ಈ ಮೂಲಕ, ಬಿಜೆಪಿಗೆ ನೇರ ಸ್ಪರ್ಧೆ ಒಡ್ಡುವ ತಾಕತ್ತು ತನಗೆ ಮಾತ್ರ ಇದೆ ಎಂಬ ಸೂಕ್ಷ್ಮ ಸಂದೇಶವನ್ನು ಟಿಎಂಸಿಗೆ ರವಾನಿಸಿದೆ.

ಅಸ್ಸಾಂ, ಮಧ್ಯ ಪ್ರದೇಶ ಮತ್ತು ಮೇಘಾಲಯದಲ್ಲಿ ತನ್ನ ಕೈಯಲ್ಲಿದ್ದ ತಲಾ ಎರಡು ಕ್ಷೇತ್ರಗಳನ್ನು ಬಿಜೆಪಿಗೆ ಕಾಂಗ್ರೆಸ್ ಬಿಟ್ಟುಕೊಟ್ಟಿದೆ. ಆದರೆ, ಇದು ಕಾಂಗ್ರೆಸ್‌ನ ಸಂಭ್ರಮಕ್ಕೆ ತಣ್ಣೀರೆರಚಿಲ್ಲ. ಬಿಜೆಪಿಯಿಂದ ಕ್ಷೇತ್ರಗಳನ್ನು ಕಸಿದುಕೊಳ್ಳಲು ಸಾಧ್ಯವಾಗಿದ್ದು ಇದಕ್ಕೆ ಕಾರಣ. ಕಾಂಗ್ರೆಸ್ ಶಾಸಕರಿದ್ದ ಹತ್ತು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಿದೆ. ಕಾಂಗ್ರೆಸ್‌ಗೆ ಗೆಲ್ಲಲು ಸಾಧ್ಯವಾಗಿದ್ದು 8 ಕ್ಷೇತ್ರಗಳಲ್ಲಿ ಮಾತ್ರ.

ಹಾಗಿದ್ದರೂ, ಕಾಂಗ್ರೆಸ್ ಮುಖಂಡರು ತಮ್ಮ ಸಂತಸವನ್ನು ಅಡಗಿಸಿಟ್ಟಿಲ್ಲ. ಉಪಚುನಾವಣೆ ಫಲಿತಾಂಶವು ಬಿಜೆಪಿಗೆ ಹಿನ್ನಡೆ ಎಂಬುದು ಇದಕ್ಕೆ ಕಾರಣ. ಹಿಮಾಚಲ ಪ್ರದೇಶದಲ್ಲಿ ಒಂದು ಲೋಕಸಭಾ ಕ್ಷೇತ್ರವನ್ನು ಬಿಜೆಪಿಯಿಂದ ಕಾಂಗ್ರೆಸ್ ಕಸಿದಿದೆ. ಗೆಲುವಿನ ಪ್ರಮಾಣವನ್ನು ಮುಂದಿಟ್ಟು ಕಾಂಗ್ರೆಸ್ ಪಕ್ಷವನ್ನು ಟಿಎಂಸಿ ಸದಾ ಟೀಕಿಸುತ್ತಿತ್ತು. ಹಿಮಾಚಲ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಬಿಜೆಪಿಯ ಕ್ಷೇತ್ರಗಳನ್ನೇ ಕಸಿದುಕೊಳ್ಳುವ ಮೂಲಕ ಟಿಎಂಸಿಗೆ ಉತ್ತರ ನೀಡಲು ಕಾಂಗ್ರೆಸ್‌ಗೆ ಸಾಧ್ಯವಾಗಿದೆ.

'ಮೂರು ಲೋಕಸಭಾ ಕ್ಷೇತ್ರಗಳ ಪೈಕಿ ಎರಡರಲ್ಲಿ ಬಿಜೆಪಿ ಸೋತಿದೆ. ವಿಧಾನಸಭೆಗಳಲ್ಲಿಯೂ ಕಾಂಗ್ರೆಸ್ ಜತೆಗೆ ನೇರ ಸ್ಪರ್ಧೆ ಇದ್ದ ಬಹುತೇಕ ಕ್ಷೇತ್ರಗಳಲ್ಲಿ ಬಿಜೆಪಿ ಸೋತಿದೆ. ಮೋದಿ ಅವರು ತಮ್ಮ ಅಹಂಭಾವವನ್ನು ಬಿಡಬೇಕು. ಕೃಷಿ ಕಾಯ್ದೆಗಳನ್ನು ರದ್ದಪಡಿಸಬೇಕು. ಪೆಟ್ರೋಲ್–ಡೀಸೆಲ್–ಅಡುಗೆ ಅನಿಲದರ ಏರಿಕೆಗೆ ಕಡಿವಾಣ ಹಾಕಬೇಕು. ಜನರ ನೋವಿನ ನಿರ್ಲಕ್ಷ್ಯವು ಹಾನಿಕಾರಕ' ಎಂದು ಕಾಂಗ್ರೆಸ್‌ನ ಪ್ರಧಾನ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ.

'ಉಪಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ಅನುಕೂಲ ಹೆಚ್ಚು. ಆದರೆ, ಹಿಮಾಚಲ ಪ್ರದೇಶದಲ್ಲಿ ಅಧಿಕಾರದಲ್ಲಿದ್ದರೂ ಕಾಂಗ್ರೆಸ್ ಮುಂದೆ ಬಿಜೆಪಿ ಸೋತಿದೆ' ಎಂದು ಪಕ್ಷದ ರಾಜ್ಯ ಉಸ್ತುವಾರಿ ರಾಜೀವ್ ಶುಕ್ಲಾ ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ಹೆಂಡತಿ ಪ್ರತಿಭಾ ಸಿಂಗ್ ಅವರು ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಜುಬ್ಬಲ್–ಕೊಥಕ್ಕೈ ಕ್ಷೇತ್ರದ ಸೋಲು ಬಿಜೆಪಿಗೆ ಆಘಾತಕಾರಿ. ಇಲ್ಲಿ, ಬಿಜೆಪಿ ಮೂರನೇ ಸ್ಥಾನಕ್ಕೆ ಕುಸಿದಿದೆ. ಪಕ್ಷದ ಬಂಡಾಯ ಅಭ್ಯರ್ಥಿಗೆ ಎರಡನೇ ಸ್ಥಾನ ಸಿಕ್ಕಿದೆ.

ಹಿಮಾಚಲ ಪ್ರದೇಶದ ಸೋಲು ಬಿಜೆಪಿ ಕಳವಳ ಹೆಚ್ಚಿಸಿದೆ. ಏಕೆಂದರೆ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ರಾಜ್ಯ ಹಿಮಾಚಲ ಪ್ರದೇಶ. ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರ ತವರು ಜಿಲ್ಲೆ ಮಂಡಿ.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ಬಣ ಸಂಘರ್ಷದಿಂದ ರಾಜಸ್ಥಾನ ಕಾಂಗ್ರೆಸ್ ಘಟಕವು ತತ್ತರಿಸಿದೆ. ಹಾಗಿದ್ದರೂ ಉಪಚುನಾವಣೆ ನಡೆದ ಎರಡೂ ಕ್ಷೇತ್ರಗಳಲ್ಲಿ ಗೆದ್ದಿರುವುದು ಕಾಂಗ್ರೆಸ್‌ಗೆ ಭಾರಿ ಸಮಾಧಾನ ತಂದಿದೆ. ಧರಿಯಾವಾಡ್ ಕ್ಷೇತ್ರವನ್ನು ಬಿಜೆಪಿಯಿಂದ ಕಸಿದುಕೊಂಡಿದೆ. ವಲ್ಲಭನಗರ ಕ್ಷೇತ್ರವನ್ನು ಉಳಿಸಿಕೊಂಡಿದೆ. ಬಿಜೆಪಿ ಇಲ್ಲಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಮಧ್ಯಪ್ರದೇಶದಲ್ಲಿ ಬಿಜೆಪಿ ವಶದಲ್ಲಿದ್ದ ರಾಯಗಾಂವ್ ಕ್ಷೇತ್ರವು ಕಾಂಗ್ರೆಸ್‌ಗೆ ಸಿಕ್ಕಿದೆ. ಆದರೆ, ತನ್ನ ವಶದಲ್ಲಿದ್ದ ಜೊಬಾತ್ ಮತ್ತು ಪೃಥ್ವಿಪುರ ಕ್ಷೇತ್ರಗಳನ್ನು ಕಳೆದುಕೊಂಡಿದೆ. ಅಸ್ಸಾಂನಲ್ಲಿ ತಾನು ಹಿಂದೆ ಗೆದ್ದಿದ್ದ ಎರಡು ಕ್ಷೇತ್ರಗಳನ್ನೂ ಸೇರಿಸಿ ಚುನಾವಣೆ ನಡೆದ ಐದು ಕ್ಷೇತ್ರಗಳಲ್ಲಿ ಒಂದನ್ನು ಗೆಲ್ಲುವುದಕ್ಕೂ ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ.

ಉಪ ಚುನಾವಣೆ: 'ಕೈ'ಗೆ ಹುರುಪು, ಕಮಲಕ್ಕೆ ಮಿಶ್ರಫಲ

ಒಂದನೇ ಪುಟದಿಂದ

ತೆಲಂಗಾಣದ ಹುಜೂರಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಸಚಿವ, ಬಿಜೆಪಿಯ ಈಟಾಲ ರಾಜೇಂದರ್ ಗೆದ್ದಿದ್ದಾರೆ. ಅವರು ಟಿಆರ್‌ಎಸ್ ತೊರೆದು ಬಿಜೆಪಿ ಸೇರಿದ್ದರು. ದಾದ್ರಾ ಮತ್ತು ನಗರ್ ಹವೇಲಿ ಲೋಕಸಭಾ ಕ್ಷೇತ್ರದಲ್ಲಿ ಶಿವಸೇನಾದ ಮೋಹನ್ ದೇಲ್ಕರ್ ಜಯಗಳಿಸಿದ್ದಾರೆ. ಮೇಘಾಲಯದ ಮೂರು ಕ್ಷೇತ್ರಗಳಲ್ಲಿ ಆಡಳಿತಾರೂಢ ಎನ್‌ಪಿಪಿ ಮತ್ತು ಯುಪಿಪಿ ಗೆದ್ದಿವೆ. ಮಿಜೋರಾಂನ ಒಂದು ಕ್ಷೇತ್ರವು ಮಿಜೋ ನ್ಯಾಷನಲ್ ಫ್ರಂಟ್ ಪಾಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿಗೆ ಭಾರಿ ಗೆಲುವು ಸಿಕ್ಕಿದೆ. ಉಪಚುನಾವಣೆ ನಡೆದ ನಾಲ್ಕೂ ಕ್ಷೇತ್ರಗಳಲ್ಲಿ ಟಿಎಂಸಿ ಗೆದ್ದಿದೆ. ದಿನ್‌ಹತ ಮತ್ತು ಶಾಂತಿಪುರ ಕ್ಷೇತ್ರಗಳನ್ನು ಬಿಜೆಪಿಯಿಂದ ಕಸಿದುಕೊಂಡಿದೆ. ಈಗ ಕೇಂದ್ರ ಗೃಹ ಖಾತೆಯ ರಾಜ್ಯಸಚಿವರಾಗಿರುವ ನಿಸಿತ್ ಪ್ರಮಾಣಿಕ್ ಅವರು ಕಳೆದ ಚುನಾವಣೆಯಲ್ಲಿ ದಿನ್‌ಹತ ಕ್ಷೇತ್ರದಲ್ಲಿ ಅಲ್ಪ ಅಂತರದಿಂದ ಗೆದ್ದಿದ್ದರು. ಆದರೆ, ಈ ಬಾರಿ ಟಿಎಂಸಿ ಇಲ್ಲಿ 1.64 ಲಕ್ಷ ಮತಗಳ ದಾಖಲೆ ಅಂತರದಿಂದ ಗೆಲುವು ಸಾಧಿಸಿದೆ. ಇನ್ನೆರಡು ಕ್ಷೇತ್ರಗಳಲ್ಲಿ ಟಿಎಂಸಿ ಶಾಸಕರೇ ಹಿಂದೆ ಇದ್ದರು. 294 ಸದಸ್ಯ ಬಲದ ವಿಧಾನಸಭೆಯಲ್ಲಿ ಟಿಎಂಸಿಯ ಬಲವು ಈಗ 215ಕ್ಕೆ ಏರಿದೆ. ಬಿಜೆಪಿ ಬಲವು 77ರಿಂದ 75ಕ್ಕೆ ಕುಸಿದಿದೆ. ನಾಲ್ಕೂ ಕ್ಷೇತ್ರಗಳಲ್ಲಿ ಟಿಎಂಸಿ ಶೇ 75.02ರಷ್ಟು ಮತ ಪಡೆದಿದೆ. ಬಿಜೆಪಿ ಪಡೆದ ಮತಗಳ ಪ್ರಮಾಣ ಶೇ 14.48ರಷ್ಟು.

ಹರಿಯಾಣದ ಎಲ್ಲೆನಾಬಾದ್ ಉಪಚುನಾವಣೆಯಲ್ಲಿ ಐಎನ್‌ಎಲ್‌ಡಿಯ ಅಭಯ್ ಸಿಂಗ್ ಚೌತಾಲಾ ಅವರು ಬಿಜೆಪಿ ಅಭ್ಯರ್ಥಿ ವಿರುದ್ಧ ಗೆದ್ದಿದ್ದಾರೆ. ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಚೌತಾಲಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಅಲ್ಲಿ ಉಪಚುನಾವಣೆ ನಡೆದಿತ್ತು.

ಬಿಹಾರದಲ್ಲಿ ಉಪಚುನಾವಣೆ ನಡೆದ ಎರಡೂ ಕ್ಷೇತ್ರಗಳಲ್ಲಿ ಜೆಡಿಯು ಗೆದ್ದಿದೆ. ಆಂಧ್ರ ಪ್ರದೇಶದ ಒಂದು ಕ್ಷೇತ್ರದಲ್ಲಿ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಹ್ಯಾಕರ್ ಜೊತೆ ಕೈ ಜೋಡಿಸಿದ್ದ ಬಿ.ಕಾಂ ಪದವೀಧರ ● ಮಾರುಕಟ್ಟೆ ಮೌಲ್ಯ ₹414.05 ಕೋಟಿ

ಶ್ರೀಕೃಷ್ಣ ದೋಚಿದ್ದ '900 ಬಿಟಿಸಿ' ಮಾರಿದ್ದ ರಾಬಿನ್!

● ಸಂತೋಷ ಜಿಗಳಿಕೊಪ್ಪ

ಶ್ರೀಕೃಷ್ಣ

ಬೆಂಗಳೂರು: ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ದೋಚುತ್ತಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು (ಬಿಟಿಸಿ), 'ರಾಬಿನ್ ಆನ್‌ಲೈನ್ ಸರ್ವಿಸಸ್' ಕಂಪನಿಯ ಸಂಸ್ಥಾಪಕ ರಾಬಿನ್ ಖಂಡೇಲ್‌ವಾಲಾ (34) ಮಾರಿಕೊಡುತ್ತಿದ್ದ ಅಂಶ ಸಿಸಿಬಿ ತನಿಖೆಯಿಂದ ಹೊರಬಿದ್ದಿದೆ.

ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಸಿಬಿ ಪೊಲೀಸರು, ಶ್ರೀಕೃಷ್ಣ ಹಾಗೂ ರಾಬಿನ್ ಖಂಡೇಲ್‌ವಾಲಾ ನಡುವಿನ ವ್ಯವಹಾರದ ಬಗ್ಗೆ ದಾಖಲೆ ಸಮೇತ ವಿವರಿಸಿದ್ದಾರೆ.

'ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಜಾಲತಾಣ ಹ್ಯಾಕ್ ಮಾಡುತ್ತಿದ್ದ ಶ್ರೀಕೃಷ್ಣ, ಅದರಿಂದ ಬಿಟ್ ಕಾಯಿನ್‌ಗಳನ್ನು ಗಳಿಸುತ್ತಿದ್ದ. ಅದೇ ಬಿಟ್ ಕಾಯಿನ್‌ಗಳನ್ನು ರಾಬಿನ್ ಖಂಡೇಲ್‌ವಾಲಾಗೆ ಕೊಟ್ಟು, ಬೇರೆಯವರಿಗೆ ಮಾರಾಟ ಮಾಡಿಸಿ ಹಣ ಪಡೆಯುತ್ತಿದ್ದ. ಅದಕ್ಕೆ ಪ್ರತಿಯಾಗಿ ಕಮಿಷನ್ ಸಹ ಕೊಡುತ್ತಿದ್ದ' ಎಂಬ ಮಾಹಿತಿ ಸಿಸಿಬಿ ಆರೋಪ ಪಟ್ಟಿಯಲ್ಲಿದೆ.

'ಬಿಟ್ ಕಾಯಿನ್ ದೋಚುವುದು ಶ್ರೀಕೃಷ್ಣನಿಗೆ ಸುಲಭವಾಗಿತ್ತು. ಆದರೆ, ಅವುಗಳನ್ನು ಮಾರುವುದು ಕಠಿಣವಾಗಿತ್ತು. ಹೀಗಾಗಿ, ಆತ ರಾಬಿನ್ ಖಂಡೇಲ್‌ವಾಲಾ ಸ್ನೇಹ ಬೆಳೆಸಿದ್ದ' ಎಂಬ ಸಂಗತಿಯೂ ಪಟ್ಟಿಯಲ್ಲಿದೆ.

'2017ರಿಂದ ಇದುವರೆಗೂ ರಾಬಿನ್ ಜೊತೆ ₹ 8 ಕೋಟಿ ವ್ಯವಹಾರ ಮಾಡಿರುವುದಾಗಿ ಶ್ರೀಕೃಷ್ಣ ಹೇಳಿಕೆ ನೀಡಿದ್ದಾನೆ. ಆದರೆ, ಅದಕ್ಕೂ ಹೆಚ್ಚಿನ ವಹಿವಾಟು ನಡೆದಿರುವ ಅನುಮಾನವಿದೆ.'

'ಕ್ಲೌಡ್' ವ್ಯವಸ್ಥೆಯಲ್ಲಿ ಶ್ರೀಕೃಷ್ಣನ ಖಾತೆ ಇದ್ದು, ಅದಕ್ಕೆ ಸಂಬಂಧಪಟ್ಟ 'ಪ್ರೈವೇಟ್ ಕೀಗಳು' ಆತನ ಬಳಿ ಇವೆ. ಅದನ್ನು ಬಳಸಿ ಬಿಟ್ ಕಾಯಿನ್ ವಾಪಸ್ ತರುವುದಾಗಿಯೂ ಶ್ರೀಕೃಷ್ಣ ಹೇಳಿಕೆಯಲ್ಲಿ ತಿಳಿಸಿದ್ದಾನೆ' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

ಮೊದಲ ಪರಿಚಯದಲ್ಲೇ 900 ಬಿಟಿಸಿ ವ್ಯವಹಾರ; 'ಪಶ್ಚಿಮ ಬಂಗಾಳದ ರಾಬಿನ್, ಕೊಲ್ಕತ್ತಾದ ಗೋಯೆಂಕಾ ಕಾಲೇಜಿನಲ್ಲಿ 2008ರಲ್ಲಿ ಬಿ.ಕಾಂ ಪದವಿ ಮುಗಿಸಿದ್ದ. ಲೆಕ್ಕ ಪರಿಶೋಧಕ (ಸಿ.ಎ) ಅರ್ಹತಾ ಪರೀಕ್ಷೆಗೆ ಸಿದ್ಧತೆ ನಡೆಸುತ್ತಲೇ ತಂದೆಯ ಅಕ್ಕಿ ಮಿಲ್ ಉಸ್ತುವಾರಿ ನೋಡಿಕೊಳ್ಳುತ್ತಿದ್ದ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಬಿಟ್ ಕಾಯಿನ್ ವ್ಯವಹಾರಕ್ಕೆ ಕೈ ಹಾಕಿದ್ದ ರಾಬಿನ್, ತನ್ನದೇ 'ರಾಬಿನ್ ಆನ್‌ಲೈನ್ ಸರ್ವಿಸಸ್' ಟ್ರೇಡಿಂಗ್ ಕಂಪನಿ ಆರಂಭಿಸಿದ್ದ. ಲೋಕಲ್ ಬಿಟ್ ಕಾಯಿನ್, ಪ್ಯಾಕ್ಸ್‌ಫುಲ್, ರೆಮಿಟಾನೊ, ಬಿನಾನ್ಸ್, ವಜಿರಕ್ಸ್, ಜೆಪ್ಪೈ ಹಾಗೂ ಇತರೆ ಜಾಲತಾಣಗಳ ಮೂಲಕ ಜನರನ್ನು ಸಂಪರ್ಕಿಸಿ ಬಿಟ್ ಕಾಯಿನ್ ಖರೀದಿ ಹಾಗೂ ಮಾರಾಟ ಮಾಡಲಾರಂಭಿಸಿದ್ದ.'

'ಲೋಕಲ್ ಬಿಟ್ ಕಾಯಿನ್ ಜಾಲತಾಣದ ಮೂಲಕ 2017ರಲ್ಲಿ ರಾಬಿನ್‌ಗೆ ಶ್ರೀಕೃಷ್ಣನ ಪರಿಚಯವಾಗಿತ್ತು. ತನ್ನ ಹೆಸರು 'ಡೇರಿಯಲ್ ಹಾರ್ಮನ್' ಎಂಬುದಾಗಿ ಶ್ರೀಕೃಷ್ಣ ಹೇಳಿಕೊಂಡಿದ್ದ. ತನ್ನ ಬಳಿ 900 ಬಿಟ್ ಕಾಯಿನ್ (2021ರ ನ. 2ರ ಮಾರುಕಟ್ಟೆ ಮೌಲ್ಯ ₹ 414.05 ಕೋಟಿ) ಇದ್ದು, ಅವುಗಳನ್ನು ಮಾರಾಟ ಮಾಡಿಸಿ ಕೊಡುವಂತೆ ವಿನಂತಿಸಿದ್ದ. ಅದಕ್ಕೆ ಒಪ್ಪಿದ್ದ ರಾಬಿನ್, ಹಂತ ಹಂತವಾಗಿ ಬಿಟ್ ಕಾಯಿನ್ ಮಾರಿ ಶ್ರೀಕೃಷ್ಣ ಹೇಳಿದ್ದ ಖಾತೆಗಳಿಗೆ ಹಣ ಜಮೆ ಮಾಡಿದ್ದ. ಅದಕ್ಕಾಗಿ ಕಮಿಷನ್ ಸಹ ಪಡೆದಿದ್ದ' ಎಂಬ ಸಂಗತಿಯೂ ಆರೋಪ ಪಟ್ಟಿಯಲ್ಲಿದೆ.

'2018ರಲ್ಲಿ ಶ್ರೀಕೃಷ್ಣನನ್ನು ಬೆಂಗಳೂರಿನಲ್ಲಿ ಭೇಟಿಯಾಗಿದ್ದ ರಾಬಿನ್, ಆತನ ಜೊತೆಯಲ್ಲೇ ಹೋಟೆಲೊಂದರಲ್ಲಿ ಮೂರು ದಿನ ವಾಸವಿದ್ದ. ತಾನೊಬ್ಬ ಅಂತರರಾಷ್ಟ್ರೀಯ ಹ್ಯಾಕರ್ ಎಂಬುದಾಗಿ ಹೇಳಿಕೊಂಡಿದ್ದ ಶ್ರೀಕೃಷ್ಣ, ತನ್ನ ಬಳಿ ಸಾಕಷ್ಟು ಬಿಟ್ ಕಾಯಿನ್ ಇರುವುದಾಗಿ ತಿಳಿಸಿದ್ದ. ಅದನ್ನು ಮಾರಿಸಿ ಕೊಟ್ಟರೆ ಹೆಚ್ಚು ಕಮಿಷನ್ ಕೊಡುವುದಾಗಿ ಭರವಸೆ ನೀಡಿದ್ದ. ಅದಾದ ನಂತರ, ಇಬ್ಬರ ನಡುವೆ ವ್ಯವಹಾರ ಜೋರಾಗಿತ್ತು. ಇಬ್ಬರೂ ವಿಕ್ಕರ್ ಹಾಗೂ ಮೆಸೆಂಜರ್ ಆ್ಯಪ್‌ನಲ್ಲಿ ಮಾತ್ರ ಚಾಟಿಂಗ್ ಮಾಡುತ್ತಿದ್ದರು. 'ರಾಬಿನ್ ನನ್ನ ಲೆಕ್ಕಾಧಿಕಾರಿ' ಎಂದೇ ಶ್ರೀಕೃಷ್ಣ ಬೇರೆಯವರಿಗೆ ಪರಿಚಯ ಮಾಡಿಕೊಡುತ್ತಿದ್ದ.'

'ಶ್ರೀಕೃಷ್ಣ ಸೂಚಿಸುತ್ತಿದ್ದ ಖಾತೆಗಳಿಗೆ ತನ್ನ ಖಾತೆಯಿಂದ ₹ 3.48 ಕೋಟಿ ಪಾವತಿಸಿದ್ದ ರಾಬಿನ್, ಹೈದರಾಬಾದ್‌ನ ಅಭಿಷೇಕ್ ಜೈನ್ ಎಂಬಾತನಿಂದ ₹ 4.98 ಕೋಟಿ (ಹವಾಲಾ ಮೂಲಕ) ಹಾಗೂ ಮುಂಬೈನ ಸುಮಿತ್ ಅಗರ್‌ವಾಲ್ ಎಂಬಾತನಿಂದ ₹ 20 ಲಕ್ಷ ಕೊಡಿಸಿದ್ದ. ಈ ಬಗ್ಗೆ ರಾಬಿನ್ ಹೇಳಿಕೆ ನೀಡಿದ್ದು, ಅದರಲ್ಲೂ ಸಾಕಷ್ಟು ಗೊಂದಲಗಳಿವೆ' ಎಂಬ ಅಂಶವನ್ನೂ ಆರೋಪ ಪಟ್ಟಿಯಲ್ಲಿ ದಾಖಲಿಸಲಾಗಿದೆ.

'ಹ್ಯಾಕಿಂಗ್ ಹಾಗೂ ಬಿಟ್ ಕಾಯಿನ್ ವ್ಯವಹಾರಕ್ಕಾಗಿ ಶ್ರೀಕೃಷ್ಣ, ಮ್ಯಾಕ್‌ಬುಕ್ ಪ್ರೊ ಲ್ಯಾಪ್‌ಟಾಪ್ ಬಳಸುತ್ತಿದ್ದ. ಅದು ಕೈಯಿಂದ ಜಾರಿಬಿದ್ದು ಒಡೆದು ಹೋಗಿತ್ತು. ನಂತರ, ರಾಬಿನ್ ಬಳಿಯ ಮ್ಯಾಕ್‌ಬುಕ್ ಪ್ರೊ ಲ್ಯಾಪ್‌ಟಾಪ್ ಅನ್ನು ಕೃತ್ಯಕ್ಕೆ ಬಳಸಲಾರಂಭಿಸಿದ್ದ' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'

'ಮೊಬೈಲ್ ಬಳಸಲ್ಲ, ಬ್ಯಾಂಕ್ ಖಾತೆಯೂ ಇಲ್ಲ'

'ತಂತ್ರಜ್ಞಾನ ಬಳಕೆಯಲ್ಲಿ ಪರಿಣಿತನಾಗಿದ್ದ ಶ್ರೀಕೃಷ್ಣ, ಮೊಬೈಲ್ ಬಳಸುತ್ತಿರಲಿಲ್ಲ. ಯಾವ ಬ್ಯಾಂಕ್‌ನಲ್ಲೂ ಖಾತೆ ತೆರೆದಿರಲಿಲ್ಲ. ತನ್ನ ಬಗ್ಗೆ ಪೊಲೀಸರಿಗೆ ಸುಳಿವು ಸಿಗಬಾರದೆಂದು ಆತ ಈ ರೀತಿ ಮಾಡುತ್ತಿದ್ದ' ಎಂಬ ಸಂಗತಿಯೂ ಪಟ್ಟಿಯಲ್ಲಿದೆ.

'ಪರಿಚಯಸ್ಥರು ಹಾಗೂ ಸ್ನೇಹಿತರ ಬ್ಯಾಂಕ್ ಖಾತೆ ವಿವರವನ್ನು ತನ್ನ ಬಳಿ ಇಟ್ಟುಕೊಂಡಿದ್ದ. ಬಿಟ್ ಕಾಯಿನ್ ಮಾರಾಟದಿಂದ ಬರುತ್ತಿದ್ದ ಹಣವನ್ನು ಅದೇ ಖಾತೆಗಳಿಗೆ ಜಮೆ ಮಾಡಿಸುತ್ತಿದ್ದ. ನಂತರ, ಅವರಿಂದ ಕೇಳಿ ಹಣ ಪಡೆದುಕೊಳ್ಳುತ್ತಿದ್ದ' ಎಂದೂ ಹೇಳಲಾಗಿದೆ.

ಹೆಸರು ಬಹಿರಂಗಕ್ಕೆ ಆಗ್ರಹ

'ಬಿಟ್ ಕಾಯಿನ್ ಪ್ರಕರಣದಲ್ಲಿ ರಾಜಕೀಯ ನಾಯಕರೂ ಶಾಮೀಲಾಗಿದ್ದಾರೆ ಎಂಬ ಮಾಹಿತಿ ಇದೆ. ಕಾಂಗ್ರೆಸ್, ಬಿಜೆಪಿ ಯಾವುದೇ ಪಕ್ಷದವರು ಭಾಗಿಯಾಗಿದ್ದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಹಿರಂಗಪಡಿಸಲಿ. ಸತ್ಯ ಜನರಿಗೆ ಗೊತ್ತಾಗಲಿ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

'ನಾನು ತನಿಖಾ ಸಂಸ್ಥೆಗೆ ಸಾಕ್ಷಿ ಕೊಡುವುದಾದರೆ ತನಿಖೆ ಏಕೆ ಬೇಕು? ಕಾನೂನುಬಾಹಿರ ಕೃತ್ಯ ನಡೆಯದೇ ಇದ್ದರೆ ಪ್ರಕರಣದ ತನಿಖೆಯನ್ನು ಮುಖ್ಯಮಂತ್ರಿಯವರು ಜಾರಿ ನಿರ್ದೇಶನಾಲಯಕ್ಕೆ ವಹಿಸಿದ್ದು ಏಕೆ? ತನಿಖೆ ನಡೆಯುತ್ತಿರುವುದು ಏಕೆ' ಎಂದು ಪ್ರಶ್ನಿಸಿದರು.

ರಾಬಿನ್ ಹಣ ನೀಡಿದ್ದ ಪ್ರಮುಖರ ವಿವರ (₹ ಲಕ್ಷಗಳಲ್ಲಿ)	
ಎವಿಎಸ್ ಚೈತನ್ಯ	4.82
ಆಕಾಶ್ ವಿನೋದ್	5.98
ಹಿಮಾಲಯಾಸ್ ಆನಂದ್	2.36
ಭಾರ್ಗವ್	7.57
ಚೇತನ್ ಸುರೇಶ್	4.30
ಚಿಪ್ಸನ್ ಅವಿಯೇಷನ್ ಪ್ರೈ.ಲಿ	11.00
ಕೊರ್ಗಾ ಟ್ರೇಡ್ ಲಿಂಕ್ಸ್	2.50
ಫ್ರೆಂಡ್ಲಿ ಆಟೊಮೋಟಿವ್ ಪ್ರೈ.ಲಿ	45.00
ಸಿ.ಯು. ಗಣಪತಿ	3.20
ಐಟಿಸಿ ಲಿ.	8.84
ಕರಣ್ ದಿಲೀಪ್	18.03
ಡಿ.ಕೆ. ಮನೀಶ್	2.73
ಎಂ. ಸುಪ್ರಿಯಾ	3.03
ನಫಿ ಮೊಹಮ್ಮದ್ ನಾಸೀರ್	26.72 ಕೋಟಿ
ನರೇಶ್ ಮಾತ್ರೆ	4.00
ಒರ್ಕಾ ಸೈಲ್ ಬೋಟ್ ಪ್ರೈ.ಲಿ	10.00
ಪ್ರಸಿದ್ಧ ಶೆಟ್ಟಿ	6.50
ಸಿದ್ಧಾರ್ಥ್ ರಾಮ್	6.02
ಎಲ್. ವಿಜಯ್	10.00
ಮಿಸ್ಕ್ ಅಕೌಂಟ್	59.14
ಕೆರೇಸ್ ಹೋಟೆಲ್	10.00
ಡೆಲ್ಟಾ ಗ್ರೂಪ್	25.00
ಇಂಡಿಯನ್ ಹೋಟೆಲ್	4.85
ನಿತೀನ್ ಜಯಕುಮಾರ್	12.60
ಸುನೀಶ್	5.00

ನೊಂದವರ ಘನತೆ ರಕ್ಷಿಸಿ: 'ಸುಪ್ರೀಂ'

ನವದೆಹಲಿ: 'ರಸ್ತೆ ಅಪಘಾತದಿಂದ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗುವ ಸಂತ್ರಸ್ತನ ಬದುಕಿನಲ್ಲಿ ಘನತೆ ಕಾಪಾಡಿಕೊಳ್ಳಲು ನೆರವಾಗುವ ನಿಟ್ಟಿನಲ್ಲಿ ಕೋರ್ಟ್‌ಗಳು ಪ್ರಾಮಾಣಿಕವಾಗಿ ಯತ್ನಿಸಿ, 'ಪರಿಹಾರಕ್ಕೆ ಆದೇಶಿಸಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇಂಥ ಪ್ರಯತ್ನಗಳು ಸಂತ್ರಸ್ತನ ನೋವು ನಿವಾರಿಸಬೇಕು. ವಾಸ್ತವಿಕ ಸಂಗತಿಗಳನ್ನು ಆಧರಿಸಿ ಅವರ ಅಗತ್ಯಗಳಿಗೆ ಸ್ಪಂದಿಸುವಂತಿರಬೇಕು ಎಂದೂ ನ್ಯಾಯಮೂರ್ತಿಗಳಾದ ಆರ್. ಸುಭಾಷ್ ರೆಡ್ಡಿ ಮತ್ತು ಹೃಷಿಕೇಷ್ ರಾಯ್ ಅವರಿದ್ದ ಪೀಠವು ಹೇಳಿದೆ.

ಆರೋಗ್ಯಕರ ವ್ಯಕ್ತಿಯು ಅಂಗವಿಕಲತೆಗೆ ಗುರಿಯಾದಾಗ ಸಹಜ ಒಡನಾಟ ಕಳೆದುಕೊಳ್ಳುತ್ತಾರೆ. ಇದು, ಘನತೆಗೆ ಧಕ್ಕೆ ತರಲಿದೆ. ಇಂಥ ಬೆಳವಣಿಗೆಯನ್ನು ಚಾರ್ಲ್ಸ್ ಡಿಕನ್ಸ್ ಅವರ 'ಪ್ಲೀಸ್ ಸರ್, ಐ ವಾಂಟ್ ಸಮ್ ಮೋರ್' ಕೃತಿಯ ಪಾತ್ರಧಾರಿಯಂತೆ ನೋಡಬಾರದು ಎಂದು ಪೀಠವು ಅಭಿಪ್ರಾಯಪಟ್ಟಿತು.

ಅಪಘಾತದಲ್ಲಿ ಪೂರ್ಣ ಅಂಗವಿಕಲರಾಗಿದ್ದ ಕೇರಳದ ಜಿತೇಂದ್ರನ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ಪರಿಗಣಿಸಿತು. ಕೇರಳ ಹೈಕೋರ್ಟ್ ಪರಿಹಾರದ ಮೊತ್ತವನ್ನು ₹ 14.31 ಲಕ್ಷದಿಂದ ₹ 27.67ಲಕ್ಷಕ್ಕೆ ಹೆಚ್ಚಿಸಿ ಆದೇಶಿಸಿತ್ತು. 2001ರಲ್ಲಿ ವೇಗವಾಗಿ ಬಂದಿದ್ದ ಕಾರು ಡಿಕ್ಕಿ ಹೊಡೆದಿದ್ದು, ಇವರು ವಾಹನದ ಹಿಂಬದಿ ಸವಾರರಾಗಿದ್ದರು. ಅಪಘಾತ ನಡೆದಾಗ 21 ವರ್ಷದವರಾಗಿದ್ದ ಇವರು ಜ್ಯುವೆಲ್ಲರಿ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದು, ಮಾಸಿಕ ₹ 4,500 ಗಳಿಸುತ್ತಿದ್ದರು.

ನೊಂದವರು ಹೆಚ್ಚಿನ ಪರಿಹಾರ ಕೋರುವುದು ಅತಿಶಯೋಕ್ತಿಯಲ್ಲ. ಎಂದು ಪೀಠವು ಅಭಿಪ್ರಾಯಪಟ್ಟಿತು.

ಅಜಿತ್‌ಗೆ ಸೇರಿದ ₹1,400 ಕೋಟಿ ಆಸ್ತಿ ಜಪ್ತಿ

ಒಂದನೇ ಪುಟದಿಂದ

ಅಜಿತ್ ಪವಾರ್

ಮುಂಬೈ, ನವದೆಹಲಿ, ಗೋವಾ, ಪುಣೆ ಸೇರಿ 24ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಧಿಕಾರಿಗಳು ದಾಳಿ ನಡೆಸಿದ್ದರು.

1988ರ ಬೇನಾಮಿ ಆಸ್ತಿ ವಹಿವಾಟು ಕಾಯ್ದೆ ಅಡಿಯಲ್ಲಿ, ಪವಾರ್ ಅವರ ಪುತ್ರ ಪಾರ್ಥ ಸೇರಿದಂತೆ, ಪವಾರ್ ಕುಟುಂಬದವರ ಈ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಆದಾಯ ತೆರಿಗೆ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಬೆಳವಣಿಗೆಯು, ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ್ ಅಘಾಡಿಗೆ ದಿಗಿಲು ಮೂಡಿಸಿದೆ.

ಮುಂಬೈನ ನರಿಮನ್ ಪಾಯಿಂಟ್ ಬಳಿ ಇರುವ ನಿರ್ಮಲ್ ಟವರ್ (₹25 ಕೋಟಿ), ಜರಂದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ (₹600 ಕೋಟಿ), ದಕ್ಷಿಣ ದೆಹಲಿಯಲ್ಲಿರುವ ಫ್ಲ್ಯಾಟ್ (₹20 ಕೋಟಿ), ಗೋವಾದಲ್ಲಿನ ಒಂದು ರೆಸಾರ್ಟ್ (₹250 ಕೋಟಿ) ಸೇರಿ, ಸದ್ಯಕ್ಕೆ ಐದು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ನಿರ್ಮಲ್ ಟವರ್, ಅಜಿತ್ ಪವಾರ್ ಅವರ ಮಗ ಪಾರ್ಥ ಪವಾರ್ ಅವರಿಗೆ ಸೇರಿದ್ದು. ಈ ಎಲ್ಲ ಆಸ್ತಿಯನ್ನು ದಾಖಲೆ ಇಲ್ಲದ ಹಣದಿಂದ ಖರೀದಿಸಿಲ್ಲ ಎಂಬುದನ್ನು ಸಾಬೀತುಪಡಿಸಲು, ಆದಾಯ ತೆರಿಗೆ ಅಧಿಕಾರಿಗಳು 90 ದಿನಗಳ ಅವಕಾಶ ನೀಡಿದ್ದಾರೆ.

'ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಅಜಿತ್ ಪವಾರ್ ಮಗ ಪಾರ್ಥ ಪವಾರ್, ಪತ್ನಿ, ತಾಯಿ, ಸೋದರಿಯರು ಹಾಗೂ ಅವರ ಗಂಡನ ಮನೆಯವರ ಅನಧಿಕೃತ ಆಸ್ತಿ ಜಪ್ತಿ ಮಾಡಿದ್ದಾರೆ' ಎಂದು ಮಹಾವಿಕಾಸ್ ಅಘಾಡಿ ವಿರುದ್ಧ ಕಿಡಿ ಕಾರುತ್ತಲೇ ಇರುವ ಬಿಜೆಪಿ ನಾಯಕ ಕಿರೀಟ್ ಸೋಮಯ ಟ್ವೀಟ್ ಮಾಡಿದ್ದಾರೆ.

ಎನ್‌ಸಿಪಿ ವಕ್ತಾರ ಮತ್ತು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲಿಕ್ ಅವರು ಇದಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ. 'ಸಂಬಂಧಿಕರ ಆಸ್ತಿಯನ್ನೂ ಪವಾರ್ ಅವರ ಆಸ್ತಿ ಎಂದು ಹೇಳುತ್ತಿರುವುದು ಸರಿಯಲ್ಲ. ಮಹಾವಿಕಾಸ್ ಅಘಾಡಿ ಹಾಗೂ ಅದರ ನಾಯಕರನ್ನು ಗುರಿಯಾಗಿಸಿಕೊಂಡು ಈ ಕೆಲಸ ನಡೆಯುತ್ತಿದೆ' ಎಂದಿದ್ದಾರೆ.

ಕಳೆದ ತಿಂಗಳು, ಪವಾರ್ ಅವರ ಸೋದರಿಯರ ಮನೆ ಹಾಗೂ ಕಂಪನಿಗಳ ಮೇಲೆ ದಾಳಿ ನಡೆಸಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ದಾಖಲೆ ಇಲ್ಲದ ₹ 184 ಕೋಟಿ ಮುಟ್ಟುಗೋಲು ಹಾಕಿಕೊಂಡಿದ್ದರು.

ಅನಿಲ್ ದೇಶಮುಖ್ ಇ.ಡಿ ವಶಕ್ಕೆ

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾದ, ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರನ್ನು ಇದೇ 6ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ಒಪ್ಪಿಸಲಾಗಿದೆ.

ಪೊಲೀಸ್ ಇಲಾಖೆಯಲ್ಲಿ ಪ್ರತಿ ತಿಂಗಳು ₹ 100 ಕೋಟಿ ಲಂಚ ವಸೂಲಿ ಹಾಗೂ ಅಧಿಕಾರ ದುರ್ಬಳಕೆ ಆರೋಪದಲ್ಲಿ, ದೇಶಮುಖ್ ಅವರನ್ನು ಇ.ಡಿ ಸೋಮವಾರ ತಡರಾತ್ರಿ ಬಂಧಿಸಿತ್ತು. ರಜಾಕಾಲದ ನ್ಯಾಯಾಲಯದ ಮುಂದೆ ಮಂಗಳವಾರ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 14 ದಿನಗಳವರೆಗೆ ತನ್ನ ವಶಕ್ಕೆ ನೀಡುವಂತೆ ಮನವಿ ಮಾಡಿತ್ತು. ಆದರೆ, ನ್ಯಾಯಾಲಯವು ಐದು ದಿನಗಳವರೆಗೆ ಇ.ಡಿ ವಶಕ್ಕೆ ನೀಡಿ ಆದೇಶಿಸಿತು.

ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್‌ಬೀರ್ ಸಿಂಗ್ ಅವರು ದೇಶಮುಖ್ ವಿರುದ್ಧ ₹ 100 ಕೋಟಿ ಹಫ್ತಾ ಪಡೆದ ಆರೋಪ ಮಾಡಿದ್ದರು. ಆ ನಂತರದಲ್ಲಿ, ದೇಶಮುಖ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ದೇಶಮುಖ್ ಬಂಧನವನ್ನು ರಾಜಕೀಯ ಪ್ರೇರಿತ ಎಂದಿರುವ ಮಹಾ ವಿಕಾಸ್ ಅಘಾಡಿಯ ನಾಯಕರು, ತನ್ನನ್ನು ವಿರೋಧಿಸುವ ಈ ಮೈತ್ರಿಕೂಟ ಅಸ್ಥಿರಗೊಳಿಸುವುದಕ್ಕಾಗಿ ಬಿಜೆಪಿ ಇಂಥ ಕೃತ್ಯಕ್ಕೆ ಮುಂದಾಗಿದೆ ಎಂದಿದ್ದಾರೆ. ಸಿಂಗ್ ಎಲ್ಲಿದ್ದಾರೆ ಎಂಬುದನ್ನು ಬಿಜೆಪಿ ಹೇಳಲಿ ಎಂದೂ ಆಗ್ರಹಿಸಿದ್ದಾರೆ.

बहु माध्यम

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ ಸಂಜೆ 4 ಝುಣ ಝುಣ ಕಾಂಚಾಣ

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಉಪಚುನಾವಣೆ ಫಲಿತಾಂಶ: ಬಿಜೆಪಿಗೆ ಎಚ್ಚರಿಕೆ ಗಂಟೆಯೆ?
ಭಾಗವಹಿಸುವವರು:
ಆರ್. ಧ್ರುವನಾರಾಯಣ, ಕೆಪಿಸಿಸಿ ಕಾರ್ಯಾಧ್ಯಕ್ಷ.
ಅಶ್ವತ್ಥನಾರಾಯಣ ಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ.
ನಜ್ಮಾ ನಜೀರ್ ಚಿಕ್ಕನೇರಳೆ, ಜೆಡಿಎಸ್ ರಾಜ್ಯ ಸಮಿತಿ ವೀಕ್ಷಕಿ.
ರವೀಂದ್ರ ರೇಷ್ಮೆ, ಹಿರಿಯ ಪತ್ರಕರ್ತ

ಸಂವಾದ ಬೆಳಿಗ್ಗೆ 11ರಿಂದ 12

'ಕೋವಿಡ್ ಲಸಿಕೆಯಿಂದ 2 ವರ್ಗದ ನಾಗರಿಕರ ಸೃಷ್ಟಿ'

ಕೊಚ್ಚಿ (ಪಿಟಿಐ): 'ಕೇಂದ್ರದ ಲಸಿಕಾ ಯೋಜನೆಯು ದೇಶದಲ್ಲಿ ಎರಡು ವರ್ಗದ ನಾಗರಿಕರನ್ನು ಸೃಷ್ಟಿಸಿದೆ. ಒಂದು ವರ್ಗ ಕೋವ್ಯಾಕ್ಸಿನ್ ಪಡೆದವರು, ಅವರ ಚಲನವಲನ ನಿರ್ಬಂಧಿಸಲಾಗಿದೆ. ಇನ್ನೊಂದು ವರ್ಗ ಕೋವಿಶೀಲ್ಡ್ ಪಡೆದವರು, ಇವರು ಎಲ್ಲಿ ಬೇಕಾದರೂ ಹೋಗಬಹುದು' ಎಂದು ಕೇರಳ ಹೈಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದೆ.

ಕೆಲಸಕ್ಕಾಗಿ ವಿದೇಶಕ್ಕೆ ತೆರಳಲು ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಲಸಿಕೆಯ ಮೂರನೇ ಡೋಸ್ ಪಡೆಯಲು ಅವಕಾಶ ನೀಡುವಂತೆ ಕೋರಿ ವ್ಯಕ್ತಿಯೊಬ್ಬರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಪಿ.ವಿ. ಕುಂಞಿಕೃಷ್ಣನ್ ವಿಚಾರಣೆ ನಡೆಸಿದರು.

ಸೌದಿ ಅರೇಬಿಯಾದಲ್ಲಿ ವೆಲ್ಡರ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಹಾಕಿಸಿಕೊಂಡಿರುವ ಎರಡು ಡೋಸ್ ಕೋವ್ಯಾಕ್ಸಿನ್ ಲಸಿಕೆಯನ್ನು ಗಲ್ಫ್ ರಾಷ್ಟ್ರದಲ್ಲಿ ಪರಿಗಣಿಸುತ್ತಿಲ್ಲ. ಅಂತರರಾಷ್ಟ್ರೀಯ ಮಾನ್ಯತೆಯ ಲಸಿಕೆ ಹಾಕಿಸಿಕೊಳ್ಳದೆ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಹಾಗಾಗಿ ಅವರು ಅಲ್ಲಿ ತಮ್ಮ ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದು, ಮೂರನೇ ಡೋಸ್ ಲಸಿಕೆ ಪಡೆಯಲು ನ್ಯಾಯಾಲಯದ ಮೊರೆ ಹೋಗಿದ್ದಾರೆ.

'ಸರ್ಕಾರದ ಲಸಿಕೆಯಿಂದ ನಾಗರಿಕರು ಬಳಲುತ್ತಿದ್ದಾರೆ. ಎರಡು ವರ್ಗದ ನಾಗರಿಕರ ಸೃಷ್ಟಿಯು ಅರ್ಜಿದಾರರ ಮೂಲಭೂತ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯ ಪ್ರಕರಣವಾಗಿದೆ' ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

'ಅರ್ಜಿದಾರರಿಗೆ ಮೂರನೇ ಡೋಸ್ ಲಸಿಕೆ ನೀಡಬೇಕೆಂದು ತಾನು ಆದೇಶಿಸುವುದಿಲ್ಲ. ಆದರೆ, ಒಂದು ತಿಂಗಳೊಳಗೆ ಅವರ ಕುಂದುಕೊರತೆಗಳನ್ನು ಪರಿಹರಿಸಲು ಕೇಂದ್ರಕ್ಕೆ ನಿರ್ದೇಶಿಸುತ್ತೇನೆ' ಎಂದು ನ್ಯಾಯಮೂರ್ತಿಗಳು ಹೇಳಿದರು.

'ಕೇಂದ್ರವು ನಿರ್ಧಾರ ತೆಗೆದುಕೊಳ್ಳಲು ಹೆಚ್ಚಿನ ಸಮಯ ಬಯಸಿದರೆ, ಅರ್ಜಿದಾರರಿಗೆ ವಿದೇಶದಲ್ಲಿ ಕೆಲಸ ಮಾಡುವಾಗ ಸಂಬಳವಾಗಿ ಪಡೆಯುತ್ತಿದ್ದ ಮೊತ್ತವನ್ನು ಪಾವತಿಸಲು ನಿರ್ದೇಶನ ನೀಡಬೇಕಾಗುತ್ತದೆ. ನ್ಯಾಯಾಲಯವು ಕೇವಲ ಪ್ರೇಕ್ಷಕರಂತೆ ಕುಳಿತುಕೊಳ್ಳಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿಗಳು ಎಚ್ಚರಿಕೆ ನೀಡಿದ್ದಾರೆ.

ಕೋರ್ಟ್ ಅಭಿಪ್ರಾಯದ ಬಗ್ಗೆ ಕೇಂದ್ರದ ಪ್ರತಿಕ್ರಿಯೆ ಸಲ್ಲಿಸಲು ನ್ಯಾಯಾಲಯವು ನ.5ರಂದು ವಿಷಯ ಪಟ್ಟಿ ಮಾಡಿದೆ. ವಿಚಾರಣೆಯ ಸಂದರ್ಭದಲ್ಲಿ, ಕೇಂದ್ರವು ನ್ಯಾಯಾಲಯಕ್ಕೆ ಇದೇ ರೀತಿಯ ವಿಷಯವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಈ ವಿಷಯದ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ನಿರ್ಧಾರಕ್ಕಾಗಿ ಕಾಯುತ್ತಿರುವುದಾಗಿ ಹೇಳಿದೆ.

ಕೋವಿಡ್ ಲಸಿಕೆಯ ಮೂರನೇ ಡೋಸ್ ಪರಿಣಾಮಕಾರಿತ್ವ ಖಚಿತಪಡಿಸಿಕೊಳ್ಳಲು ಕ್ಲಿನಿಕಲ್ ಪ್ರಯೋಗಗಳು ನಡೆಯುತ್ತಿವೆ. ಇದು ಪೂರ್ಣಗೊಳ್ಳಲು ಹಲವು ತಿಂಗಳುಗಳು ಬೇಕಾಗುತ್ತದೆ ಎಂದು ಕೇಂದ್ರವು ಆಗಸ್ಟ್‌ನಲ್ಲಿ ಹೇಳಿತ್ತು.

ದೀಪಾವಳಿ

ಭೋಪಾಲ್‌ನಲ್ಲಿ ದೀಪಾವಳಿ ಹಬ್ಬಕ್ಕೆ ಮುನ್ನ ಬಿಜೆಪಿ ಕಾರ್ಯಕರ್ತರು ಹುತಾತ್ಮ ಯೋಧರ ಸ್ಮರಣಾರ್ಥ ಮಂಗಳವಾರ ದೀಪ ಬೆಳಗಿಸಿದರು — ಪಿಟಿಐ ಚಿತ್ರ

ಪಟಾಕಿ: ಆಸಕ್ತಿ ಕುಗ್ಗಿಸಿದ ಕೋವಿಡ್

ನವದೆಹಲಿ (ಪಿಟಿಐ): ಈ ಬಾರಿ ದೀಪಾವಳಿಯಲ್ಲಿ ಶಬ್ದದ ಅಬ್ಬರ ಹೆಚ್ಚಾಗಿ ಇರುವುದಿಲ್ಲ. ಪರಿಸರ ಮಾಲಿನ್ಯ, ಪಟಾಕಿ ಮಾರಾಟದ ಮೇಲೆ ಹೇರಿರುವ ನಿರ್ಬಂಧ ಸೇರಿದಂತೆ ವಿವಿಧ ಕಾರಣಗಳಿಗೆ ಮೂರರಲ್ಲಿ ಎರಡು ಕುಟುಂಬ ಪಟಾಕಿ ಸುಡುವ ಚಿಂತನೆಯನ್ನೇ ಮಾಡಿಲ್ಲ. ಸಾಮಾಜಿಕ ಜಾಲತಾಣದಲ್ಲಿ ನಡೆದ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಕುಟುಂಬಗಳಲ್ಲಿ ಪಟಾಕಿಗಳ ಮಾರಾಟದ ಮೇಲೆ ಹೇರಿರುವ ಕೆಲವೊಂದು ನಿರ್ಬಂಧಕ್ಕೆ ಶೇ 42ರಷ್ಟು ಬೆಂಬಲ ವ್ಯಕ್ತಪಡಿಸಿದ್ದರೆ, ಶೇ 53ರಷ್ಟು ಕುಟುಂಬಗಳು ನಿರ್ಬಂಧದ ಪರವಾಗಿ ಇಲ್ಲ. ಸಮುದಾಯ ಜಾಲತಾಣ 'ಲೋಕಲ್ ಸರ್ಕಲ್' ದೇಶದ ವಿವಿಧ ಜಿಲ್ಲೆಗಳಲ್ಲಿ ಈ ಸಮೀಕ್ಷೆಯನ್ನು ನಡೆಸಿತ್ತು.

ಪಟಾಕಿಯಿಂದ ಪರಿಸರ ಮಾಲಿನ್ಯವಾಗಲಿದೆ. ಇದೊಂದು ದುಂದುವೆಚ್ಚ ಎಂದು ಬಹುತೇಕ ಕುಟುಂಬಗಳು ಭಾವಿಸಿವೆ ಎಂದು ಸಮೀಕ್ಷೆ ನಡೆಸಿದ ಸಂಸ್ಥೆ ತಿಳಿಸಿದೆ.

ಅಗಲಿದ 'ಅಪ್ಪು'ವಿಗೆ ಹಾಲು, ತುಪ್ಪ ಅರ್ಪಣೆ

ಒಂದನೇ ಪುಟದಿಂದ

ಸಮಾಧಿ ಸ್ಥಳದ ಷೆಡ್ ಮಧ್ಯೆ ಹೂವಿನ ಮಂಟಪ ನಿರ್ಮಿಸಿ ಪೂಜೆಗೆ ವ್ಯವಸ್ಥೆ ಮಾಡಲಾಗಿತ್ತು. ಸಮಾಧಿ ಮುಂಭಾಗದಲ್ಲಿ ಪುನೀತ್ ಅವರ ನಗುಮೊಗದ ಭಾವಚಿತ್ರ ಅವರ ನೆನಪನ್ನು ಮರುಕಳಿಸಿ ಅಲ್ಲಿ ಸೇರಿದ್ದವರ ಕಣ್ಣಾಲಿಗಳು ತುಂಬುವಂತೆ ಮಾಡಿತ್ತು.

ಸಮಾಧಿಯ ಮೇಲೆ ನೆಟ್ಟ ತುಳಸಿ ಗಿಡ ಪುನೀತ್ ಅವರ ಅಮರತ್ವವನ್ನು ಸಂಕೇತಿಸುತ್ತಿತ್ತು. ಸಮಾಧಿಯ ಮೇಲ್ಭಾಗವನ್ನು ಹೂವುಗಳಿಂದ ಅಲಂಕರಿಸಲಾಗಿತ್ತು. ಪೂಜೆಯ ವೇಳೆ ಪುನೀತ್ ಅವರಿಗೆ ಇಷ್ಟವಾದ ಖಾದ್ಯಗಳನ್ನು ನೈವೇದ್ಯವಾಗಿ ಅರ್ಪಿಸಲಾಯಿತು.

ಪುನೀತ್ ಪತ್ನಿ ಅಶ್ವಿನಿ, ಪುತ್ರಿಯರಾದ ಧೃತಿ, ವಂದಿತಾ, ಅಣ್ಣ ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಗೋವಿಂದರಾಜ್, ಲಕ್ಷ್ಮೀ, ಮಂಗಳಾ ರಾಘವೇಂದ್ರ ರಾಜ್‌ಕುಮಾರ್, ಮಧು ಬಂಗಾರಪ್ಪ, ವಿಜಯ್ ರಾಘವೇಂದ್ರ, ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಭಾವುಕರಾದ ಸಹೋದರರು: 'ಈ ನೋವಿಗೆ ಯಾವುದೇ ಔಷಧಿ ಇಲ್ಲ. ಇದರೊಂದಿಗೆ ಬದುಕಲು ಶಕ್ತಿ ಕೊಡು ಎಂದು ಪ್ರಾರ್ಥಿಸಬೇಕು ಅಷ್ಟೇ' ಎಂದು ಪುನೀತ್ ಸಹೋದರ, ನಟ ರಾಘವೇಂದ್ರ ರಾಜ್‌ಕುಮಾರ್ ಭಾವುಕರಾದರು.

'ನನ್ನ ತಮ್ಮನಿಗೆ 46 ವರ್ಷ ಮಾತ್ರ ಆ ದೇವರು ಸಮಯ ಕೊಟ್ಟಿದ್ದ. ಏನೇನು ಮಾಡಬೇಕೋ, ಅದೆಲ್ಲವನ್ನೂ 46 ವರ್ಷದ ಒಳಗೇ ಮುಗಿಸಿ, ಅಭಿಮಾನಿಗಳನ್ನು ಗೆದ್ದು ಹೊರಟರು. ಅವರ ಅವಧಿ ಮುಗಿಯಿತು. ಈ ನೋವನ್ನು ನಾವು ಮರೆಯಲು ಆಗದು' ಎಂದರು.

'ಅಪ್ಪು ನಮಗೆ ಹಾಲು ತುಪ್ಪ ಎರೆಯಬೇಕಿತ್ತು. ದೊಡ್ಡವರಾಗಿ ಈಗ ನಾವೇ ಅವನಿಗೆ ಆ ಕಾರ್ಯ ಮಾಡಬೇಕಾಗಿದೆ. ಪ್ರಪಂಚದಲ್ಲಿ ಯಾರಿಗೂ ಈ ನೋವು ಬರಬಾರದು' ಎಂದು ಶಿವರಾಜ್‌ಕುಮಾರ್ ಹೇಳಿದರು.

'ನಾವೆಷ್ಟು ನೋವು ಅನುಭವಿಸಿದ್ದೇವೋ, ಅಭಿಮಾನಿಗಳು ಅದಕ್ಕಿಂತ ಹತ್ತು ಪಟ್ಟು ಹೆಚ್ಚು ನೋವು ಅನುಭವಿಸಿದ್ದಾರೆ. ನಾವು ಯಾವ ಜನ್ಮದಲ್ಲಿ ಏನು ಪುಣ್ಯ ಮಾಡಿದ್ದೆವೋ ಏನೋ, ಅಪ್ಪಾಜಿ (ಡಾ.ರಾಜ್‌ಕುಮಾರ್) ನಮಗೆ ಅಷ್ಟು ಪ್ರೀತಿ ಗಳಿಸಿಕೊಟ್ಟು ಹೋಗಿದ್ದಾರೆ. ಅಪ್ಪು ಕೂಡ ಅಷ್ಟೇ ಪ್ರೀತಿ ಗಳಿಸಿ ಹೋಗಿದ್ದಾನೆ' ಎಂದರು.

'ಅಭಿಮಾನಿಗಳು ಯಾವುದೇ ಕಾರಣಕ್ಕೂ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳಬಾರದು. ಜೀವ ಅಮೂಲ್ಯ ಉಡುಗೊರೆ. ಅದನ್ನು ಕಳೆದುಕೊಳ್ಳಬೇಡಿ' ಎಂದು ಕೋರಿದರು.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.-05102021-230169
CG-DL-E-05102021-230169
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 3749] नई दिल्ली, सोमवार, मई 18, 2021/ज्येष्ठ 26, 1943
No.3749] NEW DELHI, TUESDAY, OCTOBER 18, 2021/ASVINA 26, 1943

ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
(ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ)

ಸಂ.ಎಲ್ ಎಕ್ಯೂ/ಎನ್ ಹೆಚ್–367/ರಾಹೆ/ಸಿಆರ್– /2021–22 ದಿನಾಂಕ : 18–10–2021

ಅಧಿಸೂಚನೆ
(ನವದೆಹಲಿ, ದಿನಾಂಕ : 18ನೇ ಅಕ್ಟೋಬರ್ 2021)

ಎಸ್.ಓ ನಂ. 1282(ಇ) ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿ ಇರುವ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದುಹೋಗುವ ರಾಷ್ಟ್ರೀಯ ಹೆದ್ದಾರಿ ನಂ–367 ರಲ್ಲಿ (ಬಾಣಾಪೂರ – ಗದ್ದನಕೇರಿ ಸೆಕ್ಷನ್) ಕಿ ಮೀ 39.95 ರಿಂದ ಕಿ ಮೀ 52.00 ರವರೆಗೆ ದ್ವಿಪಥ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುದು ಕಂಡುಬಂದಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956(1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂಮಾಲಿಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಉಳ್ಳವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ **ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.**

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿ ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನ ಸೌಧ, ಧಾರವಾಡ, 580001** ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ 3ಸಿ(2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಸಕ್ಷಮ ಪ್ರಾಧೀಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ : ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಅಭಿವೃದ್ಧಿಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ನಂ–367 ರಲ್ಲಿ (ಬಾಣಾಪೂರ –ಗದ್ದನಕೇರಿ ಸೆಕ್ಷನ್) ಕಿ ಮೀ 39.95 ರಿಂದ ಕಿ ಮೀ 52.00 ರವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ – ಇಪಿಸಿ ಮೋಡ್.

ರಾಜ್ಯ : ಕರ್ನಾಟಕ ಜಿಲ್ಲೆ : ಗದಗ

ಕ್ರಸಂ	ಸರ್ವೇ ನಂ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟೇರಗಳಲ್ಲಿ)
1	2	3	4	5	6
ತಾಲೂಕ : ಗಜೇಂದ್ರಗಡ			ಗ್ರಾಮ : ಉಣಚಗೇರಿ		
1	102	ಖಾಸಗಿ	ಖುಷ್ಕಿ	5,139.0800000	0.5139080
2	137/1	ಖಾಸಗಿ	ಖುಷ್ಕಿ	164.0500000	0.0164050
3	137/4	ಖಾಸಗಿ	ಖುಷ್ಕಿ	654.6900000	0.0654690
4	138	ಖಾಸಗಿ	ಖುಷ್ಕಿ	503.8200000	0.0503820
5	139/1	ಖಾಸಗಿ	ಖುಷ್ಕಿ	410.2200000	0.0410220
6	159	ಖಾಸಗಿ	ಖುಷ್ಕಿ	3,151,5200000	0.3151520
7	2/13	ಖಾಸಗಿ	ಖುಷ್ಕಿ	26.0000000	0.0026000
8	2/14	ಖಾಸಗಿ	ಖುಷ್ಕಿ	237.1500000	0.0237150
9	2/5	ಖಾಸಗಿ	ಖುಷ್ಕಿ	101.1700000	0.0101170
10	2/8	ಖಾಸಗಿ	ಖುಷ್ಕಿ	76.0000000	0.0076000
11	2/9	ಖಾಸಗಿ	ಖುಷ್ಕಿ	118.2800000	0.0118280
12	20	ಖಾಸಗಿ	ಖುಷ್ಕಿ	738.9700000	0.0738970
13	22	ಖಾಸಗಿ	ಖುಷ್ಕಿ	4,459.7500000	0.4459750
14	34	ಖಾಸಗಿ	ಖುಷ್ಕಿ	1,335.1200000	0.1335120
15	36	ಖಾಸಗಿ	ಖುಷ್ಕಿ	410.97000000	0.0410970
16	94	ಖಾಸಗಿ	ಖುಷ್ಕಿ	230.06900000	0.0230690
17	96	ಖಾಸಗಿ	ಖುಷ್ಕಿ	3,004.5400000	0.3004540
18	97	ಖಾಸಗಿ	ಖುಷ್ಕಿ	1,152.1700000	0.1152170
			ಒಟ್ಟು	21,914.1900 ಚದರ ಮೀಟರಗಳು	2.1914 ಹೆಕ್ಟರಗಳು

[F. No. NH-12014/29/2014-KNT-(P-6)/3A]
ಸಹಿ/– ರಾಜೇಶ ಗುಪ್ತಾ, ನಿರ್ದೇಶಕರು,
ವಿಶೇಷ ಭೂಸ್ವಾಧೀನಾಧಿಕಾರಿಗಳ ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ.
ವಾ.ಸಾ.ಇ./ಗದಗ/354/2021–22/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಸಂ.: ಕರಾಸ/ಕೇಕ/ಸಾಸಂಅ/549/2021–22 ದಿನಾಂಕ: 02.11.2021

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ : 05, ದಿನಾಂಕ :02.11.2021

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪೂರ್ವ ಅರ್ಹತೆ ಮತ್ತು ವಾಣಿಜ್ಯ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ ವಿವರ	ಟೆಂಡರ್‌ನ ಮೊತ್ತ ಲಕ್ಷ ರೂ.ಗಳಲ್ಲಿ (ಅಂದಾಜು)	ಟೆಂಡರು ಸಲ್ಲಿಸಲು ಕೊನೆಯ ದಿನಾಂಕ & ವೇಳೆ @ 17.00 ಗಂಟೆ
ಜಿ–27/21–22	ಕ್ರೀಮ್ ವೋವ್ ಪೇಪರ್‌ಗಳ ಖರೀದಿ	420.00	02.12.2021
ಜಿ–28/21–22	ಜಂಬೋ ಥರ್ಮಲ್ ರೋಲ್‌ಗಳ ಖರೀದಿ	320.00	02.12.2021
ಜಿ–29/21–22	ಸೆಲ್ಫ್ ಅಡೆಸಿವ್ ಪ್ಲಾಸ್ಟಿಕ್ ಪೇಲ್ಟ್‌ಗಳ ಖರೀದಿ	250.00	02.12.2021
ಜಿ–30/21–22	ಆಟೋಮೋಟಿವ್ ಕೇಬಲ್‌ಗಳ ಖರೀದಿ	150.00	02.12.2021
ಜಿ–31/21–22	ಅಲ್ಯೂಮಿನಿಯಂ ಪಾಪ್ ರಿವೆಟ್‌ಗಳ ಖರೀದಿ	90.00	02.12.2021
ಎ–14/21–22	ಪಿಸ್ಟನ್ ಅಸೆಂಬ್ಲಿ ಮತ್ತು ರಿಂಗ್ ಸೆಟ್ಸ್‌ಗಳ ಖರೀದಿ	400.00	02.12.2021
ಎ–15/21–22	ಯು ಬೋಲ್ಟ್– ಸೆಂಟರ್ ಬೋಲ್ಟ್ & ಸ್ಪ್ರಿಂಗ್ ಕ್ಲಾಂಪ್ಸ್‌ಗಳ ಖರೀದಿ	300.00	02.12.2021
ಎ–16/21–22	ಶಾಕಲ್ ಪಿನ್‌ಗಳು ಮತ್ತು ಬುಷಸ್‌ಗಳ ಖರೀದಿ	250.00	02.12.2021
ಎ–17/21–22	ಸಿಲಿಂಡರ್ ಲೈನರ್ಸ್‌ಗಳ ಖರೀದಿ	100.00	02.12.2021
ಅಲ್ಪಾವಧಿ ಟೆಂಡರ್‌ಗಳು			
ಜಿ–32/21–22	ಪ್ರಿಕ್ಯೂರ್ಡ್ ಟ್ರೆಡ್ ರಬ್ಬರ್ ಮತ್ತು ಪೂರಕ ಸಾಮಗ್ರಿಗಳ ಖರೀದಿ	3000.00	15.11.2021
ಜಿ–33/21–22	ಲಿಕ್ವಿಡ್ ಯೂರಿಯಾ ಖರೀದಿ	500.00	11.11.2021
ಜಿ–34/21–22	235-75R-17.5", 16PR/14PR ಟ್ಯೂಬ್‌ಲೆಸ್ ಟೈರ್ಸ್ ಮತ್ತು 9.00x20 ರೇಡಿಯಲ್ ಟೈರ್ಸ್ ಟ್ಯೂಬ್ಸ್ ಮತ್ತು ಫ್ಲಾಪ್ಸ್ ಖರೀದಿ	450.00	11.11.2021
ಜಿ–35/21–22	ಎಂ ಎಸ್ ವೆಲ್ಡಿಂಗ್ ಎಲೆಕ್ಟ್ರೋಡ್ಸ್ & ಸಿ ಒ 2 ಎಂ ಐ ಜಿ ಕಾಯ್ಲ್‌ಗಳ ಖರೀದಿ	95.00	11.11.2021
ಜಿ–36/21–22	ವಿಂಡೋ ಫ್ಲಾಕ್ ಚಾನಲ್ ರಬ್ಬರ್ ನೊಂದಿಗೆ ಖರೀದಿ	65.00	11.11.2021
ಜಿ–37/21–22	ಡಿಸಾಲ್ವ್ಡ್ ಅಸಿಟಲೀನ್ ಗ್ಯಾಸ್ ಖರೀದಿ	65.00	11.11.2021
ಜಿ–38/21–22	ಕಂಪ್ರೆಸ್ಡ್ ಆಕ್ಸಿಜನ್ ಗ್ಯಾಸ್ ಕಾರ್ಬನ್ ಡೈ ಆಕ್ಸೈಡ್ & ಕಮರ್ಶಿಯಲ್ ಆರ್ಗಾನ್‌ಗಳ ಗ್ಯಾಸ್ ಖರೀದಿ	35.00	11.11.2021

ಟೆಂಡರ್ ಸಂಖ್ಯೆ : ಎ–13/20–21 ದಿ:10.08.2021 – ಯು ಬೋಲ್ಟ್, ಸೆಂಟರ್ ಬೋಲ್ಟ್ ಮತ್ತು ಸ್ಪ್ರಿಂಗ್ ಕ್ಲಾಂಪ್ಸ್‌ಗಳ ಖರೀದಿಯ ಟೆಂಡರ್ ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ. ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಪ್ರಕಟಗೊಳಿಸಲಾಗುವುದು.

ಸೂಚನೆ : ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–**ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್** http://eproc.karnataka.gov.in ಅಥವಾ ದೂರವಾಣಿ ಸಂಖ್ಯೆ **080–22230960, 080–22234115** ಗೆ ಕರೆಮಾಡಿ ಅಥವಾ **eprocurementhelpdesk@gmail.com**ಗೆ ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಅ/ಬೆಂ.ನ/ಜಿವ/2069/2021–22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸೇನೆಗೆ ₹ 7,965 ಕೋಟಿ ವೆಚ್ಚದ ಶಸ್ತ್ರಾಸ್ತ್ರ ಖರೀದಿಗೆ ಅಸ್ತು

ನವದೆಹಲಿ (ಪಿಟಿಐ): ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನಿಂದ 12 ಹಗುರ ಬಹುಪಯೋಗಿ ಹೆಲಿಕಾಪ್ಟರ್ ಒಳಗೊಂಡಂತೆ ₹ 7,965 ಕೋಟಿ ವೆಚ್ಚದ ಶಸ್ತ್ರಾಸ್ತ್ರಗಳು, ಸೇನಾ ಪರಿಕರಗಳ ಖರೀದಿಗೆ ರಕ್ಷಣಾ ಸಚಿವಾಲಯ ಮಂಗಳವಾರ ಅನುಮೋದನೆ ನೀಡಿದೆ.

ಎಚ್‌ಎಎಲ್ ಈ ಹಗುರ ಬಹುಪಯೋಗಿ ಹೆಲಿಕಾಪ್ಟರ್‌ಗಳನ್ನು ಕರ್ನಾಟಕದ ತುಮಕೂರಿನ ಸ್ಥಾವರದಲ್ಲಿ ಅಭಿವೃದ್ಧಿಪಡಿಸಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಸ್ವಾಧೀನಪ್ರಕ್ರಿಯೆ ಸಮಿತಿ (ಡಿಎಸಿ) ಸಭೆ ಈ ತೀರ್ಮಾನ ತೆಗೆದುಕೊಂಡಿತು.

ಎಚ್‌ಎಎಲ್ ಅಭಿವೃದ್ಧಿಪಡಿಸಲಿರುವ ಈ ಹೆಲಿಕಾಪ್ಟರ್‌ಗಳು ಹಳೆಯದಾಗಿರುವ ಚೇತಕ್, ಚೀತಾ ಬದಲಿಗೆ ಬಳಕೆಯಾಗಲಿವೆ. ಎಚ್‌ಎಎಲ್ ಒಟ್ಟಾರೆ ಇಂಥ 187 ಹೆಲಿಕಾಪ್ಟರ್‌ಗಳನ್ನು ಅಭಿವೃದ್ಧಿಪಡಿಸುವ ನಿರೀಕ್ಷೆಯಿದೆ.

12 ಹೆಲಿಕಾಪ್ಟರ್ ಅಲ್ಲದೆ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಿಂದ ಲಿಂಕ್ಸ್ ಯು2 ನೌಕಾದಳದ ಗನ್‌ಫೈರ್ ನಿಯಂತ್ರಣ ವ್ಯವಸ್ಥೆ ಖರೀದಿಗೂ ಅನುಮೋದನೆ ನೀಡಲಾಗಿದೆ. ಇದು, ಯುದ್ಧ ಹಡಗುಗಳ ಸಾಮರ್ಥ್ಯ ವೃದ್ಧಿಸಲಿದೆ.

ಸಚಿವಾಲಯದ ಹೇಳಿಕೆ ಪ್ರಕಾರ, ಡಾರ್ನಿಯರ್ ವಿಮಾನವನ್ನು ಮೇಲ್ದರ್ಜೆಗೆ ಏರಿಸುವ ಹೊಣೆಯನ್ನು ಎಚ್‌ಎಎಲ್‌ಗೆ ಒಪ್ಪಿಸುವುದು, ನೌಕಾದಳದ ಸಾಮರ್ಥ್ಯ ವೃದ್ಧಿ, ಕರಾವಳಿ ಕಣ್ಗಾವಲು ವ್ಯವಸ್ಥೆ ಬಲಪಡಿಸುವ ಪ್ರಸ್ತಾವನೆಗೂ ಅನುಮೋದನೆ ನೀಡಿತು ಎಂದು ತಿಳಿಸಿದೆ.

ಆತ್ಮನಿರ್ಭರ ಭಾರತ್ ಭಾಗವಾಗಿ ನೌಕಾಪಡೆಯ ಗನ್‌ಗಳನ್ನು ಜಾಗತಿಕ ಮಟ್ಟದಲ್ಲಿ ಖರೀದಿಸುವುದನ್ನು ಕೈಬಿಡಲಾಗಿದೆ. ಈಗ ಬಿಎಚ್‌ಇಎಲ್ ಗನ್ ಮೌಂಟ್‌ಗಳನ್ನು ಅಭಿವೃದ್ಧಿಪಡಿಸಲಿದೆ. ನಿರ್ದಿಷ್ಟ ಗುರಿಗೆ ಅನುಗುಣವಾಗಿ ಪ್ರಯೋಗಿಸಬಹುದಾದ ಇಂಥ ಗನ್‌ಗಳನ್ನು ನೌಕಾದಳದ ಯುದ್ಧ ಹಡಗುಗಳಿಗೆ ಅಳವಡಿಸಲಾಗುತ್ತದೆ ಎಂದು ಹೇಳಿಕೆ ತಿಳಿಸಿದೆ.

ಈ ಪ್ರಸ್ತಾವಗಳು 'ಮೇಕ್ ಇನ್ ಇಂಡಿಯಾ' ಅನ್ವಯ ದೇಶೀಯವಾಗಿಯೇ ವಿನ್ಯಾಸ, ಅಭಿವೃದ್ಧಿ, ಉತ್ಪಾದನೆ ಆಗಲಿವೆ ಎಂದು ಹೇಳಿಕೆ ತಿಳಿಸಿದೆ.

ಉಚ್ಚಾಟಿತ ಎಸ್‌ಪಿ ಶಾಸಕ ಬಿಜೆಪಿಗೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ಉಚ್ಚಾಟಿತ ಶಾಸಕ ಸುಭಾಷ್ ಪಾಸಿ ಮಂಗಳವಾರ ಇಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್ ಅವರ ಸಮ್ಮುಖದಲ್ಲಿ ಪಾಸಿ, ಅವರ ಪತ್ನಿ ರೀನಾ ಪಾಸಿ ಬಿಜೆಪಿಗೆ ಸೇರ್ಪಡೆಯಾದರು' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋವಿಂದ್ ನಾರಾಯಣ ಶುಕ್ಲಾ ಹೇಳಿದರು.

ಪಾಸಿ ಅವರನ್ನು ಪಕ್ಷಕ್ಕೆ ಸ್ವಾಗತಿಸಿದ ಸಿಂಗ್, ಪಾಸಿ ಆಗಮನವು ಬಿಜೆಪಿಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಹೇಳಿದರು.

ಘಾಜಿಪುರದ ಸಾದಿಪುರ ಕ್ಷೇತ್ರದ ಶಾಸಕ ಪಾಸಿ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದಡಿ ಎಸ್‌ಪಿಯಿಂದ ಉಚ್ಚಾಟಿಸಲಾಗಿತ್ತು. ಕಳೆದ ವಾರ ಸೀತಾಪುರದ ಬಿಜೆಪಿ ಶಾಸಕ ರಾಕೇಶ್ ರಾಥೋಡ್ ಸಮಾಜವಾದಿ ಪಕ್ಷಕ್ಕೆ ಸೇರಿದ್ದರು.

'ಪರಂವೀರ್ ಸಿಂಗ್ ದೇಶ ತೊರೆಯಲು ಕೇಂದ್ರದ ನೆರವು'

ಸಂಜಯ್ ರಾವುತ್

ಮುಂಬೈ (ಪಿಟಿಐ): 'ಐಪಿಎಸ್ ಅಧಿಕಾರಿ ಪರಂ ವೀರ್ ಸಿಂಗ್ ಅವರು ತಲೆಮರೆಸಿಕೊಂಡಿಲ್ಲ, ಬದಲಾಗಿ ದೇಶ ತೊರೆದು ಹೋಗಿದ್ದಾರೆ. ಕೇಂದ್ರ ಸರ್ಕಾರದ ನೆರವಿಲ್ಲದೇ ಇದು ಸಾಧ್ಯವಿಲ್ಲದ ಮಾತು' ಎಂದು ಶಿವಸೇನೆ ಸಂಸದ ಸಂಜಯ್ ರಾವುತ್ ಆರೋಪಿಸಿದ್ದಾರೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಸಿಂಗ್ ಅವರ ಆರೋಪದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ಮಾಜಿ ಗೃಹ ಸಚಿವರನ್ನು ಕೇಂದ್ರ ತನಿಖಾ ಸಂಸ್ಥೆಯು ಬಂಧಿಸಿದೆ. ಇದು ಅನೈತಿಕ ಮತ್ತು ದುರುದ್ದೇಶದ ಬೆಳವಣಿಗೆ ಎಂದು ಹೇಳಿದರು.

ಡಿಜಿಪಿಗೆ ಸಮಾನದ ದರ್ಜೆಯ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವ್ಯಕ್ತಿ ಕೇಂದ್ರದ ನೆರವಿಲ್ಲದೇ ದೇಶದಿಂದ ಹೊರಹೋಗುವುದು ಅಸಾಧ್ಯ. ಈಗ ದೇಶಮುಖ್ ಅವರನ್ನು ಬಂಧಿಸಿರುವುದು ಸರ್ಕಾರದ ಪ್ರಮುಖ ನಾಯಕರ ವ್ಯಕ್ತಿತ್ವಕ್ಕೆ ಕುಂದುತರುವ ಯತ್ನವೇ ಆಗಿದೆ ಎಂದರು.

ದೇಶಮುಖ್ ಅವರು ಪ್ರತಿನಿಧಿಸುವ ಎನ್‌ಸಿಪಿ ಮೈತ್ರಿ ಸರ್ಕಾರದ ಭಾಗವಾಗಿದ್ದು, ಶಿವಸೇನೆ ಮತ್ತು ಕಾಂಗ್ರೆಸ್ ಜೊತೆಗೂಡಿ ಸರ್ಕಾರ ರಚನೆಯಾಗಿದೆ. ಪರಂವೀರ್ ಸಿಂಗ್ ಅವರು ಹಲವು ಪ್ರಕರಣಗಳಲ್ಲಿ ತನಿಖೆ ಎದುರಿಸುತ್ತಿದ್ದು, ಇದರಲ್ಲಿ ಮಹಾರಾಷ್ಟ್ರ ಪೊಲೀಸರು ದಾಖಲಿಸಿರುವ ಸುಲಿಗೆ ಪ್ರಕರಣವೂ ಸೇರಿದೆ. ಅವರ ವಿರುದ್ಧ ಇತ್ತೀಚೆಗೆ ಎರಡು ಜಾಮೀನುರಹಿತ ವಾರಂಟ್ ಜಾರಿಯಾಗಿತ್ತು.

ದೀಪಾವಳಿಗೆ ಸುಧಾಮೂರ್ತಿಯ ಹೊಸ ಕೃತಿ

ನವದೆಹಲಿ (ಪಿಟಿಐ): ಭಾರತದ ಪುರಾಣದ ಇತಿಹಾಸದಲ್ಲಿ ಕಳೆದುಹೋಗಿರುವ ಆಕರ್ಷಕ ಕಥನಗಳನ್ನು ಒಳಗೊಂಡ ಸುಧಾಮೂರ್ತಿ ಅವರ ಹೊಸ ಕೃತಿ 'ದ ಸೇಜ್ ವಿತ್ ಟು ಹಾರ್ನ್ಸ್' ದೀಪಾವಳಿಗೆ ಬಿಡುಗಡೆ ಆಗಲಿದೆ.

ಸುಧಾಮೂರ್ತಿ

ಮಕ್ಕಳನ್ನು ಗುರಿಯಾಗಿಸಿಕೊಂಡು ರಚಿಸಲಾದ ಇದು ಸುಧಾಮೂರ್ತಿ ಅವರ 'ಅನ್‌ಯೂಷುವಲ್ ಟೇಲ್ಸ್ ಫ್ರಂ ಮಿಥಾಲಜಿ' ಸರಣಿಯಲ್ಲಿ ಬರಲಿದೆ. ಪುರಾಣಗಳಲ್ಲಿನ ರಾಜ-ರಾಣಿಯರು, ದೇವರು, ದೇವತೆಯರು, ಋಷಿಗಳು, ಅತೀತ ಶಕ್ತಿಯುಳ್ಳ ಮನುಷ್ಯರು ಹೀಗೆ ಆಕರ್ಷಕ ವ್ಯಕ್ತಿತ್ವಗಳನ್ನು ಕೃತಿಯು ಪರಿಚಯಿಸಲಿದೆ.

ಐದು ಸಂಪುಟಗಳಲ್ಲಿ ಸುಧಾಮೂರ್ತಿ ಅವರು ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಕುರಿತ ವಿವಿಧ ರಾಜ್ಯಗಳ, ವಿವಿಧ ಅವತರಣಿಕೆಗಳ ಭಿನ್ನ ಆವೃತ್ತಿಗಳನ್ನು ಪರಿಚಯಿಸುತ್ತಾರೆ.

'ನೋಡಲು ಭಿನ್ನವಾಗಿದ್ದರೂ, ಇವುಗಳ ಮೂಲ ಎಲ್ಲ ಒಂದೇ ಆಗಿದೆ. ಪುರಾಣಗಳಲ್ಲಿರುವ ಕೆಲ ಪೋಷಕ ಪಾತ್ರಗಳು ತಮ್ಮದೇ ಕಥೆ ಹಾಗೂ ಭಿನ್ನ ಜೀವನ ದೃಷ್ಟಿಕೋನ ಹೊಂದಿವೆ' ಎಂದು ಸುಧಾಮೂರ್ತಿ ಹೇಳಿದರು.

ಚಿನ್ನ ಕಳ್ಳಸಾಗಣೆ: ಸ್ವಪ್ನಾ ಸುರೇಶ್‌ಗೆ ಜಾಮೀನು

ಕೊಚ್ಚಿ: ಚಿನ್ನ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳವು (ಎನ್ಐಎ) ದಾಖಲಿಸಿದ್ದ ಯುಎಪಿಎ (ಕಾನೂನುಬಾಹಿರ ಚಟುವಟಿಕೆ ತಡೆಗಟ್ಟುವಿಕೆ ಕಾಯ್ದೆ) ಪ್ರಕರಣದಲ್ಲಿ ಆರೋಪಿ ಸ್ವಪ್ನಾ ಸುರೇಶ್ ಅವರಿಗೆ ಕೇರಳ ಹೈಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಕೆ. ವಿನೋದ್‌ಚಂದ್ರನ್ ಮತ್ತು ಸಿ. ಜಯಚಂದ್ರನ್ ಅವರನ್ನೊಳಗೊಂಡ ನ್ಯಾಯಪೀಠವು ಸ್ವಪ್ನಾ ಸುರೇಶ್ ಜತೆಗೆ ಇತರ ಆರೋಪಿಗಳಾದ ಮೊಹಮ್ಮದ್ ಶಫಿ ಪಿ, ಜಲಾಲ್ ಎ.ಎಂ., ರಾಬಿನ್ಸ್ ಹಮೀದ್, ರಮೀಸ್ ಕೆ.ಟಿ., ಶರಫುದ್ದೀನ್ ಕೆ.ಟಿ., ಸರಿತಾ ಪಿ.ಎಸ್ ಮತ್ತು ಮೊಹಮ್ಮದ್ ಅಲಿ ಅವರಿಗೂ ಜಾಮೀನು ನೀಡಿದೆ.

ಕಾಬೂಲ್: ಸೇನಾ ಆಸ್ಪತ್ರೆ ಮೇಲೆ ದಾಳಿ 25 ಮಂದಿ ಸಾವು

ಕಾಬೂಲ್: ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನ ಸರ್ದಾರ್ ಮೊಹಮ್ಮದ್ ದಾವೂದ್ ಖಾನ್ ರಾಷ್ಟ್ರೀಯ ಮಿಲಿಟರಿ ಆಸ್ಪತ್ರೆಯ ಮೇಲೆ ಮಂಗಳವಾರ ನಡೆದ ದಾಳಿಯಲ್ಲಿ ಕನಿಷ್ಠ 25 ಮಂದಿ ಸಾವಿಗೀಡಾಗಿದ್ದು, 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಆಸ್ಪತ್ರೆಯ ಆವರಣದೊಳಗೆ ಪ್ರವೇಶ ದ್ವಾರದ ಸಮೀಪ ಎರಡು ಸ್ಫೋಟಗಳು ಸಂಭವಿಸಿದ್ದು, ಆಸ್ಪತ್ರೆಯೊಳಗೆ ಗುಂಡಿನ ದಾಳಿ ನಡೆದಿದೆ ಎಂದು ತಾಲಿಬಾನಿಗಳು ಮತ್ತು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ದಾಳಿಯ ಹೊಣೆಯನ್ನು ಇದುವರೆಗೆ ಯಾವ ಸಂಘಟನೆಯೂ ಹೊತ್ತುಕೊಂಡಿಲ್ಲ. 'ಮಂಗಳವಾರ ಆಸ್ಪತ್ರೆಯ ಪ್ರದೇಶದಲ್ಲಿ ಎರಡು ಸ್ಫೋಟಗಳು ಸಂಭವಿಸಿವೆ' ಎಂದು ತಾಲಿಬಾನ್ ಮಾಧ್ಯಮ ವಕ್ತಾರರು ಖಚಿತಪಡಿಸಿದ್ದಾರೆ.

ಕರ್ನಾಟಕ ಸರ್ಕಾರ

ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ

ಕಛೇರಿ: ಎರಡನೇ ಮಹಡಿ, ಬಿ-ಬ್ಲಾಕ್ ಬಿಲ್ಡಿಂಗ್, ವಾ.ಕ.ರ.ಸಾ.ಸಂಸ್ಥೆಯ ನೂತನ ಬಸ್ ಟರ್ಮಿನಲ್, ಹೊಸ ಕೋರ್ಟ್ ಹತ್ತಿರ, ಹೊಸೂರು, ಹುಬ್ಬಳ್ಳಿ 580021

ದೂರವಾಣಿ : 0836-2222007 ಫ್ಯಾಕ್ಸ್ : 0836-2322700 ಇಮೇಲ್: hdbrts@gmail.com hdbrtsinfra@gmail.com

Website: www.hdbrts.com CIN: U60200KA2012SGC063887

CHIGARI

ಸಂ : ಹುಡಿಬಿಆರ್‌ಟಿಎಸ್/ಟೆಂಡರ್/ಸಿವಿಲ್/2021-22/ ದಿನಾಂಕ: 02-11-2021.

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿಯಲ್ಲಿ ಬಿಆರ್‌ಟಿಎಸ್ ಯೋಜನೆಯಡಿಯಲ್ಲಿ, ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://eproc.karnataka.gov.in. ನಲ್ಲಿ ಪ್ರಕಟಿಸಿದ ದಿನಾಂಕ ಹಾಗೂ ಇನ್ನಿತರ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ನಿಗಮ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಯ ಇನ್ನಿತರ ವಿವರಗಳು ಈ ಕೆಳಗಿನಂತಿದೆ. ಇ.ಎಮ್.ಡಿ (EMD) ಮತ್ತು ಟೆಂಡರ್ ಶುಲ್ಕವನ್ನು ಆನ್‌ಲೈನ್ ಮುಖಾಂತರ ಪಾವತಿಸಬೇಕು.

ಕಾಮಗಾರಿಯ ಹೆಸರು/ಇಂಡೆಂಟ್ ನಂ.	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ಭರ್ತಿಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಇ.ಎಮ್.ಡಿ ಮೊತ್ತ
ಹುಬ್ಬಳ್ಳಿ-ಧಾರವಾಡ ನಡುವಿನ ಬಿಆರ್‌ಟಿಎಸ್ ಕಾರಿಡಾರ್‌ನ ಉಳ್ಳೆಲ್ಲ ಅಭಿವೃದ್ಧಿಪಡಿಸಲಾದ ನಿಲ್ದಾಣಗಳ ನಿರ್ವಹಣೆ (HDBRTS/2021-22/OW/WORK_INDENT52)	ರೂ. 42,00,000/-	17-11-2021 17.00 ಗಂಟೆಗಳಿಗೆ	18-11-2021 17.30 ಗಂಟೆಗಳಿಗೆ	1. ಇ-ಪೇಮೆಂಟ್ ಮುಖಾಂತರ ರೂ.50,000/- 2. ಇ-ಪೇಮೆಂಟ್ ಮುಖಾಂತರ ರೂ.52,000/-

ವಾ.ಸಾ.ಇ/ಧಾ/668/2021-22/ದೇಶಪಾಂಡೆನಗರ

ಸಹಿ/- ಪ್ರಧಾನ ವ್ಯವಸ್ಥಾಪಕರು (ಸಿವಿಲ್) ಹುಬ್ಬಳ್ಳಿ-ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಜಯನಗರ ಕನಕನಪಾಳ್ಯ, ಬೆಂಗಳೂರು-560 011.

ಸಂ. ಕಾಅ/ಚಿಕ್ಕಪೇಟೆ/ಇ-ಪ್ರೊ/10/2021-22 ದಿನಾಂಕ: 02-11-2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಏಕ ಮತ್ತು ದ್ವಿ-ಲಕೋಟಿ) ಕಡ್ಡ್ಯೂ-1, 2, 3 ಮತ್ತು 4

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬಿಬಿಎಂಪಿ, ಬೆಂಗಳೂರು ರವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ/ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಇತರೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತರಾಗಿರುವ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು ಮತ್ತು ವರ್ಗ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
1.	ವಾರ್ಡ್ ನಂ. 153ರ ಜಯನಗರದ ವಾರ್ಡ್ ಮಿತಿಯಲ್ಲಿ ಬಿಬಿಎಂಪಿ ಕಟ್ಟಡಗಳ ನಿರ್ವಹಣೆ (3ನೇ ಕರೆ).	15.00	13.38
2.	2019-20ರ ಸಾಲಿಗೆ ಸಿಲ್ಟ್ ಮತ್ತು ಟ್ರ್ಯಾಕ್ಟರ್ (3ನೇ ಕರೆ).	12.00	10.67
3.	ವಾರ್ಡ್ ನಂ. 144ರ ಸಿದ್ಧಾಪುರ ವಾರ್ಡ್ ಮಿತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದು. (2ನೇ ಕರೆ).	20.00	17.20
4.	ವಾರ್ಡ್ ನಂ. 142ರ ಸುಂಕೇನಹಳ್ಳಿ ವಾರ್ಡ್ ಮಿತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದು. (2ನೇ ಕರೆ). (ಪ.ಜಾ).	20.00	17.84
5.	ವಾರ್ಡ್ ನಂ. 153ರ ಜಯನಗರದ 2ನೇ ಬ್ಲಾಕ್, 8ನೇ ಮುಖ್ಯ ರಸ್ತೆಯಲ್ಲಿರುವ ಎಂಪಿಇಡಿ ಕಟ್ಟಡದಲ್ಲಿ ಒಳಾಂಗಣ ವ್ಯಾಯಾಮ ಶಾಲೆ ಹಾಗೂ ಷಟಲ್ ಬ್ಯಾಡ್ಮಿಂಟನ್ ಕೋರ್ಟ್ ನಿರ್ಮಾಣ ಕಾಮಗಾರಿ. (2ನೇ ಕರೆ).	500.00	421.06
6.	ವಾರ್ಡ್ ನಂ. 153ರ ಜಯನಗರದ 2ನೇ ಬ್ಲಾಕ್, 8ನೇ ಮುಖ್ಯ ರಸ್ತೆಯಲ್ಲಿ ಎಂಪಿಇಡಿ ಕಟ್ಟಡದ ನಿರ್ಮಾಣ ಕಾಮಗಾರಿ. (2ನೇ ಕರೆ).	500.00	416.97
7.	ವಾರ್ಡ್ ನಂ. 119ರ ಸುತ್ತಮುತ್ತಲಿನ ಪ್ರದೇಶದ ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸುಧಾರಣಾ ಕಾಮಗಾರಿ.	40.00	35.71
8.	ವಾರ್ಡ್ ನಂ. 118ರಲ್ಲಿ ತುರ್ತು ಕಾಮಗಾರಿಗಳು.	19.85	17.71
9.	ವಾರ್ಡ್ ನಂ. 142ರ ಸುಂಕೇನಹಳ್ಳಿಯಲ್ಲಿ ಕಲ್ವರ್ಟ್ ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ. ಮಾವಳ್ಳಿ ಪ್ರದೇಶ, ವಿ.ವಿ. ಪುರಂ ಪ್ರದೇಶ, ಜೈನ್ ಟೆಂಪಲ್ ರಸ್ತೆ ಹಾಗೂ ಸುತ್ತಲಿನ ಪ್ರದೇಶಗಳ ಹಳೆ ಸ್ಯಾನಿಟರಿ ಕೊಳವೆಗಳ ಬದಲಾವಣೆ.	20.00	17.85
10.	ವಾರ್ಡ್ ನಂ. 143ರ ಶಂಕರಮಠದ ಪ್ರದೇಶದಲ್ಲಿ ಕೊಳವೆಗಳನ್ನು ಅಳವಡಿಸಿದ ನಂತರ ಕಾಂಕ್ರೀಟ್‌ನ್ನು ಒದಗಿಸುವುದು ಹಾಗೂ ರಸ್ತೆಯ ಡಾಂಬರೀಕರಣ ಕಾಮಗಾರಿ.	50.00	44.63
11.	ವಾರ್ಡ್ ನಂ. 144ರಲ್ಲಿ ತುರ್ತು ಕಾಮಗಾರಿಗಳು.	20.00	17.83
12.	ವಾರ್ಡ್ ನಂ. 145ರ ವಾರ್ಡ್‌ನ ಸುತ್ತಮುತ್ತಲಿನ ಪ್ರದೇಶದಲ್ಲಿ ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸುಧಾರಣಾ ಕಾಮಗಾರಿ.	20.00	18.24
13.	ವಾರ್ಡ್ ನಂ. 153ರ ಜಯನಗರದಲ್ಲಿ ಯೋಜಿತ ಕಾಮಗಾರಿಗಳ ನಿರ್ವಹಣೆ. (ಪ.ಜಾ).	15.00	14.68
14.	ವಾರ್ಡ್ ನಂ. 143ರ ವಾರ್ಡ್ ಪ್ರದೇಶದಲ್ಲಿ ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ ಕಾಮಗಾರಿ. (ಪ.ಜಾ).	40.00	35.70
15.	ವಾರ್ಡ್ ನಂ. 143ರ ನ್ಯೂ ಕ್ರಾಸ್ ರಸ್ತೆ, ರಂಗಪ್ಪ ಬೀದಿ ಮತ್ತು ಸುತ್ತಲಿನ ಪ್ರದೇಶದ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು ಹಾಗೂ ಪ್ರೈವೇಟ್ ಸೇರಿದಂತೆ ಸುಧಾರಣಾ ಕಾಮಗಾರಿ.	40.00	35.71
16.	ವಾರ್ಡ್ ನಂ. 143ರ ಎಲ್ಲಪ್ಪ ಬೀದಿ, ಓಬಲಪ್ಪ ರಸ್ತೆ ಮತ್ತು ಸುತ್ತಲಿನ ಪ್ರದೇಶದ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು ಹಾಗೂ ಪ್ರೈವೇಟ್ ಸೇರಿದಂತೆ ಸುಧಾರಣಾ ಕಾಮಗಾರಿ.	30.00	26.76
17.	ವಾರ್ಡ್ ನಂ. 143ರ ಗ್ರಾಮ ದೇವತಾ ಬೀದಿ ಮತ್ತು ಪಟ್ಟಾಭಿರಾಮಯ್ಯ ರಸ್ತೆಯ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು ಹಾಗೂ ಪ್ರೈವೇಟ್ ಸೇರಿದಂತೆ ಸುಧಾರಣಾ ಕಾಮಗಾರಿ.	40.00	35.71
18.	ವಾರ್ಡ್ ನಂ. 142ರ ಬುಲ್ ಟೆಂಪಲ್ ರಸ್ತೆಯ ಸುಂಕೇನಹಳ್ಳಿ ಉದ್ಯಾನವನದ ಸುಧಾರಣಾ ಕಾಮಗಾರಿ.	20.00	17.84
19.	ವಾರ್ಡ್ ನಂ. 142ರಲ್ಲಿ ಕೊಳವೆ ಬಾವಿಗಳನ್ನು ಕೊರೆಯುವುದು ಮತ್ತು ಕೊಳವೆ ಮಾರ್ಗಗಳನ್ನು ಒದಗಿಸುವುದು. (ಪ.ಜಾ).	18.00	16.06
20.	ವಾರ್ಡ್ ನಂ. 142ರ ಸುಂಕೇನಹಳ್ಳಿಯಲ್ಲಿ ಹಾಗೂ ಸುತ್ತಲಿನ ಪ್ರದೇಶದಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಮತ್ತು ಬೆವಿಕಂನಿಂದ ನಿರ್ಮಿತ ರಸ್ತೆ ಕಟಿಂಗ್‌ಗಳಿಗೆ ಡಾಂಬರೀಕರಣ ಒದಗಿಸುವುದು.	25.00	22.29
21.	ವಾರ್ಡ್ ನಂ. 142ರ ಗವಿಪುರಂ ಹೆರಿಗೆ ಆಸ್ಪತ್ರೆಯ ಕಾಂಪೌಂಡ್ ಮೇಲೆ ಗ್ರಿಲ್ ಒದಗಿಸುವುದು ಹಾಗೂ ಸುತ್ತಲಿನ ಪ್ರದೇಶದ ಒಳಚರಂಡಿಗಳ ಸುಧಾರಣಾ ಕಾಮಗಾರಿ. (ಪ.ಜಾ).	25.00	22.30
22.	ವಾರ್ಡ್ ನಂ. 142ರ ಕೆ.ಜಿ. ನಗರ ಮುಖ್ಯ ರಸ್ತೆಯ ಇಂದಿರಾ ಕ್ಯಾಂಟೀನ್ ಪಕ್ಕದ ಖಾಲಿ ಜಾಗದ ಸುಧಾರಣಾ ಕಾಮಗಾರಿ.	30.00	26.76
23.	ವಾರ್ಡ್ ನಂ. 118ರ ಎ.ಸಿ. ಗಾರ್ಡನ್ ಶಂಭು ಪಾಳ್ಯ, ರಾಜಗೋಪಾಲ್ ಗಾರ್ಡನ್, ರಾಮಣ್ಣ ಗಾರ್ಡನ್, ಮತ್ತು ಸುತ್ತಲಿನ ಪ್ರದೇಶದ ರಸ್ತೆಗಳು ಒಳಚರಂಡಿಗಳು ಹಾಗೂ ಕಲ್ವರ್ಟ್‌ಗಳ ಅಭಿವೃದ್ಧಿ ಕಾಮಗಾರಿಗಳು.	100.00	87.42
24.	ವಾರ್ಡ್ ನಂ. 118ರ ಸಿಮೆಂಟ್ ಹಟ್ಸ್, ವಿನೋಬಾನಗರ, ರಾಮಣ್ಣ ಗಾರ್ಡನ್ ಮತ್ತು ಸುತ್ತಲಿನ ಪ್ರದೇಶಗಳ ರಸ್ತೆಗಳು ಒಳಚರಂಡಿಗಳು ಹಾಗೂ ಕಲ್ವರ್ಟ್‌ಗಳ ಅಭಿವೃದ್ಧಿ ಕಾಮಗಾರಿಗಳು.	100.00	87.44
25.	ವಾರ್ಡ್ ನಂ. 118ರ ಕೆ.ಎಸ್. ಗಾರ್ಡನ್, ಸಿ.ಕೆ.ಸಿ. ಗಾರ್ಡನ್ ಹಾಗೂ ಸುತ್ತಲಿನ ಪ್ರದೇಶಗಳ ರಸ್ತೆಗಳು ಒಳಚರಂಡಿಗಳು ಹಾಗೂ ಕಲ್ವರ್ಟ್‌ಗಳ ಅಭಿವೃದ್ಧಿ ಕಾಮಗಾರಿಗಳು.	100.00	87.45
26.	ವಾರ್ಡ್ ನಂ. 118ರ ನಕ್ಕ ರಸ್ತೆ, ವಿನೋಬಾನಗರ, ಸಿಮೆಂಟ್ ಹಟ್ಸ್ ರಸ್ತೆಗಳು ರಾಮಣ್ಣ ಗಾರ್ಡನ್ ಮತ್ತು ಸಿ.ಕೆ.ಸಿ. ಗಾರ್ಡನ್‌ಗಳಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಒದಗಿಸುವುದು.	200.00	175.01
27.	ವಾರ್ಡ್ ನಂ. 118ರ ಸುಧಾಮನಗರದ, ದೊಡ್ಡಮಾವಳ್ಳಿ 1 ರಿಂದ 9ನೇ ಅಡ್ಡ ರಸ್ತೆ ಪ್ರದೇಶದವರೆಗೆ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಒದಗಿಸುವುದು.	200.00	175.15
28.	ಕೆಂಪೇಗೌಡನಗರದ ಉಪವಿಭಾಗದಲ್ಲಿ ಎಲ್ಲಾ ವಾರ್ಡ್‌ಗಳ ಉದ್ಯಾನವನಗಳ ಸುಧಾರಣಾ ಕಾಮಗಾರಿ.	200.00	175.25
29.	ವಾರ್ಡ್ ನಂ. 145ರ ಹೊಂಬೇಗೌಡನಗರದ ಉಪ-ವಿಭಾಗದ ರಸ್ತೆಗಳ ಡಾಂಬರೀಕರಣ ಮತ್ತು ಸುಧಾರಣಾ ಕಾಮಗಾರಿ.	400.00	349.95
30.	ವಾರ್ಡ್ ನಂ. 145ರ ಹೊಂಬೇಗೌಡನಗರದ ಉಪ-ವಿಭಾಗದ ವಿಲ್ಸನ್‌ಗಾರ್ಡನ್‌ನಲ್ಲಿ ಕಾಂಕ್ರೀಟ್ ಒಳಚರಂಡಿಗಳ ನಿರ್ಮಾಣ ಮತ್ತು ಪಾದಚಾರಿ ಮಾರ್ಗಗಳ ರಸ್ತೆಗಳ ಸುಧಾರಣಾ ಕಾಮಗಾರಿ.	300.00	262.51
31.	ವಾರ್ಡ್ ನಂ. 153ರ ಜಯನಗರದಲ್ಲಿ ಉದ್ಯಾನವನಗಳು ಮತ್ತು ಆಟದ ಮೈದಾನಗಳ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿಗಳು. ಅಡಿಬಂಧ 06 ಕ್ರ.ಸಂ.126	200.00	162.14
32.	ವಾರ್ಡ್ ನಂ. 118 ಮತ್ತು 143ರ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ದಕ್ಷಿಣ ವಲಯದ ಹಾಲಾದ ರಸ್ತೆಗಳ ಸಮಗ್ರ ಅಭಿವೃದ್ಧಿ ಹಾಗೂ ರಸ್ತೆ ಬದಿಯ ಒಳಚರಂಡಿಗಳು ಪಾದಚಾರಿ ಮಾರ್ಗಗಳ ಸುಧಾರಣೆ ಮತ್ತು ಅಸ್ತಿತ್ವದಲ್ಲಿರುವ ಮುಖ್ಯ ರಸ್ತೆ ಮತ್ತು ಇತರ ಕಾರ್ಪೊರೇಷನ್ ರಸ್ತೆಗಳನ್ನು ಹಾಗೂ ಕಲ್ವರ್ಟ್‌ಗಳನ್ನು ಕಾಂಕ್ರೀಟ್ ಮಾಡುವುದು. 2019-20 ಪ್ಯಾಕೇಜ್ ನಂ.06 (ಅನುಬಂಧ-2 ಸರ್ಕಾರಿ ಆದೇಶ ಕ್ರ.ಸಂ.11052, 1073 ಮತ್ತು 1074 ರಿಂದ 3 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.	1000.00	834.31

ಸೂಚನೆ: ಸರ್ಕಾರದ ಆದೇಶ ಸಂಖ್ಯೆ: ಸಿ.ಇ. 675 ಡಿ/ಪ್ರ-12/2020, ಬೆಂಗಳೂರು ದಿನಾಂಕ: 22-12-2020 ರಿಂದ 31-12-2021 ರವರೆಗೆ ಮತ್ತು ಇರುವಂತೆ ಇಂದಿನ ವಿನಾಯಿತಿ ಕೊಡಲಾಗಿದೆ. ಟೆಂಡರ್ ಕಾರ್ಯಸೂಚಿ: (1) ಪೂರ್ವ ಬಿಡ್ ಸಭೆಯು ಮುಖ್ಯ ಅಭಿಯಂತರರ ಕಚೇರಿ, ಬಿಬಿಎಂಪಿ, ಜಯನಗರದ 2ನೇ ಬ್ಲಾಕ್, ಬೆಂಗಳೂರು ಇಲ್ಲಿ 15-11-2021ರಂದು ಮಧ್ಯಾಹ್ನ 3:00 ಗಂಟೆಗೆ. (2) ಭರ್ತಿ ಮಾಡಿದ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 23-11-2021 ಸಂಜೆ 4:00 ಗಂಟೆವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24-11-2021 ಸಂಜೆ 4:30 ಗಂಟೆಗೆ. (4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್ ಮಾಡಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬಿಬಿಎಂಪಿ.

ಕೋವಿಡ್-19 - ಗಾಬರಿಯಿಲ್ಲದೆ ಜಾಗರೂಕರಾಗಿರಿ, ಪಾಲಿಸಿ... ಮಾಸ್ಕ್ ಧರಿಸಿ 6 ಅಡಿ ದೈಹಿಕ ಅಂತರ ಕಾಪಾಡಿ ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ

ಸಂ:ಕಾ.ಇಂ/ಲೋ.ಇ/ಹಾವಿ/ಹಾಸನ/ಟಿ.ಸಂ.-1 / 2021-22 ದಿನಾಂಕ: 29.10.2021.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಪ್ರಕಟಣೆ ಸಂಖ್ಯೆ:24/2021-22 ದಿನಾಂಕ 29.10.2021 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ-4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗ ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಹರದನಹಳ್ಳಿ ಗ್ರಾಮದಲ್ಲಿ ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡ ರವರ ವಸ್ತು ಸಂಗ್ರಹಾಲಯ(ಮ್ಯೂಸಿಯಂ) ಕಟ್ಟಡ ನಿರ್ಮಾಣ ಕಾಮಗಾರಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಟೆಂಡರ್ ಮೊತ್ತ ರೂ.495.00 ಲಕ್ಷ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ.01.12.2021-16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಮೂಲಕ ನೋಡಬಹುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ:08172-268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋ ಹಾಸನ ವಿಭಾಗ, ಹಾಸನ.

ವಾಸಾಇ/ಹಾಸನ/492/2021-22

DAVANAGERE SMART CITY LIMITED

Plot No.77, Zilladalitha Bhavana Office Premises, Karur Industrial Area, Old P.B. Road, Davanagere-577006

Tel-08192-222383, CIN: U74999KA2016PLC093411,

davanageresmartcity.mrc.gov.in, smartcitydavanagere@gmail.com

No: DSCL/EE/CR- 04/2020-21/1488 Date: 22-10-2021

Expression of Interest

Name of Project: Old City Bus Stand Redevelopment, Davanagere.

EOI for "Planning, designing, Engineering, Manufacturing, supply, installation, testing, commissioning, operation and maintenance for 5 years, and handing over of the complete system of the escalators (4Nos) using latest state of art technology and related civil work, electromechanical, automation works, Control panel etc., complete on turnkey basis at Old City Bus Stand, Davanagere" has been invited by DSCL. Interested parties can submit their EOI through web site of http://eprocurement.kar.nic.in from 22nd October 2021 to 12th November 2021 up to 4.30 PM.

Tender Number : UDD/DSCL/CR-04/2018-19.

In case of any queries / clarifications on the project / documents please contact DSCL during office hours.

Sd/- Executive Engineer, Davanagere Smart City Ltd., Davanagere.

Sd/- Managing Director and Chief Executive Officer, Davanagere Smart City Limited, Davanagere

ವಾಸಾಇ/ದಾವಣಗೆರೆ/482/ಎಂಸಿಎ/2021-22

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ

ರಾಮನಗರ ವಿಭಾಗ, ರಾಮನಗರ

ಸಂಖ್ಯೆ: ಎ2(ಬಿ)/ಐಡಿಯು/ಇ-ಟೆಂಡರ್/ಸಿಆರ್-69/2020-21 ದಿನಾಂಕ: 27.10.2021

'ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ' (ದ್ವಿ-ಲಕೋಟಿ)

ಸಾರ್ವಜನಿಕರಿಗೆ ಮತ್ತು ಈ ವಿಭಾಗದ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2021-22ನೇ ಸಾಲಿನಲ್ಲಿ ಅನುಮೋದಿಸಲ್ಪಟ್ಟ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಮುಂಗಡ ಕಾಮಗಾರಿ ಕೆಲಸಗಳ ಕಾಮಗಾರಿಗಳನ್ನು ಇ-ಟೆಂಡರ್ ಮೂಲಕ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ. ಇ-ಟೆಂಡರ್‌ನ್ನು ದಿನಾಂಕ: 08.11.2021 ರಂದು ಅಪರಾಹ್ನ 4:00 ಗಂಟೆಯವರೆಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಟೆಂಡರ್ ಮೂಲಕ ಭಾಗವಹಿಸಬಹುದಾಗಿದೆ. ಇ-ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.11.2021ರ ಅಪರಾಹ್ನ 4:30 ಗಂಟೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 10.11.2021ರ ಅಪರಾಹ್ನ 5:00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ದಿನಾಂಕ: 08.11.2021 ರಂದು ಇ-ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ: 23.11.2021 ರಂದು ಅಪರಾಹ್ನ 4:00 ಗಂಟೆಯವರೆಗೆ ಭಾಗವಹಿಸಬಹುದಾಗಿದೆ. (ಅಪ್ಲೋಡ್ ಮಾಡಿದ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.11.2021ರ ಅಪರಾಹ್ನ 4:30 ಗಂಟೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 25.11.2021ರ ಅಪರಾಹ್ನ 5:00 ಗಂಟೆಗೆ ತೆರೆಯಲಾಗುವುದು. ಆಸಕ್ತಿಯುಳ್ಳವರು ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಪರಿಶೀಲಿಸಿ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರ ಅಂತರ್ಜಾಲದ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ

ವಾಸಾಇ/ರಾಮನಗರ/276/2021-22

ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ಸಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ್/2021-22/3755 ದಿನಾಂಕ: 30/10/2021

ಅಲ್ಪಾವಧಿ ಇ-ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-ರಾಜ್ಯ ಹೆದ್ದಾರಿ ನಿರ್ವಹಣೆ (ಅತೀವೃಷ್ಟಿ) ಅಡಿ 3 ಕಾಮಗಾರಿ ಹಾಗೂ ಲೆಕ್ಕ ಶೀರ್ಷಿಕೆ 3054-ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ, 3054-ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ (ಅತೀವೃಷ್ಟಿ) ಅಡಿ 4 ಕಾಮಗಾರಿ ಹಾಗೂ 3054-ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ, ಹೀಗೆ ಒಟ್ಟು 9 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ.4.39 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 131.58 ಲಕ್ಷ ಇರುತ್ತದೆ. ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು 1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಛೇರಿಯಲ್ಲಿ:10-11-2021 ರಂದು (11.00 ಗಂಟೆಗೆ). 2)ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:12-11-2021 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :16-11-2021 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Single Cover System):18-11-2021 (ಸಾಯಂಕಾಲ 4.30 ಗಂಟೆಗೆ), 5)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 18-11-2021 (ಸಾಯಂಕಾಲ 4.30 ಗಂಟೆಗೆ), 6)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-860/MCA/2021-22

ಕರ್ನಾಟಕ ಸರ್ಕಾರ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013

Website : www.kimskoppal.karnataka.gov.in

email:directorkimskoppal@gmail.com

Office : 08539 225522, Office :08539225523

ಸಂ.ಕಿಮ್ಸ್/ಕೊಪ್ಪಳ/ಟೆಂಡರ್/15/ಖರೀದಿಪೂರಣ/2021-22 ದಿನಾಂಕ: 27/10/2021

ಇ-ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಬೇಕಾಗುವ ಹೊರಗುತ್ತಿಗೆ ಸೇವೆಗಳನ್ನು ಸರಬರಾಜು ಮಾಡಲು ಕೆಟಿಪಿಪಿ ಕಾಯ್ದೆ 1999-2000 ರನ್ವಯ ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ 30 ದಿನ ಕಾಲಾವಕಾಶ ನೀಡಿ ಇ-ಟೆಂಡರ್ ಆಹ್ವಾನಿಸಲಾಗಿದೆ.

1. ಟೆಂಡರ್‌ಗಳನ್ನು ದಿನಾಂಕ : 30/10/2021, ರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08/11/2021 ಸಾಯಂಕಾಲ 5.30 ಗಂಟೆ ವರೆಗೆ. 3. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 15/11/2021 ಬೆಳಿಗ್ಗೆ 11.30 ಗಂಟೆ. 2. ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30/11/2021 ಸಾಯಂಕಾಲ 05:30 ಗಂಟೆ ವರೆಗೆ. 3. ತಾಂತ್ರಿಕ ಲಕೋಟೆ(ಮೊದಲನೇಯ ಕವರ್) ತೆರೆಯುವ ದಿನಾಂಕ : 03/12/2021 ಬೆಳಿಗ್ಗೆ 11:30 ಗಂಟೆಗೆ. 4. ಟೆಂಡರ್ ಅಂದಾಜು ಮೊತ್ತ: ರೂ. 126.40 ಲಕ್ಷಗಳು

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ http://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http://www.kimskoppal.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/349/ಎಂಸಿಎ/2021-22

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ-4, ಬೆಳಗಾವಿ-591156

RANI CHANNAMMA UNIVERSITY

Vidyasangama, National Highway-04, Belagavi-591156

Website:www.rcub.ac.in Exam Section Phone No.0831-2565212/237

E-mail: registrareval@rcub.ac.in Fax: 0831-2565240

ಸಂಖ್ಯೆ : ರಾಚವಿ/ಪವಿ-08/ಬೆಳಗಾವಿ/2021-22/2652 ದಿನಾಂಕ : 02-11-2021

:- ಪತ್ರಿಕಾ ಪ್ರಕಟಣೆ:-

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗವು ವಿಶ್ವವಿದ್ಯಾಲಯವಿವರಿಂದ ಇದುವರೆಗೂ 8 ಘಟಿಕೋತ್ಸವಗಳನ್ನು ಯಶಸ್ವಿಯಾಗಿ ನಡೆಸಿ 10 ವಸಂತಗಳನ್ನು ಪೂರೈಸಿ 9ನೇ ಘಟಿಕೋತ್ಸವದ ಪೂರ್ವ ತಯಾರಿಯಲ್ಲಿದ್ದು ಈಗ ಈ ಸುಸಂದರ್ಭದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳನ್ನು ಗುರುತಿಸಿ ವೈಯಕ್ತಿಕವಾಗಿ ಅಥವಾ ಸಂಘ-ಸಂಸ್ಥೆಗಳಿಂದ ಸುವರ್ಣ ಪದಕಗಳನ್ನು ದತ್ತಿ ನೀಡಲು, ನಗದು ಪುರಸ್ಕಾರ ನೀಡಲು ಹಾಗೂ ಸರಣಿ ಉಪನ್ಯಾಸಗಳಿಗೆ ದತ್ತಿ ನೀಡಲು ಬಯಸುವ ದಾನಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದತ್ತಿ ನೀಡಲು ಗುರುತಿಸಿರುವ ಮೊತ್ತದ ಮಾಹಿತಿ ಈ ಕೆಳಗಿನಂತಿದೆ:

Sl.No.	Purpose of Endowment	Minimum Amount Rs.
01	For Cash Prize	Rs. 3,00,000/-
02	For Gold Medal	Rs. 5,00,000/-
03	For Endowment lectures series	Rs.10,00,000/-

ಆದ್ದರಿಂದ ಸ್ವಇಚ್ಛೆಯುಳ್ಳವರು ವೈಯಕ್ತಿಕವಾಗಿ ಅಥವಾ ಸಂಘ-ಸಂಸ್ಥೆಗಳಿಂದ ತಮ್ಮ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್:www.rcub.ac.in ನಲ್ಲಿ ಮತ್ತು ಪರೀಕ್ಷಾ ವಿಭಾಗವನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಕುಲಸಚಿವರು (ಮೌಲ್ಯಮಾಪನ) ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ಸಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ್/2021-22/3765 ದಿನಾಂಕ: 30/10/2021

ಅಲ್ಪಾವಧಿ ಇ-ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-ರಾಜ್ಯ ಹೆದ್ದಾರಿ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ ಹಾಗೂ ಲೆಕ್ಕ ಶೀರ್ಷಿಕೆ 3054-ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ (ಅತೀವೃಷ್ಟಿ) ಅಡಿ 2 ಕಾಮಗಾರಿ, ಹೀಗೆ ಒಟ್ಟು 3 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 131.58 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 175.44 ಲಕ್ಷ ಇರುತ್ತದೆ. ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು 1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಛೇರಿಯಲ್ಲಿ:12-11-2021 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:16-11-2021 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :18-11-2021 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 20-11-2021 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-863/MCA/2021-22

BANGALORE UNIVERSITY

Jnanabharathi, Bengaluru-560 056.

No.ESt-II.E9/GF/Appt/Arts/Sci./Com/Edu./Phy./Edu/2021-22 Date: 30-10-2021

NOTIFICATION

Ref: Vice-Chancellor's approval dated: 29-10-2021.

Applications invited for Full-Time/Part-Time GUEST FACULTIES

Applications are invited for full time/part time guest faculties to teach in all Post Graduate Departments under the faculties of Arts, Science, Commerce, Education and Physical Education (B.P.Ed & M.P.Ed.) of Bangalore University, Bangalore and at P.G. Centre, Ramanagar for the academic year 2021-22. Interested candidates having Master's Degree in the respective subjects as per UGC rules are requested to submit the applications in prescribed form by downloading from the University **website: www.bangaloreuniversity.ac.in** along with the relevant copies of documents to the respective Directors/Principals/Chairpersons/Co-ordinators of the Post Graduate Departments under the faculties of Arts, Science, Commerce, Education and Physical Education, **Bangalore University, Jnanabharathi Campus, Bengalore-560 056 on or before 16-11-2021.**

The date of interview online/offline will be intimated to the eligible candidates. For more details, candidates may contact the concerned department Chairperson.

Sd/- REGISTRAR

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಪಾತ್ರೆ ದೊಡ್ಡದಿದ್ದರೂ ಅದು ತುಂಬುವುದು ಹನಿ ಹನಿ ನೀರಿನಿಂದಲೇ. -ಗೌತಮ ಬುದ್ಧ

ಉಪಚುನಾವಣೆ ಫಲಿತಾಂಶ ಬಿಜೆಪಿಗೆ ಎಚ್ಚರಿಕೆ ಗಂಟೆ

ರಾಜ್ಯ ವಿಧಾನಸಭೆಯ ಎರಡು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯ ಫಲಿತಾಂಶ ಪ್ರಕಟವಾಗಿದೆ. ಸಿಂದಗಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಗೆದ್ದಿದ್ದಾರೆ. ಹಾನಗಲ್ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಜಯ ಸಾಧಿಸಿದ್ದಾರೆ. ಅಲ್ಲಿಗೆ ಆಡಳಿತ ಪಕ್ಷವಾದ ಬಿಜೆಪಿ ಮತ್ತು ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ತಲಾ ಒಂದು ಸ್ಥಾನ ಗೆದ್ದುಕೊಂಡಿವೆ. ಇದು ಮೇಲ್ನೋಟಕ್ಕೆ ಗೋಚರವಾಗುವ ಸಂಗತಿ. ಆದರೆ, ಇದು ಆಡಳಿತ ಪಕ್ಷಕ್ಕೆ ನಿಶ್ಚಿತವಾಗಿಯೂ ಎಚ್ಚರಿಕೆಯ ಗಂಟೆ. ಅದರಲ್ಲೂ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆಯಲ್ಲಿ ಬಿಜೆಪಿಗೆ ಸೋಲುಂಟಾಗಿದೆ. ಇದು ವೈಯಕ್ತಿಕವಾಗಿ ಬೊಮ್ಮಾಯಿ ಅವರಿಗೆ ಹಿನ್ನಡೆ. ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ನಡೆದ ಮೊದಲ ಚುನಾವಣೆ ಇದು. ಮುಖ್ಯಮಂತ್ರಿ ಜೊತೆಗೆ ಒಂದು ಡಜನ್ ಮಂತ್ರಿಗಳೂ ಹಾನಗಲ್ ಕ್ಷೇತ್ರದಲ್ಲಿ ಬೀಡುಬಿಟ್ಟಿದ್ದರು. ಈ ಕ್ಷೇತ್ರ ಉಳಿಸಿಕೊಳ್ಳಲು ಬಿಜೆಪಿ ತೀವ್ರ ಪ್ರಯತ್ನ ಮಾಡಿತ್ತು. ಆದರೂ ಮತದಾರರು ಅಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಕೈ ಹಿಡಿದಿದ್ದಾರೆ. ಇದಕ್ಕೆ ಜನರೊಂದಿಗೆ ಅವರು ಹೊಂದಿರುವ ಸಂಪರ್ಕವೂ ಒಂದು ಕಾರಣ. ಉಪಚುನಾವಣೆಗಳಲ್ಲಿ ಆಡಳಿತ ಪಕ್ಷಕ್ಕೆ ಅನುಕೂಲಕರವಾದ ವಾತಾವರಣ ಇರುವುದು ಸಹಜ. ಅದು ಗೆಲುವಿಗೆ ನೆರವಾಗುತ್ತದೆ. ಆದರೆ ಈ ಬಾರಿ ಹಾನಗಲ್ ಕ್ಷೇತ್ರದ ಮಟ್ಟಿಗೆ ಆ ಮಾತು ಸುಳ್ಳಾಗಿದೆ. ಎರಡು ಕ್ಷೇತ್ರಗಳ ಚುನಾವಣಾ ಫಲಿತಾಂಶವನ್ನು ಇಟ್ಟುಕೊಂಡು ಇದು ಆಡಳಿತ ಪಕ್ಷಕ್ಕೆ ಆದ ಹಿನ್ನಡೆ ಎಂದು ಸಾರಾಸಗಟಾಗಿ ಹೇಳಲು ಸಾಧ್ಯವಿಲ್ಲವಾದರೂ ಬಿಜೆಪಿಗೆ ಒಂದು ಪೆಟ್ಟು ಎಂಬುದಂತೂ ಸತ್ಯ. ಹಾನಗಲ್ ಕ್ಷೇತ್ರವನ್ನು ಈ ಮೊದಲು ಬಿಜೆಪಿ ಶಾಸಕರೇ ಪ್ರತಿನಿಧಿಸಿದ್ದರು. ಈ ಕ್ಷೇತ್ರವನ್ನು ಬಿಜೆಪಿಯಿಂದ ಕಾಂಗ್ರೆಸ್ ಕಸಿದುಕೊಂಡಿದೆ. ಉಪಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್ ಚೇತರಿಸಿಕೊಂಡಿದೆ. ಹಾನಗಲ್‌ನಲ್ಲಿ ಗೆಲುವು ಸಾಧಿಸಿದೆ. ಸಿಂದಗಿಯಲ್ಲಿ ಎರಡನೇ ಸ್ಥಾನ ಗಳಿಸಿದೆ. ಸಿಂದಗಿಯಲ್ಲಿ ಈ ಹಿಂದೆ ಜೆಡಿಎಸ್-ಬಿಜೆಪಿ ನಡುವೆ ಪೈಪೋಟಿ ಇತ್ತು. ಉಪಚುನಾವಣೆ ಫಲಿತಾಂಶದಿಂದ ಭಾರಿ ಪೆಟ್ಟು ಬಿದ್ದಿರುವುದು ಜೆಡಿಎಸ್ ಪಕ್ಷಕ್ಕೆ. ಸಿಂದಗಿಯಲ್ಲಿ ಜೆಡಿಎಸ್ ಶಾಸಕರೇ ಇದ್ದರು. ಎಂ.ಸಿ.ಮನಗೂಳಿ ಅವರ ನಿಧನದಿಂದ ಅಲ್ಲಿ ಉಪಚುನಾವಣೆಯ ಅಗತ್ಯ ಉಂಟಾಯಿತು. ಅವರ ಪುತ್ರ ಅಶೋಕ ಮನಗೂಳಿ ಅವರು ಕಾಂಗ್ರೆಸ್ ಸೇರಿದರು. ಪಕ್ಷ ಅವರಿಗೇ ಟಿಕೆಟ್ ನೀಡಿತು. ಅನುಕಂಪದ ಮತಗಳು ಬರಬಹುದು ಎನ್ನುವ ನಿರೀಕ್ಷೆ ಕಾಂಗ್ರೆಸ್ ಪಕ್ಷಕ್ಕೆ ಇತ್ತು. ಆದರೆ ಇಲ್ಲಿ ಬಿಜೆಪಿ ಜಯ ಗಳಿಸುವ ಮೂಲಕ ಈ ನಿರೀಕ್ಷೆ ಸುಳ್ಳಾಗಿದೆ. ಜೆಡಿಎಸ್ ಪಕ್ಷಕ್ಕೆ ಠೇವಣಿ ಕೂಡ ಸಿಕ್ಕಿಲ್ಲ. ಇದರಿಂದಾಗಿ ಉತ್ತರ ಕರ್ನಾಟಕದಲ್ಲಿ ಜೆಡಿಎಸ್ ನೆಲೆ ಕುಸಿಯುತ್ತಿದೆ ಎನ್ನುವುದು ಸ್ಪಷ್ಟವಾಗಿದೆ. ಉತ್ತರ ಕರ್ನಾಟಕದ ಜೆಡಿಎಸ್ ಪ್ರಬಲ ಕ್ಷೇತ್ರಗಳಲ್ಲಿ ಸಿಂದಗಿ ಕೂಡ ಒಂದಾಗಿತ್ತು. ಈಗ ಅದು ಕೈತಪ್ಪಿದೆ. ಎಂ.ಸಿ.ಮನಗೂಳಿ ಅವರ ವೈಯಕ್ತಿಕ ವರ್ಚಸ್ಸು ಈ ಹಿಂದೆ ಜೆಡಿಎಸ್‌ಗೆ ನೆರವಾಗಿತ್ತು. ಈ ಬಾರಿ ಅದರ ಲಾಭವನ್ನು ಪಡೆಯಲು ಕಾಂಗ್ರೆಸ್ ಪ್ರಯತ್ನಪಟ್ಟಿತ್ತಾದರೂ ಅದು ಸಾಧ್ಯವಾಗಿಲ್ಲ.

ಅಧಿಕಾರ, ಹಣ, ಜಾತಿ ಯಾವುದೇ ಆಮಿಷಗಳನ್ನು ಒಡ್ಡಿದರೂ ಮತದಾರರು ತಮಗೆ ಬೇಕಾದವರನ್ನೇ ಆಯ್ಕೆ ಮಾಡುತ್ತಾರೆ ಎನ್ನುವುದಕ್ಕೆ ಈ ಫಲಿತಾಂಶ ನಿದರ್ಶನ

ಅಧಿಕಾರ, ಹಣ, ಜಾತಿ ಯಾವುದೇ ಆಮಿಷಗಳನ್ನು ಒಡ್ಡಿದರೂ ಮತದಾರರು ತಮಗೆ ಬೇಕಾದವರನ್ನೇ ಆಯ್ಕೆ ಮಾಡುತ್ತಾರೆ ಎನ್ನುವುದಕ್ಕೆ ಈ ಫಲಿತಾಂಶ ನಿದರ್ಶನ. ಉಪ ಚುನಾವಣೆ ಸಂದರ್ಭದಲ್ಲಿ ಮೂರೂ ಪ್ರಮುಖ ಪಕ್ಷಗಳ ನಾಯಕರು ಲಂಗು ಲಗಾಮಿಲ್ಲದೆ ಅತ್ಯಂತ ಕೆಟ್ಟ ರೀತಿಯಲ್ಲಿ ಬೈದಾಡಿಕೊಂಡಿದ್ದರು. ಜಾತಿಯನ್ನು ಪ್ರಸ್ತಾಪಿಸಿದ್ದರು. ಹಣದ ಹೊಳೆಯೂ ಹರಿದಿತ್ತು ಎಂಬ ವರದಿಗಳಿವೆ. ಶತಾಯಗತಾಯ ಗೆಲ್ಲಲೇಬೇಕು ಎಂದು ಸಚಿವ ಸಂಪುಟದ ಬಹುತೇಕ ಸಚಿವರು ಈ ಕ್ಷೇತ್ರಗಳಲ್ಲಿ ಬೀಡುಬಿಟ್ಟಿದ್ದರು. ಸ್ಥಳೀಯ ಸಮಸ್ಯೆಗಳು, ಅಭಿವೃದ್ಧಿಯ ವಿಷಯ ಹೆಚ್ಚು ಪ್ರಸ್ತಾಪವಾಗಲೇ ಇಲ್ಲ. ಆರೋಪ ಪ್ರತ್ಯಾರೋಪಗಳೇ ಮತದಾರರನ್ನು ರಂಜಿಸಿದವು. ಸ್ಥಳೀಯ ಅಗತ್ಯ ಮತ್ತು ಆದ್ಯತೆಗಳ ನೆಲೆಯಲ್ಲಿ ಚುನಾವಣೆ ನಡೆಸಲು ರಾಜಕೀಯ ಪಕ್ಷಗಳ ಮುಖಂಡರು ಪ್ರಯತ್ನ ಪಡದೇ ಇದ್ದರೂ ಮತದಾರರು ಮಾತ್ರ ಅವುಗಳನ್ನು ಅರಿತೇ ಮತ ಚಲಾಯಿಸಿದ್ದಾರೆ. ಹಾನಗಲ್ ಕ್ಷೇತ್ರದಲ್ಲಿ ಸಿ.ಎಂ. ಉದಾಸಿ ಅವರ ಕುಟುಂಬದವರಿಗೇ ಟಿಕೆಟ್ ನೀಡಬೇಕು ಎಂಬ ಒತ್ತಡ ಇತ್ತು. ಆದರೆ, ಆ ಒತ್ತಡಕ್ಕೆ ಪಕ್ಷ ಮಣೆ ಹಾಕಲಿಲ್ಲ. ಇದರಿಂದ ಬಿಜೆಪಿ ಸ್ಥಳೀಯ ಮುಖಂಡರಿಗೆ, ಕಾರ್ಯಕರ್ತರಿಗೆ ಅಸಮಾಧಾನವಾಗಿತ್ತು ಎಂಬ ವರದಿಯೂ ಇತ್ತು. ಬಿಜೆಪಿ ಸೋಲುವುದಕ್ಕೆ ಅದೂ ಒಂದು ಕಾರಣವಾಗಿರಬಹುದು ಎಂಬ ಮಾತು ಇದೆ. ಸಿಂದಗಿ ಕ್ಷೇತ್ರದಲ್ಲಿ ಅನುಕಂಪದ ಮತಗಳ ಮೇಲೆ ಕಣ್ಣಿಟ್ಟೇ ಎಂ.ಸಿ.ಮನಗೂಳಿ ಅವರ ಪುತ್ರ ಅಶೋಕ ಮನಗೂಳಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ಸಿಂದಗಿಯಲ್ಲಿ ಕಾಂಗ್ರೆಸ್ ತಂತ್ರ ಫಲ ನೀಡಿಲ್ಲ. ಪಕ್ಷದ ಮೇಲ್ಮಟ್ಟದ ನಾಯಕರಿಂದ ಮತಗಳು ಬರುತ್ತವೆ ಎನ್ನುವುದನ್ನು ಈ ಫಲಿತಾಂಶ ಸುಳ್ಳುಮಾಡಿದೆ. ರಾಜಕೀಯ ಪಕ್ಷಗಳ ಮುಖಂಡರು ಸ್ಥಳೀಯ ಅಗತ್ಯಗಳ ಬಗ್ಗೆ ಇನ್ನಾದರೂ ಆಲೋಚಿಸಬೇಕಿದೆ.

ದಿನದ ಟ್ವೀಟ್

ಭಾಷಾ ತಾರತಮ್ಯವೇಕೆ?

ರೈಲ್ವೆ ಟಿಕೆಟ್‌ನಲ್ಲಿ ಹಿಂದಿಯೇತರ ಎಲ್ಲ ಭಾಷೆಗಳನ್ನೂ 2007ರಿಂದ ಕೈಬಿಡಲಾಗಿತ್ತು. ಕನ್ನಡಿಗರು ನಡೆಸಿದ ಅಭಿಯಾನದಿಂದಾಗಿ 2-3 ವರ್ಷಗಳಿಂದ ಈಚೆಗೆ ಕನ್ನಡ ಸೇರಿದಂತೆ ಇನ್ನಿತರ ಭಾಷೆಗಳಲ್ಲಿ ಟಿಕೆಟ್ ಮುದ್ರಿಸುವಂತಾಯಿತು. ಸದ್ಯಕ್ಕೆ ಕೆಳದರ್ಜೆ ಟಿಕೆಟ್‌ನಲ್ಲಿ ಮಾತ್ರ ಕನ್ನಡ ಇದೆ. ಮೇಲಿನ ದರ್ಜೆ ಟಿಕೆಟ್‌ನಲ್ಲಿ ಇಲ್ಲ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ

ಜನರು ನಮ್ಮ ನಡೆ, ನುಡಿ ಆಧರಿಸಿ ನಿರ್ಧಾರ ಕೈಗೊಳ್ಳುತ್ತಾರೆ ಎಂಬುದು ಜೆಡಿಎಸ್ ಪಕ್ಷಕ್ಕೆ ಈ ಉಪಚುನಾವಣೆಯಲ್ಲಿ ಗೊತ್ತಾಗಿದೆ ಅನಿಸುತ್ತದೆ. ಟೀಕೆ ಮಾಡುವ ಮುನ್ನ ಹಿನ್ನೆಲೆ-ಮುನ್ನೆಲೆ ತಿಳಿದುಕೊಳ್ಳಬೇಕು. ಆರ್‌ಎಸ್‌ಎಸ್ ಏನು ಕೆಲಸ ಮಾಡುತ್ತಿದೆ, ಅದರ ನಾಯಕರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿದುಕೊಂಡು ಮಾತಾಡಬೇಕು. 'ವೋಟ್‌ಬ್ಯಾಂಕ್' ರಾಜಕಾರಣಕ್ಕಾಗಿ, ಧರ್ಮ, ಜಾತಿ ಓಲೈಕೆಗಾಗಿ ಅವಸರಿಸಿ ಮಾತನಾಡಿದರೆ ಜನರು ಪಾಠ ಕಲಿಸುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ.

ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ

25 ವರ್ಷಗಳ ಹಿಂದೆ

ಭಾನುವಾರ, 3-11-1996

● **'ಕಾಳಾ ದಿನ' ಆಚರಣೆ ಮತ್ತೊಮ್ಮೆ ವಿಫಲ**

ಬೆಳಗಾವಿ, ನ. 2– ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಕಳೆದ ನಾಲ್ಕು ದಶಕಗಳಿಂದ 'ಹೋರಾಟ' ಮಾಡಿಕೊಂಡು ಬಂದಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ ಈಗ ಎಲ್ಲ ಅರ್ಥದಲ್ಲಿ ತಬ್ಬಲಿ.

ಒಂದು ಕಡೆ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆಂತರಿಕ ಬಂಡಾಯದ ಸವಾಲನ್ನು ಎದುರಿಸಲಾಗದೆ ತತ್ತರಿಸಿ ಹೋಗಿರುವ ಸಮಿತಿ ಮತ್ತೊಂದು ಕಡೆ 'ಬೇಸತ್ತ' ಜನರನ್ನು ಬಡಿದೆಬ್ಬಿಸುವ ಅಸ್ತ್ರಗಳು ತಿಳಿಯದೇ ತಬ್ಬಿಬ್ಬಾಗಿದೆ. ಬಹುಶಃ ಈ ಎಲ್ಲ ಅಂಶಗಳ ಫಲವಾಗಿಯೇ, ಪ್ರತೀ ರಾಜ್ಯೋತ್ಸವ ದಿನವನ್ನು 'ಕಪ್ಪು ದಿನ'ವಾಗಿ ಆಚರಿಸಬೇಕು ಎಂಬ ಸಮಿತಿ ಕರೆಗೆ ಅವರ ಬೆಂಬಲಿಗರಿಂದಲೇ ಸೂಕ್ತ ಪ್ರತಿಕ್ರಿಯೆ ಸಿಗುತ್ತಿಲ್ಲ. ಶುಕ್ರವಾರದ ಮರಾಠಿ ಪತ್ರಿಕೆಗಳ ಸಂಚಿಕೆಗಳಲ್ಲಿ ಮಾಸ್ಟ್‌ಹೆಡ್ ಮೇಲೆ ಕಾಳಾ ದಿನ ಆಚರಣೆಗೆ ಕರೆ ಕೊಟ್ಟರೂ ಅಂಗಡಿ ಮುಂಗಟ್ಟುಗಳು ತೆರೆದಿದ್ದು ಜನಜೀವನ ಎಂದಿನಂತಿತ್ತು.

● **'ಕೇಂದ್ರಕ್ಕೆ ಬೆಂಬಲ ವಾಪಸ್ ಪಡೆಯದಿದ್ದರೆ ಕಾಂಗ್ರೆಸ್ ನಿರ್ನಾಮ'**

ಬೆಂಗಳೂರು, ನ. 2– ಕೇಂದ್ರದಲ್ಲಿ ದೇವೇಗೌಡರ ನೇತೃತ್ವದ ಸಂಯುಕ್ತರಂಗ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳದಿದ್ದರೆ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ನಿರ್ನಾಮವಾಗುವುದು ಖಚಿತ ಎಂಬ ಎಚ್ಚರಿಕೆಯನ್ನು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ.ಕೆ. ನಾಯ್ಕರ್ ಹೈಕಮಾಂಡ್‌ಗೆ ನೀಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 3-11-1971

● **ಇಪ್ಪತ್ತನಾಲ್ಕು ಮಂದಿಗೆ ಸನ್ಮಾನ**

ಬೆಂಗಳೂರು, ನ. 2– ಕನ್ನಡ ನಾಡಿನ ಚೆಲುವಿಗೆ ಕಾರಣರಾದ 24 ಮಂದಿ ಕಲಾವಿದರು, ಸಾಹಿತಿಗಳನ್ನು ಇಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಜನತೆಯ ಪರವಾಗಿ ಸನ್ಮಾನಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ನೆನೆಯಲಾಯಿತು.

ರಾಜ್ಯದ ಮೂರು ಅಕಾಡೆಮಿಗಳ ಪರವಾಗಿ ಪ್ರಶಸ್ತಿಗಳನ್ನು ನೀಡಿದ ರಾಜ್ಯಪಾಲರು, ಕಲಾವಿದರು ವಯಸ್ಸಾಗುವವರೆಗೆ ಕಾಯದೆ, ಅವರು ಪಾಂಡಿತ್ಯ- ಪ್ರತಿಭೆ ಗಳಿಸಿದ ತರುಣದಲ್ಲೇ ಅವರನ್ನು ಗುರುತಿಸಿ ಸನ್ಮಾನಿಸಬೇಕೆಂದು ಸಲಹೆ ಮಾಡಿದರು.

'ಕಲಾವಿದರಿಗೆ ತುಂಬಾ ವಯಸ್ಸಾಗದ ಕಾರಣ ಅವರನ್ನು ಗೌರವಿಸಬಾರದೆಂಬ ಭಾವನೆ ನಮ್ಮಲ್ಲಿದೆ. ಇದಕ್ಕೆ ಕಾರಣ ತಿಳಿಯದು. ಕಲಾವಿದ ತಾರುಣ್ಯದಲ್ಲೇ ಪ್ರತಿಭೆಯನ್ನು ಗಳಿಸುತ್ತಾನೆ. ಆತ ಪ್ರತಿಭೆ ಗಳಿಸಿದ ಕಾಲದಲ್ಲಿ ಅವನಿಗೆ ಪ್ರಶಸ್ತಿ ಸಲ್ಲಬೇಕಾದುದು ಉಚಿತವಾದದ್ದು' ಎಂದು ಒತ್ತಿ ಹೇಳಿದರು.

ಪೌಷ್ಟಿಕಾಂಶ ಕೊರತೆಯ ವೈಜ್ಞಾನಿಕ ಮಾಪನಕ್ಕೆ ಗ್ಯಾಲಪ್ ಸಮೀಕ್ಷೆಯನ್ನು ಆಧರಿಸಿರುವುದು ಅಸಂಗತ

ಈ ಸೂಚ್ಯಂಕವನ್ನು ಭಾರತ ಪ್ರಶ್ನಿಸಬೇಕು

ಸೂರ್ಯ-ನಮಸ್ಕಾರ

ಎ.ಸೂರ್ಯಪ್ರಕಾಶ್

ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ ಮತ್ತಿತರ ದಕ್ಷಿಣ ಏಷ್ಯಾ ರಾಷ್ಟ್ರಗಳಿಗಿಂತ ಕೆಳಗಿನ ಸ್ಥಾನದಲ್ಲಿ ಭಾರತವನ್ನು 2021ರ 'ಜಾಗತಿಕ ಹಸಿವು ಸೂಚ್ಯಂಕ' (ಜಿಎಚ್‌ಐ) ಇರಿಸಿದೆ. ಆ ಮೂಲಕ ಭಾರತದ ಸ್ಥಾನವನ್ನು ತಗ್ಗಿಸಿರುವ ಈ ಸೂಚ್ಯಂಕವನ್ನು ಹಲವು ಕಾರಣಗಳಿಗಾಗಿ ಪ್ರಶ್ನಿಸುವುದು ಅಗತ್ಯ. ಆ ಕಾರಣಗಳು ಯಾವುವೆಂದರೆ, ಈ ಸೂಚ್ಯಂಕವನ್ನು ಸಿದ್ಧಪಡಿಸಲು ಅವಲಂಬಿಸಲಾಗುವಂತಹ ಹಳೆಯ ಅಂಕಿಅಂಶಗಳು, ದೋಷಪೂರಿತ ವಿಧಾನ ಹಾಗೂ ಜಾಗತಿಕ ಸಂಸ್ಥೆಗಳ ಇಳಿಮುಖವಾಗುತ್ತಿರುವ ವಿಶ್ವಾಸಾರ್ಹತೆ.

ಜಾಗತಿಕ ಹಾಗೂ ಪ್ರಾದೇಶಿಕ ಹಂತಗಳಲ್ಲಿ ಹಸಿವನ್ನು ಪತ್ತೆ ಹಚ್ಚಲು ಯತ್ನಿಸುವ ಈ ವರದಿ, ನಾಲ್ಕು ಸೂಚಕಗಳನ್ನು ಆಧರಿಸಿದೆ: ಪೌಷ್ಟಿಕತೆಯ ಕೊರತೆ, ಎತ್ತರಕ್ಕೆ ತಕ್ಕ ತೂಕ ಇಲ್ಲದಿರುವುದು, ವಯಸ್ಸಿಗೆ ತಕ್ಕ ಎತ್ತರ ಇಲ್ಲದಿರುವುದು ಹಾಗೂ ಮಕ್ಕಳ ಮರಣ.

116 ರಾಷ್ಟ್ರಗಳ ಪೈಕಿ ಭಾರತವನ್ನು 101ನೇ ಸ್ಥಾನದಲ್ಲಿ ಈ ವರದಿ ಇರಿಸಿದೆ. ಭಾರತದ ಅಂಕ, ಇತರ ಹಲವು ದಕ್ಷಿಣ ಏಷ್ಯಾ ರಾಷ್ಟ್ರಗಳಿಗಿಂತ ಕೆಳಗಿನ ಸ್ಥಾನದಲ್ಲಿದೆ. ಭಾರತ ಗಳಿಸಿರುವ ಅಂಕ 27.5. ಬದಲಿಗೆ 5ಕ್ಕಿಂತ ಕಡಿಮೆ ಅಂಕ ಗಳಿಸಿ ಹಸಿವು ಬಾಧಿಸದಿರುವ 18 ರಾಷ್ಟ್ರಗಳಿವೆ. 2020ರಲ್ಲಿ 94ನೇ ಸ್ಥಾನ ಗಳಿಸಿದ್ದ ಭಾರತವು ಈಗ 101ಕ್ಕೆ ಇಳಿದಿದೆ.

ಕೆಳಕಂಡ ಕಾರಣಗಳಿಗಾಗಿ ಜಿಎಚ್‌ಐ ಅನ್ನು ಪ್ರಶ್ನಿಸುವುದು ಅಗತ್ಯ: 'ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಎತ್ತರಕ್ಕೆ ತಕ್ಕ ತೂಕ ಇಲ್ಲದಿರುವುದು' ಹಾಗೂ ಐದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ವಯಸ್ಸಿಗೆ ತಕ್ಕಂತೆ ಎತ್ತರ ಇಲ್ಲದಿರುವುದರ ಕುರಿತ ಸೂಚಕಗಳಿಗಾಗಿ, ಈ ಸಂಶೋಧನೆಯು 2016-18ರ ಅವಧಿಗೆ ಲಭ್ಯವಿರುವ ಅಧಿಕೃತ ಅಂಕಿ ಅಂಶಗಳನ್ನು ಅವಲಂಬಿಸಿದೆ. ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಅವು 2021ರ ವಾಸ್ತವ ಚಿತ್ರಣವನ್ನು ಬಿಂಬಿಸುವುದಿಲ್ಲ.

ಇದಷ್ಟೇ ಅಲ್ಲದೆ, ಜಿಎಚ್‌ಐ ಅವಲಂಬಿಸಿದಂತಹ ಎಫ್‌ಎಒ (ಆಹಾರ ಮತ್ತು ಕೃಷಿ ಸಂಸ್ಥೆ) ದತ್ತಾಂಶವನ್ನು ಪಡೆದುಕೊಳ್ಳಲು ಎಫ್‌ಎಒ ಬಳಸಿದ ವಿಧಾನವೇ ಪ್ರಶ್ನಾರ್ಹ. ಏಕೆಂದರೆ ಅದು ಟೆಲಿಫೋನ್ ಮೂಲಕ ಗ್ಯಾಲಪ್ ಸಂಸ್ಥೆಯು ನಡೆಸಿದಂತಹ ಸಮೀಕ್ಷೆಯನ್ನು ಆಧರಿಸಿದೆ. ಅಷ್ಟೇ ಅಲ್ಲ, ಕೇಳಿದಂತಹ ಪ್ರಶ್ನೆಗಳು, ಕೋವಿಡ್-19ರ ಅವಧಿಯಲ್ಲಿ ಉದ್ಯೋಗ ಸ್ಥಿತಿಗತಿ, ಉದ್ಯೋಗ ಅಥವಾ ವ್ಯವಹಾರ ನಷ್ಟ ಅಥವಾ ಆದಾಯ ನಷ್ಟದಂತಹ ವಿಚಾರಗಳಿಗೆ ಸಂಬಂಧಿಸಿದುದಾಗಿತ್ತು. ಸಾಂಕ್ರಾಮಿಕದ ಸಂದರ್ಭದಲ್ಲಿ ಜನರಿಗೆ ಅಗತ್ಯ ಆಹಾರ ಸರಬರಾಜು ಖಚಿತಪಡಿಸುವುದಕ್ಕಾಗಿ ಸರ್ಕಾರ ಹಾಗೂ ಇತರ ಸಂಸ್ಥೆಗಳು ಯಶಸ್ವಿಯಾಗಿ ಬೃಹತ್ ಪ್ರಚಾರಾಂದೋಲನವನ್ನು ಕೈಗೊಂಡಿದ್ದರೂ ಜನರು ಆಹಾರ ಸಾಮಗ್ರಿಗಳನ್ನು ಪಡೆದುಕೊಂಡ ವಿಚಾರಗಳ ಬಗ್ಗೆ ಸಮೀಕ್ಷೆಯಲ್ಲಿ ಪಾಲ್ಗೊಂಡವರಿಗೆ ಪ್ರಶ್ನೆಗಳನ್ನೇ ಕೇಳಿಲ್ಲ. ಪೌಷ್ಟಿಕಾಂಶ ಕೊರತೆಯ ವೈಜ್ಞಾನಿಕ ಮಾಪನಕ್ಕೆ ತೂಕ ಹಾಗೂ ಎತ್ತರದ ಅಳತೆಯು ಅಗತ್ಯವಾದುದಾದರೂ ಶುದ್ಧ ದೂರವಾಣಿ ಮಾತುಕತೆಗಳ ಅಂದಾಜು ಆಧರಿಸಿದ ಗ್ಯಾಲಪ್ ಸಮೀಕ್ಷೆಯನ್ನು ಆಧರಿಸಿರುವುದು ಅಸಂಗತ.

ಜಿಎಚ್‌ಐ ಶ್ರೇಯಾಂಕಗಳ ಕುರಿತಂತೆ ಇನ್ನಿತರ ಕೆಲವು ವಿಚಾರಗಳು ಇಲ್ಲಿವೆ. ಜಿಎಚ್‌ಐ ಶ್ರೇಯಾಂಕಗಳಲ್ಲಿ ಮೊದಲ 18 ರಾಷ್ಟ್ರಗಳಲ್ಲಿ, ಬಹುತೇಕ ರಾಷ್ಟ್ರಗಳು 2000ದಲ್ಲಿ 5 ಅಥವಾ 5.5ಕ್ಕಿಂತ ಕಡಿಮೆ ಅಂಕಗಳನ್ನು ಹೊಂದಿದ್ದವು. ಹೆಚ್ಚಿನವು ಇದೇ ಪ್ರಮಾಣವನ್ನು ಕಾಪಾಡಿಕೊಂಡಿವೆ. ಆದರೆ, 2000ದಲ್ಲಿ 13.5 ಅಂಕ ಗಳಿಸಿದ್ದ ಚೀನಾ ಅದ್ಭುತವಾದ ಸುಧಾರಣೆಯನ್ನು ಸಾಧಿಸಿದೆ. ಇದು ಸರಿಯಾದ ದತ್ತಾಂಶವನ್ನು ಆಧರಿಸಿದೆಯೇ? ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಹಾಪ್ರಧಾನ ಕಾರ್ಯದರ್ಶಿಯಾಗಿ ತನಗೆ ಬೇಕಾದ ಅಭ್ಯರ್ಥಿ ಆಯ್ಕೆಯಾಗುವಲ್ಲಿ ಚೀನಾದ ಕಾರ್ಯಾಚರಣೆಯ ನಂತರ ಡಬ್ಲ್ಯುಎಚ್‌ಒದಲ್ಲಿನ ವಿಚಿತ್ರ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಎತ್ತುವುದು ಅವಶ್ಯವಾಗಿದೆ.

ಅಷ್ಟೇ ಅಲ್ಲ, ನಾಲ್ಕು ಸೂಚಕಗಳಿಗಾಗಿ ತನ್ನ ದತ್ತಾಂಶಗಳನ್ನು ಜಿಎಚ್‌ಐ ಎಲ್ಲಿಂದ ಎತ್ತಿಕೊಳ್ಳುತ್ತದೆ? ವಿಶ್ವಸಂಸ್ಥೆ ಹಾಗೂ ಇತರ ಅಂತರರಾಷ್ಟ್ರೀಯ ಸಂಸ್ಥೆಗಳಾದ ಡಬ್ಲ್ಯುಎಚ್‌ಒ, ವಿಶ್ವಬ್ಯಾಂಕ್, ಯುನಿಸೆಫ್, ಎಫ್‌ಎಒ ಮತ್ತು 'ತಜ್ಞ ಅಂದಾಜು' ವರದಿಗಳಿಂದ ದತ್ತಾಂಶಗಳನ್ನು ತೆಗೆದುಕೊಳ್ಳುವುದಾಗಿ ವರದಿ ಹೇಳುತ್ತದೆ.

ಈ ವರದಿ ಗಮನ ಸೆಳೆದುಕೊಳ್ಳುವಂತೆ ಮಾಡುವಲ್ಲಿ ಅಷ್ಟೊಂದು ವಿಶ್ವಸಂಸ್ಥೆ ಘಟಕಗಳು ಹಾಗೂ ಡಬ್ಲ್ಯುಎಚ್‌ಒ ಒಳಗೊಳ್ಳುವಿಕೆಗೆ ಕಾರಣವೇನು? 'ಉದ್ಯಮ ಸ್ನೇಹಿ' ಶ್ರೇಯಾಂಕಕ್ಕೆ ಸಂಬಂಧಿಸಿದಂತೆ ಚೀನಾದ ಸ್ಥಾನವನ್ನು ಉತ್ತಮಪಡಿಸುವುದಕ್ಕಾಗಿ ಚೀನಾಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ತಿರುಚಲಾಗಿತ್ತು ಎಂಬ ಬಗ್ಗೆ ವಿಶ್ವಬ್ಯಾಂಕ್ ಹಿರಿಯ ಅಧಿಕಾರಿಗಳ ಕುರಿತಾಗಿ ಹೊರಬಿದ್ದಂತಹ ಹಗರಣದ ಬೆಳಕಿನಲ್ಲಿ ಈಗ ಚೀನಾ ಒದಗಿಸಿದ ದತ್ತಾಂಶಗಳು ಅಥವಾ ಚೀನಾದಿಂದ ವಿಶ್ವಸಂಸ್ಥೆ ಘಟಕಗಳು ಸಂಗ್ರಹಿಸಿದಂತಹ ದತ್ತಾಂಶಗಳು, ಜಿಎಚ್‌ಐ ಅಳವಡಿಸಿಕೊಂಡಂಥ ದತ್ತಾಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕಾದುದು ಅಗತ್ಯ. ವಿಶ್ವಸಂಸ್ಥೆಯ ಘಟಕಗಳಿಂದ ಹೊರಬೀಳುವ ಪ್ರತೀ ವರದಿ ಅಥವಾ ಮೌಲ್ಯಮಾಪನದ ಬಗ್ಗೆ ಪೂರ್ಣ ಎಚ್ಚರಿಕೆ ವಹಿಸಬೇಕೆಂಬುದನ್ನು ಈ ಹಗರಣ ಭಾರತಕ್ಕೆ ನೆನಪಿಸುತ್ತದೆ. ಸ್ವತಂತ್ರ ಪರಿಶೋಧನೆಯಿಂದಾಗಿ ಈ ಹಗರಣವು ಹೊರಬಿದ್ದ ನಂತರ, ಶ್ರೇಯಾಂಕ ನೀಡಿಕೆಯನ್ನು ವಿಶ್ವಬ್ಯಾಂಕ್ ನಿಲ್ಲಿಸಿತ್ತು. ಶ್ರೇಯಾಂಕಗಳ ನೀಡಿಕೆಯಲ್ಲಿ ವಿಶ್ವಬ್ಯಾಂಕ್ ಅಧ್ಯಕ್ಷ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸೇರಿದಂತೆ ವಿಶ್ವಬ್ಯಾಂಕ್ ಮೇಲಧಿಕಾರಿಗಳ ಹಸ್ತಕ್ಷೇಪವನ್ನು ಈ ಪರಿಶೋಧನೆ ತೋರಿಸಿತ್ತು. ಚೀನಾದ ಶ್ರೇಯಾಂಕದಲ್ಲಿ 78ರಿಂದ 85ಕ್ಕೆ ಆದ ಕುಸಿತವನ್ನು ಬದಲಿಸುವುದಕ್ಕಾಗಿ ದತ್ತಾಂಶಗಳ ತಿರುಚುವಿಕೆಗಾಗಿ ಅವರು ಆದೇಶಿಸಿದ್ದರು.



ವುಹಾನ್‌ನಲ್ಲಿ ಕೋವಿಡ್- 19 ವೈರಸ್ ಹುಟ್ಟಿನ ಕುರಿತಾಗಿ ಸಮರ್ಪಕ ತನಿಖೆ ನಡೆಯದಂತೆ ಚೀನಾ ಹತ್ತಿಕ್ಕಿದ ರೀತಿ ಹಾಗೂ ಅದರ ಅಸಹಕಾರವನ್ನು ಎತ್ತಿ ಹೇಳುವಲ್ಲಿ ಡಬ್ಲ್ಯುಎಚ್‌ಒ ಮಹಾ ನಿರ್ದೇಶಕರ ನಿರಾಸಕ್ತಿಯ ವಿವರಗಳು ಕ್ಷೋಭೆ ಉಂಟು ಮಾಡುವಂತಹವು. ಈ ಬೆಳವಣಿಗೆಗಳನ್ನು ಗಮನಿಸಿದಲ್ಲಿ, ಡಬ್ಲ್ಯುಎಚ್‌ಒ ಸಂಗ್ರಹಿಸಿದ ದತ್ತಾಂಶಗಳು ಹಾಗೂ ಅವನ್ನು ಬಳಸಿಕೊಂಡು ಜಿಎಚ್‌ಐ ಶ್ರೇಯಾಂಕಗಳನ್ನು ಅಂತಿಮಗೊಳಿಸಿದ್ದು ಎಷ್ಟರಮಟ್ಟಿಗೆ ನಂಬಲರ್ಹ? ಭಾರತದಲ್ಲಿ ಬೇರೂರಿರುವ ಪ್ರಜಾಸತ್ತಾತ್ಮಕ ಪರಂಪರೆಗಳನ್ನು ಮೂದಲಿಸುತ್ತಿರುವ ಇತರ ಕೆಲವು ಜಾಗತಿಕ ಸಂಸ್ಥೆಗಳ ಹಾದಿಯಲ್ಲೇ ಭಾರತವನ್ನು ಶಕ್ತಿಗುಂದಿದಂತೆ ಬಿಂಬಿಸುವ ಜಿಎಚ್‌ಐ ವರದಿಯೂ ಇದೆ. ಜಿಎಚ್‌ಐ ವರದಿ ತಯಾರಿಯಲ್ಲಿ ಸಂಸ್ಥೆಗಳು ಅಳವಡಿಸಿಕೊಂಡ ವಿಧಾನಗಳಲ್ಲಿನ ದೋಷಗಳನ್ನು ಗಮನಿಸಿದಾಗ, ಪ್ಯಾರಿಸ್ ಮೂಲದ ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ (ಆರ್‌ಎಸ್‌ಎಫ್) ಸಿದ್ಧಪಡಿಸಿದ 'ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ' ಹಾಗೂ ಸ್ವೀಡಿಷ್ ಸಂಸ್ಥೆ ವಿ-ಡೆಮ್ ಸಿದ್ಧಪಡಿಸಿದ 'ಪ್ರಜಾಪ್ರಭುತ್ವ ವರದಿ- 2020' ಗಳಲ್ಲಿ ಎದ್ದುಕಾಣಿಸುವ ಅಸಂಗತತೆಗಳು ನೆನಪಾಗುತ್ತವೆ.

ಹಲವು ದೇವಪ್ರಭುತ್ವದ ರಾಷ್ಟ್ರಗಳು ಹಾಗೂ ಪ್ರಜಾಸತ್ತೆಯ ಮೂಲತತ್ವಗಳೂ ಇಲ್ಲದಂತಹ ರಾಷ್ಟ್ರಗಳಲ್ಲೇ ಭಾರತಕ್ಕಿಂತ ಹೆಚ್ಚಿನ ಪತ್ರಿಕಾ ಸ್ವಾತಂತ್ರ್ಯ ಇದೆ ಎಂದು ಆರ್‌ಎಸ್‌ಎಫ್ ವರದಿ ಪ್ರತಿಪಾದಿಸಿತ್ತು. ಮುಸ್ಲಿಮರು ಮಾತ್ರ ನಾಗರಿಕರಾಗಿರಬಹುದಾದ ಹಾಗೂ ಶರಿಯತ್ ಕಾನೂನು ಪರಮೋಚ್ಚ ಕಾನೂನು ಆಗಿರುವಂತಹ ಮಾಲ್ದೀವ್ಸ್, ಭಾರತಕ್ಕಿಂತ ಹೆಚ್ಚಿನ ಪತ್ರಿಕಾ ಸ್ವಾತಂತ್ರ್ಯ ಇರುವ ಉತ್ತಮ 'ಪ್ರಜಾಪ್ರಭುತ್ವ' ಎನಿಸಿದೆಯಂತೆ. ವರದಿಗಳಲ್ಲಿನ ಇಂತಹ ಹಲವು ಉದಾಹರಣೆಗಳು ಯಾವುದೋ ಕಾರ್ಯಸೂಚಿಗಳ ಪರ ಕೆಲಸ ಮಾಡುವಂತಹವು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಅಲ್ಲದೆ, ವಿಶ್ವಸಂಸ್ಥೆಗೆ ಹಣಕಾಸು ನೀಡಿಕೆಯನ್ನು ಚೀನಾ ಹೆಚ್ಚಿಸಿದ ನಂತರ, ವಿಶ್ವಸಂಸ್ಥೆ ಹಾಗೂ ಅದರ ಎಲ್ಲಾ ಘಟಕಗಳು, ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳು ಮತ್ತು ಚಿಂತಕರ ಚಾವಡಿಗಳನ್ನು ನಿಯಂತ್ರಿಸುವಂತಹ ಯತ್ನಗಳು ಎದ್ದು ಕಾಣಿಸುತ್ತಿವೆ. ಭಾರತದ ಕೋವ್ಯಾಕ್ಸಿನ್‌ಗೆ ಡಬ್ಲ್ಯುಎಚ್‌ಒ ಇನ್ನೂ ಪ್ರಮಾಣಪತ್ರ ನೀಡದಿರುವುದು ಸೇರಿದಂತೆ ವಿಶ್ವಬ್ಯಾಂಕ್ ಹಾಗೂ ಡಬ್ಲ್ಯುಎಚ್‌ಒದ ಇತ್ತೀಚಿನ ವರ್ತನೆಗಳ ಹಿನ್ನೆಲೆಯಲ್ಲಿ ಭಾರತದ ಅಧಿಕಾರವರ್ಗ ಪೂರ್ಣ ಎಚ್ಚರಿಕೆ ತಾಳುವುದು ಅವಶ್ಯ. ಹೀಗಾಗಿ, ಸಂಶೋಧನೆ, ತನಿಖೆ ಹಾಗೂ ವಿಶ್ಲೇಷಣೆಗಳ ಮೂಲ ತತ್ವಗಳನ್ನು ಆಧರಿಸಿದ ಪರಿಶೀಲನೆಯನ್ನು ತಾಳಿಕೊಳ್ಳಲಾಗದಂತಹ 'ಜಾಗತಿಕ' ಎಂದು ಕರೆಸಿಕೊಳ್ಳುವ ಇಂತಹ ಮಹಾನ್ ವರದಿಗಳ ವಾಸ್ತವಾಂಶಗಳ ಬಗ್ಗೆ ಕೂಗಿ ಹೇಳುವ ಸಮಯ ಬಂದಿದೆ.

ಚುರುಮುರಿ

ಪಟಾಕಿ ಪ್ರತಿಜ್ಞೆ

• ಮಣ್ಣೆರಾಜು

'ದೀಪಾವಳಿಗೆ ಹಾನಿಕಾರಕ ಪಟಾಕಿ ಹಚ್ಚಬೇಡಿ, ಬೇಕಾದ್ರೆ ಹಸಿರು ಪಟಾಕಿ ಹಚ್ಚಿರಿ...' ಶಂಕ್ರಿ ಸಲಹೆ ಮಾಡಿದ.

'ಯಾವ ಕಲರ್ ಪಟಾಕಿಯನ್ನೂ ಹಚ್ಚುವುದಿಲ್ಲಾ ಡ್ಯಾಡಿ, ಪಟಾಕಿರಹಿತ ಹಬ್ಬ ಆಚರಿಸುತ್ತೇವೆ' ಎಂದ ಮಗ.

'ಹೌದೂರೀ, ಈ ಬಾರಿ ಪಟಾಕಿ ಹಚ್ಚಬಾರದು ಅಂತ ಪ್ರತಿಜ್ಞೆ ಮಾಡಿದ್ದೇವೆ' ಸುಮಿ ನಿರ್ಧಾರ ಪ್ರಕಟಿಸಿದಳು.

'ನಾನು ನಂಬುವುದಿಲ್ಲ, ಲಂಚ ಪಡೆಯುವುದಿಲ್ಲ ಎಂದು ವಿಧಾನಸೌಧದ ಅಧಿಕಾರಿಗಳೂ ಪ್ರತಿಜ್ಞೆ ಮಾಡಿದ್ದಾರೆ ಗೊತ್ತಾ?' ಎಂದ ಶಂಕ್ರಿ.

'ನಮ್ಮದು ಕಠಿಣ ಪ್ರತಿಜ್ಞೆ, ಉಲ್ಲಂಘಿಸುವುದಿಲ್ಲ'.

'ಹೌದು ಡ್ಯಾಡಿ, ಶಬ್ದ ಕೇಳಬೇಕು ಅನಿಸಿದರೆ ತಟ್ಟೆ, ಜಾಗಟೆ ಹೊಡೆದು ಖುಷಿಪಡುತ್ತೇವೆ, ಬೆಳಕಿಗಾಗಿ ದೀಪ ಹಚ್ಚುತ್ತೇವೆ, ಪಟಾಕಿ ಮಾತ್ರ ಹಚ್ಚುವುದಿಲ್ಲ' ಎಂದಳು ಮಗಳು.

'ಪಟಾಕಿ ಹಚ್ಚುವುದರಿಂದ ಶಬ್ದಮಾಲಿನ್ಯ, ವಾಯುಮಾಲಿನ್ಯ ಆಗುತ್ತದೆ. ಅಲ್ಲದೆ, ಪಟಾಕಿ ಸುಡುವುದೆಂದರೆ ದುಡ್ಡು ಸುಟ್ಟಂತೆ, ಪಟಾಕಿ ದುಡ್ಡನ್ನು ಸತ್ಕಾರ್ಯಕ್ಕೆ ಬಳಸೋಣ ಅಂತ ಮಕ್ಕಳಿಗೆ ತಿಳಿವಳಿಕೆ ನೀಡಿ ಮನವೊಲಿಸಿದ್ದೇನೆ ಕಣ್ರೀ' ಎಂದು ಸುಮಿ ಬೀಗಿದಳು.

'ಪಟಾಕಿಯ ಉಳಿತಾಯದ ದುಡ್ಡನ್ನು ರಸ್ತೆ ಗುಂಡಿ ಮುಚ್ಚಲು ಸರ್ಕಾರಕ್ಕೆ ದೇಣಿಗೆ ಕೊಡ್ತೀರಾ?' ಶಂಕ್ರಿ ಕೇಳಿದ.

'ಪಟಾಕಿಯ ಚಿಲ್ಲರೆ ಹಣದಿಂದ ಸರ್ಕಾರದ ತೂತು ಮುಚ್ಚಲು ಸಾಧ್ಯವೇನ್ರೀ?' ಸುಮಿ ಸಿಡುಕಿದಳು.

'ಮೇಡಂ ಪಾರ್ಸಲ್ ಬಂದಿದೆ...' ಎಂದು ಯಾರೋ ಬಾಗಿಲಲ್ಲಿ ಕರೆದಂತಾಯ್ತು. ಮಗಳು ಓಡಿಹೋಗಿ ಬಾಕ್ಸ್ ತಂದಳು.

'ಹೊಸ ಮೊಬೈಲ್ ಬುಕ್ ಮಾಡಿದ್ವಿ ಡ್ಯಾಡಿ...' ಮಗಳು ಖುಷಿಯಾಗಿ ಹೇಳಿದಳು.

'ಮೊಬೈಲ್‌ಗೆ ಹಬ್ಬದ ಆಫರ್ ಇತ್ತೂರೀ, ಪಟಾಕಿಗೆ ದುಡ್ಡು ವೇಸ್ಟ್ ಮಾಡೋದು ಬೇಡಾಂತ ನಾನೂ, ಮಕ್ಕಳು ಒಂದೊಂದು ಹೊಸ ಮೊಬೈಲ್ ಆರ್ಡರ್ ಮಾಡಿದ್ವಿ... ತಗೊಳ್ಳಿ ಬಿಲ್ಲು, ಕೊರಿಯರ್‌ನವನಿಗೆ ಇದರ ದುಡ್ಡು ಕೊಟ್ಟು ಕಳಿಸಿ...' ಎಂದು ಸುಮಿ ಮೊಬೈಲ್ ಬಾಕ್ಸ್ ಓಪನ್ ಮಾಡಿದಳು.

ಸಂಗತ

ಕೊಡಿ ನೀರವತೆಯ ಉಡುಗೊರೆ!

ದೀಪಾವಳಿಯಲ್ಲಿ ಮಣೆ ಹಾಕಬೇಕಿರುವುದು ಹಣತೆಗೇ ಹೊರತು ಬೆಂಕಿಗಲ್ಲ

• ಬಿಂಡಿಗನವಿಲೆ ಭಗವಾನ್

ಕತ್ತಲೆ ಅಜ್ಞಾನದ, ಬೆಳಕು ಜ್ಞಾನದ ಪ್ರತೀಕವೆನ್ನುವುದು ಜಗಮಾನ್ಯ. ದೀಪಾವಳಿಯಂದು ಬೆಳಗಲಿ ಹಣತೆ, ಅನಾಹುತಕ್ಕೆಡೆಯಾಗಬಲ್ಲ ಸಿಡಿ(ಸುಡು!) ಮದ್ದಿನದೇನು ಕ್ಯಾತೆ?

ಯಾವುದೇ ಸಾಧಾರಣ ಪಟಾಕಿ ಕೇವಲ 8 ಸೆಕೆಂಡ್ ಉರಿದರೂ ಸಾಕು. ಅದರ ಹೊಗೆ ಸುಮಾರು 400 ಸಿಗರೇಟುಗಳು ಸುಟ್ಟ ಒಟ್ಟು ಧೂಮದಷ್ಟೇ ಮಾರಕ. ಕಿವಿಗಡಚಿಕ್ಕುವ ಸದ್ದಿನ ಅಸಹನೀಯತೆಯೊಂದಿಗೆ ತರಾವರಿ ವಿಷಾನಿಲಗಳು ನಮ್ಮ ಶ್ವಾಸಾಂಗಗಳ ಆಳಕ್ಕಾಗಲೇ ತಲುಪಿಬಿಟ್ಟಿರುತ್ತವೆ! ಮನುಷ್ಯ ಅದದೇ ತಪ್ಪುಗಳನ್ನು ಎಸಗುವ ಕಾರಣ ಇತಿಹಾಸ ಮರುಕಳಿಸುತ್ತದೆ ಎಂಬ ಮಾತಿದೆ. ಹಾಗಾಗಿ ದೀಪಾವಳಿಯ ಈ ಸಂದರ್ಭದಲ್ಲಿ 'ಹಸಿರು ದೀಪಾವಳಿ'ಗೆ ದೃಢವಾಗಿ ಸಂಕಲ್ಪಿಸಬೇಕಿದೆ. ಈಗಾಗಲೇ ಕೆಲವು ರಾಜ್ಯಗಳು ಸಂಪೂರ್ಣವಾಗಿ ಪಟಾಕಿ ನಿಷೇಧಿಸಿವೆ. ಮಣೆ ಹಣತೆಗೆ, ಬೆಂಕಿಗಲ್ಲ ಎನ್ನುವ ವಿವೇಕ ಮೆರೆಯಬೇಕಿದೆ.

ಸಿಡಿಮದ್ದುರಹಿತವಾಗಿ ಹಣತೆ ಹಚ್ಚಿಯೇ ಸಂಭ್ರಮಿಸಿ ಎಂಬಂಥ ಎಚ್ಚರಿಕೆಗಳು, ಸಲಹೆಗಳು ಪ್ರತೀ ವರ್ಷವೂ ಇರುತ್ತವೆ. ಅವು 'ಇದು ನಿಚ್ಚಂ ಪೊಸತು' ಎನ್ನುವಷ್ಟು ಯಾಂತ್ರಿಕ! ಆಗುತ್ತಿರುವುದೇನು? ಪ್ರತೀ ಬಾರಿ ಮೈ, ಕೈ ಸುಟ್ಟುಕೊಂಡು ಆಸ್ಪತ್ರೆಗಳಲ್ಲಿ ದಪ್ಪ ದಪ್ಪ ಬ್ಯಾಂಡೇಜು ಬಿಗಿಸಿಕೊಂಡು ನಲುಗುವ ದೃಶ್ಯಗಳು. ಕೊಂಚ ಎಚ್ಚರಿಕೆ ತಪ್ಪಿದರೂ ಅತ್ಯಮೂಲ್ಯವಾದ ಕಣ್ಣುಗಳಿಗೆ ಅಪಾಯ ತರಬಹುದಾದ ರೋಮಾಂಚನವನ್ನು ಅಪ್ಪಬೇಕೇ?

ಸರ್ವರ ಒಳಿತಿಗೆ ಸುಧಾರಣೆ ಅರಸುವುದೇ ಹಬ್ಬದ ಆಶಯ. ದೀಪಾವಳಿ ಬೆಳಕಿನ ಸಂಭ್ರಮವಾಗಿ ನಮ್ಮನ್ನು ಪುನಶ್ಚೇತನಗೊಳಿಸಬೇಕು. ಆದರೆ ಈ ಅರ್ಥಪೂರ್ಣ ಸಂದರ್ಭವನ್ನು ನಾವೇ ಕೈಯಾರೆ ಕಿವಿಗಡಚಿಕ್ಕುವ ಅಸಹನೀಯ ಸದ್ದು, ಅವಘಡ, ಅವಾಂತರ, ರಾದ್ಧಾಂತಗಳನ್ನು ಸೃಷ್ಟಿಸುವ 'ಸಾಂವತ್ಸರಿಕ ಅಸುರ'ನನ್ನಾಗಿಸಿದ್ದೇವೆ. ಪಟಾಕಿ ಸಿಡಿಸುವುದರಿಂದ ಸ್ವಲ್ಪಮಟ್ಟಿನ ಪುಳಕ ದೊರಕುವುದು ನಿಜ. ಆದರೆ ನಮಗೂ ಇತರರಿಗೂ ಸುತ್ತಮುತ್ತಲಿನ ಪರಿಸರಕ್ಕೂ ಒದಗುವ ಗಂಡಾಂತರ ಘೋರ. ಕಿವಿಗೆ ಹಠಾತ್ತಾಗಿ ಬೀಳುವ ಸದ್ದಿನಿಂದಂತೂ ಪೂರ್ಣ ಅಥವಾ ಭಾಗಶಃ ಕಿವುಡು ಪರಿಣಮಿಸಬಹುದು. ದೀಪಾವಳಿಯ ಮೂರು ದಿನಗಳವರೆಗೆ ಎಲ್ಲಿಗಾದರೂ ಗುಳೆ ಹೋಗಿಬಿಡೋಣವೆನ್ನಿಸುವ ಮಟ್ಟಿಗೆ ಬವಣೆ, ಜುಗುಪ್ಸೆ. ಒಂದು ದಿನದ ಪಟಾಕಿ ಸಿಡಿತದ ಫಲಶ್ರುತಿ ಒಂದು ತಿಂಗಳ ಹೆಚ್ಚುವರಿ ಪರಿಸರ ಮಾಲಿನ್ಯ.

ಹೊಗೆಮಂಜು (ಸ್ಮಾಗ್) ಮುಗಿಲಿನಲ್ಲಿ ಎರಡು ತಿಂಗಳವರೆಗೆ ದಟ್ಟೈಸಿರುತ್ತದೆ. ಅದರಲ್ಲಿನ ತಾಮ್ರ, ಸೀಸ, ಸತು, ಸೋಡಿಯಂ, ಕ್ಯಾಡ್ಮಿಯಂ, ಮ್ಯಾಂಗನೀಸ್, ಪೊಟ್ಯಾಸಿಯಂ ಲೋಹಗಳ ಕಣಗಳಿಂದ ಗಾಳಿ ಮಲಿನವಾಗುತ್ತದೆ. ಪ್ರಾಣಿ, ಪಕ್ಷಿಗಳಂತೂ ಶಬ್ದದಿಂದ ಅಕ್ಷರಶಃ ನರಕ ಅನುಭವಿಸುತ್ತವೆ.

ಒಂದು ಕಾಲದಲ್ಲಿ ಒಂಟೊಂಟಿ ಮನೆಗಳದ್ದೇ ಕಾರುಬಾರು. ಪ್ರಯಾಸದಿಂದ ಹುಡುಕಿಕೊಂಡು ಬರುವ ನೆಂಟರಿಷ್ಟರಿಗೆ 'ಇಗೋ ಇಲ್ಲಿದೆ ನಮ್ಮ ಮನೆ' ಅಂತ ತೋರಿಸುವುದಕ್ಕೆ ಉಪಾಯ ತಾನೆ ಆಗ ಏನಿತ್ತು? ಮೊಬೈಲ್ ಫೋನೇ? ಇ- ಮೇಲೇ? ಕಿಲೊ ಮೀಟರುಗಳವರೆಗೆ ಕೇಳಿಸುವಂತೆ ಜೋರು ಸದ್ದು, ಇರುಳಾದರೆ ಸದ್ದಿನ ಜೊತೆಗೆ ಕಟ್ಟಿಗೆ ಉರಿಸಿ ಜ್ವಾಲೆ. ಇಂದು ಬದುಕಿನ ಶೈಲಿಯು ಅಂದಕಾಲತ್ತಲೆ ಹಾಗೂ ಇತ್ತೆ ಎಂದು ನಂಬಲಾಗದಷ್ಟು ಬದಲಾಗಿದೆ. ನಗರಗಳು ಗಗನಮುಖಿಯಾಗಿ ಬೆಳೆಯುತ್ತಿವೆ. ಒಂದು ಬೀದಿಯಲ್ಲಿ ಸರಾಸರಿ ಸಾವಿರಕ್ಕೂ ಮೀರಿದ ಸಂಖ್ಯೆಯ ನಿವಾಸಿಗಳಿರುವಷ್ಟು ಜನಸಾಂದ್ರತೆ. ಅಗಲಗೊಳ್ಳಬೇಕಾದ ಪಾದಚಾರಿ ಮಾರ್ಗಗಳು ರಸ್ತೆ ವಿಶಾಲಗೊಳ್ಳುವ ಅನಿವಾರ್ಯಕ್ಕೆ ತುತ್ತಾಗಿ ಕಿರಿದಾಗುತ್ತಿವೆ. ಈ ಪರಿಸ್ಥಿತಿಯಲ್ಲಿ ಪಟಾಕಿಗಳಿಂದ ಆಗಬಹುದಾದ ಅನಾಹುತದಿಂದ ಪಾರಾಗುವ ಸಲುವಾಗಿ ಓಡುವುದೆಲ್ಲಿಗೆ? ವರ್ತಮಾನಕ್ಕೆ ಒಗ್ಗದ ಆಚರಣೆಗಳನ್ನು ಕೈಬಿಡುವುದು ಸಮಂಜಸ.

ಸಾಲು ದೀಪಗಳು ಬೆಳಗೆ ದಿಕ್ಕನ್ನೆಲ್ಲ ಎನ್ನುವಾಗ ಸಮಷ್ಟಿ ಶಾಂತಿ, ನೆಮ್ಮದಿ, ಸಮೃದ್ಧಿಗೆ ಹಂಬಲಿಸುವ ಆಶಯವಿದೆ. 'ನನ್ನ ತವರವರ ಬಂದರ ನಿತ್ಯ ದೀವಳಿಗೆ ನನ್ನ ಮನೆಯಾಗ' ಎಂಬ ಹೆಣ್ಣುಮಗಳ ಮಿಡಿತಕ್ಕೆ ಸಾಟಿ ಯಾವುದು? ದೀಪಾವಳಿಯನ್ನು ರಂಗೋಲಿ, ಮನೆಯ ಒಪ್ಪ ಓರಣ, ಹೊಸ ಹೊಸ ಪಾಕ ವಿಧಾನ ವಿನಿಮಯ, ಸಿಹಿ ಹಂಚಿಕೆ, ಹತ್ತಿರದ ವೃದ್ಧಾಶ್ರಮ ವಾಸಿಗಳೊಂದಿಗೆ ಕುಶಲೋಪರಿಯಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹರ್ಷಿಸುವುದು ಇಂದಿನ ಅಗತ್ಯ. ಬಣ್ಣ ಬಣ್ಣದ ಮತಾಪು, ಸುರುಸುರು ಬತ್ತಿ, ಹೂ ಕುಂಡಗಳಿಗೆ ಸಂಭ್ರಮ ಪರಿಮಿತಿಗೊಳಿಸುವುದು ಸರಿ. ದೀಪಾವಳಿಯಷ್ಟೇ ಅಲ್ಲ ಯಾವುದೇ ಹಬ್ಬ, ಉತ್ಸವ ಶಬ್ದಾಸುರನನ್ನು ಕೊಬ್ಬಿಸಬಾರದು. ಎಂದ ಮೇಲೆ ನಾವು ನಮ್ಮ ಆಪ್ತರಿಗೆ ನೀಡಬಹುದಾದ ಪ್ರೀತಿಯ ದೀಪಾವಳಿ ಉಡುಗೊರೆಯೆಂದರೆ ನೀರವತೆ.

ಅಮೆರಿಕದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪರಿ ಮಾದರಿಯೆನ್ನಿಸುತ್ತದೆ. ವೈಭವೋಪೇತವಾಗಿ ಮೈಮನ ರೋಮಾಂಚನಗೊಳ್ಳುವಂತಹ ಬಾಣ ಬಿರುಸುಗಳ ಪ್ರದರ್ಶನ ಏರ್ಪಡುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಅದು ಕೆರೆಯಂಗಳದಲ್ಲಿ. ವೀಕ್ಷಕರು ಕನಿಷ್ಠ ಒಂದು ಫರ್ಲಾಂಗು ದೂರದಲ್ಲಿರುವಂತೆ ವ್ಯವಸ್ಥೆಯಾಗುವುದರಿಂದ ಅವರಿಗೆ ಒಂದು ಕಿಡಿಯೂ ಹಾರದು. ನಮ್ಮಲ್ಲೂ ಈ ಬಗೆಯಲ್ಲಿ ಸರ್ಕಾರ ಅಥವಾ ಸಂಘ ಸಂಸ್ಥೆಗಳು ಕಾರ್ಯಕ್ರಮ ಆಯೋಜಿಸಿ 'ಜನದೀಪಾವಳಿ'ಗೆ ಮುಂದಾಗಬಹುದು.

ನಿದ್ರೆ ಮೂಲಭೂತ ಹಕ್ಕುಗಳಲ್ಲೊಂದು ಎಂದು ಪರಿಗಣಿಸಿರುವ ಭಾರತದ ಸರ್ಕಾರ ರಾತ್ರಿ 10ರಿಂದ ಮರುದಿನ ಬೆಳಿಗ್ಗೆ 6 ಗಂಟೆಯವರೆಗೆ ಪಟಾಕಿ ಸಿಡಿಸುವುದನ್ನು ನಿಷೇಧಿಸಿದೆ. ಯಾವುದೇ ಕಾಯ್ದೆ, ಕಟ್ಟಲೆಗಳ ಪಾಲನೆ ನಮ್ಮ ಹಿತಕ್ಕೇ. ಅಷ್ಟಕ್ಕೂ ಕಾನೂನು ಎನ್ನುವುದು ಸಾಮಾನ್ಯ ಪ್ರಜ್ಞೆ ಎನ್ನುವುದನ್ನು ಮರೆಯುವಂತಿಲ್ಲ.

ವಾಚಕರ ವಾಣಿ

ರಾಜ್ಯೋತ್ಸವ ಪ್ರಶಸ್ತಿ: ಸುಧಾರಣೆ ಶ್ಲಾಘನೀಯ

ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಅಗತ್ಯ ಇಲ್ಲ, ಆಯ್ಕೆ ಸಮಿತಿಯೇ ಸಾಧಕರನ್ನು ಗುರುತಿಸುತ್ತದೆ ಎಂಬುದನ್ನು ತಿಳಿದು ಹರ್ಷವಾಯಿತು. ಸ್ವಾಭಿಮಾನವುಳ್ಳ ಯಾವೊಬ್ಬ ಸಾಧಕನೂ 'ನನಗೆ ಪ್ರಶಸ್ತಿ ಕೊಡಿ' ಎಂದು ಅರ್ಜಿ ಸಲ್ಲಿಸಲು ಇಷ್ಟಪಡುವುದಿಲ್ಲ. ತನ್ನ ಸಾಧನೆಯನ್ನು ತಾನೇ ಬಿಂಬಿಸಿ ಅದನ್ನು ಅರ್ಜಿ ರೂಪದಲ್ಲಿ ಸಲ್ಲಿಸಲು ಕೆಲವರಿಗೆ ಮುಜುಗರ ಎನಿಸುತ್ತಿತ್ತು. ಆ ದಿಸೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ ಸ್ವಾಗತಾರ್ಹ.

ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರು ಅರ್ಜಿ ಹಾಕುವ ಅನಿವಾರ್ಯವಿತ್ತು. ಎಷ್ಟೋ ಮಂದಿ ಗ್ರಾಮೀಣ ಭಾಗದ ಮುಗ್ಧ ಅನಕ್ಷರಸ್ಥ ಪ್ರತಿಭಾನ್ವಿತರಿಗೆ ಅರ್ಜಿ ಸಲ್ಲಿಸುವ ವಿಧಾನವೇ ತಿಳಿದಿರಲಿಲ್ಲ. ಇದರಿಂದಾಗಿ ಜನಪದ, ರಂಗಭೂಮಿ, ಇನ್ನಿತರ ಕ್ಷೇತ್ರಗಳ ಸಾಧಕರು ಪ್ರಶಸ್ತಿಯಿಂದ ವಂಚಿತರಾಗುತ್ತಿದ್ದರು. ಇನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿಗಾಗಿ ತೀವ್ರ ಸೆಣಸಾಟವೇ ನಡೆಯುತ್ತಿತ್ತು. ಈಗ ಸರ್ಕಾರ ಇಂತಹ ಸಮಸ್ಯೆಗಳನ್ನು ಮನಗಂಡು ಆಯ್ಕೆ ಸಮಿತಿಯ ಮೂಲಕ ಗುರುತಿಸುವ ಕಾರ್ಯಕ್ಕೆ ಮುಂದಾಗಿದೆ. ಬಹುಮಾನದ ಮೊತ್ತವನ್ನು ಹೆಚ್ಚಿಸಿರುವುದಲ್ಲದೆ, ವಯೋಮಿತಿ ನಿಯಮವನ್ನು ಸಡಿಲಿಸಿರುವುದು ಅಭಿನಂದನಾರ್ಹ.

ಪೆಮ್ಮನಹಳ್ಳಿ ಶ್ರೀನಾಥ್, ಪಾವಗಡ

ದತ್ತಿದಾನಿಗಳ ಆಶಯಕ್ಕೆ ತಣ್ಣೀರೆರಚದಿರಿ

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅದರ ಚುನಾವಣೆಯ ಬಗ್ಗೆ ಡಾ. ಆರ್.ಲಕ್ಷ್ಮೀನಾರಾಯಣ ಅವರು ಪ್ರಸ್ತಾಪಿಸಿದ್ದಾರೆ (ಪ್ರ.ವಾ., ನ. 1). ಹಿಂದೆಲ್ಲಾ ಪರಿಷತ್ತಿನ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷ ಗಾದಿಗೆ ಅಭ್ಯರ್ಥಿಗಳನ್ನು ಬಲವಂತವಾಗಿ ಎಳೆದುಕೊಂಡು ಬಂದು ಕೂರಿಸಬೇಕಿತ್ತು. ಆದರೆ, ಬರಬರುತ್ತಾ ಸಮ್ಮೇಳನಕ್ಕೆ ಸರ್ಕಾರದಿಂದ ಕೋಟಿಗಟ್ಟಲೆ ಹಣ ಬರುತ್ತಿರುವ ಕಾರಣಕ್ಕೋ ಅಥವಾ ಇನ್ನಾವ ಕಾರಣಕ್ಕೋ ಆ ಸ್ಥಾನಗಳಿಗೆ ಭರ್ಜರಿಯಾಗಿ ಚುನಾವಣೆಗಳು ನಡೆಯುವಂಥ ಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಸರಿಯಾಗಿ ಅಧ್ಯಕ್ಷರ ಅವಧಿ ಮೂರು ವರ್ಷಗಳಿಗೆ ಬದಲಾಗಿ ಐದು ವರ್ಷ ಆದದ್ದು ಕೂಡ ಪರಿಷತ್ತು ರಾಜಕೀಯ ಸಂಸ್ಥೆಯ ರೂಪ ಪಡೆಯಲು ಸಹಕಾರಿಯಾಯಿತೇನೋ ಎಂಬ ಆತಂಕ ಹಲವರಲ್ಲಿದೆ.

ಪರಿಷತ್ತಿನಲ್ಲಿ ಸಾರ್ವಜನಿಕರಿಂದ ದತ್ತಿ ಸ್ವೀಕರಿಸುವ ಒಂದು ಯೋಜನೆ ಇದೆ. ಒಂದು ಕುಟುಂಬದಲ್ಲಿ ನಿಧನರಾದವರು ಅಥವಾ ಇನ್ನಾವುದೋ ವ್ಯಕ್ತಿಯ ಸ್ಮರಣಾರ್ಥವಾಗಿ ಒಂದಷ್ಟು ಹಣವನ್ನು ಇಡುಗಂಟಾಗಿ ಇಟ್ಟುಕೊಂಡು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತೀ ವರ್ಷ ಆ ವ್ಯಕ್ತಿಯ ಹೆಸರಿನಲ್ಲಿ ದತ್ತಿದಾನಿಗಳ ಆಶಯದಂತೆ ದತ್ತಿ ಉಪನ್ಯಾಸ ನಡೆಸಬೇಕಾಗುತ್ತದೆ. ಆ ಇಡುಗಂಟಿನ ಹಣ ನೇರವಾಗಿ ಕೇಂದ್ರ ಸಾಹಿತ್ಯ ಪರಿಷತ್ತಿನ ಖಾತೆಗೆ ಜಮೆಯಾಗಿರುತ್ತದೆ. ಆದರೆ ಕಾರ್ಯಕ್ರಮ ನಡೆಸುವ ಹೊಣೆ ಹೊರುವ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳು ಆ ಕಾರ್ಯಕ್ರಮಗಳನ್ನು ನಡೆಸದೇ ದತ್ತಿದಾನಿಗಳ ಆಶಯಕ್ಕೆ ತಣ್ಣೀರೆರಚಿರುವ ಆರೋಪ ಹಲವೆಡೆ ಕೇಳಿಬರುತ್ತಿದೆ. ಇದಕ್ಕೆ ಉತ್ತರದಾಯಿತ್ವ ಪರಿಷತ್ತಿನ ಕೇಂದ್ರ ಘಟಕದ್ದೇ ಆಗಿರುತ್ತದೆ. ಹೀಗಾದರೆ ಪರಿಷತ್ತಿನ ವಿಶ್ವಾಸಾರ್ಹತೆಗೆ ಧಕ್ಕೆಯಾಗಿ, ಯಾರು ಈ ಯೋಜನೆಗೆ ಹಣ ಕೊಡಲು ಮುಂದೆ ಬರುತ್ತಾರೆ?

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಬಾಯಿಮಾತಿನಿಂದ ಭಾಷೆ ಉದ್ಧಾರವಾದೀತೆ?

ನಾಡಿನ ಮಕ್ಕಳಿಗೆ ಉದ್ಯೋಗ ದೊರೆತರೆ ಕನ್ನಡಕ್ಕೆ ಶಕ್ತಿ ಬರುತ್ತದೆ, ಉದ್ಯೋಗ ವಲಯದಲ್ಲಿ ಶೇ 75ರಷ್ಟನ್ನು ಕನ್ನಡಿಗರಿಗೆ ಸಿಗುವಂತೆ ಮಾಡಲಾಗುವುದು ಎಂದೆಲ್ಲ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಘೋಷಿಸಿದ್ದಾರೆ. ಘೋಷಣೆಗಳಿಂದ ಒಂದು ಭಾಷೆ ಮತ್ತು ಅದನ್ನು ಆಡುವ ಜನರ ಅಭಿವೃದ್ಧಿ ಆಗುವುದಿದ್ದರೆ ಮುಖ್ಯಮಂತ್ರಿಗೆ ಇಂದು ಈಗ ಇಂಥ ಘೋಷಣೆ ಮಾಡುವ ಅಗತ್ಯ ಬರುತ್ತಿರಲಿಲ್ಲ!

ರಾಜ್ಯದ ಎಲ್ಲಾ ಬಗೆಯ ಶಾಲೆಗಳಲ್ಲೂ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ನಡೆಯುವುದು ಸಾಧ್ಯವಿಲ್ಲದ ಸ್ಥಿತಿ ಇರುವಾಗ ತಾಂತ್ರಿಕ ಶಿಕ್ಷಣವನ್ನು ಕನ್ನಡದಲ್ಲಿ ಬೋಧಿಸುವ ಕೆಲಸವನ್ನು ಸರ್ಕಾರ ಆರಂಭಿಸಿದೆ ಮತ್ತು ಈ ವಿಷಯದಲ್ಲಿ ಸರ್ಕಾರದ್ದು ಗಟ್ಟಿ ನಿಲುವು ಎಂದು ಬೊಮ್ಮಾಯಿ ಅವರು ಹೇಳುತ್ತಾರೆ. ಮೊದಲ ಆದ್ಯತೆ ನೀಡಬೇಕಾದುದು ಪ್ರಾಥಮಿಕ ಶಿಕ್ಷಣಕ್ಕೆ. ಶಿಕ್ಷಣಕ್ಕೆ ಬುನಾದಿಯೇ ಅಲ್ಲಿಂದ. ಆದರೆ ಶಿಕ್ಷಣ ಮಾಧ್ಯಮದ ಆಯ್ಕೆಯನ್ನು ಸರ್ಕಾರವೇ ಖಾಸಗಿ ಶಾಲೆಗಳ ಮೇಲೆ ಹೇರುವಂತಿಲ್ಲ. ಸರ್ಕಾರಿ ಶಾಲೆಗಳನ್ನು ಹಿಂದಿಕ್ಕಿ ಓಡುತ್ತಿರುವ ಈ ಶಾಲೆಗಳು ಪ್ರಾಥಮಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ನೀಡಲು ಸುತರಾಂ ಒಪ್ಪುವುದಿಲ್ಲ. ಕನ್ನಡವನ್ನು ಒಂದು ಭಾಷೆಯನ್ನಾಗಿ ಪರಿಣಾಮಕಾರಿಯಾಗಿ ಮತ್ತು ಕಡ್ಡಾಯವಾಗಿ ಕಲಿಸಬೇಕೆಂಬ ಹಂಬಲವಿರುವ ಎಷ್ಟು ಖಾಸಗಿ ಶಾಲೆಗಳು ಪ್ರಾಮಾಣಿಕವಾಗಿ ಆ ದಿಸೆಯಲ್ಲಿ ಕಾರ್ಯನಿರತವಾಗಿವೆ ಎನ್ನುವುದರ ಲೆಕ್ಕವಿದೆಯೇ?

ಕನ್ನಡವನ್ನು ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಎಲ್ಲಾ ಶಾಲೆಗಳೂ ಅಳವಡಿಸಲೇಬೇಕೆಂದು ಕಡ್ಡಾಯ ಮಾಡಲು ಸುಪ್ರೀಂ ಕೋರ್ಟಿನ ತೀರ್ಪು ಅಡ್ಡ ಬರುತ್ತದೆ. ತೀರ್ಪು ಬಂದ ಹೊಸತರಲ್ಲಿ ಅಂದಿನ ಸರ್ಕಾರ ವೀರೋಚಿತವಾಗಿ ಮಾತನಾಡುತ್ತ, ತಾನು ಇತರ ರಾಜ್ಯಗಳೊಡನೆ ಸಮಾಲೋಚಿಸಿ ಈ ದಿಸೆಯಲ್ಲಿ ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿ ತರಲು ಕೇಂದ್ರದ ಮೇಲೆ ಒತ್ತಾಯ ತರಲು ಪ್ರಯತ್ನ ಮಾಡುವುದಾಗಿ ಘೋಷಿಸಿತ್ತು. ತೀರ್ಪು ಬಂದು ಎಷ್ಟು ವರ್ಷಗಳಾಗಿವೆ? ಶಿಕ್ಷಣ ಮಾಧ್ಯಮದ ಸ್ಥಿತಿಯಲ್ಲಿ ಏನಾದರೂ ಬದಲಾವಣೆ ಕಂಡಿದೆಯೇ? ಬದಲಿಗೆ, ಸರ್ಕಾರವೇ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಪ್ರಾಥಮಿಕ ಹಂತದಲ್ಲಿ ಸರ್ಕಾರಿ ಶಾಲೆಗಳಲ್ಲೂ ತೆರೆಯುವ ಇಚ್ಛೆಯನ್ನು ತೋರಿತು (ಅಥವಾ, ಇಂಗ್ಲಿಷ್ ಮಾಧ್ಯಮ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನೇ?) ಅಲ್ಲದೆ, ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಸುವ ವಿಚಾರ ಮಾಡಿತು! ಕನ್ನಡ ಮಾಧ್ಯಮದ ಕಲಿಕೆಗೆ ಕರ್ನಾಟಕದಲ್ಲಿ ಇಂಥ ದುಃಸ್ಥಿತಿ.

ಕನ್ನಡ ತಲೆಯೆತ್ತುವ ಬಗೆ ಹೇಗೆ ಎಂದು ದಶಕಗಳ ಹಿಂದೆ ಸಾಹಿತಿಗಳು ಕೊರಗಿದರು. ಈಗ ಕನ್ನಡವನ್ನು ಕರ್ನಾಟಕದಲ್ಲೇ ಉಳಿಸುವ ಬಗೆ ಹೇಗೆ ಎಂದು ತಲೆಕೆಡಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆಯೆಂದರೆ ತಪ್ಪಾಗದು. ಬಾಯಿಮಾತಿನಲ್ಲಿ ಭಾಷೆ ಉದ್ಧಾರವಾದೀತೆ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಿಸರ್ಗದ ಕೋಪ ಜಗತ್ತಿಗೆ ತಾಪ

ಜಾಗತಿಕ ಸರಾಸರಿ ತಾಪಮಾನ ಏರಿಕೆಯನ್ನು ಹವಾಮಾನ ಬದಲಾವಣೆ, ಹವಾಮಾನ ವೈಪರೀತ್ಯ ಎಂದೆಲ್ಲಾ ಕರೆಯಲಾಗುತ್ತದೆ. ಜಾಗತಿಕ ತಾಪಮಾನ ಏರಿಕೆಯನ್ನು ತಡೆಗಟ್ಟುವ ಸಲುವಾಗಿ ವಿಶ್ವ ಸಂಸ್ಥೆಯ ನೇತೃತ್ವದಲ್ಲಿ ವಿಶ್ವದ ಬಹುತೇಕ ಎಲ್ಲಾ ರಾಷ್ಟ್ರಗಳು ಒಂದೆಡೆ ಕೂತು, ಸಮಾಲೋಚನೆ ನಡೆಸುವುದೇ 'ಕಾನ್ಫರೆನ್ಸ್ ಆಫ್ ಪಾರ್ಟೀಸ್-ಸಿಒಪಿ'. ವಿಶ್ವ ಸಂಸ್ಥೆಯು ಇಂತಹ ಸಮಾವೇಶಗಳನ್ನು ನಡೆಸಿಕೊಂಡು ಬಂದಿತ್ತಾದರೂ, ಇದಕ್ಕೊಂದು ವ್ಯವಸ್ಥಿತ ರೂಪ ನೀಡಿದ್ದು 1995ರಲ್ಲಿ.

1995ರಲ್ಲಿ ಸಿಒಪಿಯನ್ನು ರಚಿಸಲಾಯಿತು. ಜರ್ಮನಿಯ ಬರ್ಲಿನ್‌ನಲ್ಲಿ 1995ರ ಮಾರ್ಚ್ 28ರಿಂದ ಏಪ್ರಿಲ್ 7ರವರೆಗೆ ಈ ಸಮಾವೇಶ ನಡೆಯಿತು. 2020ರ ವೇಳೆಗೆ ಜಾಗತಿಕ ತಾಪಮಾನ ಏರಿಕೆಯನ್ನು ಸಂಪೂರ್ಣ ನಿಯಂತ್ರಣಕ್ಕೆ ತರುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ವಾಹನಗಳಿಂದಾಗುವ ವಾಯುಮಾಲಿನ್ಯ ಮತ್ತು ಕೈಗಾರಿಕೆಗಳಿಂದಾಗುವ ವಾಯುಮಾಲಿನ್ಯವನ್ನು ಕಡಿಮೆ ಮಾಡುವುದು ಮತ್ತು ಆ ಮೂಲಕ ಜಾಗತಿಕ ತಾಪಮಾನವನ್ನು ನಿಯಂತ್ರಿಸುವುದು ಈ ಸಮಾವೇಶದ ಪ್ರಮುಖ ಗುರಿಗಳಲ್ಲಿ ಒಂದಾಗಿತ್ತು.

ಪರಿಸರಪರ ಕಾರ್ಯಕರ್ತರು ಜಾಗತಿಕ ನಾಯಕರ ಮುಖವಾಡ ತೊಟ್ಟು ಗ್ಲಾಸ್ಗೋದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು ರಾಯಿಟರ್ಸ್ ಚಿತ್ರ

ಗ್ಲಾಸ್ಗೋದಲ್ಲಿ ತಾಪಮಾನ ಏರಿಕೆ ತಡೆ ಸಮಾವೇಶ

ಕಾರ್ಯರೂಪಕ್ಕೆ ಬರದ ಗುರಿಗಳು

ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳು ಇಂಗಾಲದ ಹೊರಸೂಸುವಿಕೆ ಕಡಿತಗೊಳಿಸಲು ಶ್ರೀಮಂತ ರಾಷ್ಟ್ರಗಳು ಆರ್ಥಿಕ ಮತ್ತು ತಂತ್ರಜ್ಞಾನದ ನೆರವು ನೀಡಬೇಕು ಎಂದು ಪ್ರತಿ ಸಿಒಪಿಯಲ್ಲೂ ಪ್ರತಿಪಾದಿಸಲಾಗಿದೆ. ಇದಕ್ಕೆ ಶ್ರೀಮಂತ ರಾಷ್ಟ್ರಗಳಲ್ಲಿ ಹೆಚ್ಚಿನವು ಸಹಮತ ಹೊಂದಿಲ್ಲ. 2009ರ ಸಿಒಪಿಯಲ್ಲಿ, ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಪ್ರತಿ ವರ್ಷ ₹7.5 ಲಕ್ಷ ಕೋಟಿ (10,000 ಡಾಲರ್) ನೆರವು ನೀಡುವುದಾಗಿ ಘೋಷಿಸಿದ್ದವು. ಅದು ಈವರೆಗೆ ನೆರವೇರಿಲ್ಲ.

2015ರ ಪ್ಯಾರಿಸ್ ಶೃಂಗಸಭೆಯಲ್ಲಿ ಜಾಗತಿಕ ತಾಪಮಾನವನ್ನು 2030ರ ವೇಳೆಗೆ ಅರ್ಧದಷ್ಟು ಕಡಿಮೆ ಮಾಡುವ ಮಧ್ಯಂತರ ಗುರಿ ಹಾಕಿಕೊಳ್ಳಲಾಗಿತ್ತು. ಇದಕ್ಕಾಗಿ ವಾಹನಗಳ ಇಂಗಾಲ ಹೊರಸೂಸುವಿಕೆ ಮಾನದಂಡವಾದ ಯೂರೊ-6 ಅನ್ನು 2022ರ ವೇಳೆಗೆ ಅಳವಡಿಸಿಕೊಳ್ಳುವ ಗುರಿ ಹಾಕಿಕೊಳ್ಳಲಾಯಿತು. ಯುರೊ-6ಗೆ ಸಂವಾದಿಯಾದ ಭಾರತ್ ಸ್ಟೇಜ್-6 (ಬಿಎಸ್-6) ಪರಿಮಾಣವನ್ನು ಭಾರತವು 2020ರಲ್ಲೇ ಅಳವಡಿಸಿಕೊಂಡಿತು.

ಆದರೆ ಈ ಕಾರ್ಯಕ್ಕಾಗಿ ನೆರವು ನೀಡಬೇಕಿದ್ದ ಅಮೆರಿಕವು 2015ರ ಪ್ಯಾರಿಸ್ ಒಪ್ಪಂದದಿಂದ 2017ರಲ್ಲಿ ಹೊರನಡೆಯಿತು. ಪ್ಯಾರಿಸ್ ಒಪ್ಪಂದದ ಗುರಿಗಳು ನನೆಗುದಿಗೆ ಬಿದ್ದವು. ಈಗ ಮತ್ತೆ ಜಾಗತಿಕ ತಾಪಮಾನ ನಿಯಂತ್ರಣದ ಗುರಿಯ ಕಾಲಮಿತಿಯನ್ನು 2070ಕ್ಕೆ ವಿಸ್ತರಿಸಲಾಗಿದೆ.

ಆಧಾರ: ವಿಶ್ವ ಸಂಸ್ಥೆ, ಎಎಫ್‌ಪಿ, ರಾಯಿಟರ್ಸ್

ನೆಟ್ ಝೀರೊ ಜಟಾಪಟಿ

ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸಬೇಕು ಎಂಬ ಕೂಗು ಸರಿಯಾಗಿ ಕಾರ್ಯರೂಪಕ್ಕೆ ಬರುವ ಮುನ್ನವೇ, ತಾಪಮಾನ ಈಗಾಗಲೇ 1.1 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿಬಿಟ್ಟಿದೆ. ಹೀಗಾಗಿಯೇ ನೀರ್ಗಲ್ಲು ಕರಗುವ, ಉಷ್ಣ ಮಾರುತಗಳು ಏಳುವ, ಭಾರಿ ಪ್ರವಾಹ ಉಂಟಾಗುವ ಮತ್ತು ಮಳೆ ವಿನ್ಯಾಸ ಏರುಪೇರಾಗುವ ವಿದ್ಯಮಾನಗಳು ವಿಶ್ವದ ಎಲ್ಲೆಡೆ ಜರುಗುತ್ತಿವೆ. ತಾಪಮಾನಕ್ಕೆ ಬೇಲಿ ಹಾಕುವ ಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬದಲಾಗಿ, ಅಭಿವೃದ್ಧಿ ಹೊಂದಿದ ದೇಶಗಳು ಹಾಗೂ ಅಭಿವೃದ್ಧಿಶೀಲ ದೇಶಗಳು ಜಟಾಪಟಿಗೆ ಇಳಿದಿವೆ.

ವಿಳಂಬ ಮತ್ತು ಒತ್ತಡ ತಂತ್ರ

ಕೈಗಾರಿಕೀಕರಣಕ್ಕಿಂತ ಮೊದಲು ಎಷ್ಟು ಪ್ರಮಾಣದಲ್ಲಿ ವಾತಾವರಣಕ್ಕೆ ಹಸಿರುಮನೆ ಅನಿಲಗಳನ್ನು ಬಿಡಲಾಗುತ್ತಿತ್ತೋ, ಮತ್ತೆ ಅಲ್ಲಿಗೆ ತಂದು ನಿಲ್ಲಿಸಬೇಕು ಎಂಬುದು 'ನೆಟ್ ಝೀರೊ' ಪರಿಕಲ್ಪನೆ. ವಾತಾವರಣಕ್ಕೆ ಇಂಗಾಲ ಹೊರಸೂಸುವಿಕೆಯನ್ನು ತಟಸ್ಥಗೊಳಿಸುವ 'ನೆಟ್ ಝೀರೊ' ಅನುಸರಿಸುವುದನ್ನು ಅಭಿವೃದ್ಧಿ ಹೊಂದಿದ ದೇಶಗಳು ವಿಳಂಬ ಮಾಡುತ್ತಿವೆ. ಆದರೆ, ಈಗಿನಿಂದಲೇ ಭಾರತದಂತಹ ದೇಶಗಳು ನೆಟ್ ಝೀರೊ ಅನುಸರಿಸಬೇಕು ಎಂಬ ಒತ್ತಡವನ್ನು ಶ್ರೀಮಂತ ದೇಶಗಳು ಹೇರಲಾರಂಭಿಸಿವೆ.

ಅಮೆರಿಕ ಹವಾಮಾನ ಪ್ರತಿನಿಧಿ ಜಾನ್ ಕೆರ್ರಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಈ ಸಂಬಂಧ ಒತ್ತಡ ಹೇರಿದ್ದರು. ಬ್ರಿಟನ್ ರಾಜಕಾರಣಿ ಹಾಗೂ ಸಿಒಪಿ26 ಅಧ್ಯಕ್ಷ ಅಲೋಕ್ ಶರ್ಮಾ ಅವರು ಜಿ-20 ದೇಶಗಳು ನೆಟ್ ಝೀರೊ ಗುರಿ ಹಾಕಿಕೊಳ್ಳಬೇಕು ಎಂದು ಒತ್ತಾಯಿಸಿದ್ದರು. ಹೀಗಾಗಿ ನೆಟ್ ಝೀರೊ ಅಭಿಯಾನ ಶ್ರೀಮಂತ ದೇಶಗಳ ಹಾಗೂ ಅಭಿವೃದ್ಧಿಶೀಲ ದೇಶಗಳ ಅಡಕತ್ತರಿಯಲ್ಲಿ ಸಿಲುಕಿದೆ.

ಭಾರತದ ಪ್ರತಿಪಾದನೆ

ಪಳೆಯುಳಿಕೆ ಇಂಧನಗಳ ಬಳಕೆಗೆ ಅಭಿವೃದ್ಧಿಶೀಲ ದೇಶಗಳಿಗೆ ಇನ್ನಷ್ಟು ವರ್ಷಗಳ ಕಾಲ ಅವಕಾಶ ನೀಡಬೇಕು ಎಂಬ ವಾದವಿದೆ. ಪ್ಯಾರಿಸ್ ಒಪ್ಪಂದದ ಪ್ರಕಾರ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇಂಗಾಲ ಹೊರಸೂಸುವಿಕೆಗೆ ಅವಕಾಶವಿದೆ. ಶ್ರೀಮಂತ ದೇಶಗಳು 2050ರ ವೇಳೆಗೆ 'ಇಂಗಾಲ ತಟಸ್ಥ' ಎಂದು ಘೋಷಿಸಬೇಕಿದೆ. ಭಾರತವು 2070ರ ವೇಳೆಗೆ ನೆಟ್ ಝೀರೋಗೆ ಬದಲಾಗುವುದಾಗಿ ತನ್ನ ಬದ್ಧತೆ ವ್ಯಕ್ತಪಡಿಸಿದೆ.

ಶುದ್ಧ ಇಂಧನ ಬಳಕೆಯನ್ನು ಹೆಚ್ಚಿಸಲು ಅಭಿವೃದ್ಧಿಶೀಲ ದೇಶಗಳಿಗೆ ಶ್ರೀಮಂತ ದೇಶಗಳು ಅನುದಾನ ಒದಗಿಸಬೇಕು ಎಂದು ಸಚಿವ ಪೀಯೂಷ್ ಗೋಯಲ್ ಒತ್ತಾಯಿಸಿದ್ದಾರೆ. ಈ ದಿಸೆಯಲ್ಲಿ ಮೊದಲು ಸಿರಿವಂತ ದೇಶಗಳು ಮೇಲ್ಪಂಕ್ತಿ ಹಾಕಲಿ ಎಂಬುದು ಭಾರತ ಸೇರಿದಂತೆ ಅಭಿವೃದ್ಧಿಶೀಲ ದೇಶಗಳ ಆಗ್ರಹ. ಆದರೆ ಮುಂದುವರಿದ ದೇಶಗಳು ಈ ಬಗ್ಗೆ ಬದ್ಧತೆ ತೋರುತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಉದ್ಯಮದ ದ್ವಂದ್ವ

ಇಂಗಾಲ ಹೊರಸೂಸುವಿಕೆ ತಡೆಯ ಭರವಸೆಯನ್ನು ದೊಡ್ಡ ದೊಡ್ಡ ಉದ್ಯಮಗಳು ನೀಡಲಾರಂಭಿಸಿವೆ. ಜಾಗತಿಕ ತಾಪಮಾನ ಏರಿಕೆ ತಡೆಗೆ ನಿಜವಾದ ಕಳಕಳಿಯನ್ನು ಈ ಉದ್ಯಮಗಳು ಹೊಂದಿವೆಯೇ? ಅಥವಾ ತಾಪಮಾನ ಏರಿಕೆ ತಡೆಗೆ ಕೈಜೋಡಿಸುತ್ತಿಲ್ಲ ಎಂಬ ಟೀಕೆಯಿಂದ ತಪ್ಪಿಸಿಕೊಳ್ಳಲು ಕೆಲವು ಕ್ರಮಗಳನ್ನು ಘೋಷಿಸುತ್ತಿವೆಯೇ ಎಂಬ ವಿಚಾರ ಚರ್ಚೆ ಆಗುತ್ತಿದೆ.

ಜಗತ್ತಿನ ಶೇ 40ರಷ್ಟು ಇಂಧನವನ್ನು ಉದ್ಯಮವು ಬಳಸಿಕೊಳ್ಳುತ್ತಿದೆ. ಅದರಲ್ಲಿ ಪಳೆಯುಳಿಕೆ ಇಂಧನಗಳಾದ ತೈಲ, ಅನಿಲ ಮತ್ತು ಕಲ್ಲಿದ್ದಲಿಗೇ ಸಿಂಹಪಾಲು. ಜಾಗತಿಕ ತಾಪಮಾನ ಏರಿಕೆಯಲ್ಲಿ ಈ ಇಂಧನಗಳ ಬಳಕೆಯ ಪರಿಣಾಮವೇ ದೊಡ್ಡದು ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆಯು (ಐಇಎ) ಹೇಳಿದೆ.

ದೊಡ್ಡ ಕಂಪನಿಗಳು ಮಹತ್ವಾಕಾಂಕ್ಷಿ ಗುರಿಗಳನ್ನು ಹಾಕಿಕೊಂಡಿವೆಯಾದರೂ ದೊಡ್ಡ ಪರಿಣಾಮ ಉಂಟಾಗಿಲ್ಲ ಎಂದು ಐಇಎ ಹೇಳುತ್ತಿದೆ.

ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ ಎಂಬ ಸಂಸ್ಥೆಯು 1,300 ಕಂಪನಿಗಳ ಸಮೀಕ್ಷೆ ನಡೆಸಿದೆ. ಇವುಗಳಲ್ಲಿ ಶೇ 11ರಷ್ಟು ಮಾತ್ರ ಕಳೆದ ಐದು ವರ್ಷಗಳಲ್ಲಿ ಇಂಗಾಲ ಹೊರಸೂಸುವಿಕೆಯ ಗುರಿಯನ್ನು ಮುಟ್ಟಿವೆ. ಹೊರಸೂಸುವಿಕೆ ಎಷ್ಟು ಎಂಬ ನಿಖರ ಲೆಕ್ಕ ಇಟ್ಟಿರುವ ಕಂಪನಿಗಳು ಶೇ ಒಂಬತ್ತರಷ್ಟು ಮಾತ್ರ.

ನೆಟ್ ಝೀರೊವನ್ನು ಕಂಪನಿಗಳು ಹೇಗೆ ವ್ಯಾಖ್ಯಾನಿಸುತ್ತವೆ ಎಂಬುದರ ಮೇಲೆ ಇಂಗಾಲ ಹೊರಸೂಸುವಿಕೆ ಕಡಿತವು ಅವಲಂಬಿತ. ಉದಾಹರಣೆಗೆ, ತೈಲ ಉತ್ಪಾದನಾ ಕಂಪನಿಗಳು ತಮ್ಮ ನೇರ ಇಂಗಾಲ ಹೊರಸೂಸುವಿಕೆಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬಹುದು. ಆದರೆ, ಈ ಕಂಪನಿಗಳ ಉತ್ಪನ್ನದಿಂದಾಗಿ ಇಂಗಾಲ ಹೊರಸೂಸುವಿಕೆ ಹೆಚ್ಚುತ್ತಲೇ ಹೋಗುತ್ತದೆ.

ಭಾರತದ ಎರಡು ಪ್ರಮುಖ ಸಮೂಹಗಳಾದ ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಗೌತಮ್ ಅದಾನಿ ನೇತೃತ್ವದ ಅದಾನಿ ಗ್ರೂಪ್‌ಗಳೆರಡೂ ತೈಲ, ಅನಿಲ, ಕಲ್ಲಿದ್ದಲುನಂತಹ ಇಂಗಾಲ ಆಧಾರಿತ ಉತ್ಪನ್ನಗಳನ್ನೇ ತಮ್ಮ ಉದ್ಯಮದ ಕೇಂದ್ರವಾಗಿ ಹೊಂದಿವೆ. ಆದರೆ, ಇತ್ತೀಚೆಗೆ ಎರಡೂ ಕಂಪನಿಗಳು ಇಂಗಾಲಮುಕ್ತ ಇಂಧನ ಉದ್ಯಮಕ್ಕೂ ಪ್ರವೇಶ ಮಾಡಿವೆ. ಸೌರ ಫಲಕಗಳು, ಬ್ಯಾಟರಿ ಮುಂತಾದ ಉದ್ಯಮಗಳತ್ತ ರಿಲಯನ್ಸ್ ವಾಲಿದೆ; ಅದಾನಿ ಗ್ರೀನ್ ಎನರ್ಜಿ ಕಂಪನಿಯು ಸೌರ್ ವಿದ್ಯುತ್ ಉತ್ಪಾದನೆಯ ಬಹುದೊಡ್ಡ ಕಂಪನಿಯಾಗಿದೆ.

ಈವರೆಗೆ, ಅಮೆರಿಕ ಮತ್ತು ಯುರೋಪ್‌ನ ಇಂಧನ ಕಂಪನಿಗಳತ್ತಲೇ ಗಮನ ಕೇಂದ್ರೀಕೃತವಾಗಿತ್ತು. ಇನ್ನು ಮುಂದೆ, ಜಗತ್ತಿನ ಇತರೆಡೆಯ ಕಂಪನಿಗಳ ಬಗ್ಗೆಯೂ ಗಮನ ಹರಿಸಬೇಕಾಗಿದೆ ಎಂದು ಐಇಎ ಹೇಳಿದೆ.

ಗ್ಲಾಸ್ಗೋ ಸಮಾವೇಶದ ಸುತ್ತ

- ಇಟಲಿ ಸಹಭಾಗಿತ್ವದಲ್ಲಿ, ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ನಡೆಯುತ್ತಿರುವ ಹವಾಮಾನ ಬದಲಾವಣೆ ಸಂಬಂಧಿತ ಶೃಂಗಸಭೆಯು ಅ.31ರಿಂದ ಆರಂಭವಾಗಿದ್ದು, ನ.12ರವರೆಗೆ ನಡೆಯಲಿದೆ
- ಯುಎನ್‌ಎಫ್‌ಸಿಸಿಸಿ (UNFCCC) ಎಂಬುದು ಹವಾಮಾನ ಬದಲಾವಣೆಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಸಂರಚನಾ ಸಮಾವೇಶ. 1994ರಲ್ಲಿ ಅಸ್ತಿತ್ವಕ್ಕೆ ಬಂದ ಯುಎನ್‌ಎಫ್‌ಸಿಸಿಸಿ, ಭಾರತ, ಅಮೆರಿಕ, ಫ್ರಾನ್ಸ್, ಇಟಲಿ ಸೇರಿದಂತೆ 197 ರಾಷ್ಟ್ರಗಳ ಸದಸ್ಯತ್ವ ಹೊಂದಿದೆ
- 2020 ನವೆಂಬರ್‌ನಲ್ಲಿ ನಡೆಯಬೇಕಿದ್ದ ಈ ಸಮಾವೇಶವು ಕೋವಿಡ್-19 ಸಾಂಕ್ರಾಮಿಕದ ಕಾರಣದಿಂದ ತಡವಾಗಿದೆ
- ಸದಸ್ಯ ರಾಷ್ಟ್ರಗಳು, ಭೂಮಿಯ ತಾಪಮಾನ ಏರಿಕೆಯನ್ನು ನಿಧಾನಗೊಳಿಸಬೇಕು ಹಾಗೂ ಹಸಿರುಮನೆ ಅನಿಲಗಳ (ಇಂಗಾಲದ ಡೈ ಆಕ್ಸೈಡ್, ಕ್ಲೋರೊಫ್ಲೂರೊ ಕಾರ್ಬನ್‌ನಂಥ ಅನಿಲಗಳು) ಹೊರಸೂಸುವಿಕೆಯನ್ನು ನಿಯಂತ್ರಿಸಬೇಕು ಎಂಬುದು ಇದರ ಕಾರ್ಯಸೂಚಿ
- ಜಾಗತಿಕ ತಾಪಮಾನವು, 2030ರ ವೇಳೆಗೆ ಕೈಗಾರಿಕಾಪೂರ್ವ ಮಟ್ಟಕ್ಕಿಂತ 1.5 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿನ ಮಿತಿಯನ್ನು ದಾಟಬಾರದು ಹಾಗೂ 2050ರ ವೇಳೆಗೆ ಜಗತ್ತಿನಾದ್ಯಂತ ಹಸಿರುಮನೆಗಳ ಅನಿಲಗಳ ಹೊರಸೂಸುವಿಕೆಯು ಸ್ಥಗಿತ (ನೆಟ್ ಝೀರೊ) ಆಗಬೇಕು ಎಂಬುದು ಪ್ರಮುಖ ಗುರಿ
- ಈ ಗುರಿ ತಲುಪುವಲ್ಲಿ, ಅರಣ್ಯ ಬೆಳೆಸುವುದು ಸೇರಿದಂತೆ ನೈಸರ್ಗಿಕ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು, ಬ್ಯಾಟರಿಚಾಲಿತ ವಾಹನಗಳ ಬಳಕೆ ಹಾಗೂ ಮರುಬಳಕೆ ಕ್ಷೇತ್ರದಲ್ಲಿ ಹೂಡಿಕೆಗೆ ಉತ್ತೇಜನ ನೀಡುವುದು ಪ್ರಮುಖ ಆದ್ಯತೆಯಾಗಿದೆ
- ನೈಸರ್ಗಿಕ ಆವಾಸಸ್ಥಾನ-ಸಮುದಾಯಗಳನ್ನು ಸಂರಕ್ಷಿಸುವ ಕ್ರಮಕ್ಕೆ ಮುಂದಾಗುವುದು
- 2015ರ ಪ್ಯಾರಿಸ್ ಶೃಂಗಸಭೆಯ ಒಪ್ಪಂದಕ್ಕೆ ಬದ್ಧತೆ ವ್ಯಕ್ತಪಡಿಸಿದ್ದ ದೇಶಗಳು, ಆ ದಿಸೆಯಲ್ಲಿ ಕೈಗೊಂಡ ಉಪಕ್ರಮಗಳೇನು? ಗುರಿ ಸಾಧನೆಯಲ್ಲಿನ ಪ್ರಗತಿಯನ್ನು ವಿವರಿಸಲು ಹಾಗೂ ಮುಂದಿನ ದಿನಗಳಲ್ಲಿ ಹಾಕಿಕೊಳ್ಳುವ ಗುರಿಯ ಬಗ್ಗೆ ಬದ್ಧತೆಯನ್ನು ವ್ಯಕ್ತಪಡಿಸಲು ಸದಸ್ಯ ರಾಷ್ಟ್ರಗಳಿಗೆ ಸಮಾವೇಶ ಅವಕಾಶ ಒದಗಿಸಿದೆ
- ಭೂಮಿಯ ಭವಿಷ್ಯಕ್ಕಾಗಿ ಹಾಗೂ ಗುರಿ ಸಾಧನೆಗಾಗಿ ಹೆಚ್ಚು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ಈ ದಿಸೆಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು, ಬಡ ಹಾಗೂ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ನೆರವಾಗುವಂಥ ದೃಢವಾದ ಕಾರ್ಯಯೋಜನೆಗಳನ್ನು ರೂಪಿಸುವುದು ಹಾಗೂ ಜಾಗತಿಕ ಒಗ್ಗಟ್ಟು ಪ್ರದರ್ಶಿಸುವುದು ಸಮಾವೇಶದ ಕಾರ್ಯಸೂಚಿಯಲ್ಲಿ ಸೇರಿದೆ

ಇಬ್ಬರಿಗೆ ಜೀವಾವಧಿ ಶಿಕ್ಷೆ ಪ್ರಕಟ

ಮೋದಿ ರ್‍ಯಾಲಿಯಲ್ಲಿ ಸ್ಫೋಟ ನಾಲ್ವರಿಗೆ ಮರಣ ದಂಡನೆ

ಪಟ್ನಾ (ಎಎಫ್‌ಪಿ): ನರೇಂದ್ರ ಮೋದಿ ಅವರು 2013ರಲ್ಲಿ ಭಾಗವಹಿಸಿದ್ದ ಚುನಾವಣಾ ರ್‍ಯಾಲಿಯಲ್ಲಿ ಬಾಂಬ್ ಸ್ಫೋಟಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರಿಗೆ ಪಟ್ನಾದ ವಿಶೇಷ ಎನ್‌ಐಎ ನ್ಯಾಯಾಲಯವು ಸೋಮವಾರ ಮರಣದಂಡನೆ ವಿಧಿಸಿದೆ.

ಸ್ಫೋಟ ಪ್ರಕರಣದಲ್ಲಿ ಮಾರಣಾಂತಿಕ ದಾಳಿ ನಡೆಸಿದ್ದ ಇಬ್ಬರಿಗೆ ಜೀವಾವಧಿ ಶಿಕ್ಷೆಯನ್ನು ಪ್ರಕಟಿಸಲಾಗಿದೆ.

ಮೋದಿ ಅವರು ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಸೇರಿದ್ದ ಬೃಹತ್ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುವ ಮುನ್ನ, ಪಟ್ನಾದ ಉದ್ಯಾನವೊಂದರಲ್ಲಿ ಸರಣಿ ಸ್ಫೋಟಗಳು ಸಂಭವಿಸಿದ್ದವು.

ಸಮೀಪದ ರೈಲು ನಿಲ್ದಾಣವನ್ನು ಗುರಿಯಾಗಿಸಿಕೊಂಡಿದ್ದ ಈ ಬಾಂಬ್ ದಾಳಿಯಲ್ಲಿ ಒಟ್ಟು ಆರು ಜನರು ಸಾವಿಗೀಡಾಗಿ, ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

ಅಪರಾಧಿಗಳೆಲ್ಲರೂ ನಿಷೇಧಿತ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ಸ್ ಆಫ್ ಇಂಡಿಯಾ ಗುಂಪಿಗೆ ಸೇರಿದವರು ಎಂದು ರಾಷ್ಟ್ರೀಯ ತನಿಖಾ ದಳವು ತಿಳಿಸಿದೆ.

'ಸರ್ಕಾರದ ವಿರುದ್ಧ ದಾಳಿ ನಡೆಸಲು ಹಾಗೂ ಪಿತೂರಿ ನಡೆಸಿದ್ದ ಕಾರಣಕ್ಕಾಗಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ' ಎಂದು ಸಾರ್ವಜನಿಕ ಅಭಿಯೋಜಕ ಲಲನ್ ಕುಮಾರ್ ಸಿನ್ಹಾ ಎಎಫ್‌ಪಿಗೆ ತಿಳಿಸಿದ್ದಾರೆ.

'ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಇತರ ಮೂವರಿಗೆ ನ್ಯಾಯಾಲಯವು 7ರಿಂದ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಿದೆ. ಈ ಬಗ್ಗೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು' ಎಂದು ಆರೋಪಿಗಳ ಪರ ವಕೀಲರು ಹೇಳಿದ್ದಾರೆ.

'ಪ್ರಕರಣದ ಮುಖ್ಯ ಸಂಚುಕೋರನನ್ನು ಗುರುತಿಸುವಲ್ಲಿ ಎನ್‌ಐಎ ವಿಫಲವಾಗಿದೆ. ಶಿಕ್ಷೆಗೆ ಒಳಗಾದವರು ಭಯೋತ್ಪಾದಕರಲ್ಲ. ಅವರು ಯಾವುದೇ ಕ್ರಿಮಿನಲ್ ದಾಖಲೆಯನ್ನೂ ಹೊಂದಿಲ್ಲ' ಎಂದು ವಕೀಲ ಸೈಯದ್ ಇಮ್ರಾನ್ ಘನಿ ತಿಳಿಸಿದ್ದಾರೆ.

ನೌಕಾಪಡೆ ಮಾಹಿತಿ ಸೋರಿಕೆ ಸಿಬಿಐನಿಂದ ಆರೋಪಪಟ್ಟಿ

ನವದೆಹಲಿ (ಪಿಟಿಐ): ಜಲಾಂತರ್ಗಾಮಿ ಯೋಜನೆಯೊಂದಕ್ಕೆ ಸಂಬಂಧಿಸಿ ಗೌಪ್ಯ ಮಾಹಿತಿಯನ್ನು ಲಂಚ ಪಡೆದು ಸೋರಿಕೆ ಮಾಡಿದ ಪ್ರಕರಣದಲ್ಲಿ, ನೌಕಾಪಡೆಯ ಕಮಾಂಡರ್ ಶ್ರೇಣಿಯ ಅಧಿಕಾರಿಗಳನ್ನು ಬಂಧಿಸಿರುವ ಸಿಬಿಐ, ಮಂಗಳವಾರ ತನ್ನ ಮೊದಲ ಆರೋಪಪಟ್ಟಿಯನ್ನು ಸಲ್ಲಿಸಿದೆ.

ಸಿಬಿಐ ವಿಶೇಷ ನ್ಯಾಯಾಧೀಶರ ಮುಂದೆ ಸಲ್ಲಿಸಿದ ಆರೋಪಪಟ್ಟಿಯಲ್ಲಿ, ನೌಕಾಪಡೆಯ ಇಬ್ಬರು ಕಮಾಂಡರ್‌ಗಳು ಸೇರಿ ಆರು ಮಂದಿಯನ್ನು ಆರೋಪಿಗಳು ಎಂದು ಸಿಬಿಐ ಹೆಸರಿಸಿದೆ.

ಅಜಿತ್ ಕುಮಾರ್ ಪಾಂಡೆ, ಕಮಾಂಡರ್ ಶ್ರೇಣಿಯ ನಿವೃತ್ತ ಅಧಿಕಾರಿ ರಣದೀಪ್ ಸಿಂಗ್, ಕೊರಿಯನ್ ಜಲಾಂತರ್ಗಾಮಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕಮಾಂಡರ್ ಶ್ರೇಣಿಯ

ಇನ್ನೊಬ್ಬ ನಿವೃತ್ತ ಅಧಿಕಾರಿ ಎಸ್. ಜೆ. ಸಿಂಗ್ ಹೆಸರು ಆರೋಪಪಟ್ಟಿಯಲ್ಲಿದೆ. ಎಸ್. ಜೆ. ಸಿಂಗ್ ಖಾಸಗಿ ಕಂಪನಿಯಲ್ಲಿ ನಿರ್ದೇಶಕನಾಗಿದ್ದು, ಹವಾಲಾ ದಂಧೆ ನಡೆಸುತ್ತಿರುವ ಆರೋಪವೂ ಇದೆ.

ಸಿಬಿಐ ಇಬ್ಬರು ನಿವೃತ್ತ ಅಧಿಕಾರಿಗಳನ್ನು ಬಂಧಿಸಿತ್ತು. ಶೋಧದ ವೇಳೆ ಇವರಲ್ಲಿ ಒಬ್ಬರ ನಿವಾಸದಿಂದ ₹2 ಕೋಟಿಯನ್ನು ವಶಪಡಿಸಿಕೊಳ್ಳಲಾಗಿತ್ತು.

ಆರೋಪಿಗಳ ವಿರುದ್ಧ ಐಪಿಸಿ ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆ, ಕ್ರಿಮಿನಲ್ ಪಿತೂರಿ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶವಿರೋಧಿಗಳ ಕೈವಾಡದ ತನಿಖೆ

ನೌಕಾಪಡೆಯ ಕಮಾಂಡರ್ ಶ್ರೇಣಿಯ ಅಧಿಕಾರಿಗಳು ಗೋಪ್ಯ ಮಾಹಿತಿಯನ್ನು ನಿವೃತ್ತ ಅಧಿಕಾರಿಗಳಿಗೆ ಸೋರಿಕೆ ಮಾಡಿದ್ದರು ಎಂದು ಆರೋಪಿಸಲಾಗಿದೆ. ಪ್ರಕರಣದಲ್ಲಿ ವಿದೇಶಿಯರು ಭಾಗಿ ಆಗಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಸಿಬಿಐನ ಭ್ರಷ್ಟಾಚಾರ ತಡೆ ಘಟಕವು ಈ ಪ್ರಕರಣದ ತನಿಖೆಯ ಹೊಣೆ ಹೊತ್ತಿದೆ. ಹಾಲಿ ಅಧಿಕಾರಿಗಳು ಮತ್ತು ನಿವೃತ್ತ ಅಧಿಕಾರಿಗಳು ಸೇರಿ ಹಲವು ಮಂದಿಯನ್ನು ಸಿಬಿಐ ತನಿಖೆಗೆ ಒಳಪಡಿಸಿದೆ.

ಡಿಜಿಟಲ್ ಸಾಕ್ಷ್ಯಗಳ ವಿಧಿ ವಿಜ್ಞಾನ ಪರಿಶೀಲನೆ ನಡೆಸಲಾಗುತ್ತಿದೆ. ದೇಶವಿರೋಧಿ ಶಕ್ತಿಗಳ ಕೈಗೆ ನೌಕಾಪಡೆಯ ಗೋಪ್ಯ ಮಾಹಿತಿ ರವಾನೆ ಆಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ತನಿಖೆ ನಡೆಸಲಾಗುತ್ತಿದೆ.

ನೌಕಾಪಡೆಯು ಪ್ರತ್ಯೇಕವಾದ ತನಿಖೆಯನ್ನು ನಡೆಸುತ್ತಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಭಾವಚಿತ್ರಕ್ಕೆ ಕೈಮುಗಿದು ಪುಷ್ಪನಮನ ಸಲ್ಲಿಸುತ್ತಿರುವ ಚಿತ್ರವೊಂದು ಇತ್ತೀಚೆಗೆ ವೈರಲ್ ಆಗಿದೆ. ಇಂದಿರಾ ಗಾಂಧಿ ಅವರ ಚಿತ್ರದ ಹಿಂದೆ ಮರದ ಚೌಕಟ್ಟು ಇದೆ. ಇದರ ಹಿಂದೆ ಛತ್ರಪತಿ ಶಿವಾಜಿ ಅವರ ಚಿತ್ರವಿದೆ. ಶಿವಾಜಿ ಭಾವಚಿತ್ರದ ಮೇಲೆ ಮರದ ಚೌಕಟ್ಟನ್ನು ಇರಿಸುವ ಮೂಲಕ ಮರಾಠ ಚಕ್ರವರ್ತಿಯನ್ನು ಠಾಕ್ರೆ ಅವಮಾನಿಸಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆರೋಪಿಸಲಾಗಿದೆ.

ಶಿವಾಜಿ ಭಾವಚಿತ್ರಕ್ಕೆ ಠಾಕ್ರೆ ಅಪಮಾನ?

ವೈರಲ್ ಆಗಿರುವ ಚಿತ್ರದ ಆ್ಯಂಗಲ್ ಸಾಕಷ್ಟು ಜನರಲ್ಲಿ ಗೊಂದಲ ಹುಟ್ಟುಹಾಕಿದೆ ಎಂದು ಇಂಡಿಯಾಟುಡೇ ವೆಬ್‌ಸೈಟ್ ವರದಿ ಮಾಡಿದೆ. ಅಕ್ಟೋಬರ್ 31ರಂದು ಇಂದಿರಾಗಾಂಧಿ ಅವರ ಪುಣ್ಯತಿಥಿಯ ವೇಳೆ ಅವರ ಭಾವಚಿತ್ರಕ್ಕೆ ಠಾಕ್ರೆ ನಮಿಸಿದ್ದರು. ಆದರೆ ಇಂದಿರಾ ಫೋಟೊವನ್ನು ಇರಿಸಲಾಗಿದ್ದ ಮರದ ಚೌಕಟ್ಟನ್ನು, ಗೋಡೆಯ ಮೇಲಿರುವ ಶಿವಾಜಿ ಚಿತ್ರದ ಮೇಲೆ ಒರಗಿಸಿದಂತೆ ಮೇಲ್ನೋಟಕ್ಕೆ ಭಾಸವಾಗುತ್ತದೆ. ಆದರೆ ವಿಡಿಯೊವನ್ನು ಪರಿಶೀಲಿಸಿದಾಗ, ಎರಡೂ ಚಿತ್ರಗಳ ನಡುವೆ ಸಾಕಷ್ಟು ಅಂತರವಿರುವುದು ಕಾಣಿಸುತ್ತದೆ.

ಗುಂಡಣ್ಣ

ದಿನ ಭವಿಷ್ಯ

ಬುಧವಾರ ನವೆಂಬರ್ 3, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಸ್ವಾತಿ ತ್ರಯೋದಶೀ ಗಂ. 1-25 (ಬೆ. 6-55) ಉಪರಿ ಚತುರ್ದಶೀ ಗಂ. 55-39 (ಬೆ.ಝಾ. 5-11) ಬುಧವಾರ ನಿತ್ಯ ನಕ್ಷತ್ರ ಹಸ್ತ ಗಂ. 6-25 (ಬೆ. 8-56) ವಿಷ್ಕಂಭ ನಾಮ ಯೋಗ ಗಂ. 21-32 ವಣಿಜ ಕರಣ ಗಂ. 1-25 ಉಪರಿ ಭದ್ರೆ ಕರಣ ಗಂ. 27-49 ವಿಷ ಗಂ. 25-35 ಅಮೃತ ಗಂ 48-32 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00: ಸೂರ್ಯೋದಯ: 6-16 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 7 8

ಮೇಷ: ನಿತ್ಯದ ಕೆಲಸಗಳಲ್ಲದೇ ಹಮ್ಮಿಕೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದರೊಂದಿಗೆ ನೆಮ್ಮದಿಯ ವಾತಾವರಣಕ್ಕೆ ಕಾರಣರಾಗಲಿದ್ದೀರಿ. ಪ್ರಚಲಿತ ವಿದ್ಯಮಾನಗಳ ಬಗ್ಗೆ ಆಸಕ್ತಿ ತಳೆಯಲಿದ್ದೀರಿ.

ವೃಷಭ: ವಿವಾದಗಳು ಇತ್ಯರ್ಥಗೊಂಡು ಮಾನಸಿಕ ನೆಮ್ಮದಿ ಮೂಡಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಭಾಗ್ಯ ನಿಮ್ಮದಾಗಲಿದೆ. ವಿಶೇಷ ಭೋಜನ ಸಾಧ್ಯತೆ.

ಮಿಥುನ: ಆಪ್ತರೊಂದಿಗೆ ವಿಚಾರ ವಿನಿಮಯ ನಡೆಸಲಿದ್ದೀರಿ. ಆರ್ಥಿಕ ಸಂಕಷ್ಟ ಪರಿಹರಿಸಿಕೊಳ್ಳುವಿರಿ. ಓದಿನಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ. ಮಕ್ಕಳಿಂದ ಶುಭ ಸುದ್ದಿಯೊಂದನ್ನು ಕೇಳಲಿದ್ದೀರಿ.

ಕರ್ಕಾಟಕ: ಬರವಣಿಗೆಯಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಕಂಡುಬರುವುದು. ಮನೆಯ ಕೆಲಸ ಕಾರ್ಯಗಳ ಜವಾಬ್ದಾರಿಯಿಂದ ಮುಕ್ತರಾಗಿ ಸಂಗಾತಿಯೊಂದಿಗೆ ಪ್ರವಾಸಕ್ಕೆ ತೆರಳುವಿರಿ.

ಸಿಂಹ: ಕಳೆದುಹೋದ ವಸ್ತು ಅಥವಾ ಬಹುದಿನಗಳಿಂದ ಬರಬೇಕಾಗಿದ್ದ ವಸ್ತುಗಳನ್ನು ಪುನಃ ಪಡೆದುಕೊಳ್ಳುವ ಸಾಧ್ಯತೆ. ಚರ ಆಸ್ತಿಗಳ ಖರೀದಿ ಮಾಡಲಿದ್ದೀರಿ. ದೇವತಾ ಕಾರ್ಯಗಳಲ್ಲಿ ಭಾಗಿ.

ಕನ್ಯಾ: ಸಾಹಿತ್ಯ, ಸಂಗೀತ ಕಲಾ ನೈಪುಣ್ಯತೆ ಹೊಂದಿರುವ ವ್ಯಕ್ತಿಗಳೊಡನಾಟ ದಿನವಿಡೀ ದೊರಕುವ ಸಾಧ್ಯತೆ. ರಿಯಲ್ ಎಸ್ಟೇಟ್ ನಂತಹ ಭೂ ಸಂಬಂಧಿ ವ್ಯವಹಾರಗಳಲ್ಲಿ ಅಧಿಕ ಲಾಭ.

ತುಲಾ: ಆಸ್ತಿಯನ್ನು ಪಡೆದುಕೊಳ್ಳುವ ಸಾಧ್ಯತೆ ಕಂಡುಬರುತ್ತಿದೆ. ವಾಹನ ರಿಪೇರಿ, ಮಾರಾಟಗಾರರಿಗೆ ಉತ್ತಮ ವ್ಯವಹಾರ ನಡೆದು ಹೆಚ್ಚಿನ ಆದಾಯ. ಕಾನೂನಿಗೆ ಸಂಬಂಧಿಸಿದ ವಿಷಯದಲ್ಲಿ ಸೂಕ್ತ ಸಲಹೆ ಪಡೆಯುವುದು ಸೂಕ್ತ.

ವೃಶ್ಚಿಕ: ಮನೆಯಲ್ಲಿ ಸಂತೋಷದ ವಾತಾವರಣ. ಆದಾಯದಲ್ಲಿ ಹೆಚ್ಚಳ. ಸರ್ಕಾರಿ ನೌಕರರಿಗೆ ಬಿಡುವಿನ ದಿನವಾಗಿದ್ದರೂ, ಉನ್ನತ ಹುದ್ದೆಯಲ್ಲಿರುವವರಿಗೆ ಜವಾಬ್ದಾರಿ ಹೆಚ್ಚಾಗಲಿದೆ.

ಧನು: ಕ್ರೀಡಾಪಟುಗಳಿಗೆ ಉತ್ತೇಜನ ದೊರಕುವ ಸಂಭವವಿದ್ದು ಉತ್ತಮ ಸಾಧನೆ ತೋರಲಿದ್ದೀರಿ. ವಿಪರೀತ ಅನವಶ್ಯಕ ಮಾತುಗಳಿಂದಾಗಿ ಕಾರ್ಯ ಕೆಟ್ಟುಹೋಗುವ ಸಾಧ್ಯತೆ ಇದೆ. ವಾಹನ ವ್ಯವಹಾರಗಳಿಂದ ವಿಶೇಷ ಲಾಭ.

ಮಕರ: ಮನೆಯಲ್ಲಿ ಮೃದುಭಾಷಿಯಾಗಿ ವ್ಯವಹರಿಸಿ ಕೆಲಸಗಳ ನಿಧಾನಗತಿಯಲ್ಲಿದ್ದರೂ ಮನಸ್ಸಿನಲ್ಲಿನ ದುಗುಡವನ್ನು ಮುಚ್ಚಿಡಲು ಪ್ರಯತ್ನಿಸುವಿರಿ. ದೂರದ ಸಂಬಂಧಿಕರೊಬ್ಬರ ಆಗಮನ ಸಾಧ್ಯತೆ.

ಕುಂಭ: ವರಮಾನದಲ್ಲಿ ಗಣನೀಯ ಸುಧಾರಣೆ. ವಿದೇಶದಿಂದ ಮಕ್ಕಳ ಅಥವಾ ಸಮೀಪದ ಬಂಧುಗಳ ಆಗಮನಕ್ಕಾಗಿ ಎದುರು ನೋಡುವಿರಿ. ಗೃಹಾಲಂಕಾರ ವಸ್ತುಗಳ ಖರೀದಿ ಸಾಧ್ಯತೆ ಕಂಡುಬರುವುದು.

ಮೀನ: ಮಕ್ಕಳಿಗಾಗಿ ದುಬಾರಿ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆ. ಶ್ರೀಮಂತ ಜೀವನದ ಶೈಲಿಗಾಗಿ ವೆಚ್ಚ ಭರಿಸಲಿದ್ದೀರಿ. ಸೋದರಿಯರ ವಿಚಾರದಲ್ಲಿ ಧಾರಾಳತನ ತೋರಲಿದ್ದೀರಿ.

ನಿಮ್ಮ ಜನ್ಮದಿನ 3-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ಈ ವರ್ಷ ನೀವು ಹೆಚ್ಚಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಉದ್ಯೋಗದ ಸ್ಥಳದಲ್ಲಿ ಉತ್ತಮ ಸಂಪರ್ಕಗಳು ಸಿಗುತ್ತವೆ. ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಇರುವುದರಿಂದ ದೀರ್ಘಕಾಲಿಕ ಹೂಡಿಕೆಗಳಲ್ಲಿ ಹಣ ತೊಡಗಿಸಿಕೊಳ್ಳುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮ-ಜಗದಾತ್ಮ

ಕಣ್ಣಿರದೆ ರವಿಯೇನು? ರವಿಯಿರದೆ ಕಣ್ಣೇನು?|
ಅನ್ಯೋನ್ಯ ಸಹಕೃತಿಯಿನುಭಯ ಸಾರ್ಥಕತೆ||
ನಿನ್ನಾತ್ಮ ಜಗದಾತ್ಮಕಂತು ಸಂಬಂಧವವು|
ವಹ್ನಿಸ್ಫುಲಿಂಗಗಳೊ – ಮಂಕುತಿಮ್ಮ ||489||

ಪದ-ಅರ್ಥ: ಸಹಕೃತಿಯಿನುಭಯ = ಸಹಕೃತಿಯಿಂ (ಸಹಕಾರದಿಂದ) + ಉಭಯ, ಜಗದಾತ್ಮಕಂತು = ಜಗದಾತ್ಮಕೆ + ಅಂತು, ವಹ್ನಿ = ಬೆಂಕಿ, ಸ್ಫುಲಿಂಗ = ಕಿಡಿ.

ವಾಚ್ಯಾರ್ಥ: ಕಣ್ಣೇ ಇರದಿದ್ದರೆ ಸೂರ್ಯನ ಬೆಳಕಿನಿಂದ ಏನು ಪ್ರಯೋಜನ? ಸೂರ್ಯನೆ ಇಲ್ಲದಿದ್ದರೆ ಕಣ್ಣಿದ್ದರೂ ಪ್ರಯೋಜನವೇನು? ಹೀಗೆ ಕಣ್ಣು ಮತ್ತು ಬೆಳಕಿಗೆ ಸಾರ್ಥಕತೆ ಬರುವುದು ಪರಸ್ಪರ ಸಹಕಾರದಿಂದ. ಮನುಷ್ಯನ ಹಾಗೂ ಜಗದ ಆತ್ಮಕ್ಕೆ ಸಂಬಂಧ ಕೂಡ ಬೆಂಕಿ ಮತ್ತು ಕಿಡಿಗಳ ಸಂಬಂಧದಂತೆ.

ವಿವರಣೆ: ಕಣ್ಣಿನ ಕೆಲಸವಿರುವುದೇ ಬೆಳಕಿನಲ್ಲಿ. ಬೆಳಕಿಲ್ಲದೆ ಅದಕ್ಕೆ ಕೆಲಸವಿಲ್ಲ. ಜಗತ್ತಿನಲ್ಲಿ ನಡೆಯುವುದೆಲ್ಲ ಕತ್ತಲು ಮತ್ತು ಬೆಳಕಿನ ಆಟ. ಕತ್ತಲಿನ ಎದೆಯನ್ನು ಸೀಳಿ ಬರುವ ಬೆಳಕು. ಬೆಳಕಿದ್ದಾಗ ಕತ್ತಲೆ ಮರೆಯಾಗುತ್ತದೆ. ಜಗತ್ತನ್ನು ಕಣ್ಣಿಗೆ ಕಾಣುವಂತೆ ಮಾಡುವುದು ಬೆಳಕಲ್ಲವೆ? ಹಾಗಿದ್ದರೆ ಕಣ್ಣಿಲ್ಲದವರಿಗೆ ಬೆಳಕೇ ಇಲ್ಲವೇ? ಇದೆ. ಅದು ಬಾಹ್ಯದ ಕತ್ತಲೆಯನ್ನು ಮೀರಿ ಅಂತರಂಗದ ಪ್ರಕಾಶವನ್ನು ಕಾಣುತ್ತದೆ. ಆದರೆ ಸಾಮಾನ್ಯ ದೃಷ್ಟಿಯಲ್ಲಿ ಕಣ್ಣು ಮತ್ತು ಬೆಳಕುಗಳು ಪರಸ್ಪರ ಹೊಂದಾಣಿಕೆಯಲ್ಲೇ ಇರುವಂಥವುಗಳು. ಒಂದಿಲ್ಲದಿದ್ದರೆ ಮತ್ತೊಂದಿಲ್ಲ. ಅವೆರಡರ ಸಹಕಾರದಲ್ಲೆ ದೃಷ್ಟಿಯ ಸಾರ್ಥಕತೆ. ಇದೇ ಬಗೆಯ ಸಂಬಂಧ ಇರುವುದು ನಮ್ಮ ಆತ್ಮ ಹಾಗೂ ಜಗದಾತ್ಮದ ನಡುವೆ. ಮನುಷ್ಯ 'ನಾನು' ಎಂದು ಹೇಳುವಾಗ ತನ್ನ ಮನಸ್ಸಿನಲ್ಲಿ ಯಾವುದನ್ನು ಉದ್ದೇಶಿಸಿಕೊಂಡಿದ್ದಾನೋ ಅದು ಆತ್ಮ. ಇದು ನನ್ನ ಕೈ, ಇದು ನನ್ನ ಕಾಲು, ನನ್ನ ತಲೆ ಎಂದೆಲ್ಲ ಹೇಳುವುದು, ಇದು ನನ್ನ ಪೆನ್ನು, ಇದು ನನ್ನ ವಾಚು ಎಂದು ಹೇಳಿದಂತೆ. ಹಾಗೆ ಹೇಳುವಾಗ, ನಾನು ಬೇರೆ, ಪೆನ್ನು, ವಾಚು ಬೇರೆ ಅಲ್ಲವೇ? ಇದು 'ನನ್ನ ಕೈ' ಎಂದು ಹೇಳಿದಾಗ ನಾನು ಬೇರೆ, ಕೈ ಬೇರೆ. ನಾನು ಕೈ ಅಲ್ಲ, ಕಾಲು ಅಲ್ಲ. ಹಾಗಾದರೆ 'ನಾನು' ಯಾರು? ನನ್ನ ದೇಹದಲ್ಲೇ ಇದ್ದು ದೇಹಕ್ಕಿಂತ ಬೇರೆಯದಾದ, ಆದರೆ ಇಡೀ ದೇಹವನ್ನು ತನ್ನ ಹಿಡಿತದಲ್ಲಿ ತೆಗೆದುಕೊಂಡ, ಚೈತನ್ಯವೇ ಆತ್ಮ. ಅದು ನನ್ನ ಆತ್ಮ. ಹೀಗೆ ಪ್ರಪಂಚದ ಎಲ್ಲ ಪ್ರಾಣಿಗಳಲ್ಲಿಯೂ ಇರುವ ಚೈತನ್ಯಗಳ ಒಟ್ಟು ಜ್ಞಾನವೇ ಜಗದಾತ್ಮ ಅಥವಾ ಪರಮಾತ್ಮ. ಪ್ರತಿಯೊಬ್ಬ ಮನುಷ್ಯನಲ್ಲಿರುವ ಆತ್ಮಕ್ಕೂ, ಜಗತ್ತಿನ ಆತ್ಮಕ್ಕೂ ಒಂದು ಅನ್ಯೋನ್ಯ ಸಂಬಂಧ. ಒಂದು ಬಿಟ್ಟು ಮತ್ತೊಂದಿಲ್ಲ. ಸಮುದ್ರಕ್ಕೆ ಹೋಗಿ ಒಂದು ಬಿಂದಿಗೆ ನೀರು ತುಂಬಿಕೊಂಡು ಬಂದಾಗ ಅದು ಬಿಂದಿಗೆ ನೀರು ಮಾತ್ರ. ಈ ಬಿಂದಿಗೆ ನೀರು ಸಹಸ್ರ ಸಹಸ್ರ ಕೋಟಿ ಬಿಂದಿಗೆಗಳಷ್ಟು ವಿಶಾಲವಾದ ಸಮುದ್ರದ ಒಂದು ಹನಿ. ಬಿಂದಿಗೆ ನೀರು ನನ್ನಾತ್ಮವಾದರೆ ಸಮುದ್ರದ ನೀರು ಜಗದಾತ್ಮ. ಈ ಮಾತನ್ನು ಕಗ್ಗ ಎಷ್ಟು ಸುಂದರವಾದ ಉಪಮೆಯೊಂದಿಗೆ ವರ್ಣಿಸುತ್ತದೆ! 'ವಹ್ನಿ ಸ್ಫುಲಿಂಗಗಳು' ಎನ್ನುತ್ತದೆ. ವಹ್ನಿ ಎಂದರೆ ಬೆಂಕಿ. ದಗದಗನೆ ದೊಡ್ಡದಾಗಿ ಉರಿಯುತ್ತಿರುವ ಬೆಂಕಿಯಿಂದ ಆಗಾಗ ಪುಟ್ಟ ಕಿಡಿಗಳು ಹಾರುತ್ತವೆ. ಕಿಡಿ ಜೀವಾತ್ಮ ಮತ್ತು ಬೆಂಕಿ ಜಗದಾತ್ಮ. ❖

ಪದಬಂಧ 4767

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜಟಕಾಬಂಡಿ ಎಂದೆನಿಸುವ ಜೀವನ (3)
3.ಕುದುರೆಯ ಲಾಯ (3)
4.ಒಣಗಿದ ವಸ್ತು (3)
6.ಕುರುಡಿಯ ಹತ್ತಿರದಲ್ಲಿಯೇ ಕಾಣಿಸಿದ ಚಿಗುರು (2)
7.ಭವನದ ಮೇಲಿಂದ ವೀಕ್ಷಿಸಿರುವ ಆಕಾಶ (2)
9.ಸಂಯಮದಿಂದ ನಿಂತಿರುವ ಮೃತ್ಯುದೇವತೆ! (2)
13.ಮನಸ್ಸು ಇಲ್ಲಿ ಚಿಕ್ಕದಾಗಿದೆ (2)
14.ಹಣೆಯಲ್ಲಿ ಇಟ್ಟುಕೊಳ್ಳುವ ಬೊಟ್ಟು (3)
15.ದಾವಣಿ ಧರಿಸಿ ಹಾಡುತ್ತಿರುವ ಜಾನಪದ ಹಾಡು (3)
16.ಹಿಸ್ಸೆಯುಳ್ಳ ಅಂಚೆ! (3)

ಮೇಲಿಂದ ಕೆಳಕ್ಕೆ

1.ಕ್ಷಾಮವಿದ್ದಾಗಲೇ ಇದು ನಿಸ್ಸಾರ (3)
2.ನ್ಯಾಯವಲ್ಲದ ತರ್ಕ (3)
3.ಒಟ್ಟು ವ್ಯಾಪಾರ ಮಾಡುವ ಅಂಗಡಿ (2)
5.ನಡುಗುತ್ತುರುವವನ ಮಂದಹಾಸವೇ ಇಲ್ಲಿ ಉಲ್ಟಾ! (2)
6.ವಂಚನೆಯ ಯುಕ್ತಿ (5)
8.ಸಂಸಾರದ ಸೆರೆಯಿದು (5)
10.ಸಾಮತಿಯಲ್ಲಿರುವ ಬುದ್ಧಿ (2)
11.ಅಸಹ್ಯ ರೂಪವುಳ್ಳದ್ದು (3)
12.ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಕೈದೀಪ (3)
13.ರಮಣಿ ಹಿಡಿದಿರುವ ರತ್ನ (2)



4766ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಭಾವಮೈದುನ 4.ಪಗಾರ 5.ಟಗರು 9.ವರ್ಜ್ಯ 10.ದರಗ 11.ಮನಾ 12.ನಸುಕು 14.ಅಂತಕ 15.ಲವಲವಿಕೆ

ಮೇಲಿಂದ ಕೆಳಕ್ಕೆ: 1.ತ್ರಿಮೈ 2.ಭಾರ 3.ನಟ 4.ಪರ್ಯವಸಾನ 6.ರುದ್ರನಾಟಕ 7.ಚಂದನ 8.ಅಂಗದ 13.ಕುಲ 14.ಅಂಕೆ 16.ಲಡಿ

ಸುಡೊಕು 5153

		1		8				5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5152 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

2022–23ನೇ ಬಜೆಟ್ ಸಿದ್ಧತೆ ಶುರು

ನೇರ, ಪರೋಕ್ಷ ತೆರಿಗೆ: ಸಲಹೆ ಕೋರಿದ ಕೇಂದ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತೆರಿಗೆ ಪ್ರಮಾಣದಲ್ಲಿ ಬದಲಾವಣೆ ಬಗ್ಗೆ ಸಲಹೆಗೆ ಅವಕಾಶ
- ಆದಾಯ ತೆರಿಗೆ ಮಿತಿ ತಗ್ಗಿಸಲು ಆಗ್ರಹ ಸಾಧ್ಯತೆ

ನವದೆಹಲಿ: ನೇರ ಹಾಗೂ ಪರೋಕ್ಷ ತೆರಿಗೆ ವ್ಯವಸ್ಥೆಗಳಲ್ಲಿ ಆಗಬೇಕಿರುವ ಬದಲಾವಣೆಗಳ ಕುರಿತು ಸಲಹೆ ನೀಡುವಂತೆ ಕೇಂದ್ರ ಹಣಕಾಸು ಸಚಿವಾಲಯವು ಉದ್ಯಮ ಹಾಗೂ ವ್ಯಾಪಾರ ಸಂಘಟನೆಗಳಿಗೆ ಸೂಚಿಸಿದೆ. ಈ ಮೂಲಕ ಸಚಿವಾಲಯವು, ಕೇಂದ್ರ ಬಜೆಟ್ ಸಿದ್ಧಪಡಿಸುವ ಕೆಲಸ ಶುರು ಮಾಡಿದೆ.

2022-23ನೇ ಸಾಲಿನ ಬಜೆಟ್‌ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಮಂಡನೆ ಮಾಡುವ ನಿರೀಕ್ಷೆ ಇದೆ. ಸಚಿವಾಲಯ ಕೋರಿರುವಂತೆ ಸಲಹೆಗಳನ್ನು ಈ ತಿಂಗಳ 15ರ ಒಳಗೆ ಸಲ್ಲಿಸಬೇಕಿದೆ. ನೇರ ಹಾಗೂ ಪರೋಕ್ಷ ತೆರಿಗೆ ವ್ಯವಸ್ಥೆಗಳಲ್ಲಿ ತೆರಿಗೆ ಪ್ರಮಾಣ, ಸ್ವರೂಪ ಮತ್ತು ತೆರಿಗೆ ನೆಲೆಯನ್ನು ವಿಸ್ತರಿಸುವ ಬಗ್ಗೆ ಸಲಹೆಗಳನ್ನು ನೀಡಲು ಅವಕಾಶ ಇದೆ. ಉದ್ಯಮ ಹಾಗೂ ವ್ಯಾಪಾರ ವಲಯದ ಸಂಘಟನೆಗಳು ನೀಡುವ ಸಲಹೆಗಳಿಗೆ ಆರ್ಥಿಕ ಸಮರ್ಥನೆಗಳು ಇರಬೇಕು.

2020ರ ಬಜೆಟ್‌ನಲ್ಲಿ ನಿರ್ಮಲಾ ಅವರು ಕಾರ್ಪೊರೇಟ್ ತೆರಿಗೆ ಮಿತಿಯನ್ನು ಶೇಕಡ 30ರಿಂದ ಶೇ 25.2ಕ್ಕೆ ಇಳಿಕೆ ಮಾಡಿದ್ದರು. ಈ ಬಾರಿ ಈ ತೆರಿಗೆಯನ್ನು ಇನ್ನಷ್ಟು ತಗ್ಗಿಸುವಂತೆ ಸಲಹೆಗಳು ಬರುವ ಸಾಧ್ಯತೆ ಇದೆ. ತೆರಿಗೆ ವಂಚನೆ ತಪ್ಪಿಸುವ ಉದ್ದೇಶದಿಂದ ಕನಿಷ್ಠ ಕಾರ್ಪೊರೇಟ್ ತೆರಿಗೆ ಪ್ರಮಾಣವನ್ನು ಶೇಕಡ 15ಕ್ಕೆ ನಿಗದಿ ಮಾಡುವ ಪ್ರಸ್ತಾವಕ್ಕೆ ಭಾರತ ಸೇರಿದಂತೆ ಒಟ್ಟು 136 ದೇಶಗಳು ಈಚೆಗೆ ಒಪ್ಪಿಗೆ ನೀಡಿವೆ.

ಜನಸಾಮಾನ್ಯರ ಕೈಯಲ್ಲಿ ಇನ್ನಷ್ಟು ಹಣ ಇರುವಂತೆ ಮಾಡುವ ಉದ್ದೇಶದಿಂದ ವೈಯಕ್ತಿಕ ಆದಾಯ ತೆರಿಗೆ ಪ್ರಮಾಣ ತಗ್ಗಿಸುವಂತೆ ಕೂಡ ಉದ್ದಿಮೆಗಳು ಆಗ್ರಹ ಮಂಡಿಸುವ ಸಾಧ್ಯತೆ ಇದೆ. ಜನರ ಕೈಯಲ್ಲಿ ಹೆಚ್ಚು ಹಣ ಇದ್ದಾಗ, ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿ ಉದ್ದಿಮೆಗಳ ಪುನಶ್ಚೇತನಕ್ಕೆ ನೆರವಾಗುತ್ತದೆ ಎಂಬ ಲೆಕ್ಕಾಚಾರ ಈ ಆಗ್ರಹದ ಹಿಂದೆ ಇದೆ. ಆದರೆ, ವೈಯಕ್ತಿಕ ಆದಾಯ ತೆರಿಗೆ ಮಿತಿಯನ್ನು ತಗ್ಗಿಸಬೇಕು ಎಂಬ ಬೇಡಿಕೆಗೆ ಸರ್ಕಾರ ಮನ್ನಣೆ ನೀಡುವ ಸಾಧ್ಯತೆ ಕಡಿಮೆ.

ಅಡುಗೆ ಎಣ್ಣೆ ಸಗಟು ದರ ಇಳಿಕೆ

ನವದೆಹಲಿ (ಪಿಟಿಐ): ಹಬ್ಬದ ಸಂದರ್ಭದಲ್ಲಿ ಗ್ರಾಹಕರಿಗೆ ತುಸು ಸಮಾಧಾನ ತರುವ ದಿಸೆಯಲ್ಲಿ ಅದಾನಿ ವಿಲ್ಮರ್ ಮತ್ತು ರುಚಿ ಸೋಯಾ ಇಂಡಸ್ಟ್ರೀಸ್ ಕಂಪನಿಗಳು, ಅಡುಗೆ ಎಣ್ಣೆಯ ಸಗಟು ಮಾರಾಟ ಬೆಲೆಯನ್ನು ಲೀಟರಿಗೆ ₹ 4ರಿಂದ ₹ 7ರವರೆಗೆ ತಗ್ಗಿಸಿವೆ.

ಅಡುಗೆ ಎಣ್ಣೆ ಮಾರಾಟ ಮಾಡುವ ಬೇರೆ ಕಂಪನಿಗಳೂ ಇದೇ ಹಾದಿ ತುಳಿಯುವ ಸಾಧ್ಯತೆ ಇದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಮಂಗಳವಾರ ಹೇಳಿದೆ. ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಪ್ರೈ.ಲಿ. (ಹೈದರಾಬಾದ್), ಮೋದಿ ನ್ಯಾಚುರಲ್ಸ್ (ದೆಹಲಿ), ಗೋಕುಲ್ ರೆಫಾಯ್ಲ್ಸ್ ಆ್ಯಂಡ್ ಸಾಲ್ವೆಂಟ್ ಲಿ, ವಿಜಯ್ ಸಾಲ್ವೆಕ್ಸ್, ಗೋಕುಲ್ ಆಗ್ರೊ ರಿಸೋರ್ಸಸ್ ಲಿ ಮತ್ತು ಎನ್‌ಕೆ ಪ್ರೊಟೀನ್ಸ್ ಪ್ರೈ.ಲಿ. ಕಂಪನಿಗಳು ಕೂಡ ಅಡುಗೆ ಎಣ್ಣೆಗಳ ಸಗಟು ಮಾರಾಟ ದರ ತಗ್ಗಿಸಿವೆ.

ಬೆಲೆ ತಗ್ಗಿಸುವಂತೆ ಎಸ್‌ಇಎ ತನ್ನ ಸದಸ್ಯರಿಗೆ ಮನವಿ ಮಾಡಿದ ನಂತರದಲ್ಲಿ ಈ ಕಂಪನಿಗಳು ಬೆಲೆ ಇಳಿಕೆ ಮಾಡಿವೆ. ಈ ಕಂಪನಿಗಳು ಲೀಟರ್ ಅಡುಗೆ ಎಣ್ಣೆಯ ಬೆಲೆಯನ್ನು ₹4ರಿಂದ ₹ 7ರವರೆಗೆ ಈಗಾಗಲೇ ತಗ್ಗಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆದ ಬೆಲೆ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿ ಕೂಡ ಅಡುಗೆ ಎಣ್ಣೆ ಬೆಲೆ ಹೆಚ್ಚಳ ಆಗಿದೆ.

ಭಾರತವು ತನಗೆ ಬೇಕಿರುವ ಅಡುಗೆ ಎಣ್ಣೆಯ ಪ್ರಮಾಣದಲ್ಲಿ ಶೇಕಡ 60ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಹೀಗಾಗಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರದಲ್ಲಿ ತುಸು ವ್ಯತ್ಯಾಸ ಆದರೂ ದೇಶಿ ಮಾರುಕಟ್ಟೆಯಲ್ಲಿ ಅದರ ಪರಿಣಾಮ ಗೋಚರವಾಗುತ್ತದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬೆಳಕಿನ ಹಬ್ಬದಲ್ಲಿ ಪುರಾಣಪಾತ್ರಗಳು

• ನವೀನ ಗಂಗೋತ್ರಿ

> ಹಬ್ಬಗಳ ಸಾಲಿನಲ್ಲಿ ದೀಪಾವಳಿಗಿರುವ ಮಹತ್ತು ನಾನಾ ಮುಖವಾದ್ದು. ಕರ್ನಾಟಕದ ಹಲವು ಭಾಗಗಳಲ್ಲಂತೂ ದೀಪಾವಳಿಯೆಂದರೆ 'ದೊಡ್ಡಹಬ್ಬ' ಎಂದು ಕರೆಸಿಕೊಳ್ಳುತ್ತದೆ.

ವರ್ಷಋತುವೆನ್ನುವುದು ಬಲುಭಾರವಾದ ಋತು. ನೀರಿನ ಭಾರಕ್ಕೆ ತೊನೆಯುವ ಮೋಡಗಳಿಂದಲೂ, ನೀರಿನ ಕಣಗಳಿಂದಾಗಿ ಭಾರವಾಗಿ ಬೀಸುವ ಗಾಳಿ, ನೆಲದ ಮೇಲಿನ ಎಲ್ಲವೂ ನೀರಿನ ಭಾರ ವನ್ನು ಹೊತ್ತು ನಿಲ್ಲುವ ಹೊತ್ತು ವರ್ಷರ್ತು. ಅದಾದಬಳಿಕ ಬರುವ ಶರದೃತು ಇದೆಯಲ್ಲ, ಅದು ಮಾತ್ರ ಅತ್ತ ಪೂರ್ತಿ ಒಣವೂ ಅಲ್ಲದ ಇತ್ತ ಮಳೆಗಾಲದ ಪಿತಗುಡುವ ಹಸಿಯೂ ಅಲ್ಲದ, ಹಗುರ ಮತ್ತು ಹೊಸತನದ ಅನುಭೂತಿಯ ಅನನ್ಯವಾದ ಕಾಲಖಂಡ. ಆಗ ತಾನೇ ದೀರ್ಘವಾದೊಂದು ಸ್ನಾನವನ್ನು ಮುಗಿಸಿ ಬಂದ ಪ್ರಫುಲ್ಲತೆಯೇ ಪ್ರಕೃತಿಯಲ್ಲಿ ಎಲ್ಲೆಡೆಯೂ ತುಂಬಿರುವ ಕಾಲವದು. ಅದಕ್ಕಾಗಿಯೇ ಏನೋ, ಶರದೃತುವಿನ ದೀಪಾವಳಿ ಹಬ್ಬದಲ್ಲಿ ಹಬೆಯಾಡುವ ಬಿಸಿನೀರಿನ ಅಭ್ಯಂಗವೊಂದು ಬಲುದೊಡ್ಡ ಭಾಗ. ಅಷ್ಟಕ್ಕೂ ನಮ್ಮ ನಾಡಿನ ಹಬ್ಬಗಳಿಗೂ ನಾವು ಕಾಣುವ ಋತುಮಾನಗಳಿಗೂ ಗಾಢವಾದ ನಂಟಿದೆಯೆಂಬುದು ದಿಟವಷ್ಟೆ.

ಹಬ್ಬಗಳ ಸಾಲಿನಲ್ಲಿ ದೀಪಾವಳಿಗಿರುವ ಮಹತ್ತು ನಾನಾ ಮುಖವಾದ್ದು. ಕರ್ನಾಟಕದ ಹಲವು ಭಾಗಗಳಲ್ಲಂತೂ ದೀಪಾವಳಿಯೆಂದರೆ 'ದೊಡ್ಡಹಬ್ಬ' ಎಂದು ಕರೆಸಿಕೊಳ್ಳುತ್ತದೆ. ಹಳ್ಳಿಯ ಬದುಕಿನಲ್ಲಿ ಇವತ್ತಿಗೂ ಸಹ 'ದೊಡ್ಡಹಬ್ಬ' ಅನ್ನುವುದು ಕಾಲದ ಗಡಿಗುರುತಿನಂತೆ ಬಳಕೆಯಾಗುತ್ತದೆ. 'ದೊಡ್ಡ ಹಬ್ಬಕ್ಕಿಂತ ಮುಂಚೆ, ದೊಡ್ಡ ಹಬ್ಬದ ಮಾರನೆಯ ದಿನ' ಇತ್ಯಾದಿ ಕಾಲನಿಶ್ಚಯದ ಲೆಕ್ಕವನ್ನಿಲ್ಲಿ ನೆನೆಯಬಹುದು.

ಎಲ್ಲ ಹಬ್ಬಕ್ಕಿರುವಂತೆ ದೊಡ್ಡಹಬ್ಬದಲ್ಲೂ ಕಥೆಯ ಸಂತೆಯಿದೆ. ಬಲಿ ಚಕ್ರವರ್ತಿಯು ವಾಮನನಿಂದ ಪಾತಾಳಕ್ಕೆ ತಳ್ಳಲ್ಪಟ್ಟದ್ದನ್ನು ಮತ್ತೆ ನೆನೆದು ವರ್ಷದಲ್ಲೊಮ್ಮೆ ಅವನ ರಾಜ್ಯಕ್ಕೆ ಅವನನ್ನು ಬರಮಾಡಿಕೊಳ್ಳುವ ಹಬ್ಬವಿದು. ಬಲಿ ರಾಕ್ಷಸನಾಗಿದ್ದರೂ ರಾಕ್ಷಸಸ್ವಭಾವನೇನೂ ಅವನಲ್ಲಿ ಇರಲಿಲ್ಲ; ಅವನೊಬ್ಬ ಪ್ರಜಾರಂಜಕನಾಗಿದ್ದ. ಸಾಂಪ್ರದಾಯಿಕರ ಮನೆಗಳಲ್ಲಿ ಸಾಂಕೇತಿಕವಾಗಿ ಬಲೀಂದ್ರನನ್ನು ಬರಮಾಡಿ ಕೂರಿಸುವ ಪದ್ಧತಿ ಇವತ್ತಿಗೂ ಚಾಲ್ತಿಯಲ್ಲಿದೆ. ಕೇರಳರಾಜ್ಯದಲ್ಲಿ ಬಲಿಚಕ್ರವರ್ತಿ ಭೇಟಿ ಕೊಡುವುದು ಓಣಂ ಹಬ್ಬದ ಸಮಯದಲ್ಲಿ ಎನ್ನುವ ಸಂಪ್ರದಾಯವಿದೆ.

ದೀಪಾವಳಿಯೊಂದಿಗೆ ಮಿಳಿತಗೊಂಡಿರುವ ಇನ್ನೊಂದು ಕಥೆ ನರಕಾಸುರನದು. ಈತ ವಿಷ್ಣುವಿನಿಂದ ಭೂಮಿದೇವಿಯಲ್ಲಿ ಹುಟ್ಟಿದವ. ವಿಷ್ಣುವಿನಿಂದ ವರಪಡೆದು ಉನ್ಮತ್ತನಾಗಿದ್ದ ಲೋಕಕಂಟಕ ನರಕಾಸುರನನ್ನು ಶ್ರೀಕೃಷ್ಣನು ಸಂಹಾರ ಮಾಡಿದ ಕಥೆಯೊಂದು ಭಾಗವತ ಪುರಾಣದಲ್ಲಿ ಬರುತ್ತದೆ. ಭೂದೇವಿಯ ಮಗನಾಗಿ ಹುಟ್ಟಿದ ಈತ ಅದಿತಿ ದೇವಿಯ ಒಡವೆಗಳನ್ನೆಲ್ಲ ಕದಿಯುತ್ತಾನೆ. ನರಕಾಸುರನ ವಧೆಯ ಬಳಿಕ ಭೂದೇವಿ ಅವೆಲ್ಲವನ್ನೂ ಅದಿತಿಗೆ ಮರಳಿ ಕೊಡಿಸುತ್ತಾಳೆ. ಈ ನೆನಪಲ್ಲಿಯೇ ದೀಪಾವಳಿಯ ಸಮಯದಲ್ಲಿ ಹಳ್ಳಿಗಳಲ್ಲಿ 'ಬೂದಗಳು' ಎನ್ನುವ ಕದಿಯುವ (ಸಾಂಕೇತಿಕವಾಗಿ) ಸಂಪ್ರದಾಯದ ಆಚರಣೆಯೂ ಇದೆ. ದೊಡ್ಡಹಬ್ಬದಲ್ಲಿ ಚತುರ್ದಶಿಯ ದಿನವೆಂದರೆ ಅದು ನರಕಾಸುರನನ್ನು ವಧಿಸಿದ ನೆನಪಿಗಾಗಿಯೇ ಇರುವ ದಿನ. ನರಕಾಸುರನ ವಧೆಯ ನೆನಪನ್ನು ಮತ್ತೆ ದೃಢ ಮಾಡಿಕೊಳ್ಳಲೆಂಬಂತೆ ದೀಪಾವಳಿಯ ಸಮಯದಲ್ಲಿ ಶಿಂಡ್ಲೆಕಾಯಿಯನ್ನು (ಸವತೆಯ ಕುಟುಂಬಕ್ಕೆ ಸೇರಿದ, ಉರುಟಾದ ಕಹಿಯಾದ ಕಾಯಿ. ಯಥೇಚ್ಛವಾಗಿ ಯಾವ ಪೋಷಣೆಯೂ ಇಲ್ಲದೆ ಬೆಳೆಯುತ್ತದೆ) ಕಾಲಿನಿಂದ ಮೆಟ್ಟಿ ಒಡೆಯುವ ಪದ್ಧತಿ ಇದೆ. ಅದರ ಓಡಿನಲ್ಲಿ ದೀಪ ಬೆಳಗಿಸುವ ಕ್ರಮವೂ ಇದೆ. ಹೀಗೆ ದೀಪಾವಳಿಯೆಂದರೆ ಕಥೆ ಮತ್ತು ಕಾಲಗಳ ಮಹತ್ತನ್ನು ಒಳಗೊಂಡ ಒಂದು ಹಬ್ಬ.

ಬಲಿ ಅಸುರ ಕುಲದಲ್ಲಿ ಹುಟ್ಟಿ ಜಗತ್ತಿಗೆ ಕಲ್ಯಾಣಕರನಾಗಿ ಬದುಕಿದವ. ನರಕಾಸುರನಾದರೋ (ಭೌಮಾಸುರ) ಜನ್ಮನಾ ಅಸುರ ಸಂಬಂಧವಿಲ್ಲದೆಯೂ ಪ್ರವೃತ್ತಿಯಿಂದಾಗಿ ಅಸುರನಾಗಿ ಬದುಕಿದವ. ಲೋಕದಲ್ಲಿ ಜನರು ದೀಪಾವಳಿ ಹಬ್ಬದಲ್ಲಿ ಇಬ್ಬರನ್ನೂ ಯಥಾಯೋಗ್ಯವಾಗಿ ನೆನೆಸಿಕೊಳ್ಳುತ್ತಾರೆ; ಒಬ್ಬನನ್ನು ಆದರಪೂರ್ವಕವಾಗಿ ತಮ್ಮ ರಾಜನಂತೆ ನೆನೆದುಕೊಂಡರೆ ಇನ್ನೊಬ್ಬನನ್ನು ಶ್ರೀಕೃಷ್ಣನಿಂದ ಹತನಾದವನೆಂದು ನೆನೆಯುತ್ತಾರೆ. ಪ್ರಾಯಃ ಬಲೀಂದ್ರನನ್ನು ಮತ್ತು ನರಕಾಸುರನನ್ನು ಸವತೆಯ ಜಾತಿಯ ಕಾಯಿಯಲ್ಲಿಯೇ ಆವಾಹಿಸುವುದರಲ್ಲಿಯೂ (ಬಲಿಯನ್ನು ಸಾಮಾನ್ಯವಾಗಿ ಊರಸವತೆ ಕಾಯಿಯಲ್ಲಿ ಆವಾಹಿಸಿ ಪೂಜಿಸಲಾಗುತ್ತದೆ. ನರಕಾಸುರನನ್ನು ಕಹಿರುಚಿಯ ಸವತೆ ಜಾತಿಯ ಶಿಂಡ್ಲೆಕಾಯಿಯಲ್ಲಿ ಕಾಣಲಾಗುತ್ತದೆ) 'ಅಸುರ' ಎನ್ನುವ ಒಂದೇ ಗುರುತಿದ್ದರೂ ಪರಸ್ಪರ ತದ್ವಿರುದ್ಧವಾದ ಸ್ವಭಾವವು ಸಾಧ್ಯವೆಂಬುದಕ್ಕೆ ರೂಪಕವಾಗಿ ನಿಲ್ಲುತ್ತದೆ. ಸವತೆಜಾತಿಯದೇ ಆದರೂ ಮುಳ್ಳುಸವತೆ ರುಚಿಯಾದ ಫಲ, ಮತ್ತು ಶಿಂಡ್ಲೆಕಾಯಿ ತಿನ್ನಲಾಗದಷ್ಟು ಕಹಿ. ಲೋಕವು ಗುಣಕ್ಕೆ ಮಾತ್ಸರ್ಯವನ್ನು ತೋರದೆ ಇರುವುದನ್ನಿಲ್ಲಿ ಕಾಣಬಹುದು.

ದೀಪಾವಳಿಯು ಮನುಷ್ಯರ ಸಮೃದ್ಧಿಯ ಹಬ್ಬ ಮಾತ್ರವೇ ಅಲ್ಲ, ಅದು ಗೋವುಗಳ ಸಮೃದ್ಧಿಯನ್ನು ಆಶಿಸುವ ಹಬ್ಬವೂ ಹೌದು. ಗೋಪೂಜೆ ಮತ್ತು ಗೋಸಂತರ್ಪಣೆ ದೀಪಾವಳಿ ಹಬ್ಬದ ಅವಿಭಾಜ್ಯ ಅಂಗ. ಗೋವುಗಳಿಗೆ ತೊಂದರೆ ಕೊಡಲು ಶಕ್ತನಾದ ಹುಲಿಯಪ್ಪನ (ಹುಲಿ) ಪೂಜೆಯೂ ದೀಪಾವಳಿಯಲ್ಲಿ ಆಚರಣೆಯಲ್ಲಿದೆ.

ಇನ್ನು ದೀಪಗಳನ್ನು ಬೆಳಗುವುದು ಮತ್ತು ಅಸುರನಾಶಕವಾದ ಸಿಡಿಮದ್ದುಗಳನ್ನು ಸಿಡಿಸುವುದು ಪರಂಪರೆಯಲ್ಲಿ ಅನುಸ್ಯೂತವಾಗಿ ನಡೆದುಬಂದಿದೆ. ಹದಿನೈದನೆಯ ಶತಮಾನದಲ್ಲಿ ವಿಜಯನಗರಕ್ಕೆ ಭೇಟಿಯಿತ್ತಿದ್ದ ಅಬ್ದುಲ್ ರಜಾಕ್ ವಿಜಯನಗರದಲ್ಲಿ ತನ್ನನ್ನು ವಿಸ್ಮಿತಗೊಳಿಸಿದ ಸಿಡಿಮದ್ದುಗಳ ಪ್ರದರ್ಶನದ ವಿಚಾರವಾಗಿ ಬರೆಯುತ್ತಾನೆ. ಹಾಗಿದ್ದಾಗ ದೀಪಾವಳಿಯಲ್ಲಿ ಪಟಾಕಿಗಳ ಬಳಕೆಗೆ ಶತಮಾನಗಳ ಇತಿಹಾಸವಿದೆಯೆಂಬುದಂತೂ ಖಚಿತವಾಗುತ್ತದೆ. ನಮ್ಮೊಳಗಿನ ಆಸುರತೆಯನ್ನು ತೊಡೆದು ಆನಂದದ ತಿಳಿದೀಪವನ್ನು ಬೆಳಗುವ ಸಾಂಕೇತಿಕತೆಯ ಈ ಹಬ್ಬ ಎಲ್ಲರಿಗೂ ಮುದವನ್ನೂ ಸಮೃದ್ಧಿಯನ್ನೂ ತರಲಿ. ❖

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,929
ಇಂದಿನ ಅಂತ್ಯ	17,888
▼	41
ದಿನದ ಕನಿಷ್ಠ	17,847

ವಿನಿಮಯ ದರ

$ ಡಾಲರ್	74.68
£ ಪೌಂಡ್	101.88
€ ಯುರೊ	86.61
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹468

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಪ್ರಜಾವಾಣಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

VIVA TOYOTA
JOB OPENING AT VIVA TOYOTA, BENGALURU FOR ITS GROWTH PLAN
Sales: Team Leader, Sales Officer
Service: Asst.Manager (Gen & Bodyshop), Job Controller, Floor Leader, Service Advisor (Gen & Bodyshop), Service Marketing Executives, Chief General Technicians, Technicians (Gen & Bodyshop)
USED CAR (U-TRUST): Procurement Officer, Sales Officer
SUPPORT TEAM: Accounts Manager, Asst. Accounts Manager, Accounts Executive, Digital Marketing Manager, Digital Tele caller, Manager (Call Centre), Facility & Admin Manager, HR Asst. Manager, Lady Driving Instructor, Audit executive, Drivers
CALL OR SEND YOUR RESUME TO US! 9900035302 9900021150
hr@vivatoyota.co.in hr_mysorerd@vivatoyota.co.in

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

General

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ವ್ಯಾಪಾರ

Business Offers

Distributors

PARTNER TO manage the teamat Rajajinagar with zero investment. Call 7019246661

ಭವಿಷ್ಯ

Astrology

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

★॥ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ, ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಪರಿಹಾರ. 'ಬ್ರಹ್ಮಾನಂದ ಗುರೂಜಿ'. 8050061378

॥ಶ್ರೀಧರ್ಮಶಾಸ್ತ್ರಂ ವಶೀಕರಣಂ॥ ಸರ್ವಸಿದ್ಧಿ ಸಾಧಕರು, ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ ವಶೀಕರಣ ಪದ್ಧತಿಯಿಂದ ಶೀಘ್ರದಲ್ಲಿ ಶಾಸ್ತ್ರೋಕ್ತ ಪರಿಹಾರ ಕಲ್ಪಿಸುವರು. ವೇದಬ್ರಾಹ್ಮಣ ಶ್ರೀಶ್ರೀಮೃತ್ಯುಂಜಯರಾವ್ 9686980376

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

HEALTH SPECIAL

ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್
ಮಧುಮೇಹ ಕೊಲಸ್ಟ್ರಾಲ್ ಥೈರಾಡ್ ಸಮಸ್ಯೆಗಳಿಗೆ ಉತ್ತಮ ಪರಿಣಾಮ
ಸೇವಿಸಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ
"ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್ ಸೇವನೆ ದಿನವೆಲ್ಲ ಉತ್ಸಾಹ"
ಎಲ್ಲಾ ಹಾಪ್ ಕಾಮ್ ಅಂಗಡಿಗಳಲ್ಲಿ, ಎಲ್ಲಾ ಕದಂಬ ಹೋಟೆಲ್‌ನಲ್ಲಿ ಹಾಗೂ ಇತರ ಅಂಗಡಿಗಳಲ್ಲಿ ದೊರೆಯುತ್ತದೆ.
ರಾಜ್ಯಾದ್ಯಂತ ವಿತರಕರು ಬೇಕಾಗಿದ್ದಾರೆ.
99002 65678
http://www.sirichaitanya.com

★॥ಶ್ರೀಕಬ್ಬಾಳಮ್ಮ ದೇವಿ॥★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ, ದಾಂಪತ್ಯಕಿರಿಕಿರಿ, ಸಾಲದಬಾದೆ, ವ್ಯಾಪಾರ, ಶತ್ರುಕಾಟ, ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. "ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ" ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ. ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ಪ್ರವಾಸ

Travel

13-11-2021 ಹಿರಿಯ ನಾಗರಿಕರಿಗಾಗಿ ರೈಲಿನಲ್ಲಿ ಪುರಿ, ಕೊನಾರ್ಕ್, ಭುವನೇಶ್ವರ್, 21-11-2021 ಹಿರಿಯ ನಾಗರೀಕರೀಗಾಗಿ ರಾಮೋಜಿ ಫಿಲಂಸಿಟಿ, ಹೈದರಾಬಾದ್. ಅನುಗ್ರಹಯಾತ್ರಾ: 9880079351

ಶ್ರೀ ರಾಜರಾಜೇಶ್ವರಿ ಟೂರ್, 9734895346, 9739618243, 2-12-2021, 3ದಿನಗಳು ಗೋವಾ, ದೂದ್ ಸಾಗರ್, 14-2-2022, 11 ದಿನಗಳು, ಕಾಶಿ, ಅಯೋಧ್ಯ, ನೇಪಾಳ, ಮುಕ್ತಿನಾಥ

30.11.2021: 12ದಿವಸಗಳ ಸುಸಜ್ಜಿತ ಊಟ, ರೂಂ, ವಸತಿಯೊಂದಿಗೆ ಕಾಶಿ, ವೈಷ್ಣವಿದೇವಿ, ಅಮೃತಸರ, ವಾಘಗಡಿ, ಅಲಹಾಬಾದ್, ಹರಿದ್ವಾರ, ಚಂಡಿಗಡ, ಆಗ್ರಾ, ಅಯೋಧ್ಯೆ, ದೆಹಲಿ ಪ್ಯಾಕೇಜ್ ಪ್ರವಾಸ, ವಿಮಾನದರ ಸೇರಿ ರೂ.29500/. "ಜಿ.ಆರ್.ಟ್ರಾವೆಲ್ಸ್". 7204667712

20.12.2021 ರಿಂದ 14 ದಿನಗಳು ಪಂಚದ್ವಾರಕಾ, ಓಂಕಾರೇಶ್ವರ್, ಉಜ್ಜಯಿನಿ, ಸೋಮನಾಥ್, ಮಾತ್ರಗಯಾ, ಡಾಕೂರ್, ಅಹಮದಾಬಾದ್/ 19.01.2022 ರಿಂದ 14 ದಿನಗಳು ಕಾಶಿ., ಗಯಾ, ಪ್ರಯಾಗ, ಅಯೋಧ್ಯ, ನೈಮೀಶಾರಣ್ಯ, ಗೋರಕ್‌ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25 ದಿನಗಳ ಗಂಗೋತ್ರಿ, ಯುಮುನೋತ್ರಿ, ಬದರಿನಾಥ್, ಕೇದಾರನಾಥ್, ಕಾಶಿ, ಗಯಾ ಪೂರಿಜಗನ್ನಾಥ್, ವೈಷ್ಣೋದೇವಿ ಯಾತ್ರೆಗಳಿಗೆ ಕೂಡಲೇ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290, 9019301300

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಸಂಕ್ಷಿಪ್ತ ಸುದ್ದಿ

ಏರ್‌ಟೆಲ್ ಲಾಭ ₹ 1,134 ಕೋಟಿ

ನವದೆಹಲಿ (ಪಿಟಿಐ): ಭಾರ್ತಿ ಏರ್‌ಟೆಲ್ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 1,134 ಕೋಟಿ ನಿವ್ವಳ ಲಾಭ ಗಳಿಸಿದೆ. ಈ ಅವಧಿಯಲ್ಲಿ ಕಂಪನಿಯ ವರಮಾನ ₹ 28,326 ಕೋಟಿ ಆಗಿದೆ. ವರ್ಷದಿಂದ ವರ್ಷಕ್ಕೆ ಆದಾಯವು ಶೇ 18.8ರಷ್ಟು ಏರಿಕೆ ಕಂಡಿದೆ ಎಂದು ಕಂಪನಿಯು ತಿಳಿಸಿದೆ.

4ಜಿ ಗ್ರಾಹಕರ ಬೆಳವಣಿಗೆ ಮತ್ತು ಪ್ರತಿ ಗ್ರಾಹಕನಿಂದ ಕಂಪನಿಗೆ ದೊರೆಯುವ ಆದಾಯದಲ್ಲಿ (ಎಆರ್‌ಪಿಯು) ಹೆಚ್ಚಳದೊಂದಿಗೆ ಉತ್ತಮ ವ್ಯಾಪಾರ ಕಂಡುಕೊಳ್ಳುತ್ತಿರುವುದಾಗಿ ಹೇಳಿದೆ.

₹11 ಸಾವಿರಕ್ಕೆ ಹೊಸ 'ಸೆಲೆರಿಯೊ' ಬುಕಿಂಗ್

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಪ್ರೀಮಿಯಂ ಹ್ಯಾಚ್‌ಬ್ಯಾಕ್ 'ಸೆಲೆರಿಯೊ'ದ ಹೊಸ ಆವೃತ್ತಿಯ ಪ್ರೀ-ಲಾಂಚ್ ಬುಕಿಂಗ್ ಆರಂಭಿಸಿರುವುದಾಗಿ ಮಂಗಳವಾರ ತಿಳಿಸಿದೆ.

₹ 11 ಸಾವಿರ ಆರಂಭಿಕ ಮೊತ್ತ ಕೊಟ್ಟು ಹೊಸ ಸೆಲೆರಿಯೊ ಬುಕ್ ಮಾಡಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಈ ವಿಭಾಗದಲ್ಲಿಯೇ ಮೊದಲನೆಯ ಐಡಲ್ ಸ್ಟಾರ್ಟ್-ಸ್ಟಾಪ್ ತಂತ್ರಜ್ಞಾನದೊಂದಿಗೆ ನೆಕ್ಸ್ಟ್-ಜೆನ್ ಕೆ-ಸೀರೀಸ್ ಎಂಜಿನ್ ಅನ್ನು ಈ ಕಾರು ಹೊಂದಿದೆ. ಇದು ಭಾರತದಲ್ಲಿ ಹೆಚ್ಚು ಇಂಧನ ಕ್ಷಮತೆಯ ಪೆಟ್ರೋಲ್ ಕಾರು ಆಗಿರುತ್ತದೆ ಎಂದು ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಸಿ.ವಿ. ರಮಣ್ ಹೇಳಿದ್ದಾರೆ.

ತನ್ನ ವಿಶಿಷ್ಟ್ಯ ಶೈಲಿ ಮತ್ತು ಕ್ರಾಂತಿಕಾರಿ ಆಟೊ ಗಿಯರ್ ಶಿಫ್ಟ್ (ಎಜಿಎಸ್) ತಂತ್ರಜ್ಞಾನದಿಂದಾಗಿ, ಬಿಡುಗಡೆ ಆದಾಗಿನಿಂದ 'ಸೆಲೆರಿಯೊ' ಕಾರು ಮಾರುಕಟ್ಟೆಯಲ್ಲಿ ಹೊಸ ಅಲೆ ಸೃಷ್ಟಿಸಿದೆ. ಸೆಲೆರಿಯೊ ಬ್ರ್ಯಾಂಡ್ ಅಂದಿನಿಂದ ಹೊಸ ಯುಗದ ತಂತ್ರಜ್ಞಾನ, ಆಧುನಿಕ ವಿನ್ಯಾಸ ಮತ್ತು ಪ್ರಯೋಗಶೀಲತೆಗೆ ತೆರೆದುಕೊಳ್ಳುತ್ತಿದೆ ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ನಾರಾಯಣಪ್ಪ, ನೆಲಮಂಗಲ

● **ಪ್ರಶ್ನೆ:** ಬಂಡವಾಳ ವೃದ್ಧಿ ತೆರಿಗೆ ಉಳಿಸಲು ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ಹಣ ಹೂಡಿಕೆ ಮಾಡಲು ತಿಳಿಸುತ್ತೀರಿ. ಇದರ ಅವಧಿ, ಬಡ್ಡಿದರ, ಬಡ್ಡಿಗೆ ತೆರಿಗೆ, ಅವಧಿ ಮುಗಿದು ಬರುವ ಮೊತ್ತಕ್ಕೆ ಬಡ್ಡಿ ಬಗ್ಗೆ ತಿಳಿಸಿ. ನಾನು ಹಿರಿಯ ನಾಗರಿಕ. ಎನ್‌ಎಚ್‌ಎಐ/ಆರ್‌ಇಸಿ ಬದಲಾಗಿ ಅಂಚೆ ಕಚೇರಿ, ಹಿರಿಯ ನಾಗರಿಕರ ಠೇವಣಿ, ಎಲ್‌ಐಸಿ ವಯೋವಂದನಾ ಯೋಜನೆಯಲ್ಲಿ ಹಣ ಇರಿಸಬಹುದೇ? ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸುವ ಮೊತ್ತ ₹ 50 ಲಕ್ಷವೇ ಆಗಿರಬೇಕೇ, ಕಡಿಮೆ ಮೊತ್ತವನ್ನು ತೊಡಗಿಸಲು ಅವಕಾಶ ಇದೆಯೇ?

ಉತ್ತರ: ಸೆಕ್ಷನ್ 54 ಇಸಿ ಪ್ರಕಾರ, ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ಇರಿಸಿದರೆ ಮಾತ್ರ ಬಂಡವಾಳ ವೃದ್ಧಿ ತೆರಿಗೆ ಉಳಿಸಬಹುದು. ನೀವು ತಿಳಿಸಿದಂತೆ ಬೇರೆ ಹೂಡಿಕೆ ಮಾಡುವಂತಿಲ್ಲ. ಬಂಡವಾಳವೃದ್ಧಿ ಆಗಿರುವ ಮೊತ್ತ ₹ 50 ಲಕ್ಷದೊಳಗೆ ಇರುವಲ್ಲಿ ಉದಾಹರಣೆಗೆ: ಬಂಡವಾಳ ವೃದ್ಧಿ ₹ 32 ಲಕ್ಷವಾದಲ್ಲಿ ಅಷ್ಟನ್ನು ಮಾತ್ರ ಇಲ್ಲಿ ತೊಡಗಿಸಬೇಕಾಗುತ್ತದೆ. ₹ 50 ಲಕ್ಷ ಮೊತ್ತವು ಗರಿಷ್ಠ ಮಿತಿ ಆಗಿದೆ. ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳ ಅವಧಿ 5 ವರ್ಷ. ಬಡ್ಡಿದರ ಶೇ 5. ಬಡ್ಡಿಗೆ ತೆರಿಗೆ ವಿನಾಯಿತಿ ಇಲ್ಲ. ಬಂಡವಾಳವನ್ನು 5 ವರ್ಷಗಳ ನಂತರ ವಾಪಸ್ ಪಡೆಯುವಾಗ ತೆರಿಗೆ ಬರುವುದಿಲ್ಲ. ಈ ಮೊತ್ತವನ್ನು ಯಾವುದಕ್ಕಾದರೂ ವಿನಿಯೋಗಿಸಬಹುದು.

ಚಿಕ್ಕಮಾದಯ್ಯ, ಮಳವಳ್ಳಿ

● **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ನೌಕರ. ತಿಂಗಳ ಪಿಂಚಣಿ ₹ 26,252. ಸ್ವಂತ ಮನೆ ಇದೆ. 30X40 ಅಳತೆಯ ಮೂರು ನಿವೇಶನಗಳಿವೆ. ನನಗೆ ಮೂವರು ಮಕ್ಕಳು. ಎಲ್ಲರೂ ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ನನ್ನ ವಯಸ್ಸು 76 ವರ್ಷ. ನನ್ನ ಹೆಂಡತಿಯ ವಯಸ್ಸು 68 ವರ್ಷ. ನಮ್ಮ ಕಾಲಾನಂತರ ಸ್ಥಿರ ಆಸ್ತಿ ಮಕ್ಕಳಿಗೆ ವಾರಸುದಾರ ಹಕ್ಕಿನಂತೆ ದೊರೆಯುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಮರಣ ಪತ್ರ ಬರೆಯಬೇಕೇ ಅಥವಾ ದಾನ ಪತ್ರ ಮಾಡಬೇಕೇ?

ಉತ್ತರ: ನೀವು ತಿಳಿಸಿದಂತೆ ನಿಮ್ಮ ಕಾಲಾನಂತರ ಸಹಜವಾಗಿಯೇ ನಿಮ್ಮ ಹೆಂಡತಿ, ಮಕ್ಕಳಿಗೆ ವಾರಸುದಾರರ ಹಕ್ಕಿನಂತೆ ನಿಮ್ಮ ಆಸ್ತಿಯ ಹಕ್ಕು ಬರುವುದು ನಿಜ. ಓದುಗರು ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಓರ್ವ ವ್ಯಕ್ತಿಯ ಮರಣಾನಂತರ ಆತನ ಎಲ್ಲಾ ಆಸ್ತಿಯಲ್ಲಿಯೂ ಎಲ್ಲಾ ವಾರಸುದಾರರಿಗೂ ಸಮಾನ ಹಕ್ಕು ಇರುತ್ತದೆ. ವಾರಸುದಾರರು ಆಸ್ತಿಯನ್ನು ಹಂಚಿಕೊಳ್ಳುವಾಗ ತಕರಾರು ತೆಗೆದಲ್ಲಿ ಕೋರ್ಟು ಕಚೇರಿ ಮೊರೆ ಹೋಗುವ ಸಂದರ್ಭ ಬರುತ್ತದೆ. ಇಂತಹ ತೊಂದರೆಯನ್ನು ನೀಗಿಸಲು ಪ್ರತಿಯೊಬ್ಬರೂ ತಮ್ಮ ಜೀವಿತಕಾಲದಲ್ಲಿ ಉಯಿಲು ಬರೆದಿಡುವುದು ಸೂಕ್ತ. ಉಯಿಲಿಗೆ ನೋಂದಣಿ ಹಾಗೂ ಸ್ಟ್ಯಾಂಪ್ ಪೇಪರ್ ಅಗತ್ಯ ಇಲ್ಲ. ಆದರೆ ನೋಂದಾಯಿಸಬಹುದು ಹಾಗೂ ಸ್ಟ್ಯಾಂಪ್ ಪೇಪರಿನಲ್ಲಿ ಬರೆಯಬಹುದು. ಸ್ವತಃ ಕೈಬರಹದಲ್ಲಿ ಬರೆಯಬಹುದು. ಇದೇ ವೇಳೆ ದಾನಪತ್ರವಾದಲ್ಲಿ ದಾನಪತ್ರ ಮಾಡಿದ ತಕ್ಷಣ ಆಸ್ತಿಯು ದಾನ ಪಡೆದವರ ಕೈಸೇರುತ್ತದೆ. ಆದರೆ, ಉಯಿಲಿನಲ್ಲಿ ವ್ಯಕ್ತಿಯ ಮರಣಾನಂತರವೇ ಆಸ್ತಿ ಬೇರೆಯವರಿಗೆ ಸಲ್ಲುತ್ತದೆ.

ನಾಗಪ್ಪ, ಉಡುಪಿ

● **ಪ್ರಶ್ನೆ:** ನಾನು ಸಿವಿಲ್ ಗುತ್ತಿಗೆದಾರ. ತಿಂಗಳಿಗೆ ಸುಮಾರು ₹ 1.5 ಲಕ್ಷ ಆದಾಯವಿದೆ. ಆದರೆ ಒಮ್ಮೊಮ್ಮೆ ಏರುಪೇರು ಆಗುತ್ತದೆ. ಅವಿವಾಹಿತ. ಸ್ವಂತ ಮನೆ ಇದೆ. ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೇಗೆ? ಈ ವಿಚಾರದಲ್ಲಿ ನಿಮ್ಮ ಮಾರ್ಗದರ್ಶನ ಬೇಕು. ಉತ್ತಮ ಉಳಿತಾಯ ಯೋಜನೆ ತಿಳಿಸಿ. ನಾನು ವಿದ್ಯಾರ್ಥಿ ಆಗಿದ್ದಾಗಿನಿಂದ ನಿಮ್ಮ ಅಂಕಣ ಓದುತ್ತಾ ಇದ್ದೇನೆ.

ಉತ್ತರ: ಉಳಿತಾಯ ಯೋಜನೆ ಹಾಕುವಾಗ ವ್ಯಕ್ತಿಯ ಕಟ್ಟುಪಾಡು (ಕಮಿಟ್‌ಮೆಂಟ್) ನೋಡಿಕೊಳ್ಳಬೇಕು. ಎಲ್ಲರಿಗೂ ಒಂದೇ ರೀತಿ ಯೋಜನೆ ಮಾಡಿಕೊಳ್ಳಲು ಬರುವುದಿಲ್ಲ. ನನ್ನ ಪ್ರಕಾರ ₹ 1 ಲಕ್ಷ ತಿಂಗಳಿಗೆ ಉಳಿಸಲೇಬೇಕು. ಹೀಗೆ ಉಳಿಸಬಹುದಾದ ₹ 1 ಲಕ್ಷದಲ್ಲಿ ₹ 10 ಸಾವಿರ ವಿಮೆಗೆ, ₹ 12 ಸಾವಿರ ಪಿಪಿಎಫ್, ₹ 10 ಸಾವಿರ ಮ್ಯೂಚುವಲ್ ಫಂಡ್‌ನ ಎಸ್‌ಐಪಿ, ₹ 10 ಸಾವಿರ ಬ್ಲೂಚಿಪ್ ಕಂಪನಿ ಷೇರುಗಳು, ಬಂಗಾರದ ನಾಣ್ಯದ ಸಲುವಾಗಿ ₹ 10 ಸಾವಿರ (ಒಂದು ವರ್ಷದ ಆರ್.ಡಿ. ಮಾಡಿ ವರ್ಷಾಂತ್ಯಕ್ಕೆ ಬಂಗಾರದ ನಾಣ್ಯ ಅಥವಾ ಬಾಂಡ್ ಕೊಳ್ಳಿರಿ) ₹ 40 ಸಾವಿರ ಮೊತ್ತವನ್ನು 5 ವರ್ಷಗಳ ಆರ್.ಡಿ. ಅಥವಾ ಸಾಲ ಮಾಡಿ ನಿವೇಶನ ಕೊಂಡು ಸಾಲಕ್ಕೆ ಇಎಂಐ ಕಟ್ಟಿರಿ. ಇನ್ನುಳಿದ ₹ 8,000 ಉಳಿತಾಯ ಖಾತೆಯಲ್ಲಿ ಇರಿಸಿರಿ. ಅತೀ ಅವಶ್ಯಕತೆ ಇದ್ದಾಗ ಉಪಯೋಗಿಸಲು ಬೇಕಾಗುತ್ತದೆ. ಯೋಜನೆ ರೂಪಿಸುವುದರ ಜೊತೆ ಯೋಜನೆಯಂತೆ ನಡೆದುಕೊಳ್ಳುವುದು ಬಹಳ ಮುಖ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1287 (1295)
ಸೂರ್ಯಕಾಂತಿ (ರಿಫೈನ್ಡ್)	₹1310 (1320)
ಪಾಮೋಲಿನ್	₹1195 (1200)

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಚಿತ್ರದುರ್ಗ	
ಆಪಿ	46119-46529
ಬೆಟ್ಟೆ	39749-40179
ಕೆಂಪುಗೋಟು	30300-30700
ರಾಶಿ	45639-46069
ಕಾರ್ಕಳ	
ಹೊಸತು	35000-42500
ಹಳತು	46000-51000
ಸಿದ್ದಾಪುರ	
ಬಿಳಿಗೋಟು	28699-41808
ಚಾಲಿ	43569-47344
ಕೋಕ	21099-37859
ಹೊಸಚಾಲಿ	32299-42119
ಕೆಂಪುಗೋಟು	22699-33089
ರಾಶಿ	42899-46499
ತಟ್ಟಿಬೆಟ್ಟೆ	33699-43869
ಶಿರಸಿ	
ಬೆಟ್ಟೆ	31091-44899
ಬಿಳಿಗೋಟು	17706-44099
ಚಾಲಿ	43199-47481
ರಾಶಿ	40911-49199
ಯಲ್ಲಾಪುರ	
ಬಿಳಿಗೋಟು	31899-41799
ಚಾಲಿ	43020-47399
ಕೋಕ	21899-30679
ಕೆಂಪುಗೋಟು	30199-36101
ರಾಶಿ	46899-52099
ತಟ್ಟಿಬೆಟ್ಟೆ	37919-45199
ರಾಮನಗರ ರೇಷ್ಮೆ	
ಮಿಶ್ರತಳಿ	256-487
ದ್ವಿತಳಿ	303-523

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	12500	---	208.70 ಸೆಂಟ್ಸ್
ಎಸಿ	6325	---	---	
ಆರ್‌ಪಿ	6150	---	6250	
ಆರ್‌ಸಿ	3560	---	3675	2269 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

2-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಸೋಯಾ ಕಚ್ಚಾ	1225 (1250)
ಪಾಮ್ ವಾರದ ಡೆಲಿವರಿ	1193 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,650 (47,550)
ಬೆಳ್ಳಿ ಕೆ.ಜಿ 64,150 (64,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶಿಕ್ಷಣದ ಕೇಸರೀಕರಣ ಇಲ್ಲ: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ ಭರವಸೆ

ಬಿಟ್ ಕಾಯಿನ್: ಯಾರನ್ನೂ ರಕ್ಷಿಸುವುದಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬಿಟ್ ಕಾಯಿನ್' ಹಗರಣದ ಕುರಿತು ಸರ್ಕಾರ ತನಿಖೆಗೆ ಸೂಚಿಸಿದ್ದು, ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ವಿಜ್ಞಾನ ತಂತ್ರಜ್ಞಾನ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗಾಗಲೇ ಮುಖ್ಯಮಂತ್ರಿಯವರು ಈ ಕುರಿತು ಸ್ಪಷ್ಟಪಡಿಸಿದ್ದಾರೆ. ತನಿಖೆಯನ್ನು ಮುಕ್ತವಾಗಿ ನಡೆಸಲು ಸೂಚಿಸಲಾಗಿದೆ. ಸಂಬಂಧಪಟ್ಟ ದಾಖಲೆಗಳಿದ್ದರೆ ಸರ್ಕಾರಕ್ಕೆ ಒಪ್ಪಿಸುವಂತೆ ಅವರೇ ಕೋರಿದ್ದಾರೆ' ಎಂದರು.

ರಾಜಕಾರಣಿಗಳು ಹಾಗೂ ಪ್ರಭಾವಿಗಳ ಮಕ್ಕಳು ಈ ಹಗರಣದಲ್ಲಿ ಭಾಗಿಯಾಗಿದ್ದರೆ ತನಿಖೆಯಿಂದ ಗೊತ್ತಾಗಲಿದೆ ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ ಅವರು ನವದೆಹಲಿಯಲ್ಲಿ ಮಂಗಳವಾರ ರಕ್ಷಣಾ ಸಚಿವ ರಾಜನಾಥಸಿಂಗ್ ಅವರನ್ನು ಭೇಟಿ ಮಾಡಿದರು.

ಶಿಕ್ಷಣದಲ್ಲಿ ಕೇಸರೀಕರಣ ಇಲ್ಲ: ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಮೂಲಕ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಕಲಿಕಾ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ತಂದು ಎಲ್ಲರಿಗೂ ಶಿಕ್ಷಣ ಸುಲಭವಾಗಿ ದೊರೆಯುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

'ಹೊಸ ಶಿಕ್ಷಣ ನೀತಿ ಜಾರಿಯಾದ ಬಳಿಕ ಪಠ್ಯಕ್ರಮದಲ್ಲಿ ಬದಲಾವಣೆ ತರಲಾಗುತ್ತದೆ. ಮಧ್ಯಕಾಲೀನ ಭಾರತದ ಇತಿಹಾಸವನ್ನೇ ಮರೆಮಾಚಲಾಗುತ್ತದೆ ಎಂಬ ಆರೋಪಗಳಲ್ಲಿ ಹುರುಳಿಲ್ಲ. ಇತಿಹಾಸ ಮಾತ್ರವಲ್ಲದೆ, ಎಲ್ಲ ವಿಷಯಗಳ ಪಠ್ಯಕ್ರಮದಲ್ಲಿ ಕೇವಲ ಶೇ 15ರಷ್ಟು ಬದಲಾವಣೆ ತರುವುದು ಅನಿವಾರ್ಯ' ಎಂದು ಸಚಿವರು ಹೇಳಿದರು.

ಕಾಂಗ್ರೆಸ್ ಈಗ ಅಪ್ರಸ್ತುತ: ದೇಶದಲ್ಲಿ ಕಾಂಗ್ರೆಸ್ ಅಪ್ರಸ್ತುತವಾಗಿದೆ. ಕಾಂಗ್ರೆಸ್‌ನವರು ನಾಯಕತ್ವದ ಹುಡುಕಾಟದಲ್ಲಿದ್ದಾರೆ. ಆ ಪಕ್ಷದವರು ಅನೇಕ ದಿನಗಳಿಂದ ಅಧ್ಯಕ್ಷತೆಯನ್ನು ಯಾರಿಗೂ ವಹಿಸಿಲ್ಲ. ದೇಶದಲ್ಲಿ ವಿರೋಧ ಪಕ್ಷವೇ ಇಲ್ಲ. ಕಾಂಗ್ರೆಸ್ ಪಕ್ಷದ ವಿಳಾಸವೇ ಇಲ್ಲ ಎಂದು ಅವರು ವ್ಯಂಗ್ಯವಾಡಿದರು.

ಸಿಂದಗಿ ಮತ್ತು ಹಾನಗಲ್ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿ ಒಂದರಲ್ಲಿ ಜಯಿಸಿ, ಮತ್ತೊಂದರಲ್ಲಿ ಸೋತಿದೆ. ಕೋವಿಡ್ ಲಾಕ್‌ಡೌನ್ ಸಂದರ್ಭ ಶ್ರೀನಿವಾಸ ಮಾನೆ ಅವರು ಹಾನಗಲ್ ಕ್ಷೇತ್ರದಲ್ಲಿ ಕೈಗೊಂಡ ಸೇವೆ ಅವರಿಗೆ ಗೆಲುವು ತಂದು ಕೊಟ್ಟಿದೆ. ಅದು ಕಾಂಗ್ರೆಸ್ ಗೆಲುವಲ್ಲ. ಬದಲಿಗೆ, ವ್ಯಕ್ತಿಗತ ಗೆಲುವು. ಆದರೆ, ಸಿಂದಗಿಯಲ್ಲಿ ಬಿಜೆಪಿ ಅಭ್ಯರ್ಥಿಯು ಅಧಿಕ ಮತಗಳ ಅಂತರದಲ್ಲಿ ಜಯಿಸಿರುವುದು ಪಕ್ಷಕ್ಕೆ ಹುಮ್ಮಸ್ಸು ತಂದಿದೆ ಎಂದು ಅವರು ಹೇಳಿದರು.

ರಕ್ಷಣಾ ಸಚಿವ ರಾಜನಾಥಸಿಂಗ್ ಅವರನ್ನು ಭೇಟಿಯಾಗಿ ಬೆಳಗಾವಿಯಲ್ಲಿ ರಕ್ಷಣಾ ಇಲಾಖೆ ವಶದಲ್ಲಿರುವ ರಾಜ್ಯ ಸರ್ಕಾರದ 750 ಎಕರೆ ಜಾಗವನ್ನು ವಾಪಸ್ ಕೊಡುವಂತೆ ಮನವಿ ಮಾಡಿಕೊಳ್ಳಲಾಗಿದೆ. ಈ ಕುರಿತು ಸಮಾಲೋಚನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯನ್ನು ಸಚಿವರು ನೀಡಿದ್ದಾರೆ ಎಂದು ಅವರು ವಿವರಿಸಿದರು.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರನ್ನು ಭೇಟಿ ಮಾಡಿ ರಾಜ್ಯದ ವಿವಿಧ ಯೋಜನೆಗಳಿಗೆ ನೆರವು ನೀಡುವಂತೆ ಮನವಿ ಸಲ್ಲಿಸಲಾಗಿದೆ ಎಂದು ಸಚಿವ ಅಶ್ವತ್ಥನಾರಾಯಣ ತಿಳಿಸಿದರು.

ನಿರ್ಮಾಣ ಚಟುವಟಿಕೆ ನಿಯಂತ್ರಣ ಬೈಲಾ ಕಡ್ಡಾಯಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಿರ್ಮಾಣ ಚಟುವಟಿಕೆ ನಿಯಂತ್ರಣ ಸಂಬಂಧ ರಾಜ್ಯ ಸರ್ಕಾರ ಬೈಲಾ ಕಡ್ಡಾಯಗೊಳಿಸುವ ಸಮಯ ಬಂದಿದೆ ಎಂದು ಹೈಕೋರ್ಟ್ ಹೇಳಿದೆ.

ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಕಟ್ಟಡಗಳ ನಿರ್ಮಾಣ ನಿಯಂತ್ರಣ) ಮಾದರಿ ಬೈಲಾ–2015 ರಚನೆಯಾಗಿ ಏಳು ವರ್ಷಗಳು ಕಳೆದರೂ ಜಾರಿಗೆ ತಂದಿಲ್ಲ ಎಂಬುದನ್ನು ಗಮನಿಸಿದ ಪೀಠ, ಈ ಅಭಿಪ್ರಾಯಪಟ್ಟಿದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬಿದಿರುಕೋಟೆ ಗ್ರಾಮದಲ್ಲಿ ನಡೆದ ವಿವಾದಕ್ಕೆ ಸಂಬಂಧಿಸಿ ಪ್ರಕರಣದ ವಿಚಾರಣೆ ವೇಳೆ ರಾಜ್ಯದ ಬಹುತೇಕ ಪಂಚಾಯಿತಿಗಳು ಈ ಬೈಲಾ ಅಳವಡಿಸಿಕೊಂಡಿಲ್ಲ ಎಂಬುದನ್ನು ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಪೀಠ ಗಮನಿಸಿತು.

'ಪಂಚಾಯತ್ ರಾಜ್ ಕಾಯ್ದೆಯ ಸೆಕ್ಷನ್ 316ರ ಪ್ರಕಾರ, ಬೈಲಾ ಅಳವಡಿಕೆ ಮಾಡಿಕೊಳ್ಳಬೇಕು. ಆ ರೀತಿ ಮಾಡದಿದ್ದರೆ ಸರ್ಕಾರವೇ ಅಧಿಸೂಚನೆ ಹೊರಡಿಸುವ ಮೂಲಕ ಬೈಲಾ ಜಾರಿಗೊಳಿಸಬೇಕು' ಎಂದು ಪೀಠ ತಿಳಿಸಿತು.

ನಕ್ಷೆ ಇಲ್ಲದೆ ನೋಂದಣಿ ಪ್ರಕ್ರಿಯೆಗೆ ಸೂಚನೆ

ಬೆಂಗಳೂರು: ನಕ್ಷೆ ಪಡೆದುಕೊಳ್ಳದೆ ನೋಂದಣಿ ಪ್ರಕ್ರಿಯೆಗೆ ಮುಂದುವರಿಸಲು ಅವಕಾಶ ಆಗುವಂತೆ ಕಾವೇರಿ ವೆಬ್‌ಸೈಟ್ ಬದಲಾವಣೆಯನ್ನು ತ್ವರಿತವಾಗಿ ಮಾಡಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

11ಇ ನಕ್ಷೆ ಕಡ್ಡಾಯಗೊಳಿಸುವಂತಿಲ್ಲ ಎಂದು ಜಿ.ರಾಮಾಚಾರ್ ಮತ್ತು ಸರ್ಕಾರದ ನಡುವಿನ ಪ್ರಕರಣದಲ್ಲಿ 2016ರಲ್ಲಿ ಹೈಕೋರ್ಟ್ ಆದೇಶ ಹೊರಡಿಸಿದೆ. ನಕ್ಷೆ ಕಡ್ಡಾಯದ ಬಗ್ಗೆ 2009ರ ಸುತ್ತೋಲೆ ಮತ್ತು ನೋಂದಣಿ ಕಾಯ್ದೆ 1908ರ ಸೆಕ್ಷನ್ 22ಎಗೆ ತಿದ್ದುಪಡಿಯನ್ನೂ ರದ್ದುಗೊಳಿಸಿದೆ.

ಇದನ್ನು ಪುನರುಚ್ಚರಿಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಪೀಠ, '2010ರಲ್ಲಿ ಮಾಡಿಕೊಂಡಿರುವ ನೋಂದಾಯಿತ ಕ್ರಯ ಪತ್ರವನ್ನು 11ಇ ನಕ್ಷೆ ಕೇಳದೆ ಒಂದು ತಿಂಗಳಲ್ಲಿ ನೋಂದಣಿ ಪೂರ್ಣಗೊಳಿಸಿ ಅರ್ಜಿದಾರರಿಗೆ ಹಸ್ತಾಂತರಿಸಬೇಕು' ಎಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿ ಉಪ ನೋಂದಣಾಧಿಕಾರಿಗೆ ನಿರ್ದೇಶನ ನೀಡಿತು.

ಅರ್ಜಿದಾರರು ಕೃಷಿ ಜಮೀನು ಖರೀದಿಸಿದ್ದರು. ನಕ್ಷೆ ಇಲ್ಲ ಎಂಬ ಕಾರಣಕ್ಕೆ ನೋಂದಣಿ ಕ್ರಯ ಪತ್ರ ಹಸ್ತಾಂತರಕ್ಕೆ 2010ರ ಡಿಸೆಂಬರ್ 18ರಂದು ಉಪ ನೋಂದಣಾಧಿಕಾರಿ ನಿರಾಕರಿಸಿದ್ದರು. 2021ರ ಸೆ.21ರಂದು ಹಿಂಬರಹವನ್ನೂ ನೀಡಿದ್ದರು.

ಹೈಕೋರ್ಟ್ ಸುದ್ದಿ

'ರಾಜ್ಯದಲ್ಲಿ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ನಿರ್ಮಾಣ ಚಟುವಟಿಕೆಗಳು ಜೋರಾಗಿ ನಡೆಯುತ್ತಿವೆ. ನಿಯಮಗಳ ಉಲ್ಲಂಘನೆ ಪಾಲಿಕೆ ವ್ಯಾಪ್ತಿಗಷ್ಟೇ ಸೀಮಿತವಾಗಿಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿನ ನಿರ್ಮಾಣಗಳನ್ನು ನಿಯಂತ್ರಿಸಲು ಸರ್ಕಾರಕ್ಕೆ ಈಗ ಕಾಲ ಕೂಡಿಬಂದಿದೆ' ಎಂದು ಹೇಳಿತು.

ಮನೆ ಮುಂದೆ ನಿಲ್ಲಿಸುತ್ತಿದ್ದ ಬೈಕ್‌ಗಳ ಕಳ್ಳತನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮುಂದೆ ನಿಲ್ಲಿಸಿರುತ್ತಿದ್ದ ಬೈಕ್‌ಗಳನ್ನು ಕದ್ದು ಬೇರೆಡೆ ಮಾರಾಟ ಮಾಡುತ್ತಿದ್ದ ನದೀಂ ಅಹ್ಮದ್ ಎಂಬಾತನನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹5.20 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

'ತಮ್ಮ ಮನೆಯ ಮುಂದೆ ನಿಲ್ಲಿಸಿದ್ದ ಹೋಂಡಾ ಆ್ಯಕ್ಟಿವಾ ಸ್ಕೂಟರ್ ಕಳವಾಗಿರುವ ಬಗ್ಗೆ ವ್ಯಕ್ತಿಯೊಬ್ಬರು ಠಾಣೆಗೆ ದೂರು ನೀಡಿದ್ದರು. ಠಾಣಾ ವ್ಯಾಪ್ತಿಯಲ್ಲಿ ನದೀಂ ಅನುಮಾನಾಸ್ಪದವಾಗಿ ಓಡಾಡುತ್ತಿರುವುದನ್ನು ಗಸ್ತಿನಲ್ಲಿದ್ದ ಸಿಬ್ಬಂದಿ ಗಮನಿಸಿದ್ದರು. ಅಕ್ಟೋಬರ್ 31ರಂದು ಆತನನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ತಾನೆ ಬೈಕ್ ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ದರೋಡೆ ಪ್ರಕರಣದಲ್ಲಿ ಜೈಲು ಸೇರಿದ್ದ ಆರೋಪಿ ಒಂದೂವರೆ ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆಯಾಗಿದ್ದ. ಬಳಿಕ ಬೈಕ್ ಕಳ್ಳತನಕ್ಕೆ ಮುಂದಾಗಿದ್ದ. ಕದ್ದ ಬೈಕ್‌ಗಳನ್ನು ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದ. ಕೆಂಗೇರಿಯಲ್ಲಿ ಎರಡು, ಬ್ಯಾಡರಹಳ್ಳಿ ಹಾಗೂ ಜಿಗಣಿ ಠಾಣೆಗಳ ವ್ಯಾಪ್ತಿಯಲ್ಲಿ ತಲಾ ಒಂದು ಬೈಕ್ ಕದ್ದಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ' ಎಂದರು.

ಆರೋಪಿಯಿಂದ ಜಪ್ತಿ ಮಾಡಿರುವ ಬೈಕ್‌ಗಳು

ಕೈಕಾಲು ಕಟ್ಟಿ ಯುವಕನ ಕೊಲೆ: ಪ್ಲಾಸ್ಟಿಕ್ ಚೀಲದಲ್ಲಿ ಶವ ಪತ್ತೆ

ಬೆಂಗಳೂರು: ಕೈಕಾಲು ಕಟ್ಟಿ ಯುವಕನೊಬ್ಬನನ್ನು ಕೊಲೆ ಮಾಡಿರುವ ದುಷ್ಕರ್ಮಿಗಳು, ಪ್ಲಾಸ್ಟಿಕ್ ಚೀಲದಲ್ಲಿ ಮೃತದೇಹವನ್ನು ಸುತ್ತಿ ರಾಜಕಾಲುವೆ ಬಳಿ ಬಿಸಾಡಿ ಪರಾರಿಯಾಗಿದ್ದಾರೆ.

'ದುಷ್ಕರ್ಮಿಗಳು ಯುವಕನ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿದ್ದಾರೆ. ಬಾಯಿ ಹಾಗೂ ಮೂಗಿಗೆ ಪ್ಲಾಸ್ಟರ್ ಸುತ್ತಲಾಗಿದೆ. ಮೃತ ಯುವಕನಿಗೆ ಸುಮಾರು 25 ವರ್ಷ ವಯಸ್ಸಾಗಿರಬಹುದು. ಆತನ ಹೆಸರು ಮತ್ತು ವಿಳಾಸ ಗೊತ್ತಾಗಿಲ್ಲ. ಕುತ್ತಿಗೆ ಬಿಗಿದು ಕೊಲೆ ಮಾಡಿರಬಹುದು' ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

'ಬೇರೆ ಕಡೆ ಕೊಲೆ ಮಾಡಿ ಮೃತದೇಹವನ್ನು ಠಾಣೆ ವ್ಯಾಪ್ತಿಯ ಡಿಸೋಜ ನಗರದ ರಾಜಕಾಲುವೆ ಬಳಿ ಬಿಸಾಡಿ ಹೋಗಿರುವ ಶಂಕೆ ಇದೆ. ಮಂಗಳವಾರ ಬೆಳಿಗ್ಗೆ ಚಿಂದಿ ಆಯುವ ವ್ಯಕ್ತಿಯೊಬ್ಬರು ಗೋಣಿಚೀಲ ಬಿದ್ದಿರುವುದನ್ನು ಕಂಡು ಸ್ಥಳೀಯರಿಗೆ ವಿಷಯ ತಿಳಿಸಿದ್ದಾರೆ. ಅವರು ಠಾಣೆಗೆ ಮಾಹಿತಿ ನೀಡಿದ ಬಳಿಕ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಲಾಗಿತ್ತು. ಚೀಲ ತೆಗೆದು ನೋಡಿದಾಗ ಅದರಲ್ಲಿ ಮೃತದೇಹ ಪತ್ತೆಯಾಗಿತ್ತು' ಎಂದು ವಿವರಿಸಿದ್ದಾರೆ.

ಬೆಸ್ಕಾಂ ಕಚೇರಿಯಲ್ಲಿ ಕಳ್ಳತನ ಗುತ್ತಿಗೆ ನೌಕರನಿಂದಲೇ ಕೃತ್ಯ

ಅಪರಾಧ ಸುದ್ದಿ

ಬೆಂಗಳೂರು: ಕಚೇರಿಯ ನಗದು ಕೌಂಟರ್‌ನಲ್ಲಿಟ್ಟಿದ್ದ ₹1.40 ಲಕ್ಷ ಹಣವನ್ನು ಕದ್ದಿದ್ದ ಬೆಸ್ಕಾಂ ನೌಕರ ಹೇಮಂತ್ ಎಂಬಾತನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿ, ಕದ್ದ ಹಣವನ್ನು ಜಪ್ತಿ ಮಾಡಿದ್ದಾರೆ.

'ಮಂಡ್ಯ ಜಿಲ್ಲೆಯವನಾದ ಆರೋಪಿಯು ಕೆಂಗೇರಿ ಉಪನಗರದ 5ನೇ ಮುಖ್ಯರಸ್ತೆಯ 5ನೇ ತಿರುವಿನಲ್ಲಿರುವ ಬೆಸ್ಕಾಂ ಕಚೇರಿಯಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದ. ಅಕ್ಟೋಬರ್ 28ರಂದು ಕಚೇರಿಯ ನಗದು ಕೌಂಟರ್‌ನಲ್ಲಿ ಇಟ್ಟಿದ್ದ ಹಣ ಕಳುವಾಗಿರುವ ಬಗ್ಗೆ ದೂರು ದಾಖಲಾಗಿತ್ತು. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರು ನೌಕರರನ್ನು ಕರೆದು ವಿಚಾರಣೆ ನಡೆಸಲಾಗಿತ್ತು. ಹೇಮಂತ್ ಮೇಲೆ ಅನುಮಾನ ಮೂಡಿದ್ದರಿಂದ ಆತನನ್ನು ಪ್ರತ್ಯೇಕವಾಗಿ ವಿಚಾರಿಸಲಾಗಿತ್ತು. ಈ ವೇಳೆ ಹಣ ಕದ್ದಿದ್ದಾಗಿ ಒಪ್ಪಿಕೊಂಡಿದ್ದ' ಎಂದು ಪೊಲೀಸರು ಹೇಳಿದ್ದಾರೆ.

'ಕಚೇರಿಯಲ್ಲಿ ಎಂದಿನಂತೆ ಬೆಳಿಗ್ಗೆ ಪೂಜೆ ನಡೆದಿತ್ತು. ಕವಿತಾ ಎಂಬುವವರಿಗೆ ಆರೋಪಿ ಪ್ರಸಾದ ಕೊಡಲು ಹೋಗಿದ್ದ. ಅವರು ಅದನ್ನು ನಗದು ಹಣ ಇರುವ ಕೊಠಡಿಯಲ್ಲಿ ಇಡುವಂತೆ ಕೀಲಿ ಕೊಟ್ಟು ಕಳುಹಿಸಿದ್ದರು. ಬೀಗ ತೆಗೆದು ಪ್ರಸಾದ ಇಟ್ಟು ಬಂದಿದ್ದ ಆರೋಪಿ ಬಳಿಕ ಕೀಲಿಯನ್ನು ಕವಿತಾಗೆ ಹಿಂತಿರುಗಿಸಿದ್ದ. ಅದೇ ದಿನ ಮಂಜುನಾಥ್ ಎಂಬುವವರು ಹಣ ಸಂಗ್ರಹಿಸಲು ಬಂದಿದ್ದರು. ಹಣ ಇಟ್ಟಿದ್ದ ಕೊಠಡಿಯ ಬಾಗಿಲು ತೆರೆದಿರುವ ವಿಚಾರವನ್ನು ಕವಿತಾ ಗಮನಕ್ಕೆ ತಂದಿದ್ದರು. ಸ್ಥಳಕ್ಕೆ ಹೋಗಿ ನೋಡಿದಾಗ ಬಾಕ್ಸ್‌ನಲ್ಲಿ ಇಟ್ಟಿದ್ದ ಹಣ ಇರಲಿಲ್ಲ. ಈ ಸಂಬಂಧ ಅವರು ಠಾಣೆಗೆ ಬಂದು ದೂರು ನೀಡಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'ಅಪಪ್ರಚಾರವೇ ಹಿನ್ನಡೆಗೆ ಕಾರಣ'

ಬೆಂಗಳೂರು: ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ನಡೆಸಿದ ಅಪಪ್ರಚಾರವೇ ಸಿಂದಗಿ ಹಾಗೂ ಹಾನಗಲ್ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ತಮ್ಮ ಪಕ್ಷದ ಹಿನ್ನಡೆಗೆ ಕಾರಣ ಎಂದು ಜೆಡಿಎಸ್ ವಕ್ತಾರ ಟಿ.ಎ. ಶರವಣ ಹೇಳಿದ್ದಾರೆ.

ಚುನಾವಣಾ ಫಲಿತಾಂಶ ಕುರಿತು ಪ್ರತಿಕ್ರಿಯಿಸಿರುವ ಅವರು, '2 ಕ್ಷೇತ್ರಗಳ ಫಲಿತಾಂಶದಿಂದ ಜೆಡಿಎಸ್ ಪಕ್ಷದ ಸಾಮರ್ಥ್ಯ ಅಳೆಯಲು ಸಾಧ್ಯವಿಲ್ಲ. ಜನ ಕೊಟ್ಟಿರುವ ತೀರ್ಪನ್ನು ಸ್ವೀಕರಿಸುತ್ತೇವೆ. ಬಿಜೆಪಿ– ಕಾಂಗ್ರೆಸ್ ಹಣದ ಬಲ, ಅಧಿಕಾರದ ಬಲ ಬಳಸಿ ಗೆದ್ದಿವೆ' ಎಂದಿದ್ದಾರೆ.

ಈ ಫಲಿತಾಂಶದಿಂದ ಜೆಡಿಎಸ್ ಧೈರ್ಯ ಕಳೆದುಕೊಳ್ಳುವುದಿಲ್ಲ. ಜನಪರ ರಾಜಕಾರಣ ಮುಂದುವರಿಯಲಿದೆ. ಅನೈತಿಕ ರಾಜಕಾರಣವನ್ನು ತಮ್ಮ ಪಕ್ಷ ಮಾಡುವುದಿಲ್ಲ. ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ಬಿಜೆಪಿ, ಕಾಂಗ್ರೆಸ್ ಬಣ್ಣ ಬಯಲಾಗಲಿದೆ. ಜನದ್ರೋಹಿ ರಾಜಕಾರಣವನ್ನು ಮೀರಿ ಜೆಡಿಎಸ್ ಎದ್ದು ಬರಲಿದೆ ಎಂದಿದ್ದಾರೆ.

ನೀಟ್: ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನೀಟ್ ಪರೀಕ್ಷೆಯಲ್ಲಿ ಪಟ್ಟಣದ ಜಕ್ಕಸಂದ್ರ ಹೊಯ್ಸಳ ಕಾಲೇಜಿನ 6 ವಿದ್ಯಾರ್ಥಿಗಳು 450ಕ್ಕೂ ಹೆಚ್ಚು ಅಂಕ ಗಳಿಸಿ ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.

ಕೆ.ಅನನ್ಯ 720ಕ್ಕೆ 622, ಎಚ್. ಕುಶಾಲ್ 519, ಪ್ರಥಮ್ ಬಾಬು, ಗೀತಾ, ತರುಣ್, ಎಲ್.ಕಾರ್ತಿಕ್ 450ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ ಎಂದು ಪ್ರಾಂಶುಪಾಲ ಗೌರಿಶಂಕರ್ ತಿಳಿಸಿದ್ದಾರೆ.

ಬಿಜಿಎಸ್ ಕಾಲೇಜು: ನಗರೂರಿನ ಬಿಜಿಎಸ್ ಕಾಲೇಜಿನ ವಿದ್ಯಾರ್ಥಿಗಳಾದ ಎಂ.ಎಸ್.ಯತೀಶ್ 642, ಸಾಯಿ ಪ್ರಣವ್ 615, ಸತೀಶ್ 587, ಚಂದ್ರಶೇಖರ್ 573, ಹಂಸ ದೇವರಾಜು 411 ಅಂಕಗಳಿಸಿ ಅರ್ಹತೆ ಪಡೆದಿದ್ದಾರೆ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಕೆ.ಅನನ್ಯ

ಕುಶಾಲ್

ಯತೀಶ್

ನೀಟ್: ಡಿ.ಆರ್.ಅಕಾಡೆಮಿ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ನೀಟ್ ಪರೀಕ್ಷೆಯಲ್ಲಿ ನಗರದ ಡಿ.ಆರ್. ಅಕಾಡೆಮಿಯ ಬಿ.ಎನ್.ಲಕ್ಷ್ಮಣರೆಡ್ಡಿ ಹಾಗೂ ಲಕ್ಷ್ಮೀ ಪಾಟೀಲ ಉತ್ತಮ ಸಾಧನೆ ಮಾಡಿದ್ದಾರೆ.

ಬಿ.ಎನ್.ಲಕ್ಷ್ಮಣರೆಡ್ಡಿ 720ಕ್ಕೆ 695 ಅಂಕ ಗಳಿಸಿ ರಾಷ್ಟ್ರಮಟ್ಟದಲ್ಲಿ 65ನೇ ರ‍್ಯಾಂಕ್ ಪಡೆದಿದ್ದು, ಲಕ್ಷ್ಮೀ ಪಾಟೀಲ್ ಅವರು 720ಕ್ಕೆ 665 ಅಂಕಗಳನ್ನು ಪಡೆದಿದ್ದಾರೆ.

ಸಂಸ್ಥೆಯ 38 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದು, ಈ ವರ್ಷದ ವೈದ್ಯಕೀಯ ಕೋರ್ಸ್‌ಗಳಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.

ಲಕ್ಷ್ಮೀ ಪಾಟೀಲ

ಲಕ್ಷ್ಮಣರೆಡ್ಡಿ

ಅಪ್ಪು ವಿರುದ್ಧ ನಿಂದನಾರ್ಹ ಪೋಸ್ಟ್: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ನಟ ಪುನೀತ್ ರಾಜ್‌ಕುಮಾರ್ ವಿರುದ್ಧ ಇನ್‌ಸ್ಟಾಗ್ರಾಮ್‌ನಲ್ಲಿ ನಿಂದನಾರ್ಹ ಪೋಸ್ಟ್ ಹಾಕಿದ್ದ ಆರೋಪಿಯೊಬ್ಬನನ್ನು ಸೈಬರ್ ಅಪರಾಧ ದಳದ ಪೊಲೀಸರು ಬಂಧಿಸಿದ್ದಾರೆ. ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರೇ ಟ್ವೀಟ್ ಮೂಲಕ ಈ ವಿಷಯ ಖಚಿತಪಡಿಸಿದ್ದಾರೆ.

ಸ್ನೇಹಿತರೊಂದಿಗೆ ಕಾರಿನಲ್ಲಿ ಮದ್ಯದ ಪಾರ್ಟಿ ಮಾಡಿದ್ದ ಆರೋಪಿ, ಕೈಯಲ್ಲಿ ಬಿಯರ್ ಬಾಟಲಿ ಹಿಡಿದಿರುವ ಫೋಟೊವೊಂದನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದ. ಅದರ ಜೊತೆ 'ರಾಜ್‌ಕುಮಾರ್‌ನಿಂದ ನಮ್ಮನ್ನು ತಡೆಯಲು ಸಾಧ್ಯವಿಲ್ಲ. ಆತನನ್ನು ನೀವು ನೆನಪಿನಲ್ಲಿ ಇಟ್ಟುಕೊಳ್ಳಿ. ದಯವಿಟ್ಟು ಮರೆಯಬೇಡಿ. ನಾವು ಇದನ್ನು ಕುಡಿದ ನಂತರ ಆತನ ಸಮಾಧಿಯ ಮೇಲೆ ಮೂತ್ರ ವಿಸರ್ಜಿಸುತ್ತೇವೆ' ಎಂದು ಬರೆದಿದ್ದ. ಇದರ ಸ್ಕ್ರೀನ್‌ಶಾಟ್ ತೆಗೆದಿದ್ದ ವ್ಯಕ್ತಿಯೊಬ್ಬರು ಅದನ್ನು ಅಕ್ಟೋಬರ್ 31ರಂದು ಟ್ವೀಟ್ ಮಾಡಿದ್ದರು. ಅದನ್ನು ಪೊಲೀಸ್ ಕಮಿಷನರ್ ಕಮಲ್ ಪಂತ್, ಸೈಬರ್ ಅಪರಾಧ ದಳ ಹಾಗೂ ಬೆಂಗಳೂರು ನಗರ ಪೊಲೀಸರಿಗೆ ಟ್ಯಾಗ್ ಮಾಡಿದ್ದರು.

ಇದಕ್ಕೆ ಕೂಡಲೇ ಸ್ಪಂದಿಸಿದ್ದ ನಗರ ಪೊಲೀಸರು 'ಈ ವಿಚಾರವನ್ನು ಸೈಬರ್ ಅಪರಾಧ ದಳದವರ ಗಮನಕ್ಕೆ ತರಲಾಗಿದೆ. ದುಷ್ಕರ್ಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಮರು ಟ್ವೀಟ್ ಮಾಡಿದ್ದರು.

ಪುನೀತ್ ವಿರುದ್ಧದ ಅವಹೇಳನಕಾರಿ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಸಾಕಷ್ಟು ಮಂದಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ವಿಕೃತ ಮನಸ್ಸಿನ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಅನೇಕರು ಪೊಲೀಸರಿಗೆ ಆಗ್ರಹಿಸಿದ್ದರು. ಕೂಡಲೇ ಕಾರ್ಯಪ್ರವೃತ್ತರಾಗಿದ್ದ ಅಪರಾಧ ವಿಭಾಗದ ಪೊಲೀಸರು ಸೋಮವಾರ ಸಂಜೆ ಆರೋಪಿಯನ್ನು ಬಂಧಿಸಿದ್ದರು.

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ಬೈಕ್‌ಗೆ ವೇಗವಾಗಿ ಬಂದ ಲಾರಿಯೊಂದು ಗುದ್ದಿದ್ದರಿಂದ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ನೈಸ್ ರಸ್ತೆಯ ಗಾಯತ್ರಿ ಸೇತುವೆ ಬಳಿ ಸೋಮವಾರ ರಾತ್ರಿ ಘಟನೆ ನಡೆದಿದೆ. ಲಾರಿಯೊಂದಿಗೆ ಚಾಲಕ ಪರಾರಿಯಾಗಿದ್ದು, ಆತನ ಪತ್ತೆಕಾರ್ಯ ಆರಂಭಿಸಲಾಗಿದೆ' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

'ಬೈಕ್ ಸವಾರನ ಹೆಸರು ಮತ್ತು ವಿಳಾಸ ತಿಳಿದುಬಂದಿಲ್ಲ' ಎಂದು ಹೇಳಿದ್ದಾರೆ.

ಸಂಭ್ರಮದ ಮಾರಮ್ಮ ಜಾತ್ರೆ

ಮಲ್ಲಸಂದ್ರ ಗ್ರಾಮದಿಂದ ದೊಡ್ಡದಾರತಿ ಹೊತ್ತ ಭಕ್ತರು ಬಾಗಲಗುಂಟೆ ಮಾರಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು

ಪೀಣ್ಯದಾಸರಹಳ್ಳಿ: ಬಾಗಲಗುಂಟೆ ಮಾರಮ್ಮದೇವಿಯ ಜಾತ್ರೆ ಸೋಮವಾರ ಸಂಭ್ರಮದಿಂದ ನಡೆಯಿತು. ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಕಳೆದ ವರ್ಷ ಕೋವಿಡ್ ಕಾರಣಕ್ಕೆ ಜಾತ್ರೆಯನ್ನು ರದ್ದುಗೊಳಿಸಲಾಗಿತ್ತು.

ಬೆಳಿಗ್ಗೆಯಿಂದ ಪಳೇಕಮ್ಮ, ಮುತ್ತುರಾಯಸ್ವಾಮಿ, ವಿನಾಯಕ, ನವಗ್ರಹಗಳು, ವೇಣುಗೋಪಾಲಸ್ವಾಮಿ, ಆಂಜನೇಯಸ್ವಾಮಿ ಹಾಗೂ ಜುಂಜಪ್ಪಸ್ವಾಮಿ ದೇವರುಗಳಿಗೆ ಅಲಂಕಾರ, ಬೆಲ್ಲದ ಆರತಿ ಹಾಗೂ ಪೂಜೆ ನಡೆದವು.

ಹರಕೆ ಹೊತ್ತ ಭಕ್ತರು ಬಾಯಿಗೆ ಬೀಗ ಸೇವೆ, ಅಲಗುಸೇವೆ ಅಗ್ನಿಕುಂಡ ಹಾಯುವ ಮೂಲಕ ಹರಕೆ ಸಲ್ಲಿಸಿದರು. ಮಲ್ಲಸಂದ್ರ, ಸಿಡೇದಹಳ್ಳಿ, ತೋಟದ ಗುಡ್ಡದಹಳ್ಳಿ, ಮಂಜುನಾಥ ನಗರ, ಶೆಟ್ಟಿಹಳ್ಳಿ, ಚಿಕ್ಕಸಂದ್ರ ಮುಂತಾದ ಗ್ರಾಮಸ್ಥರು ವಾದ್ಯಗಳೊಂದಿಗೆ ದೊಡ್ಡದಾರತಿ ಹೊತ್ತು ಬಾಗಲಗುಂಟೆ ಮಾರಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ನಿಧನ ವಾರ್ತೆ

ಎಚ್‌.ಕೆ.ರಾಮನಾಥ್



ಮೈಸೂರು: ರಂಗ ಕಲಾವಿದ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಎಚ್. ಕೆ. ರಾಮನಾಥ್ (83) ಅವರು ಮಣಿಪಾಲ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ನ. 4ರಂದು ಮೈಸೂರಿನಲ್ಲಿ ನಡೆಯಲಿದೆ.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದಲ್ಲಿ 1938ರ ಏಪ್ರಿಲ್ 2ರಂದು ಜನಿಸಿದ ಅವರು, ಅಧ್ಯಾಪಕ ವೃತ್ತಿಯ ಜತೆಗೆ 'ಮಿತ್ರ ಕಲಾವಿದರು' ತಂಡವನ್ನು ಕಟ್ಟಿಕೊಂಡು ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದರು. ಮಕ್ಕಳಿಗಾಗಿ 'ಬೇನೆಯ ಬೋನಿನಲ್ಲಿ' ಸೇರಿದಂತೆ ಹಲವು ನಾಟಕಗಳನ್ನು ರಚಿಸಿದ್ದರು. ಅಂಗುಲಿಮಾಲ, ಪಂಜರಶಾಲೆ, ಗಗ್ಗಯ್ಯನ ಗಡಿಬಿಡಿ, ಕೈಗೆ ಬಂದ ತುತ್ತು, ಜಾತ್ರೆ ಸೇರಿದಂತೆ ಮಕ್ಕಳ ನಾಟಕಗಳನ್ನು ನಿರ್ದೇಶಿಸಿದ್ದರು.

ಅವರ 'ಕನ್ನಡ ರಂಗಭೂಮಿಯ ವಿಕಾಸ' ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ನೀಡಿತ್ತು. ಬಸವಣ್ಣನವರು, ಕರ್ನಾಟಕ ರಂಗಭೂಮಿಯ ನೆನ್ನೆ, ಇಂದು, ನಾಳೆ, ಮಕ್ಕಳೇ ಆಡಬನ್ನಿ, ಮಕ್ಕಳಿಗಾಗಿ ಪದಕೋಶ ಕೃತಿಗಳನ್ನು ರಚಿಸಿದ್ದರು.

ಇಲ್ಲಿನ ಸುರುಚಿ ರಂಗಮನೆಯಲ್ಲಿ 'ಕಥೆ ಕೇಳೋಣ ಬನ್ನಿ' ಕಾರ್ಯಕ್ರಮವನ್ನು ಮಕ್ಕಳಿಗಾಗಿ ವಿದ್ಯಾಶಂಕರ್ ಅವರೊಂದಿಗೆ ಪ್ರತಿವಾರವೂ ಕೆಲವು ವರ್ಷಗಳ ಕಾಲ ನಡೆಸಿದ್ದರು. ಅವರಿಗೆ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರಗಳು ಸಂದಿವೆ.

ಎನ್‌.ಜಿ.ಕೋಟೇಶ್

ಬೆಂಗಳೂರು: ಪತ್ರಕರ್ತ ಎನ್. ಜಿ.ಕೋಟೇಶ್ ಅವರು ಹೃದಯಾಘಾತದಿಂದ ಮಂಗಳವಾರ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಬುಧವಾರ ಬೆಳಿಗ್ಗೆ 9 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಚಿತ್ರಾವಳಿ

ಕಳೆದ ತಿಂಗಳು ನಗರದಲ್ಲಿ ಸುರಿದ ಭಾರಿ ಮಳೆಗೆ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಲವು ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿತ್ತು. ಸಂತ್ರಸ್ತರಿಗೆ ಮಂಜೂರಾಗಿದ್ದ ₹10 ಸಾವಿರ ಪರಿಹಾರ ಮೊತ್ತದ ಘೋಷಣಾ ಪತ್ರವನ್ನು ವಸತಿ ಸಚಿವ ವಿ.ಸೋಮಣ್ಣ ಮಂಗಳವಾರ ವಿತರಿಸಿದರು.

ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆಯು ಜಯನಗರದಲ್ಲಿ ಹಮ್ಮಿಕೊಂಡಿದ್ದ ಗುರು ಪಂಚಾಕ್ಷರ ಸಂಗೀತ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಖ್ಯಾತ ಹಿಂದೂಸ್ತಾನಿ ಗಾಯಕರಾದ ರೇಖಾ ಹಂಪಿಹೊಳಿ ಅವರಿಗೆ 'ಪಂಚಾಕ್ಷರ ಕೃಪಾಭೂಷಣ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, ಶಿಕ್ಷಣ ತಜ್ಞೆ ಗೀತಾ ರಾಮಾನುಜಂ, ತಬಲಾ ವಾದಕ ಸತೀಶ್ ಹಂಪಿಹೊಳಿ, ರವಿ ರಂಗಪ್ಪ, ಸಂಸ್ಥೆ ಅಧ್ಯಕ್ಷ ನಾಗೇಂದ್ರ ರಾಣಾಪೂರ, ಜ್ಯೋತಿ ಹಾಗೂ ಇತರರು ಇದ್ದರು.

ಮಹಾಲಕ್ಷ್ಮಿ ಬಡಾವಣೆಯ ಶಂಕರ ಮಠ ವಾರ್ಡ್‌ನಲ್ಲಿ ಬಿಪ್ಯಾಕ್ ಸಂಸ್ಥೆಯ ವತಿಯಿಂದ ಪೌರ ಕಾರ್ಮಿಕರಿಗೆ ಸಿಹಿ ಹಂಚುವ ಕಾರ್ಯಕ್ರಮಕ್ಕೆ ಸಚಿವ ಕೆ.ಗೋಪಾಲಯ್ಯ ಚಾಲನೆ ನೀಡಿದರು. ಬಿಪ್ಯಾಕ್ ಸಂಸ್ಥೆಯ ಅವಿನ್ ಆರಾಧ್ಯ, ನಿಸರ್ಗ ಜಗದೀಶ್, ರಾಘವೇಂದ್ರ ಹಾಗೂ ಸ್ಥಳೀಯ ಮುಖಂಡರಾದ ಜಯರಾಮಯ್ಯ, ಜಯಸಿಂಹ, ಶ್ರೀನಿವಾಸ್ ಹಾಗೂ ಇತರರು ಇದ್ದರು.

ಬೆಲೆ ಏರಿಕೆ ನಿಯಂತ್ರಿಸದಿದ್ದರೆ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಸರ್ಕಾರ ತಕ್ಷಣ ನಿಯಂತ್ರಿಸದಿದ್ದರೆ ಹೋಟೆಲ್‌ಗಳಲ್ಲಿ ತಿಂಡಿ–ತಿನಿಸು ಬೆಲೆ ಏರಿಕೆ ಅನಿವಾರ್ಯವಾಗಲಿದೆ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಎಚ್ಚರಿಸಿದೆ.

'ಪೆಟ್ರೋಲ್, ಡೀಸೆಲ್ ದರ ದಿನದಿಂದ ದಿನಕ್ಕೆ ಗಗನಮುಖಿಯಾಗಿದೆ. ಈ ರೀತಿ ಇಂಧನ ದರ ಏರಿಕೆ ಆಗುತ್ತಿರುವುದರಿಂದ ತರಕಾರಿ, ಧವಸ–ಧಾನ್ಯಗಳ ಬೆಲೆ ಕೂಡ ಹೆಚ್ಚಾಗುತ್ತಿದೆ. ಅಡುಗೆ ಅನಿಲದ ದರ ₹1 ಸಾವಿರದಿಂದ ₹2 ಸಾವಿರ ಗಡಿ ದಾಟಿದೆ. ಈ ರೀತಿಯ ದರ ಏರಿಕೆಯಿಂದ ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಮತ್ತು ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ತಿಳಿಸಿದ್ದಾರೆ.

'ನಿರ್ವಹಣೆ ಕಷ್ಟವಾದರೂ, ಗ್ರಾಹಕರ ಹಿತದೃಷ್ಟಿಯಿಂದ ತಿಂಡಿ–ತಿನಿಸುಗಳ ಬೆಲೆ ಏರಿಕೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಸರ್ಕಾರ ತಕ್ಷಣವೇ ಬೆಲೆ ಏರಿಕೆ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು. ಹೋಟೆಲ್ ಮಾಲೀಕರ ಬೇಡಿಕೆಗಳ ಈಡೇರಿಕೆ ಕಡೆಗೂ ಗಮನ ಹರಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಮೈಸೂರು ರೇಸ್

ವಚನ್ ಗೆಲ್ಲುವ ನಿರೀಕ್ಷೆ

ಸ್ಟಾರ್ ಆಫ್ ಮೈಸೂರು ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಚನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫೆಸೆಟ್ ಆಫ್ ಲೈಫ್ 2, ಓಕರ್ 10, ಟ್ರಸ್ಟ್ ಬಾಂಡ್ 6
2ನೇ ರೇಸ್: ಕಂಟ್ರೆಸ್ ಡಿಲೈಟ್ 3, ಸ್ವಿಸ್ ಬೇ 4, ದಿ ಇಂಪೋಸ್ಟರ್ 12
3ನೇ ರೇಸ್: ಕಿಂಗ್ಸ್ ಕಮಾಂಡ್ 2, ಕಾನ್‌ಸ್ಪಿರೆಸಿ 1, ಫ್ಲಾಶ್ ಬಾಂಡ್ 9
4ನೇ ರೇಸ್: ಡೇರಿಂಗ್ ಪ್ರಿನ್ಸ್ 3, ಥಿಯಾಸ್ ಗ್ಲೋರಿ 9, ವಿಂಡ್ ಸ್ಟ್ರೈಕರ್ 10
5ನೇ ರೇಸ್: ಚಾಶ್ನಿ 5, ಹಿರೋಯಿಸ್ಮ್ 7, ವಾಟ್ ಈಸ್ ದಿಸ್ 9
6ನೇ ರೇಸ್: ವಚನ್ 2, ಕಾಂಟ್ರಿಬ್ಯುಟರ್ 1, ಡಿ ಗೋಲ್ಡ್ 9
7ನೇ ರೇಸ್: ಸ್ಟೀರ್ ದಿ ಸರ್ಕಲ್ 1, ಕ್ರೆಸೆಂಡೊ 2, ಲಕಿ ಲೂಸಿಯಾನೊ 8
8ನೇ ರೇಸ್: ಗಿಂಟೋಕಿ 3, ಬ್ಲೂ ಬರ್ಡ್ ದಿ ವರ್ಡ್ 5, ವಿಂಡ್ ಪವರ್ 10

ಉತ್ತಮ ಬೆಟ್: ಚಾಶ್ನಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬಲಿಪಾಡ್ಯಮಿ ದಿನ ಸರ್ಕಾರದಿಂದ ಆಯೋಜನೆ

ಗೋಪೂಜೆಗೆ ಪಶುವೈದ್ಯರ ನಿಯೋಜನೆ!

• ಕೆ.ನರಸಿಂಹಮೂರ್ತಿ

ಮೈಸೂರು: ದೀಪಾವಳಿಯ ಬಲಿಪಾಡ್ಯಮಿ (ನ.5) ದಿನ ರಾಜ್ಯದ ಪ್ರಮುಖ ದೇವಾಲಯಗಳಲ್ಲಿ ರಾಜ್ಯ ಸರ್ಕಾರ ಗೋಪೂಜೆಯನ್ನು ಹಮ್ಮಿಕೊಂಡಿದ್ದು, ಅದಕ್ಕಾಗಿ ಗೋವುಗಳನ್ನು ಕರೆದೊಯ್ಯಲು ಪಶುವೈದ್ಯಾಧಿಕಾರಿಗಳನ್ನು ನಿಯೋಜಿಸಿದೆ. ಸರ್ಕಾರದ ಈ ಕ್ರಮಕ್ಕೆ ವಿರೋಧ ವ್ಯಕ್ತವಾಗಿದೆ.

ಗೋಪೂಜೆಗೆ ಗೋವುಗಳನ್ನು ಕರೆತರುವುದು ಮತ್ತು ಗೋವು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು ರಾಜ್ಯದ ಎಲ್ಲ ಜಿಲ್ಲೆಗಳ ಉಪನಿರ್ದೇಶಕರಿಗೆ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ನಿರ್ದೇಶಕರು ಮಂಗಳವಾರ ಪತ್ರ ಬರೆದಿದ್ದಾರೆ. ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ನಿರ್ದೇಶಕರ ಪತ್ರವನ್ನು ಆಧರಿಸಿ ಉಪನಿರ್ದೇಶಕರು ಎಲ್ಲ ಸಹಾಯಕ ನಿರ್ದೇಶಕರಿಗೆ ಪತ್ರ ಬರೆದು ವ್ಯವಸ್ಥೆ ಮಾಡುವಂತೆಯೂ ಸೂಚಿಸಿದ್ದಾರೆ.

'ಪ್ರತಿ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿರುವ ಪ್ರಮುಖ ದೇವಾಲಯಕ್ಕೆ ಪಶುವೈದ್ಯಾಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಬೇಕು. ಅವರು ಒಂದು ಹಸುವನ್ನು ದೇವಾಲಯಕ್ಕೆ ಕರೆತರುವ ವ್ಯವಸ್ಥೆ ಮಾಡಬೇಕು. ಗೋಪೂಜೆಯನ್ನು ವಿಜೃಂಭಣೆಯಿಂದ ನೆರವೇರಿಸಲಿ ದೇವಾಲಯದ ಮುಖ್ಯಸ್ಥರಿಗೆ ಸಹಕರಿಸಬೇಕು' ಎಂದು ಸಹಾಯಕ ನಿರ್ದೇಶಕರಿಗೆ ಸೂಚಿಸಲಾಗಿದೆ.

ಫೋಟೊ ಕೊಡಿ: 'ಗೋವಿನ ಪೂಜೆಗೆ ಸಹಕರಿಸುವುದರ ಜೊತೆಗೆ ಪೂಜೆಯ ಫೋಟೊವನ್ನು ಕೂಡ ಕಚೇರಿಗೆ ಸಲ್ಲಿಸಬೇಕು. ಗೋವು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಬೇಕು' ಎಂದೂ ಸೂಚಿಸಲಾಗಿದೆ.

ಎಲ್ಲ ಸಿಬ್ಬಂದಿ ನಿಯೋಜನೆ: 'ಗೋವು ಪೂಜೆ ನಡೆಯಲಿರುವ ಎಲ್ಲ ಗುಡಿಗಳಿಗೂ ಆಯಾ ಪ್ರದೇಶದ ವೈದ್ಯಾಧಿಕಾರಿಗಳನ್ನು ನಿಯೋಜಿಸಲಾಗಿದೆ. ಪೂಜೆ ಸಂದರ್ಭದಲ್ಲಿ ತೊಂದರೆಯಾಗದಂತೆ ಎಲ್ಲ ವ್ಯವಸ್ಥೆ ಮಾಡಲಾಗಿದೆ' ಎಂದು ಇಲಾಖೆಯ ಉಪನಿರ್ದೇಶಕ ಡಾ.ಷಡಕ್ಷರಿ ಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು. 'ಜಿಲ್ಲೆಯ ಚಾಮುಂಡೇಶ್ವರಿ ದೇವಾಲಯ, ಉತ್ತನಹಳ್ಳಿ ಮಾರಮ್ಮ, ನಂಜನಗೂಡು ಶ್ರೀಕಂಠೇಶ್ವರ ಗುಡಿ ಸೇರಿದಂತೆ ಎಲ್ಲ ಮುಖ್ಯವಾದ ದೇವಾಲಯಗಳಲ್ಲಿ ಸಿಬ್ಬಂದಿ ಹಾಜರಿರುತ್ತಾರೆ' ಎಂದರು.

'ತಲೆ ಕೆಟ್ಟ ಆದೇಶ': ಈ ಆದೇಶದ ಕುರಿತು ಪ್ರತಿಕ್ರಿಯಿಸಿರುವ ಇಲಾಖೆಯ ನಿವೃತ್ತ ಉಪನಿರ್ದೇಶಕರೊಬ್ಬರು, 'ಇದೊಂದು ತಲೆ ಕೆಟ್ಟ ಆದೇಶ. ಪಶು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಇಲ್ಲ. ಅಗತ್ಯ ಔಷಧಗಳಿಲ್ಲ. ಆ ಕೊರತೆಯನ್ನು ನೀಗಿಸುವತ್ತ ಗಮನ ಹರಿಸಬೇಕಾದ ಸರ್ಕಾರ ಪೂಜೆಗೆ ಅಧಿಕಾರಿಗಳನ್ನು ನಿಯೋಜಿಸಿರುವುದು ಸರಿಯಲ್ಲ' ಎಂದು ಆಕ್ಷೇಪಿಸಿದರು.



ಆನ್‌ಲೈನ್ ವ್ಯಾಪಾರ ಚಿಂತನಮ್!

ಶರತ್ ಭಟ್ ಸೇರಾಜೆ

ಹಬ್ಬ-ಹರಿದಿನಗಳು ಬಂದರೆ ಸಾಕು. ನಮ್ಮ ಮೆದುಳಿನಲ್ಲಿ 'ನನಗೆ ಇಂಥದ್ದು ಬೇಕು' ಎಂಬ ಹಾತೊರೆಯುವಿಕೆಯನ್ನು ಹುಟ್ಟಿಸುವ ಭಾಗ ಪೂರ್ಣವೇಗದಲ್ಲಿ ಕೆಲಸ ಶುರುಮಾಡಿ ಬಿಡುತ್ತದೆ. ನಮಗಿಂತ ಮೊದಲೇ ಈ ಬಯಕೆಯ ಹಮೀರನು ಉಂಡುಟ್ಟು, ಕಲ್ಪನೆಯ ಕುದುರೆಯೇರಿ, ಯಾವುದೋ ಶಾಪಿಂಗ್ ಸೈಟಿನ ಕಡೆಗೆ ಮುಖ ತಿರುಗಿಸಿ ಕೂತಿರುತ್ತಾನೆ.

ತಮಾಷೆಯೆಂದರೆ, ನಮ್ಮ ಈ ಖರೀದಿಯ ಹಂಬಲವನ್ನು ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ತಂತ್ರಜ್ಞಾನದ ಬುದ್ಧಿವಂತಿಕೆ ಬಂದುಮುಟ್ಟಿದೆ. ಹಿಂದೆಲ್ಲ ವ್ಯಾಪಾರಿಗಳು, ಯಾವುದರ ಕಿಮ್ಮತ್ತು ಎಷ್ಟು, ಹಬ್ಬದ ದಿನ ಯಾವುದು ಎಷ್ಟಕ್ಕೆ ಹೋದೀತು ಅಂತ ಚಾಲಾಕಿಯ ಲೆಕ್ಕಗಳನ್ನು ಮಾಡುತ್ತಿದ್ದರು. ದುಬಾರಿ ಕಾರಿನಲ್ಲಿ ಬಂದವರ ಹತ್ತಿರ ಸ್ವಲ್ಪ ಹೆಚ್ಚು ಕೇಳಿದರೂ ನಡೆಯುತ್ತದೆ ಅಂತ ಕಣ್ಣಲ್ಲೇ ಲೆಕ್ಕ ಹಾಕುವ ಚಾಲಾಕಿಯೆಲ್ಲ ಮಾರುವವನು ಪಳಗಿದವನಾದರೆ ಅವನಿಗೆ ಗೊತ್ತೇ ಇರುತ್ತಿತ್ತು. ಈಗ ಈ ತರದ ಯುಕ್ತಿಗಳನ್ನು ಗಣಕಯಂತ್ರಗಳಿಗೆ ಹೇಳಿಕೊಡಲಾಗುತ್ತದೆ! ಯಾವ ಗಿರಾಕಿ ಯಾವುದಕ್ಕೆ ಎಷ್ಟು ಬೆಲೆ ಕೊಟ್ಟಾನು ಅಂತ, ಸುಮ್ಮನೆ ಮೊಬೈಲಿನ ಮೇಲೆ ಬೆರಳು ಸವರಿಕೊಂಡು ಕೂತವನ ನಡವಳಿಕೆ ನೋಡಿಯೇ ಎಣಿಕೆ ಮಾಡಬಲ್ಲ ಚಾಣಾಕ್ಷ ಗಣನ ವಿಧಾನಗಳೇ (algorithm) ಮಾರುಕಟ್ಟೆಯಲ್ಲಿವೆ!

> ಆನ್‌ಲೈನ್ ಶಾಪಿಂಗ್ ಎಂಬುದರ ಹಿಂದೆ ಎಷ್ಟೆಲ್ಲ ಕಸರತ್ತು ಇರುತ್ತದೆ, ಏನೆಲ್ಲಾ ವರಸೆಗಳಿರುತ್ತವೆ ಅಂತ ಗೊತ್ತಾದರೆ ಶಾಪ್ ಮಾಡಲಿಕ್ಕೇ ಹೆದರಿಕೆಯಾದೀತೇನೋ!

ಒಂದು ವಸ್ತು ಎಲ್ಲರಿಗೂ ಬೇಕು, ಅದರ ಖರೀದಿಗೆ ಜನ ಸಾಲುಗಟ್ಟಿ ಬರುತ್ತಿದ್ದರೆ ಅದರ ಬೆಲೆಯನ್ನು ಒಂದಷ್ಟು ಮೇಲೆ ದೂಡುವ ಹಳೆಯ ತಂತ್ರಗಳೆಲ್ಲ ಅಲ್ಗಾರಿದಮ್ಮುಗಳಿಗೆ ಕರಗತವಾಗಿವೆ. ಎಲ್ಲರಿಗೂ ಬೇಕಾಗುವ ಟಿಕೆಟ್ಟಿಗೆ ಐನೂರು ರೂಪಾಯಿ ಕೇಳಿದರೂ ಅದು ಹೋಗುತ್ತದೆ ಅಂತ ಬ್ಲ್ಯಾಕಿನಲ್ಲಿ ಮಾರುವವನಿಗೆ ಗೊತ್ತಾಗುವಂತೆ ಗಣಕಯಂತ್ರಗಳಿಗೂ ಈ ಗುಟ್ಟು ತಿಳಿಯುತ್ತದೆ. ವೆಬ್ ಸೈಟುಗಳಲ್ಲಿ ಒಟ್ಟು ಖರೀದಿಯ ಮೊತ್ತ ಎಷ್ಟು, ಎಷ್ಟು ಬೆಲೆಯದ್ದು ಎಷ್ಟು ಬಿಕರಿಯಾಯಿತು ಅಂತೆಲ್ಲ ಲೆಕ್ಕ ಹಾಕುವುದೂ ಸಲೀಸಾದ ಕೆಲಸ.

ಟೀವಿ ಕೊಂಡವನು ವಾಷಿಂಗ್ ಮೆಶಿನ್ನಿಗೂ ಕಣ್ಣು ಹಾಕುತ್ತಾನೆಯೇ, ಲ್ಯಾಪ್‌ಟಾಪ್‌ಅನ್ನು ದಿನಕ್ಕೆ ಮೂರು ಸಲ ಬಯಸಿದವನು, ಆ್ಯಪಲ್ ಫೋನಿಗೂ ಕಣ್ಣು ಬಾಯಿ ಬಿಟ್ಟು ಹಂಬಲಿಸುತ್ತಾನೆಯೇ – ಎಂಬ ಮಾಹಿತಿಯೆಲ್ಲ ಈ ವೆಬ್ ಸೈಟುಗಳಿಗೆ ಗೂಢಚಾರರಿಗೆ ಗುಟ್ಟಿನಲ್ಲಿ ಸಿಗುವ ವರದಿಯಂತೆ, ಕಾಲ ಮುಂದೆ ಬಂದು ಬೀಳುವ ಮಾಹಿತಿಯ ಸರಕು. ಯಾರಿಗೆ ಏನು ಬೇಕು, ಯಾರು ಯಾವುದಕ್ಕಾಗಿ ಚಡಪಡಿಸುತ್ತಿದ್ದಾರೆ ಎಂಬ ಗ್ರಹಿಕೆ ಇದ್ದರೆ ಬೆಲೆಗಳ ಜೊತೆ ಆಟ ಆಡುವುದು ಕಷ್ಟವೇನಲ್ಲ. ಇದೊಂಥರಾ ಶನಿವಾರ ರಾತ್ರಿ ಮದ್ಯ ಕುಡಿಯಲೇ ಬೇಕು ಅಂತ ಹೊರಟವರು ಬಾಟ್ಲಿಗೆ ಐನೂರರ ಬದಲು ಆರು ನೂರಾದರೂ ಕುಡಿಯದೇ ಇರುವುದಿಲ್ಲ ಎಂದಂತೆ!

ಇನ್ನು ಮಳೆ ಬರುತ್ತಿದ್ದರೆ ಹೆಚ್ಚು ಬೆಲೆ ಕೇಳಬೇಕೆಂದು ತಲೆ ಓಡಿಸಲಿಕ್ಕೆ ಈಗ ಆಟೋ ಓಡಿಸುವ ಮನುಷ್ಯರೇ ಆಗಬೇಕೆಂದಿಲ್ಲ, ಓಲಾದ ಊಬರಿನ ಹಿಂದಿರುವ ಗಣಕಯಂತ್ರಕ್ಕೂ ಅದು ಗೊತ್ತಾಗುತ್ತದೆ. ಅದಕ್ಕೆ Surge pricing ಎಂಬ ಚಂದದ ಹೆಸರಿನ ತೇಪೆಯನ್ನು ಬೇರೆ ಹಾಕಲಾಗಿದೆ! ಬೇಡಿಕೆ ಹೆಚ್ಚು ಪೂರೈಕೆ ಕಡಿಮೆ ಅಂತಿದ್ದರೆ, ಬೆಲೆಯನ್ನು ಸಹಜವಾಗಿಯೇ ಏರಿಸಬಹುದು ಎಂಬ ಹಳೆಯ ಸಿದ್ಧಾಂತವನ್ನು ಕಂಪ್ಯೂಟರಿಗೆ ಹೇಳಿಕೊಡುವುದು ಅಂಥ ಕಷ್ಟದ ಕೆಲಸವೇನೂ ಅಲ್ಲ ಬಿಡಿ. ಹಾಗೆಯೇ, ಯುರೋಪು ಪ್ರವಾಸಕ್ಕೆ ಹೋಗಬೇಕೆಂದು ವಾರಕ್ಕೆ ಹದಿನೈದು ಸಲ ಅದರ ಮಾಹಿತಿಯನ್ನು ಆಸೆಗಣ್ಣುಗಳಿಂದ ಹುಡುಕಿದರೆ, 'ಇವರಿಗೆ ಇದರಲ್ಲಿ ಅತೀವ ಆಸಕ್ತಿ ಇದೆ' ಅಂತ ಅಲ್ಗಾರಿದಮ್ಮುಗಳಿಗೆ ಗೊತ್ತಾಗಿ, ಅದು ಬೆಲೆಯನ್ನು ಸ್ವಲ್ಪ ಮೇಲೆ ತಳ್ಳಿದರೆ ಆಶ್ಚರ್ಯವೇನೂ ಪಡಬೇಕಾದ್ದಿಲ್ಲ. ಹೀಗಾಗಿ Private Modeನಲ್ಲಿ ನೋಡಿದರೆ ಅಥವಾ cookies ಅನ್ನು clear ಮಾಡಿದರೆ ಕೆಲವೊಮ್ಮೆ ಲಾಭವಾದರೂ ಆದೀತು ಅಂತ ಬಲ್ಲವರ ಅಂಬೋಣ.

ವಿದೇಶಗಳಲ್ಲೆಲ್ಲ ಇಂಥ ಜಾಗಗಳಲ್ಲಿ ಶ್ರೀಮಂತರು ವಾಸಿಸುತ್ತಾರೆ ಅಂತ ಸಾಧಾರಣವಾಗಿ ನಿಗದಿಯಾಗಿದ್ದರೆ, ಈ ವಿಚಾರವನ್ನೂ ಗಣಕಯಂತ್ರಗಳು ಬಳಸುವುದಿದೆ. ಕೊಳ್ಳಲು ಹುಡುಕುತ್ತಿರುವವನ ಐಪಿ ಅಡ್ರೆಸ್ಸು ಪುಷ್ಕಳವಾದ ಸಿರಿಯಿರುವವರ ಮನೆಗಳ ಬಡಾವಣೆಗಳ ಸಮೀಪದಲ್ಲಿದ್ದರೆ, ಅವನಿಗೆ ವಸ್ತು ದುಬಾರಿಯಾದರೂ ಆದೀತು.

ಇನ್ನು ಒಬ್ಬ ವ್ಯಕ್ತಿ ಕಳೆದ ಎರಡು ವರ್ಷಗಳಲ್ಲಿ ಏನನ್ನೆಲ್ಲ ಖರೀದಿಸಿದ್ದಾನೆ ಎಂಬ ಶಾಪಿಂಗ್ ಜಾತಕ ಕೈಯ್ಯಲ್ಲಿದ್ದರೆ, ಆ ಆಸಾಮಿಗೆ ಎಷ್ಟನ್ನು ಖರೀದಿಸುವ ಆರ್ಥಿಕ ತಾಕತ್ತಿದೆ ಎಂಬುದೂ ಗೊತ್ತಾದಂತೆಯೇ. ಜಾಣವ್ಯಾಪಾರಿಗಳಿಗೆ ಬೇಕಾಗುವುದು ಇಂಥ ಗುಟ್ಟುಗಳೇ. ಇಂಥಲ್ಲಿ, ಈ ಮನುಷ್ಯನ ಹತ್ತಿರ ಹೆಚ್ಚು ದುಡ್ಡಿಲ್ಲ ಅಂತ ತಿಳಿದರೆ ಕಂಪ್ಯೂಟರುಗಳು ಅವನ ಮುಂದೆ ಚೂರು ಅಗ್ಗದ ಮಾಲುಗಳನ್ನು ಹರವಿ ತೋರಿಸುವ ಸಾಧ್ಯತೆಯೂ ಉಂಟು. ಪಕ್ಕದ ಅಂಗಡಿಯವರು ಎಷ್ಟಕ್ಕೆ ಮಾರುತ್ತಿದ್ದಾರೆ ಅಂತ ಇಣುಕಿ ನೋಡುವ ವ್ಯಾಪಾರಿಯಂತೆ, ಪಕ್ಕದ ಸೈಟುಗಳ ಬೆಲೆಯನ್ನು ನೋಡಿ ಕೆಲವು ವೆಬ್ ಸೈಟುಗಳು ಬೆಲೆಯನ್ನು ಇಳಿಸುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಹೀಗೆ ಆನ್‌ಲೈನ್ ಶಾಪಿಂಗ್ ಎಂಬುದರ ಹಿಂದೆ ಎಷ್ಟೆಲ್ಲ ಕಸರತ್ತು ಇರುತ್ತದೆ, ಏನೆಲ್ಲಾ ವರಸೆಗಳಿರುತ್ತವೆ ಅಂತ ಗೊತ್ತಾದರೆ ಶಾಪ್ ಮಾಡಲಿಕ್ಕೇ ಹೆದರಿಕೆಯಾದೀತೇನೋ!

❖

ಒನ್‌ಪ್ಲಸ್ ನಾರ್ಡ್ 2 5ಜಿ: ಮಧ್ಯಮ ಬೆಲೆಯ ಆಲ್‌ರೌಂಡರ್

ವಿಶ್ವನಾಥ ಎಸ್.

ಪ್ರೀಮಿಯಂ ವೈಶಿಷ್ಟ್ಯಗಳನ್ನು ಮಧ್ಯಮ ಬೆಲೆಗೂ ಸಿಗುವಂತೆ ಮಾಡಲು ಒನ್‌ಪ್ಲಸ್ ಕಂಪನಿಯು 'ನಾರ್ಡ್' ಪರಿಯಿಸಿದ್ದು, ಈ ಸಾಲಿನಲ್ಲಿ ಕಂಪನಿ ಬಿಡುಗಡೆ ಆಗಿರುವ ಮೂರನೇ ಹ್ಯಾಂಡ್‌ಸೆಟ್ 'ಒನ್‌ಪ್ಲಸ್ ನಾರ್ಡ್ 2 5ಜಿ'. ಮೇಲ್ನೋಟಕ್ಕೆ ಇದರಲ್ಲಿ ಹೇಳಿಕೊಳ್ಳುವಂತಹ ಯಾವುದೇ ಬದಲಾವಣೆಗಳು ಕಾಣುವುದಿಲ್ಲವಾದರೂ ಪ್ರೊಸೆಸರ್ ದೃಷ್ಟಿಯಿಂದ ನಾರ್ಡ್‌ನ ಹಿಂದಿನ ಫೋನ್‌ಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಇದೆ. ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ ಬದಲಾಗಿ ಮೀಡಿಯಾಟೆಕ್ ಡೈಮೆನ್ಸಿಟಿ 1200–ಎಐ ಸಿಪಿಯು ಬಳಸಲಾಗಿದೆ. ಬಹಳ ಸುಲಲಿತವಾಗಿ ಕಾರ್ಯನಿರ್ವಹಿಸಬಹುದು. ಗೇಮ್ ಆಡುವಾಗ, ವಿಡಿಯೊ ನೋಡುವಾಗ ಯಾವುದೇ ರೀತಿಯ ಅಡಚಣೆ ಎದುರಾಗುವುದಿಲ್ಲ. 6.43 ಇಂಚು ಫ್ಲ್ಯುಯೆಡ್ ಅಮೊ ಎಲ್‌ಇಡಿ ಪರದೆಯು 2400X1080 ರೆಸಲ್ಯೂಷನ್ ಹೊಂದಿದ್ದು, 410ಪಿಪಿಐ ಪಿಕ್ಸಲ್ ಡೆನ್ಸಿಟಿ ಇದೆ.

ಕ್ಯಾಮೆರಾ: ಇದರಲ್ಲಿ ಮೂರು ಕ್ಯಾಮೆರಾಗಳಿವೆ. 50 ಮೆಗಾಪಿಕ್ಸಲ್, 8 ಎಂಪಿ ಅಲ್ಟ್ರಾ ವೈಡ್ ಮತ್ತು 2 ಎಂಪಿ ಮೊನೊ. ಉತ್ತಮ ಗುಣಮಟ್ಟದ ಚಿತ್ರಗಳನ್ನು ಸೆರೆಹಿಡಿಯಬಹುದು. ಅಲ್ಟ್ರಾ ವೈಡ್ ಆ್ಯಂಗಲ್ ಕ್ಯಾಮೆರಾದಲ್ಲಿ ತೆಗೆದ ಚಿತ್ರದ ಗುಣಮಟ್ಟವು ತುಸು ಕಡಿಮೆ ಆಗಿದೆ. ಅತಿ ಕಡಿಮೆ ಬೆಳಕಿನಲ್ಲಿ ಚಿತ್ರಗಳನ್ನು ತೆಗೆಯಲು ಅನುಕೂಲ ಆಗುವಂತೆ ನೈಟ್‌ಸ್ಕೇಪ್ ಅಲ್ಟ್ರಾ ಮೋಡ್ ಅನ್ನು ಇದರಲ್ಲಿ ಪರಿಚಯಿಸಲಾಗಿದೆ.

ವೈಶಿಷ್ಟ್ಯ

ಪರದೆ: 6.43 ಇಂಚು, 20:9 ಆಸ್ಪೆಕ್ಟ್ ರೇಶಿಯೊ
ಒಎಸ್: ಆಂಡ್ರಾಯ್ಡ್ 11 ಆಧಾರಿತ ಆಕ್ಸಿಜನ್ ಒಎಸ್ 11.3
ರ್‍ಯಾಮ್: 6ಜಿಬಿ/8ಜಿಬಿ/112ಜಿಬಿ
ಸಂಗ್ರಹಣಾ ಸಾಮರ್ಥ್ಯ: 128ಜಿಬಿ/256ಜಿಬಿ
ಬ್ಯಾಟರಿ: 4,500 ಎಂಎಎಚ್ ಡ್ಯುಯಲ್ ಸೆಲ್ ಬ್ಯಾಟರಿ. ವಾರ್ಪ್ ಚಾರ್ಜ್ 65ಡಬ್ಲ್ಯು
ಹಿಂಬದಿ ಕ್ಯಾಮೆರಾ: 50ಮೆಗಾ ಪಿಕ್ಸಲ್, 8ಮೆಗಾಪಿಕ್ಸಲ್ ಅಲ್ಟ್ರಾ ವೈಡ್ ಆ್ಯಂಗಲ್ , 2 ಮೆಗಾಪಿಕ್ಸಲ್ ಮೊನೊ ಲೆನ್ಸ್
ಸೆಲ್ಫಿ: 32 ಮೆಗಾಪಿಕ್ಸಲ್
ಬ್ಲೂಟೂತ್ 5.2. ಯುಎಸ್‌ಬಿ 2.0, ಟೈಪ್ ಸಿ.
ಬೆಲೆ: 6 + 128ಜಿಬಿ; ₹27,999, 8 + 128ಜಿಬಿ; ₹ 29,999. 12 + 256ಜಿಬಿ; ₹34,999

ಕತ್ತಲಿನಲ್ಲಿ ಇರುವ ಚಿತ್ರಗಳನ್ನು 'ಎಐ' ಗುರುತಿಸಿ ನೈಟ್‌ಸ್ಕೇಪ್ ಅಲ್ಟ್ರಾ ಮೋಡ್ ಅನ್ನು ಸ್ವಯಂಚಾಲನೆಗೊಳಿಸುತ್ತದೆ. ಈ ಆಯ್ಕೆಯಲ್ಲಿ ಚಿತ್ರ ಸೆರೆಯಾಗಲು ತುಸು ಸಮಯ ಹಿಡಿಯುತ್ತದೆಯಾದರೂ ಚಿತ್ರದ ಗುಣಮಟ್ಟ, ವಿವರಣೆ ಮತ್ತು ನೆರಳು ಬೆಳಕಿನ ಸಂಯೋಜನೆ ಉತ್ತಮವಾಗಿ ಮೂಡಿಬರುತ್ತದೆ. ಆಪ್ಟಿಕಲ್ ಝೂಮ್ ಆಯ್ಕೆ ಇಲ್ಲವಾದರೂ 2ಎಕ್ಸ್ ಡಿಜಿಟಲ್ ಸೂಪ್ ತಕ್ಕಮಟ್ಟಿಗೆ ಅದರ ಕೊರತೆಯನ್ನು ನೀಗಿಸುತ್ತದೆ. ಮ್ಯಾಕ್ರೊ ಮೋಡ್ ಆಯ್ಕೆ ನೀಡಿಲ್ಲ. ಹೀಗಾಗಿ ಕ್ಲೋಸಪ್ ಫೋಟೊ ತೆಗೆಯುವಾಗ ಫೋಕಸ್ ಮಾಡಿಕೊಳ್ಳಲು ಕ್ಯಾಮೆರಾ ಹೆಣಗಾಡುತ್ತದೆ. ಮುಂಬದಿಯ 32 ಎಂಪಿ ಕ್ಯಾಮೆರಾದ ಗುಣಮಟ್ಟ ಚೆನ್ನಾಗಿದೆ. ಬಹಳ ಸ್ಪಷ್ಟ ಮತ್ತು ಸೂಕ್ಷ್ಮವಾದ ಅಂಶಗಳು ಎದ್ದು ಕಾಣುವಂತೆ ಚಿತ್ರವು ಸೆರೆಯಾಗುತ್ತದೆ. ಹಗಲು ಮತ್ತು ರಾತ್ರಿ ವೇಳೆಯಲ್ಲಿಯೂ ವಿಡಿಯೊ ಗುಣಮಟ್ಟದಲ್ಲಿ ಯಾವುದೇ ಕೊರತೆ ಕಾಣಿಸುವುದಿಲ್ಲ.

ಬ್ಯಾಟರಿ: ನಾರ್ಡ್ 2 ಸ್ಮಾರ್ಟ್‌ಫೋನ್ 4,500 ಎಂಎಎಚ್ ಬ್ಯಾಟರಿ ಮತ್ತು 65 ಡಬ್ಲ್ಯು ವಾರ್ಪ್ ಚಾರ್ಜರ್ ಸೌಲಭ್ಯ ಹೊಂದಿದೆ. ಸಾಮಾನ್ಯ ಬಳಕೆಯಲ್ಲಿ ಒಂದೂವರೆ ದಿನದವರೆಗೂ ಚಾರ್ಜ್ ನಿಲ್ಲುತ್ತದೆ. ಸಂಗೀತ ಆಲಿಸುವುದು, ವಿಡಿಯೊ ನೋಡುವುದು ಹೀಗೆ ಹೆಚ್ಚು ಬಳಕೆ ಮಾಡಿದರೆ ಒಂದು ದಿನಕ್ಕಂತೂ ಯಾವುದೇ ಸಮಸ್ಯೆ ಆಗುವುದಿಲ್ಲ. ಗೇಮ್ ಆಡುವಾಗ ಹ್ಯಾಂಗ್ ಆಗುವ, ಸ್ಲೋ ಆಗುವ ಸಮಸ್ಯೆ ಎದುರಾಗಲಿಲ್ಲ. ಆದರೆ, ಅರ್ಧ ಗಂಟೆಗಿಂತ ಹೆಚ್ಚು ಸಮಯ ಗೇಮ್ ಆಡಿದಾಗ ಫೋನ್ ತುಸು ಬಿಸಿ ಆಗಿದ್ದು ಅನುಭವಕ್ಕೆ ಬಂತು.

ಆಕ್ಸಿಜನ್ 11.3 ಒಎಸ್ ಹೊಂದಿದ್ದು, ಬಿಡುಗಡೆ ಆದಾಗಿನಿಂದ ಮೂರುವರ್ಷಗಳ ತನಕ ಸಾಫ್ಟ್‌ವೇರ್ ಬೆಂಬಲದ ಜೊತೆಗೆ ಎರಡು ವರ್ಷಗಳ ಆಂಡ್ರಾಯ್ಡ್ ಮಾದರಿಯ ಅಪ್‌ಡೇಟ್ ಇರಲಿದೆ. ಅಲ್ಲದೆ, ಮೂರು ತಿಂಗಳಿಗೆ ಒಮ್ಮೆ ಸುರಕ್ಷತಾ ಅಪ್‌ಡೇಟ್ ಅನ್ನೂ ಸಹ ಕಂಪನಿ ನೀಡಲಿದೆ. ಜಲನಿರೋಧಕದ ಮಾನದಂಡವನ್ನು ಹೊಂದಿಲ್ಲದೇ ಇರುವುದು ಇದರಲ್ಲಿನ ಪ್ರಮುಖ ಕೊರತೆ ಎನ್ನಬಹುದು. ಮಧ್ಯಮ ಬೆಲೆಯ ಸರಣಿಯಲ್ಲಿ ಬೆಲೆ ಮತ್ತು ಅತ್ಯುತ್ತಮ ವೈಶಿಷ್ಟ್ಯಗಳನ್ನು ನಿರೀಕ್ಷಿಸುವವರಿಗೆ ಇದು ಹೇಳಿ ಮಾಡಿಸಿದ್ದಾಗಿದೆ.

ಒನ್‌ಪ್ಲಸ್ ನಾರ್ಡ್ 2 5ಜಿ

❖

ಟಿ20 ವಿಶ್ವಕಪ್: ಮೊದಲ ಗೆಲುವಿಗೆ ಹಾತೊರೆದಿರುವ ಭಾರತ ತಂಡ

ಅಫ್ಗನ್ ಎದುರು ಅಶ್ವಿನ್‌ಗೆ ಅವಕಾಶ?

ಅಬುಧಾಬಿ (ಪಿಟಿಐ): ಅನುಭವಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರಿಗೆ ಬುಧವಾರ ನಡೆಯಲಿರುವ ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಆಡುವ ಅವಕಾಶ ಲಭಿಸುವುದೇ?

ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದ ಮೊದಲೆರಡು ಪಂದ್ಯಗಳಲ್ಲಿ ಹೀನಾಯವಾಗಿ ಸೋತಿರುವ ಭಾರತ ತಂಡ ಉಳಿದಿರುವ ಮೂರು ಪಂದ್ಯಗಳಲ್ಲಿ ಉತ್ತಮ ರನ್‌ರೇಟ್‌ನೊಂದಿಗೆ ಜಯಿಸುವ ಒತ್ತಡದಲ್ಲಿದೆ. ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಎದುರು ಸೋತ ಪಂದ್ಯಗಳಲ್ಲಿ ಅಶ್ವಿನ್‌ಗೆ ಕಣಕ್ಕಿಳಿಯುವ ಅವಕಾಶ ಕೊಟ್ಟಿರಲಿಲ್ಲ. ಯುವ ಸ್ಪಿನ್ನರ್ ವರುಣ್ ಚಕ್ರವರ್ತಿ ಮೇಲೆ ಇಟ್ಟ ನಿರೀಕ್ಷೆಯೂ ಹುಸಿಯಾಯಿತು.

ಆದ್ದರಿಂದ ಅಶ್ವಿನ್ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚು ಎನ್ನಲಾಗುತ್ತಿದೆ. ಆದರೆ, ಯುವ ಆಟಗಾರ ರಾಹುಲ್ ಚಾಹರ್ ಅವರಿಗೆ ಅವಕಾಶ ಕೊಟ್ಟರೆ ಅಶ್ವಿನ್ ಮತ್ತೆ ಬೆಂಚ್ ಕಾಯಬೇಕಾಗಬಹುದು. ಕಿವೀಸ್ ಎದುರಿನ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿಯೂ ಕೆಲವು ಬದಲಾವಣೆಗಳಾಗಿದ್ದವು. ರಾಹುಲ್ ಜೊತೆಗೆ ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸಿದ್ದರು. ರೋಹಿತ್ ಮೂರು ಮತ್ತು ಕೊಹ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದರು. ಆದರೆ, ನಿರೀಕ್ಷಿತ ಫಲ ಸಿಕ್ಕಿರಲಿಲ್ಲ. ರವೀಂದ್ರ ಜಡೇಜ ಬಿಟ್ಟರೆ ಉಳಿದವರೆಲ್ಲರ ಕಳಪೆ ಬ್ಯಾಟಿಂಗ್‌ನಿಂದಾಗಿ ಸಾಧಾರಣ ಮೊತ್ತ ಪೇರಿಸಿತು.

ಪಾಕ್ ವಿರುದ್ಧದ ಪಂದ್ಯದಲ್ಲಿ ಬೌಲಿಂಗ್ ಪಡೆ ವಿಫಲವಾಗಿತ್ತು. ಅದಕ್ಕಾಗಿ ಭುವನೇಶ್ವರ್ ಕುಮಾರ್ ಬದಲು ಶಾರ್ದೂಲ್ ಠಾಕೂರ್ ಎರಡನೇ ಪಂದ್ಯದಲ್ಲಿ ಆಡಿದ್ದರು. ಆದರೆ ಜಸ್‌ಪ್ರೀತ್ ಬೂಮ್ರಾ ಬಿಟ್ಟರೆ, ಉಳಿದವರು ವಿಕೆಟ್ ಗಳಿಸಿರಲಿಲ್ಲ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯಗೆ ಮತ್ತೊಂದು ಅವಕಾಶ ಸಿಗುವುದೇ ನೋಡಬೇಕು.

ಆದರೆ, ಅಫ್ಗನ್ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಸ್ಕಾಟ್ಲೆಂಡ್ ಮತ್ತು ನಮಿಬಿಯಾ ವಿರುದ್ಧ ಗೆದ್ದಿರುವ ಮೊಹಮ್ಮದ್ ನಬಿ ಬಳಗವು, ಪಾಕ್ ಎದುರು ಸೋತಿದ್ದರೂ ದಿಟ್ಟ ಆಟವಾಡಿತ್ತು. ರಶೀದ್ ಖಾನ್ ಅವರಂತಹ ಅನುಭವಿ ಸ್ಪಿನ್ನರ್ ಇರುವ ಬೌಲಿಂಗ್ ಪಡೆಯು ಬ್ಯಾಟ್ಸ್‌ಮನ್‌ಗಳಿಗೆ ಒತ್ತಡಕ್ಕೆ ತಳ್ಳುವ ಸಾಮರ್ಥ್ಯ ಹೊಂದಿದೆ.

ಅಫ್ಗನ್ ತಂಡಕ್ಕೆ ಇನ್ನೆರಡು ಪಂದ್ಯಗಳು ಉಳಿದಿವೆ. ತಂಡವು ಭಾರತದ ಎದುರು ಸೋತು, ನ್ಯೂಜಿಲೆಂಡ್ ಎದುರು ಗೆದ್ದರೆ ವಿರಾಟ್ ಬಳಗಕ್ಕೆ ಸೆಮಿಫೈನಲ್ ಅವಕಾಶ ಸಿಗುವ ಸಾಧ್ಯತೆ ಇದೆ. ಅಲ್ಲಿಯೂ ಭಾರತವು ಉತ್ತಮವಾದ ನೆಟ್ ರನ್‌ರೇಟ್ ಹೊಂದಿರಬೇಕು.

ಟಿ20 ರ್‍ಯಾಂಕಿಂಗ್

ಭಾರತ	3
ಅಫ್ಗಾನಿಸ್ತಾನ	7

ಟಿ20 ವಿಶ್ವಕಪ್ ಮುಖಾಮುಖಿ

ಪಂದ್ಯಗಳು	2
ಭಾರತ ಜಯ	2

ವಿಶ್ವಕಪ್ ಮುಖಾಮುಖಿಯಲ್ಲಿ ಗರಿಷ್ಠ ಸ್ಕೋರ್

ಭಾರತ	159
ಅಫ್ಗಾನಿಸ್ತಾನ	136

ಆರ್ ಅಶ್ವಿನ್ ಮತ್ತು ವಿರಾಟ್ ಕೊಹ್ಲಿ

ರವೀಂದ್ರ ಜಡೇಜ

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್‌ಕೀಪರ್), ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಭುವನೇಶ್ವರ್ ಕುಮಾರ್, ರಾಹುಲ್ ಚಾಹರ್, ವರುಣ್ ಚಕ್ರವರ್ತಿ, ಆರ್. ಅಶ್ವಿನ್.

ಅಫ್ಗಾನಿಸ್ತಾನ: ಮೊಹಮ್ಮದ್ ನಬಿ (ನಾಯಕ), ಹಜರತ್ ಉಲ್ಲಾ ಝಝೈ, ಅಹಮದ್ ಶೇಹಜಾದ್, ಗುಲ್ಬದೀನ್ ನೈಬ್, ನವೀನ್ ಉಲ್ ಹಕ್, ರಶೀದ್ ಖಾನ್, ಹಮೀದ್ ಹಸನ್, ರೆಹಮಾನುಲ್ಲಾ ಗುರ್ಬಾಜ್, ನಜೀಬುಲ್ಲಾ ಜದ್ರಾನ್, ಕರೀಂ ಜನತ್, ಮುಜೀಬ್ ಉರ್ ರೆಹಮಾನ್, ಹಷ್ಮತ್ ಉಲ್ಲಾ ಶಹೀದಿ, ಫರೀದ್ ಅಹಮದ್, ಉಸ್ಮಾನ್ ಘಣಿ.

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕಿವೀಸ್–ಸ್ಕಾಟ್ಲೆಂಡ್ ಮುಖಾಮುಖಿ

ಟ್ವೆಂಟಿ-20 ರ್‍ಯಾಂಕಿಂಗ್

ನ್ಯೂಜಿಲೆಂಡ್	ಸ್ಕಾಟ್ಲೆಂಡ್
4	14

ಪಂದ್ಯ ಆರಂಭ ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕೇನ್ ವಿಲಿಯಮ್ಸನ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಬುಧವಾರ ಮ್ಯಾಥ್ಯೂ ಕ್ರಾಸ್ ಮುಂದಾಳತ್ವದ ಸ್ಕಾಟ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಆಡಲಿದೆ. ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕಿವೀಸ್ ಬಳಗವೇ ಜಯಿಸುವ ನೆಚ್ಚಿನ ತಂಡವಾಗಿದೆ. ಸ್ಕಾಟ್ಲೆಂಡ್ ಇದೇ ಮೊದಲ ಬಾರಿ ಸೂಪರ್ 12ರ ಹಂತಕ್ಕೆ ಪ್ರವೇಶ ಗಿಟ್ಟಿಸಿದೆ. 2ನೇ ಗುಂಪಿನಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿದೆ.

ರಬಾಡ ದಾಳಿ; ತಲೆಬಾಗಿದ ಬಾಂಗ್ಲಾ

ಮಿಂಚಿದ ಎನ್ರಿಚ್ ನಾರ್ಕಿಯಾ: ಸೆಮಿಫೈನಲ್ ಸನಿಹ ದಕ್ಷಿಣ ಆಫ್ರಿಕಾ ತಂಡ

ಅಬುಧಾಬಿ (ಪಿಟಿಐ): 'ವೇಗದ ಜೋಡಿ' ಕಗಿಸೊ ರಬಾಡ ಮತ್ತು ಎನ್ರಿಚ್ ನಾರ್ಕಿಯಾ ಅವರ ದಾಳಿಗೆ ಬಾಂಗ್ಲಾದೇಶ ತಂಡವು ತಲೆಬಾಗಿತು.

ಮಂಗಳವಾರ ಶೇಖ್ ಝಯೀದ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 6 ವಿಕೆಟ್‌ಗಳಿಂದ ಬಾಂಗ್ಲಾ ಎದುರು ಜಯಿಸಿತು. ಸೂಪರ್ 12 ಹಂತದಲ್ಲಿ ನಾಲ್ಕು ಪಂದ್ಯಗಳನ್ನಾಡಿರುವ ದಕ್ಷಿಣ ಆಫ್ರಿಕಾಕ್ಕೆ ಇದು ಮೂರನೇ ಜಯ. ಒಟ್ಟು ಆರು ಅಂಕ ಗಳಿಸಿರುವ ತಂಡವು ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿದೆ.

ತೆಂಬಾ ಬವುಮಾ ನಾಯಕತ್ವದ ಪಡೆಯು ತನ್ನ ಕೊನೆಯ ಪಂದ್ಯದಲ್ಲಿ ಅಗ್ರಸ್ಥಾನದಲ್ಲಿರುವ ಇಂಗ್ಲೆಂಡ್ ತಂಡವನ್ನು ಇದೇ 6ರಂದು ಎದುರಿಸಲಿದೆ.

ಬಾಂಗ್ಲಾ ಎದುರಿನ ಪಂದ್ಯದಲ್ಲಿ ಟಾಸ್ ಗೆದ್ದ ಬವುಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ತಮ್ಮ ನಾಯಕನ ನಿರ್ಧಾರವನ್ನು ಸಮರ್ಥಿಸಿಕೊಂಡ ಬೌಲಿಂಗ್ ಪಡೆಯು ಬಾಂಗ್ಲಾ ತಂಡವನ್ನು 84 ರನ್‌ಗಳಿಗೆ ಕಟ್ಟಿಹಾಕಿತು. ಬವುಮಾ ಪಡೆಯು 13.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 86 ರನ್ ಗಳಿಸಿ ಜಯಿಸಿತು.

ಬಾಂಗ್ಲಾದ ಇನಿಂಗ್ಸ್‌ನ ಆರಂಭದಲ್ಲಿಯೇ ರಬಾಡ ಪೆಟ್ಟುಕೊಟ್ಟರು. ನಾಲ್ಕನೇ ಓವರ್‌ನಲ್ಲಿ ನೈಮ್ ಮತ್ತು ಸೌಮ್ಯ ಸರ್ಕಾರ್ ವಿಕೆಟ್‌ಗಳನ್ನು ಕಿತ್ತ ಅವರು, ಆರನೇ ಓವರ್‌ನಲ್ಲಿ ಮುಷ್ಫಿಕುರ್ ರಹೀಮ್‌ಗೂ ಡಗ್‌ಔಟ್ ದಾರಿ ತೋರಿಸಿದರು.

ಇನ್ನೊಂದೆಡೆ ಎನ್ರಿಚ್ ನಾರ್ಕಿಯಾ (8ಕ್ಕೆ3) ಉತ್ತಮ ಬೌಲಿಂಗ್ ಮಾಡುವ ಮೂಲಕ ಬಾಂಗ್ಲಾದ ಮಧ್ಯಮಕ್ರಮಾಂಕವನ್ನು ಕಾಡಿದರು. ಬಾಂಗ್ಲಾದ ಆರಂಭಿಕ ಬ್ಯಾಟ್ಸ್‌ಮನ್ ಲಿಟನ್ ದಾಸ್ (24; 36ಎಸೆತ) ಮತ್ತು ಕೊನೆಯ ಹಂತದಲ್ಲಿ ಮೆಹದಿ ಹಸನ್ (27; 25ಎಸೆತ) ಅವರಿಬ್ಬರು ಮಾತ್ರ ವೈಯಕ್ತಿಕವಾಗಿ 20ಕ್ಕಿಂತ ಹೆಚ್ಚು ರನ್ ಗಳಿಸಿದರು.

19ನೇ ಓವರ್‌ನಲ್ಲಿ ನಸುಮ್ ಅಹಮದ್ ಅವರು ನಾರ್ಕಿಯಾ ಬೌಲಿಂಗ್‌ನಲ್ಲಿ ಹಿಟ್‌ವಿಕೆಟ್ ಆಗುವ ಮೂಲಕ ಬಾಂಗ್ಲಾ ಇನಿಂಗ್ಸ್‌ಗೆ ತೆರೆ ಬಿದ್ದಿತು.

ಆದರೆ, ದಕ್ಷಿಣ ಆಫ್ರಿಕಾ ತಂಡವು ಈ ಅಲ್ಪಮೊತ್ತದ ಗುರಿಯನ್ನು ಸಾಧಿಸಲು ತುಸು ಬೆವರು ಹರಿಸಬೇಕಾಯಿತು. ತಸ್ಕಿನ್ ಅಹಮದ್ (18ಕ್ಕೆ2), ಮೆಹದಿ ಹಸನ್ (19ಕ್ಕೆ1) ಮತ್ತು ನಸುಮ್ ಅಹಮದ್ (22ಕ್ಕೆ1) ಅವರ ಉತ್ತಮ ಬೌಲಿಂಗ್‌ನಿಂದಾಗಿ ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಬೇಕಾಯಿತು. ತೆಂಬಾ (31; 28ಎಸೆತ) ತಂಡವನ್ನು ಗೆಲುವಿನ ಗುರಿ ಮುಟ್ಟಿಸುವಲ್ಲಿ ಸಫಲರಾದರು.

> **ಮೊದಲ ಇನಿಂಗ್ಸ್‌ನಲ್ಲಿ ಬೌಲಿಂಗ್‌ಗೆ ಪಿಚ್ ಬಹಳ ಉತ್ತಮವಾಗಿತ್ತು. ಆದರೂ 2ನೇ ಇನಿಂಗ್ಸ್‌ನಲ್ಲಿ ತಸ್ಕಿನ್ ಉತ್ತಮ ಬೌಲಿಂಗ್ ಮಾಡಿದರು. ಬ್ಯಾಟಿಂಗ್‌ನಲ್ಲಿ ನಾವು ಹಿಂದೆ ಉಳಿದೆವು**
> **ಮಹಮ್ಮದುಲ್ಲಾ**
> ಬಾಂಗ್ಲಾ ತಂಡದ ನಾಯಕ

> **ಇಂದು ನಮ್ಮ ಪಾಲಿಕೆ ಸುದಿನ. ಬೌಲರ್‌ಗಳು ಉತ್ತಮ ಸಾಧನೆ ಮಾಡಿದರು. ಕಗಿಸೊ, ಎನ್ರಿಚ್‌ಗೆ ಶ್ರೇಯ ಸಲ್ಲಬೇಕು**
> **ತೆಂಬಾ ಬವುಮಾ**
> ದಕ್ಷಿಣ ಆಫ್ರಿಕಾ ತಂಡದ ನಾಯಕ

ಕಗಿಸೊ ರಬಾಡ

ಓವರ್	4
ರನ್	20
ವಿಕೆಟ್	3

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 84 (18.2 ಓವರ್)
ನೈಮ್ ಸಿ ಹೆನ್ರಿಕ್ಸ್ ಬಿ ರಬಾಡ 9 (11ಎ, 4X1), ಲಿಟನ್ ಎಲ್‌ಬಿಡಬ್ಲ್ಯು ಶಂಸಿ 24 (36ಎ, 4X1), ಸರ್ಕಾರ್ ಎಲ್‌ಬಿಡಬ್ಲ್ಯು ರಬಾಡ 0 (1ಎ), ಮುಶ್ಫೀಕುರ್ ರಹೀಂ ಸಿ ಹೆನ್ರಿಕ್ಸ್ ಬಿ ರಬಾಡ 0 (3ಎ), ಮೊಹಮ್ಮದುಲ್ಲಾ ಸಿ ಮರ್ಕರಮ್ ಬಿ ನಾರ್ಕಿಯಾ 3 (9ಎ), ಅಫೀಫ್ ಬಿ ಪ್ರಿಟೋರಿಯಸ್ 0 (1ಎ), ಶಮೀಮ್ ಸಿ ಮಹಾರಾಜ್ ಬಿ ಶಂಸಿ 11 (20ಎ), ಮೆಹದಿ ಸಿ ಮತ್ತು ಬಿ ನಾರ್ಕಿಯಾ 27 (25ಎ, 4X2, 6X1), ತಸ್ಕಿನ್ ರನ್‌ಔಟ್ (ಬವುಮಾ) 3 (5ಎ), ನಸುಮ್ ಹಿಟ್‌ವಿಕೆಟ್ ಬಿ ನಾರ್ಕಿಯಾ 0 (1ಎ), ಶೋರಿಫುಲ್ ಔಟಾಗದೆ 0 (0ಎ)
ಇತರೆ (ಲೆಗ್‌ಬೈ 1, ನೋಬಾಲ್ 2, ವೈಡ್ 4) 7
ವಿಕೆಟ್ ಪತನ: 1-22 (ಮೊಹಮ್ಮದ್ ನೈಮ್, 3.5), 2-22 (ಸೌಮ್ಯ ಸರ್ಕಾರ್, 3.6), 3-24 (ಮುಶ್ಫೀಕುರ್ ರಹೀಂ, 5.3), 4-34 (ಮೊಹಮ್ಮದುಲ್ಲಾ, 7.6), 5-34 (ಅಫೀಫ್ ಹೊಸೇನ್, 8.1), 6-45 (ಲಿಟನ್ ದಾಸ್, 11.3), 7-64 (ಶಮೀಮ್ ಹೊಸೇನ್, 15.2), 8-77 (ತಸ್ಕಿನ್ ಅಹಮದ್, 17.2), 9-84 (ಮೆಹದಿ ಹಸನ್, 18.1), 10-84 (ನಸುಮ್ ಅಹಮದ್, 18.2))
ಬೌಲಿಂಗ್: ಕೇಶವ ಮಹಾರಾಜ್ 4-0-23-0, ಕಗಿಸೊ ರಬಾಡ 4-0-20-3, ಎನ್ರಿಚ್ ನಾರ್ಕಿಯಾ 3.2-0-8-3, ಡ್ವೇನ್ ಪ್ರಿಟೋರಿಯಸ್ 3-0-11-1, ತಬ್ರೇಜ್ ಶಂಸಿ 4-0-21-2

ದಕ್ಷಿಣ ಆಫ್ರಿಕಾ 4ಕ್ಕೆ 86 (13.3 ಓವರ್)
ಕ್ವಿಂಟನ್ ಬಿ ಮೆಹದಿ 16 (15ಎ, 4X3), ಹೆನ್ರಿಕ್ಸ್ ಎಲ್‌ಬಿಡಬ್ಲ್ಯು ತಸ್ಕಿನ್ 4 (5ಎ, 4X1), ಡಸೆನ್ ಸಿ ಶೋರಿಫುಲ್ ಬಿ ನಸುಮ್ 22 (27ಎ, 4X2), ಮರ್ಕರಮ್ ಸಿ ನೈಮ್ ಬಿ ತಸ್ಕಿನ್ 0 (4ಎ), ಬವುಮಾ ಔಟಾಗದೆ 31 (28ಎ, 4X3, 6X1), ಮಿಲ್ಲರ್ ಔಟಾಗದೆ 5 (2ಎ, 4X1)
ಇತರೆ (ಬೈ 4, ಲೆಗ್‌ಬೈ 1, ವೈಡ್ 3) 8
ವಿಕೆಟ್ ಪತನ: 1-6 (ರೀಜಾ ಹೆನ್ರಿಕ್ಸ್, 0.6), 2-28 (ಕ್ವಿಂಟನ್ ಡಿಕಾಕ್, 4.5), 3-33 (ಏಡನ್ ಮರ್ಕರಮ್, 5.5), 4-80 (ರಸ್ಸಿ ವ್ಯಾನ್ ಡರ್ ಡಸೆನ್, 12.6).
ಬೌಲಿಂಗ್: ತಸ್ಕಿನ್ ಅಹಮದ್ 4-0-18-2 ಶೋರಿಫುಲ್ ಇಸ್ಲಾಂ 4-0-15-0, ಮೆಹದಿ ಹಸನ್ 2.3-0-19-1, ನಸುಮ್ ಅಹಮದ್ 2-0-22-1, ಸೌಮ್ಯ ಸರ್ಕಾರ್ 1-0-7-0

ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 6 ವಿಕೆಟ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ನೆಟ್ ರನ್‌ರೇಟ್	ಪಾಯಿಂಟ್ಸ್
ಗುಂಪು 1					
ಇಂಗ್ಲೆಂಡ್	4	4	0	+3.183	8
ದಕ್ಷಿಣ ಆಫ್ರಿಕಾ	4	3	1	+0.742	6
ಆಸ್ಟ್ರೇಲಿಯಾ	3	2	1	-0.627	4
ಶ್ರೀಲಂಕಾ	4	1	3	-0.590	2
ವೆಸ್ಟ್ ಇಂಡೀಸ್	3	1	2	-1.598	2
ಬಾಂಗ್ಲಾದೇಶ	4	0	4	-1.435	0
ಗುಂಪು 2					
ಪಾಕಿಸ್ತಾನ	4	4	0	+1.065	8
ಅಫ್ಗಾನಿಸ್ತಾನ	3	2	1	+3.097	4
ನ್ಯೂಜಿಲೆಂಡ್	2	1	1	+0.765	2
ನಮೀಬಿಯಾ	3	1	2	-1.600	2
ಭಾರತ	2	0	2	-1.609	0
ಸ್ಕಾಟ್ಲೆಂಡ್	2	0	2	-3.562	0

* ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ

ಸೆಮಿಫೈನಲ್‌ಗೆ ಪಾಕ್; ನಮಿಬಿಯಾ ದಿಟ್ಟ ಆಟ

ಅಬುಧಾಬಿ (ಪಿಟಿಐ): ದಿಟ್ಟ ಆಟ ತೋರಿದ ನಮಿಬಿಯಾದ ಎದುರು ಪಾಕಿಸ್ತಾನ ತಂಡವು 45 ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಎರಡನೇ ಗುಂಪಿನಿಂದ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ರಿಜ್ವಾನ್ (ಔಟಾಗದೆ 79; 50ಎಸೆತ, 8ಬೌಂಡರಿ, 4ಸಿಕ್ಸರ್) ಮತ್ತು ಬಾಬರ್ ಆಜಂ (70; 49ಎಸೆತ, 7ಬೌಂಡರಿ) ಮೊದಲ ವಿಕೆಟ್‌ಗೆ 113 ರನ್ ಪೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗೆ 189 ರನ್ ಗಳಿಸಿತು. ಆದರೆ ಇದೇ ಮೊದಲ ಸಲ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ನಮಿಬಿಯಾ ಪಾಕ್ ತಂಡಕ್ಕೆ ಸುಲಭವಾಗಿ ಮಣಿಯಲಿಲ್ಲ. 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 144 ರನ್ ಗಳಿಸಿತು.

ಮೊಹಮ್ಮದ್ ರಿಜ್ವಾನ್ ಮತ್ತು ಬಾಬರ್ ಆಜಂ ಮತ್ತು—ಪಿಟಿಐ ಚಿತ್ರ

ಪಾಕ್ ತಂಡಕ್ಕೆ ಇದು ಸತತ 4ನೇ ಜಯ. ಒಟ್ಟು ಎಂಟು ಅಂಕಗಳೊಂದಿಗೆ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು. ನಮಿಬಿಯಾದ ಕ್ರೇಗ್ ವಿಲಿಯಮ್ಸ್ (40;37ಎ, 5ಬೌಂ, 1ಸಿ) ಮತ್ತು ಡೇವಿಡ್ ವೀಸ್ (ಔಟಾಗದೆ 43; 31ಎ, 3ಬೌಂ, 2ಸಿ) ಆಕರ್ಷಕ ಬ್ಯಾಟಿಂಗ್‌ನಿಂದ ಗಮನ ಸೆಳೆದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 189 (ಮೊಹಮ್ಮದ್ ರಿಜ್ವಾನ್ ಔಟಾಗದೆ 79, ಬಾಬರ್ ಆಜಂ 70, ಮೊಹಮ್ಮದ್ ಹಫೀಜ್ ಔಟಾಗದೆ 32, ಡೇವಿಡ್ ವೀಸ್ 30ಕ್ಕೆ1, ಜಾನ್ ಫ್ರೈಲಿಂಕ್ 31ಕ್ಕೆ1). ನಮಿಬಿಯಾ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 144 (ಸ್ಟೀಫನ್ ಬಾರ್ಡ್ 29, ಕ್ರೇಗ್ ವಿಲಿಯಮ್ಸ್ 40, ಡೇವಿಡ್ ವೀಸ್ ಔಟಾಗದೆ 43; ಹಸನ್ ಅಲಿ 22ಕ್ಕೆ 1, ಇಮದ್ ವಾಸೀಂ 13ಕ್ಕೆ 1, ಹ್ಯಾರಿಸ್ ರವೂಫ್ 25ಕ್ಕೆ 1). ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 45 ರನ್‌ಗಳ ಜಯ.

35 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ; ಸಾಧಕರಿಗೆ ಗೌರವ

ನೀರಜ್, ಮನ್‌ಪ್ರೀತ್‌ಗೆ ಖೇಲ್ ರತ್ನ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನ 'ಚಿನ್ನದ ಹುಡುಗ' ನೀರಜ್ ಚೋಪ್ರಾ ಮತ್ತು ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಸೇರಿದಂತೆ 12 ಮಂದಿಗೆ ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ನೀಡಲಾಗಿದೆ.

ಈಚೆಗೆ ಕ್ರೀಡಾ ಸಮಿತಿಯು ಮಾಡಿದ್ದ ಶಿಫಾರಸಿನಲ್ಲಿ 11 ಮಂದಿಯ ಹೆಸರುಗಳಿದ್ದವು. ಟೋಕಿಯೊದಲ್ಲಿ ಕಂಚಿನ ಪದಕ ಜಯಿಸಿದ ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಅವರನ್ನು ಕೊನೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಮಂಗಳವಾರ ಕ್ರೀಡಾ ಸಚಿವಾಲಯವು ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಲಾಗಿದೆ.

ಕನ್ನಡಿಗ, ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಸುಹಾಸ್ ಯತಿರಾಜ್ ಸೇರಿದಂತೆ 35 ಸಾಧಕರಿಗೆ ಅರ್ಜುನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ನವೆಂಬರ್ 13ರಂದು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಪ್ರಶಸ್ತಿ ಪುರಸ್ಕೃತರು: ಮೇಜರ್ ಧ್ಯಾನಚಂದ್ ಖೇಲ್‌ರತ್ನ: ನೀರಜ್ ಚೋಪ್ರಾ (ಅಥ್ಲೆಟಿಕ್ಸ್), ರವಿಕುಮಾರ್ (ಕುಸ್ತಿ), ಲವ್ಲಿನಾ ಬೊರ್ಗೊಹೈನ್ (ಬಾಕ್ಸಿಂಗ್), ಪಿ.ಆರ್. ಶ್ರೀಜೇಶ್ (ಹಾಕಿ), ಅವನಿ ಲೇಖರಾ (ಪ್ಯಾರಾ ಶೂಟಿಂಗ್), ಸುಮಿತ್ ಅಂಟಿಲ್ (ಪ್ಯಾರಾ ಅಥ್ಲೆಟಿಕ್ಸ್), ಪ್ರಮೋದ್ ಭಗತ್, ಕೃಷ್ಣ ನಾಗರ್ (ಇಬ್ಬರೂ ಪ್ಯಾರಾ ಬ್ಯಾಡ್ಮಿಂಟನ್), ಮನೀಷ್ ನರ್ವಾಲ್ (ಪ್ಯಾರಾ ಶೂಟಿಂಗ್), ಮಿಥಾಲಿ ರಾಜ್ (ಕ್ರಿಕೆಟ್), ಸುನೀಲ್ ಚೆಟ್ರಿ (ಫುಟ್‌ಬಾಲ್), ಮನ್‌ಪ್ರೀತ್ ಸಿಂಗ್ (ಹಾಕಿ).

ಮನಪ್ರೀತ್ ಸಿಂಗ್


ನೀರಜ್ ಚೋಪ್ರಾ

ಅರ್ಜುನ್ ಪ್ರಶಸ್ತಿ: ದಿಲ್‌ಪ್ರೀತ್ ಸಿಂಗ್, ಹರ್ಮನ್ ಪ್ರೀತ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಸುರೇಂದರ್ ಕುಮಾರ್, ಅಮಿತ್ ರೋಹಿದಾಸ್, ಬಿರೇಂದ್ರ ಲಕ್ರಾ, ಸುಮಿತ್, ನೀಲಕಂಠ ಶರ್ಮಾ, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್, ಪ್ರಸಾದ್, ಗುರ್ಜಂತ್ ಸಿಂಗ್, ಮನದೀಪ್ ಸಿಂಗ್, ಶಂಶೇರ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ವರುಣಕುಮಾರ್, ಸಿಮ್ರನ್‌ಜೀತ್ ಸಿಂಗ್ (ಎಲ್ಲರೂ ಹಾಕಿ), ಅರ್ಪಿಂದರ್ ಸಿಂಗ್ (ಅಥ್ಲೆಟಿಕ್ಸ್), ಸಿಮ್ರನ್‌ಜೀತ್ ಕೌರ್ (ಬಾಕ್ಸಿಂಗ್), ಶಿಖರ್ ಧವನ್ (ಕ್ರಿಕೆಟ್), ಸಿ.ಎ. ಭವಾನಿದೇವಿ (ಫೆನ್ಸಿಂಗ್), ಮೋನಿಕಾ (ಹಾಕಿ), ವಂದನಾ ಕಟಾರಿಯಾ (ಹಾಕಿ), ಸಂದೀಪ್ ನರ್ವಾಲ್ (ಕಬಡ್ಡಿ), ಹಿಮಾನಿ ಉತ್ತಮ್ ಪರಬ್ (ಮಲ್ಲಕಂಬ), ಅಭಿಷೇಕ್ ವರ್ಮಾ (ಶೂಟಿಂಗ್), ಅಂಕಿತಾ ರೈನಾ (ಟೆನಿಸ್), ದೀಪಕ್ ಪೂನಿಯಾ (ಕುಸ್ತಿ), ಯೋಗೇಶ್ ಖತುನಿಯಾ, ನಿಶಾದ್ ಕುಮಾರ್, ಪ್ರವೀಣ್ ಕುಮಾರ್ (ಪ್ಯಾರಾ ಅಥ್ಲೆಟಿಕ್ಸ್), ಸುಹಾಸ್ ಯತಿರಾಜ್ (ಪ್ಯಾರಾ ಬ್ಯಾಡ್ಮಿಂಟನ್), ಸಿಂಗರಾಜ್ ಅದಾನಾ (ಪ್ಯಾರಾ ಶೂಟಿಂಗ್), ಭಾವಿನಾ ಪಟೇಲ್ (ಪ್ಯಾರಾ ಟಿಟಿ), ಹರವಿಂದರ್ ಸಿಂಗ್ (ಪ್ಯಾರಾ ಆರ್ಚರಿ), ಶರದ್ ಕುಮಾರ್(ಪ್ಯಾರಾ ಅಥ್ಲೆಟಿಕ್ಸ್).

ರಾಷ್ಟ್ರೀಯ ಕ್ರೀಡಾ ಪ್ರೋತ್ಸಾಹಕ ಪುರಸ್ಕಾರ: ಮಾನವರಚನಾ ಶಿಕ್ಷಣ ಸಂಸ್ಥೆ ಮತ್ತು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್

ಮೌಲಾನಾ ಅಬುಲ್ ಕಲಾಂ ಆಜಾದ್ ಟ್ರೋಫಿ: ಪಂಜಾಬ್ ವಿಶ್ವವಿದ್ಯಾಲಯ, ಚಂಡೀಗಡ.

ಬಾಕ್ಸಿಂಗ್: ಸೆಮಿಫೈನಲ್‌ಗೆ ಆಕಾಶ್ ಕುಮಾರ್

ಬೆಲ್‌ಗ್ರೇಡ್ (ಪಿಟಿಐ): ಭಾರತದ ಆಕಾಶ್ ಕುಮಾರ್ ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ತಲುಪಿದ್ದು, ತಮ್ಮ ಮೊದಲ ಕೂಟವನ್ನೇ ಸ್ಮರಣೀಯವಾಗಿಸಿಕೊಳ್ಳುವತ್ತ ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ 54 ಕೆಜಿ ವಿಭಾಗದಲ್ಲಿ ನಾಲ್ಕರ ಘಟ್ಟ ತಲುಪುವ ಮೂಲಕ ಅವರು ಪದಕ ಖಚಿತಪಡಿಸಿದ್ದಾರೆ. ಮಂಗಳವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅವರು 5–0ಯಿಂದ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ, ವೆಜಿಜುಯೆಲಾದ ಫಿನೊಲ್ ರಿವಾಸ್ ಅವರನ್ನು ಮಣಿಸಿದರು.

ಬೌಟ್‌ನಲ್ಲಿ ಪ್ರತಿದಾಳಿ ಮತ್ತು ಚುರುಕಾದ ಪಾದಚಲನೆಗಳ ಮೂಲಕ ಆಕಾಶ್ ಎದುರಾಳಿಯನ್ನು ಕಂಗೆಡಿಸಿದರು. ಸರ್ವೀಸಸ್ ತಂಡದ ಆಕಾಶ್, ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದಿದ್ದಾರೆ. ಸೆಪ್ಟೆಂಬರ್‌ನಲ್ಲಿ ಅವರ ತಾಯಿ ಶ್ವಾಸಕೋಶದ ಸೋಂಕಿನಿಂದ ಮೃತಪಟ್ಟಿದ್ದರು. ಈ ವೇಳೆ ಆಕಾಶ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದರು. ಆಕಾಶ್ ತಂದೆ ಕೂಡ ದಶಕದ ಹಿಂದೆ ನಿಧನರಾಗಿದ್ದಾರೆ.

ಆಕಾಶ್ ಅವರು ಸೆಮಿಫೈನಲ್‌ನಲ್ಲಿ ಕಜಕಸ್ತಾನದ ಮಖ್‌ಮೂದ್ ಸಬೀರ್‌ಖಾನ್ ಅವರನ್ನು ಎದುರಿಸುವರು.

ಐದು ಬಾರಿಯ ಏಷ್ಯನ್ ಪದಕ ವಿಜೇತ, ಭಾರತದ ಶಿವ ಥಾಪಾ ಅವರು ಸೋಮವಾರ ಎಂಟರಘಟ್ಟ ತಲುಪಿದ್ದರು. ಇದರೊಂದಿಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕ ಜಯಿಸಿದ ಭಾರತದ ಮೊದಲ ಪುರುಷ ಬಾಕ್ಸರ್ ಎನಿಸಿಕೊಳ್ಳಲು ಇನ್ನೊಂದೇ ಹೆಜ್ಜೆ ಸನಿಹದಲ್ಲಿದ್ದಾರೆ.

ಶಿವ (63.5 ಕೆಜಿ ವಿಭಾಗ) ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 4–1ರಿಂದ ಫ್ರಾನ್ಸ್‌ನ ಲೂನೆಸ್ ಹಮ್ರೊಯಿ ಅವರನ್ನು ಪರಾಭವಗೊಳಿಸಿದರು. ದೋಹಾದಲ್ಲಿ ನಡೆದ 2015ರ ಆವೃತ್ತಿಯಲ್ಲಿ ಶಿವ ಕಂಚಿನ ಪದಕಕ್ಕೆ ಕೊರಳೊಡ್ಡಿದ್ದರು.

ಆಕಾಶ್ ಕುಮಾರ್ ಜಯದ ಸಂತಸ— ಪಿಟಿಐ ಚಿತ್ರ

ಕೊಹ್ಲಿ ಕುಟುಂಬಕ್ಕೆ ಬೆದರಿಕೆ ಪ್ರಕರಣ

ದೆಹಲಿ ಪೊಲೀಸರಿಗೆ ಮಹಿಳಾ ಆಯೋಗದ ನೋಟಿಸ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರ ಕುಟುಂಬಕ್ಕೆ ದುಷ್ಕರ್ಮಿಯೊಬ್ಬ ಆನ್‌ಲೈನ್‌ನಲ್ಲಿ ಬೆದರಿಕೆ ಹಾಕಿದ್ದಾನೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ದೆಹಲಿ ಮಹಿಳಾ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ. ಈ ಪ್ರಕರಣವನ್ನು ಸಮಗ್ರವಾಗಿ ತನಿಖೆ ನಡೆಸಬೇಕು. ಆರೋಪಿಯನ್ನು ಬಂಧಿಸಬೇಕು ಎಂದು ದೆಹಲಿ ಪೊಲೀಸರಿಗೆ (ಸೈಬರ್ ವಿಭಾಗ) ನೋಟಿಸ್ ಕೂಡ ಜಾರಿ ಮಾಡಿದೆ.

ಕೊಹ್ಲಿಯವರ ಒಂಬತ್ತು ತಿಂಗಳ ಮಗಳ ಮೇಲೆ ಅತ್ಯಾಚಾರವೆಸಗುವುದಾಗಿ ಬೆದರಿಕೆಯೊಡ್ಡಿದ್ದಾರೆಂದು ವರದಿಯಾಗಿದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ದಾಖಲಿಸಿರುವ ಎಫ್‌ಐಆರ್, ಕೈಗೊಂಡ ಕ್ರಮ, ಆರೋಪಿಗಳ ವಿವರವನ್ನು ನ.8ರ ಒಳಗೆ ನೀಡುವಂತೆ ಮಹಿಳಾ ಆಯೋಗವು ದೆಹಲಿಯ ಸಹಾಯಕ ಪೊಲೀಸ್ ಆಯುಕ್ತರಿಗೆ ಸೂಚಿಸಿದೆ.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ತನ್ನ ಮೊದಲೆರಡು ಪಂದ್ಯಗಳಲ್ಲಿ ಸೋತಿದೆ. ಇದರಿಂದಾಗಿ ತಂಡದ ನಾಯಕ ಮತ್ತು ಆಟಗಾರರನ್ನು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡಲಾಗುತ್ತಿದೆ.

'ಮೊಹಮ್ಮದ್ ಶಮಿಯನ್ನು ಬೆಂಬಲಿಸಿ ಹೇಳಿಕೆ ನೀಡಿದ ನಂತರ ಕೊಹ್ಲಿ ಮೇಲೆ ಟ್ರೋಲಿಗರ ದಾಳಿ ಹೆಚ್ಚಾಗಿದೆ ಎಂದು ತಿಳಿದುಬಂದಿದೆ. ಇದು ಬಹಳ ಗಂಭೀರ ವಿಷಯ. ಕಟ್ಟುನಿಟ್ಟಿನ ಕ್ರಮ ಅಗತ್ಯ' ಎಂದು ಮಹಿಳಾ ಆಯೋಗದ ಮುಖ್ಯಸ್ಥೆ ಸ್ವಾಲಿ ಮಳಿವಾಲ್ ಹೇಳಿದ್ದಾರೆ.

ಮತ್ತೆ ಕ್ರಿಕೆಟ್‌ನತ್ತ ಯುವಿ ಚಿತ್ತ

ನವದೆಹಲಿ (ಪಿಟಿಐ): ಆಲ್‌ರೌಂಡರ್ ಯುವರಾಜ್ ಸಿಂಗ್ ಮತ್ತೆ ಕ್ರಿಕೆಟ್‌ಗೆ ಮರಳಲಿದ್ದಾರೆ.

'ಭಾರೀ ಜನಾಗ್ರಹದ ಮೇರೆಗೆ ತಮ್ಮ ನಿವೃತ್ತಿಯನ್ನು ವಾಪಸ್ ಪಡೆದು, ಮುಂದಿನ ವರ್ಷ ಫೆಬ್ರುವರಿಯಲ್ಲಿ ಕ್ರಿಕೆಟ್‌ಗೆ ಮರಳುತ್ತೇನೆ' ಎಂದು ಯುವರಾಜ್ ಸಿಂಗ್ ಸೋಮವಾರ ತಡರಾತ್ರಿ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ನಮ್ಮ ಹಣೆಬರಹವನ್ನು ದೇವರು ತೀರ್ಮಾನಿಸುತ್ತಾನೆ. ಫೆಬ್ರುವರಿಯಲ್ಲಿ ಕ್ರಿಕೆಟ್‌ಗೆ ಮರಳುತ್ತೇನೆ. ಅಭಿಮಾನಿಗಳ ಅಪಾರ ಆಗ್ರಹದಿಂದಾಗಿ ಈ ನಿರ್ಧಾರ ಕೈಗೊಳ್ಳುತ್ತಿರುವ. ಎಲ್ಲರ ಪ್ರೀತಿ ಮತ್ತು ಶುಭ ಹಾರೈಕೆಗಳಿಗೆ ಋಣಿಯಾಗಿದ್ದೇನೆ' ಎಂದು 39 ವರ್ಷದ ಯುವಿ ಬರೆದಿದ್ದಾರೆ.ಆದರೆ ಅವರು ಯಾವ ಮಾದ ರಿಯ ಕ್ರಿಕೆಟ್‌ನಲ್ಲಿ ಆಡಲಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ. ಫ್ರಾಂಚೈಸಿ ಲೀಗ್ ಅಥವಾ ಭಾರತದ ಕ್ರಿಕೆಟ್ ತಂಡದಲ್ಲಿ ಆಡುವರೇ ಎಂಬುದನ್ನೂ ಉಲ್ಲೇಖಿಸಿಲ್ಲ. ಪಂಜಾಬ್‌ನ ಯುವರಾಜ್ ಸಿಂಗ್ 2019ರ ಜೂನ್‌ನಲ್ಲಿ ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. 2011ರಲ್ಲಿ ಭಾರತವು ಏಕದಿನ ವಿಶ್ವಕಪ್ ಜಯಿಸಲು ಯುವಿಯ ಆಲ್‌ರೌಂಡ್ ಆಟ ಮಹತ್ವದ ಪಾತ್ರ ವಹಿಸಿತ್ತು. ಸರಣಿಶ್ರೇಷ್ಠ ಗೌರವ ಕೂಡ ಗಳಿಸಿದ್ದರು.

ಟೂರ್ನಿಯ ಕೆಲವು ಕಾಲದ ನಂತರ ಕ್ಯಾನ್ಸರ್‌ನಿಂದ ಬಳಲಿದ್ದರು. ಚಿಕಿತ್ಸೆ ಪಡೆದು ಕ್ಯಾನ್ಸರ್ ಗೆದ್ದು ಮತ್ತೆ ಕ್ರಿಕೆಟ್ ಅಂಗಳಕ್ಕೆ ಮರಳಿದ್ದರು.

ಅಂತರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದ ನಂತರ ಜಗತ್ತಿನ ಹಲವು ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಯುವರಾಜ್ ಆಡಿದ್ದಾರೆ.

ಯುವರಾಜ್ ಸಿಂಗ್

ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಜಯ

ಬೆಂಗಳೂರು: ಸುಧೀರ್ ಕೋಟಿಕೇಲ ಗಳಿಸಿದ ಎರಡು ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಜಯ ಗಳಿಸಿತು.

ಇಲ್ಲಿ ನಡೆಯುತ್ತಿರುವ ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 3–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿಯನ್ನು ಮಣಿಸಿತು.

ತಂಡದ ಪರ ಸುಧೀರ್ 19 ಹಾಗೂ 25ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಅಂಕಿತ್ ಪಿ (86ನೇ ನಿಮಿಷ) ಒಂದು ಗೋಲು ಹೊಡೆದರು. ಬೆಂಗಳೂರು ಡ್ರೀಮ್ ಪರ ಮುಹಮ್ಮದ್ ಸುಹೈಬ್ (21ನೇ ನಿಮಿಷ) ಒಂದು ಗೋಲು ದಾಖಲಿಸಿದರು. ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್ 3–0ಯಿಂದ ಎಡಿಇ ಎಫ್‌ಸಿ ಎದುರು ಗೆದ್ದಿರು.

ಚೆಸ್: ಅಗ್ರಸ್ಥಾನ ಹಂಚಿಕೊಂಡ ಶಶಿಕಿರಣ್

ರಿಗಾ, ಲಾತ್ವಿಯಾ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಕೆ. ಶಶಿಕಿರಣ್ ಅವರು ಫಿಡೆ ಗ್ರ್ಯಾಂಡ್ ಚೆಸ್ ಟೂರ್ನಿಯ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ವರೊಂದಿಗೆ ಅಗ್ರಸ್ಥಾನವನ್ನು ಹಂಚಿಕೊಂಡಿದ್ದಾರೆ.

ಶಶಿಕಿರಣ್ ಅವರು ಸೋಮವಾರ ರಾತ್ರಿ ನಡೆದ ನಿಮ್ಜೊ-ಇಂಡಿಯನ್ ಮಾದರಿಯ ಆರನೇ ಸುತ್ತಿನ ಪಂದ್ಯದಲ್ಲಿ ರಷ್ಯಾದ ಅಲೆಕ್ಸಾಂಡರ್ ಪೆಡ್ಕೆ ಅವರನ್ನು ಪರಾಭವಗೊಳಿಸಿದರು. ಅವರಿಗೆ 53 ನಡೆಗಳಲ್ಲಿ ಗೆಲುವು ಒಲಿಯಿತು. ಇದರೊಂದಿಗೆ ಭಾರತದ ಆಟಗಾರ, ಅಲಿರೆಜಾ ಫಿರೌಜಿಯಾ, ಅಲೆಕ್ಸಿ ಶಿರೊವ್, ಇವ್‌ಜೆನಿಯ್ ನಜೆರ್ ಮತ್ತು ಮ್ಯಾಕ್ಸಿಮ್ ವ್ಯಾಚಿರ್–ಲ್ಯಾಗ್ರೇವ್ ಅವರೊಂದಿಗೆ ಅಗ್ರಸ್ಥಾನ ಹಂಚಿಕೊಂಡರು.

ಈ ಎಲ್ಲ ಆಟಗಾರರ ಬಳಿ ಸದ್ಯ ತಲಾ 4.5 ಪಾಯಿಂಟ್‌ಗಳಿವೆ. 7ನೇ ಸುತ್ತಿನಲ್ಲಿ ಶಶಿಕರಣ್ ಅವರು ಫ್ರಾನ್ಸ್‌ನ ವಾಚಿರ್ ಲ್ಯಾಗ್ರೆವ್ ಅವರನ್ನು ಎದುರಿಸಲಿದ್ದಾರೆ.

ದ್ರೋಣವಲ್ಲಿ ಹಾರಿಕ ಅವರು ಜಾರ್ಜಿಯಾದ ನಿನೊ ಬ್ಯಾಸ್ಟಿಯಾಶ್ವಿಲಿ ಎದುರು ಡ್ರಾ ಸಾಧಿಸಿದರು.

ಬ್ಯಾಡ್ಮಿಂಟನ್: ಲಕ್ಷ್ಯ ಸೇನ್ ಮುನ್ನಡೆ

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ.

ಮಂಗಳವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು 21-17, 21-14ರಿಂದ ಫ್ರಾನ್ಸ್‌ನ ಥಾಮಸ್ ರೌಕ್ಸೆಲ್ ಅವರನ್ನು ಸೋಲಿಸಿದರು.

ಮಿಶ್ರ ಡಬಲ್ಸ್ ವಿಭಾಗದ ಜೋಡಿ ಬಿ.ಸುಮೀತ್ ರೆಡ್ಡಿ– ಅಶ್ವಿನಿ ಪೊನ್ನಪ್ಪ ಅವರಿಗೆ ಮೊದಲ ಸುತ್ತಿನಲ್ಲೇ ಆಘಾತ ಎದುರಾಯಿತು. ಅವರು 12-21, 13-21ರಿಂದ ಡೆನ್ಮಾರ್ಕ್‌ನ ನಿಕ್ಲಸ್ ನೋಹ್ರ್ ಮತ್ತು ಅಮೇಲಿ ಮೆಗ್‌ಲಂಡ್ ಎದುರು ಮಣಿದರು.

BLDE Association's
AVS Ayurveda Mahavidyalaya, Hospital & Research Centre
Vidya Nagar, Bagalkot Road, Vijayapur - 586109 (Karnataka)
(Recognized by NCISM, New Delhi & Affiliated to Rajiv Gandhi University of Health Sciences, Karnataka)
Telephone: +91 9513398037, Website: www.bldeaavsamv.ac.in

VACANCY NOTIFICATION

Applications are invited from eligible candidates for below mentioned posts in BLDE Association's AVS Ayurveda Mahavidyalaya Hospital & Research Centre.

Sl. No.	Department	Professor	Associate Professor	Assistant Professor
01.	Samhita Siddhanta	--	--	01
02.	Rachana Shareera	01	--	--
03.	Swasthavritta	--	--	01
04.	Agadatantra	--	--	01
05.	Prasutitantra	--	--	01
06.	Kayachikitsa	--	02	01
07.	Shalyatantra	--	01	--
08.	Shalakyatantra	--	01	--
09.	Panchakarma	01	--	--
	Total	02	04	05

1) Qualification & Experience shall be as per the NCISM norms.
2) Salary as per UGC Pay Scale.
3) The General Secretary, BLDE Association reserves the right to reject any and / or all the applications without assigning any reason thereof.

Last date for sending applications to
principal.avsamv@bldea.org is 15-11-2021
Date of interview: 20-11-2021 at 10:00 am.
Shortlisted candidates for interview will be informed personally on their respective Email IDs

Sd/- Shri G.K. Patil, General Secretary, BLDE Association
Sd/- Dr. M.B. Patil, President, BLDE Association

ಮನಸ್ಸಿನ ಉತ್ಸಾಹ ಹೆಚ್ಚಿಸುವ ಟೀ

ಟೀ ಮನಸ್ಸಿನ ಒತ್ತಡ ನಿವಾರಿಸಿ ನವಚೈತನ್ಯ ಮೂಡಿಸುತ್ತದೆ. ವಿವಿಧ ಬಗೆಯ ಟೀಗಳು ಮನುಷ್ಯನ ಮನಸ್ಸಿಗೆ ಆರಾಮ ನೀಡುತ್ತವೆ. ಹರ್ಬಲ್ ಟೀ ಕುಡಿಯುವುದರಿಂದ ದೇಹ ಹಾಗೂ ಮನಸ್ಸಿಗೆ ಚೈತನ್ಯ ಸಿಗುವುದಲ್ಲದೇ ರೋಗ ನಿರೋಧಕ ಶಕ್ತಿಯೂ ಹೆಚ್ಚುತ್ತದೆ.

ಮನಸ್ವಿ

ಮನುಷ್ಯನ ಮನಸ್ಸು ಕ್ಷಣಕೊಮ್ಮೆ ಬದಲಾಗುತ್ತಲೇ ಇರುತ್ತದೆ. ಮನಸ್ಸು ಯಾವಾಗ ಯಾವ ರೀತಿ ಬದಲಾಗುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಮೂಡ್ ಆಫ್ ಆದಾಗ ಒಂದು ಬೆಚ್ಚನೆಯ ಟೀ ಕುಡಿದರೆ ಮನಸ್ಸು ಉಲ್ಲಸಿತವಾಗುತ್ತದೆ. ಆ ಕಾರಣಕ್ಕೆ ಹಲವರು ದಿನಕ್ಕೊಮ್ಮೆಯಾದರೂ ಟೀ ಕುಡಿಯುತ್ತಾರೆ. ಟೀ ಮನಸ್ಸಿನ ಒತ್ತಡ ನಿವಾರಿಸಿ ನವಚೈತನ್ಯ ಮೂಡಿಸುವುದರಲ್ಲಿ ಅನುಮಾನವಿಲ್ಲ. ವಿವಿಧ ಬಗೆಯ ಟೀಗಳು ಮನುಷ್ಯನ ಮನಸ್ಸಿಗೆ ಆರಾಮ ನೀಡುತ್ತವೆ. ಕೆಲವು ಹರ್ಬಲ್ ಟೀಗಳು ಮನುಷ್ಯನ ದೇಹ ಹಾಗೂ ಮನಸ್ಸಿಗೆ ಚೈತನ್ಯ ನೀಡುವುದಲ್ಲದೇ ರೋಗ ನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತವೆ.

ಕೆಲವು ಬಗೆಯ ಟೀಯಲ್ಲಿ ಕೆಫಿನ್ ಅಂಶ ಅಧಿಕವಿದ್ದು ಅವು ನಮ್ಮಲ್ಲಿ ಶಕ್ತಿ ಹೆಚ್ಚಿಸಿ ಮನಸ್ಸು ರಿಪೇರಿಯಾಗಲು ಸಹಾಯ ಮಾಡುತ್ತವೆ. ನಿದ್ದೆ ಬರಲು ಕಷ್ಟವಾಗುತ್ತಿದ್ದರೆ, ಮನಸ್ಸಿನಲ್ಲಿ ಒತ್ತಡ ಅಥವಾ ಚಿಂತೆ ಕೊರೆಯುತ್ತಿದ್ದರೆ ಕೆಲವೊಂದು ವಿಶೇಷ ಟೀಗಳನ್ನು ಕುಡಿಯಬಹುದು.

ಮನಸ್ಸಿನ ಒತ್ತಡ ಕಡಿಮೆ ಮಾಡಲು ಎಲ್ಲಾ ಸಮಯದಲ್ಲೂ ಗ್ರೀನ್ ಟೀ ಬೆಸ್ಟ್ ಎನ್ನುತ್ತದೆ ಅಧ್ಯಯನ. ಕೆಲವೊಂದು ಸಮಯದಲ್ಲಿ ಕ್ಯಾಮೊಮೊಯಿಲ್ ಟೀ ಉತ್ತಮ. ಈ ಕೆಳಗಿನ ಟೀಗಳು ನಮ್ಮ ಮನಸ್ಸು ಹಾಗೂ ದೇಹಕ್ಕೆ ಚೈತನ್ಯ ನೀಡಿ ದೇಹಾರೋಗ್ಯವನ್ನು ಉತ್ತಮಗೊಳಿಸುತ್ತವೆ.

ತುಳಸಿ ಟೀ

ಮನೆಯ ಎದುರುಗಡೆ ತುಳಸಿ ಗಿಡವನ್ನು ಬೆಳೆಸುವುದರಿಂದ ದೈವಿಕ ಶಕ್ತಿ ನೆಲೆ ಕಾಣುತ್ತದೆ ಎಂಬ ನಂಬಿಕೆ ಇದೆ. ಆ ಕಾರಣಕ್ಕೆ ಬಹುತೇಕರು ಮನೆಯ ಎದುರು ತುಳಸಿ ಗಿಡ ನೆಟ್ಟಿರುತ್ತಾರೆ. ತುಳಸಿಯಿಂದ ತಯಾರಿಸಿದ ಟೀ ಕುಡಿಯುವುದರಿಂದ ಹಲವು ಉಪಯೋಗಗಳಿವೆ. ತುಳಸಿ ಟೀಯಲ್ಲಿ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಅಂಶಗಳಿವೆ. ಖಿನ್ನತೆ ಹಾಗೂ ಆತಂಕವನ್ನು ದೂರ ಮಾಡುವ ಶಕ್ತಿ ಇದಕ್ಕಿದೆ. ಆ ಕಾರಣಕ್ಕೆ ಮನಸ್ಸಿಗೆ ಬೇಸರವಾದಾಗ, ದುಃಖವಾದಾಗ ತುಳಸಿ ಟೀ ಸೇವಿಸುವುದು ಉತ್ತಮ.

ಗ್ರೀನ್ ಟೀ

ಮನಸ್ಸಿಗೆ ಅತೀ ಒತ್ತಡ ಎನ್ನಿಸಿದಾಗ, ಮನಸ್ಸು ಭಾರವಾದಾಗ ಗ್ರೀನ್ ಟೀ ಸೇವನೆ ಉತ್ತಮ. ಇದರಲ್ಲಿ ಹಲವು ರೀತಿಯ ಆರೋಗ್ಯಕರ ಅಂಶಗಳಿವೆ. ಗ್ರೀನ್ ಟೀ ಸೇವನೆಯಿಂದ ಮನಸ್ಸು ಹಾಗೂ ದೇಹ ಎರಡೂ ಉಲ್ಲಸಿತವಾಗಿರುತ್ತದೆ. ಗ್ರೀನ್ ಟೀಯಲ್ಲಿರುವ ಕೆಫಿನ್ ಅಂಶ ನಮ್ಮಲ್ಲಿ ಚೈತನ್ಯವನ್ನು ಹೆಚ್ಚಿಸುತ್ತದೆ. ಇದು ದೇಹ ಹಾಗೂ ಮನಸ್ಸು ಎರಡರಲ್ಲೂ ಶಕ್ತಿ ಹೆಚ್ಚುವಂತೆ ಮಾಡುತ್ತದೆ.

ಕ್ಯಾಮೊಮೊಯಿಲ್ ಟೀ

ಕ್ಯಾಮೊಮೊಯಿಲ್ ಟೀ ಕುಡಿಯುವುದರಿಂದ ಒತ್ತಡ ನಿವಾರಣೆ ಸಾಧ್ಯ. ಇದು ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ಉತ್ತಮ ನಿದ್ದೆಗೆ ಸಹಕಾರಿ. ಇದರಲ್ಲಿ ಹಲವು ರೀತಿಯ ಆರೋಗ್ಯ ಸಹಾಯಕ ಗುಣಗಳಿವೆ.

ಪುದಿನಾ ಟೀ

ಪುದಿನಾ ಟೀ ಭಾವನಾತ್ಮಕವಾಗಿ ಮನಸ್ಸನ್ನು ಗಟ್ಟಿಗೊಳಿಸುತ್ತದೆ. ಪುದಿನಾ ಟೀ ನಮ್ಮ ಇಂದ್ರೀಯಗಳಲ್ಲಿ ಚೈತನ್ಯ ಮೂಡುವಂತೆ ಮಾಡುತ್ತದೆ. ಇದರಲ್ಲಿನ ತಂಪು ಹಾಗೂ ರಿಫ್ರೆಶಿಂಗ್ ಲಕ್ಷಣಗಳು ನಮ್ಮ ಭಾವನಾತ್ಮಕ ಸ್ಥಿತಿಯನ್ನು ಸಮತೋಲನದಲ್ಲಿಡಲು ಸಹಾಯ ಮಾಡುತ್ತದೆ.

ಬ್ಲ್ಯಾಕ್ ಟೀ

ದೇಹಕ್ಕೆ ಶಕ್ತಿ ಬೇಕು ಎನ್ನಿಸಿದಾಗ ಬ್ಲ್ಯಾಕ್ ಟೀ ಕುಡಿಯಬೇಕು. ಮನಸ್ಸಿನಲ್ಲಿ ಸಕಾರಾತ್ಮಕ ಅಂಶ ಹೆಚ್ಚಲು ಕೂಡ ಬ್ಲ್ಯಾಕ್ ಟೀ ಸಹಕಾರಿ. ಇದರ ಸೇವನೆಯಿಂದ ಒತ್ತಡದ ಹಾರ್ಮೋನ್‌ಗಳು ಸಹಜ ಸ್ಥಿತಿಗೆ ಮರಳುತ್ತವೆ. ಒತ್ತಡ ಹೆಚ್ಚಿಸುವ ಹಾರ್ಮೋನ್‌ಗಳು ಸಹಜ ಸ್ಥಿತಿಗೆ ಬಂದಾಗ ಮನಸ್ಸು ಹಗುರವಾಗುತ್ತದೆ. ❖

ಅಡುಗೆ ಎಣ್ಣೆ ಬಳಸುವುದು ಹೇಗೆ?



ಅರಿವು

ಅಮೃತಾ

ಅಡುಗೆ ವಿಷಯ ಬಂದ ಕೂಡಲೇ ಏಷ್ಟೆಲ್ಲ ಸಾಮಗ್ರಿಗಳನ್ನು ಹೊಂದಿಸಿಕೊಳ್ಳಬೇಕು ಎಂಬುದು ಅಡುಗೆ ಮಾಡುವವರಿಗೆ ಗೊತ್ತೇ ಇದೆ. ಜೊತೆಗೆ ಅವು ಆರೋಗ್ಯಪೂರ್ಣವಾಗಿಯೂ ಇರಬೇಕು. ಅಕ್ಕಿ, ಬೇಳೆ, ಹಿಟ್ಟು, ಮಸಾಲೆ ಸಾಮಗ್ರಿಗಳು, ತರಕಾರಿ, ಮಾಂಸ, ಮೀನು, ಎಣ್ಣೆ.. ಹೀಗೆ ಪಟ್ಟಿ ಬೆಳೆಯುತ್ತದೆ. ಈ ಅಡುಗೆ ಎಣ್ಣೆಯ ವಿಷಯ ಬಂದಾಗ ಹೆಚ್ಚು ಕಾಳಜಿ ವಹಿಸುವುದು ಇತ್ತೀಚೆಗೆ ಹೆಚ್ಚಾಗಿದೆ. ಇದಕ್ಕೆ ಕಲಬೆರಕೆ ಒಂದು ಕಾರಣವಾದರೆ, ಸಂಸ್ಕರಿಸಿದ ಎಣ್ಣೆ ಅಷ್ಟು ಆರೋಗ್ಯಕರವಲ್ಲ ಎಂಬ ಆತಂಕ ಇನ್ನೊಂದು ಕಾರಣ. ಹೀಗಾಗಿ ಗ್ರಾಹಕರು ಗಾಣದ ಎಣ್ಣೆ ಅಥವಾ ವರ್ಜಿನ್ ಎಣ್ಣೆಯತ್ತ ಮುಖ ಮಾಡಿದ್ದಾರೆ. ಅದು ತೆಂಗಿನ ಎಣ್ಣೆಯಿರಲಿ, ಸಾಸಿವೆ, ಎಳ್ಳು, ಸೂರ್ಯಕಾಂತಿ, ಶೇಂಗಾ, ಕುಸುಬಿ, ಅಗಸೆ, ಭತ್ತದ ಹೊಟ್ಟು, ಆಲಿವ್... ಯಾವುದೇ ಇರಲಿ, ಸಂಸ್ಕರಿಸದ ಗಾಣದ ಎಣ್ಣೆ ಹೆಚ್ಚು ಆರೋಗ್ಯಕರ ಎಂಬುದು ತಜ್ಞರ ಅಭಿಮತ ಮಾತ್ರವಲ್ಲ, ಬಳಕೆದಾರರದ್ದೂ ಕೂಡ.

ನಾವು ಭಾರತೀಯರು ನಿತ್ಯದ ಅಡುಗೆಯಾದ ಪಲ್ಯ, ದೋಸೆ, ಚಪಾತಿಗೆ ಮಾತ್ರವಲ್ಲ, ಹಪ್ಪಳ, ಪೂರಿ, ಪಕೋಡ, ಬಜ್ಜಿ– ಬೋಂಡಾದಂಥವುಗಳನ್ನು ಕರಿಯಲು ಹೆಚ್ಚು ಎಣ್ಣೆ ಬಳಸುವುದು ವಾಡಿಕೆ. ಆದರೆ ಉಳಿತಾಯದ ದೃಷ್ಟಿಯಿಂದ ಕರಿಯಲು ಬಳಸಿದ ಎಣ್ಣೆಯನ್ನು ಹಾಗೇ ಇಟ್ಟು ಮತ್ತೆ ಬಳಸುವುದು ರೂಢಿ. ಇದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಅದು ಸಂಸ್ಕರಿಸಿದ ಎಣ್ಣೆಯಿರಲಿ ಅಥವಾ ಗಾಣದ ಶುದ್ಧ ಎಣ್ಣೆಯಿರಲಿ ಅದರಲ್ಲಿರುವ ಅನ್‌ಸ್ಯಾಚುರೇಟೆಡ್ ಕೊಬ್ಬಿನಂಶದಿಂದಾಗಿ ನಮ್ಮ ಆರೋಗ್ಯಕ್ಕೆ ಅಷ್ಟು ಸುರಕ್ಷಿತವಲ್ಲ.

ಇದು ಹೆಚ್ಚಿನ ಉಷ್ಣಾಂಶದಲ್ಲಿ ರಾಸಾಯನಿಕ ಕ್ರಿಯೆಗೆ ಒಳಗಾಗುವುದರಿಂದ ಮತ್ತೆ ಬಳಸಿದರೆ ಹೃದ್ರೋಗ, ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳು ತಲೆದೋರಬಹುದು. ಹೀಗಾಗಿ ಕರಿಯುವಾಗ ಎಷ್ಟು ಬೇಕೊ ಅಷ್ಟೇ ಎಣ್ಣೆಯನ್ನು ಬಳಸಿ. ಅದನ್ನು ಉಳಿಸಿಕೊಂಡು ಮತ್ತೆ ಬಳಸಬೇಡಿ. ಇನ್ನೊಂದು ಅಂಶವೆಂದರೆ ವಿನಾಕಾರಣ ಎಣ್ಣೆ ಕಾಯಲು ಬಿಡದೆ ಕರಿಯುವ ಕೆಲಸ ಬೇಗ ಬೇಗ ಮುಗಿಸಿ, ಗ್ಯಾಸ್ ಬಂದ್ ಮಾಡಿ. ಕೆಲವೊಮ್ಮೆ ಈ ಎಣ್ಣೆಯನ್ನು ತರಕಾರಿ ಪಲ್ಯ ಮಾಡಲು ಬಳಸಬಹುದು.

ಇನ್ನೊಂದು ಅಳತೆ. ಎಷ್ಟು ಪ್ರಮಾಣದಲ್ಲಿ ಅಡುಗೆ ಎಣ್ಣೆ ಬಳಸಬೇಕು ಎಂಬುದು. ಒಂದು ದಿನಕ್ಕೆ ಒಬ್ಬರು 15 ಎಂ.ಎಲ್. ಅಥವಾ 3 ಟೀ ಚಮಚ ಎಣ್ಣೆ ಬಳಸಬಹುದು. ಹಾಗೆಯೇ ಬೇರೆ ಬೇರೆ ಎಣ್ಣೆಯನ್ನು ಮಿಶ್ರ ಮಾಡಿ ಬಳಸಬಹುದು. ❖

ಅಪ್ಪು ಸಮಾಧಿಗೆ ಪೂಜೆ ಸಲ್ಲಿಸಿದ ತಮಿಳು ನಟ ಶಿವಕಾರ್ತಿಕೇಯನ್

ಶಿವಣ್ಣ ಮನೆಗೆ ತೆರಳಿ ಸಾಂತ್ವನ ಹೇಳಿದ ಶಿವಕಾರ್ತಿಕೇಯನ್

ಸಿನಿಮಾ

'ಪುನೀತ್ ಒಬ್ಬ ಅದ್ಭುತ ನಟ. ಅವರು ಇಂದು ನಮ್ಮ ಜೊತೆಗಿಲ್ಲ ಎಂಬುದನ್ನು ಊಹಿಸಲೂ ಸಾಧ್ಯವಾಗುತ್ತಿಲ್ಲ. ಅವರು ನನಗೆ ಉತ್ತಮ ಸ್ನೇಹಿತನಾಗಿದ್ದರು. ಅವರ ಸಾವಿನ ಶಾಕ್‌ನಿಂದ ನನಗೆ ಇನ್ನೂ ಹೊರ ಬರಲು ಆಗುತ್ತಿಲ್ಲ' ಎಂದು ದುಃಖದಿಂದ ನುಡಿದಿದ್ದಾರೆ ತಮಿಳು ನಟ ಶಿವಕಾರ್ತಿಕೇಯನ್.

ನಿನ್ನೆ ಬೆಂಗಳೂರಿಗೆ ಆಗಮಿಸಿದ ಈ ನಟ ನಾಗವಾರದಲ್ಲಿರುವ ಶಿವರಾಜಕುಮಾರ್ ಹಾಗೂ ಸದಾಶಿವನಗರದಲ್ಲಿರುವ ಪುನೀತ್ ರಾಜಕುಮಾರ್ ಮನೆಗೆ ಭೇಟಿ ನೀಡಿ ಪುನೀತ್ ಪತ್ನಿ ಅಶ್ವಿನಿ ಹಾಗೂ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ. ಅಲ್ಲಿಂದ ಕಂಠೀರವ ಸ್ಟುಡಿಯೊಗೆ ತೆರಳಿ ಪುನೀತ್ ಸಮಾಧಿಗೆ ಪೂಜೆ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಶಿವಕಾರ್ತಿಕೇಯನ್ 'ಪುನೀತ್ ಇಲ್ಲ ಎಂಬುದನ್ನು ಈಗಲೂ ನನಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ನಾನು ಒಂದು ತಿಂಗಳ ಹಿಂದಷ್ಟೇ ಪುನೀತ್ ಜೊತೆ ಮಾತನಾಡಿದ್ದೆ. ನನ್ನ ಚಿತ್ರಗಳಿಗೆ ಅವರು ವಿಶ್ ಮಾಡಿದ್ರು, ಅವರನ್ನು ಕಳೆದುಕೊಂಡಿದ್ದು ಇಡೀ ಭಾರತೀಯ ಸಿನಿಮಾ ರಂಗಕ್ಕೆ ಒಂದು ದೊಡ್ಡ ಲಾಸ್. ಆದ್ರೆ ಅವರು ಎಲ್ಲರ ಮನಸ್ಸಿನಲ್ಲೂ ಸದಾ ಚಿರಾಯು. ಅವರು ಎಲ್ಲಾ ನಟರಿಗೂ ಬಹು ದೊಡ್ಡ ಸ್ಫೂರ್ತಿ. ಅವರದು ತುಂಬಾ ಒಳ್ಳೆಯ ಮನಸ್ಸು. ಎಲ್ಲರನ್ನೂ ತುಂಬಾ ಪ್ರೀತಿಯಿಂದ ಮಾತನಾಡಿಸುತ್ತಿದ್ರು. ಅವರೊಬ್ಬ ಅತ್ಯದ್ಭುತ ನಟ. ಅವರ ನಿಧನ ಬಹಳ ನೋವು ತಂದಿದೆ. ನನ್ನ 'ಡಾಕ್ಟರ್' ಸಿನಿಮಾ ನೋಡಿ ಪುನೀತ್ ಮತ್ತು ಶಿವಣ್ಣ ಇಬ್ಬರೂ ವಿಶ್ ಮಾಡಿದ್ದರು. ಅವಾರ್ಡ್ ಕಾರ್ಯಕ್ರಮದಲ್ಲಿ ನಾನು ಪುನೀತ್ ಅವರನ್ನ ಭೇಟಿಯಾಗಿದ್ದೆ. ಬಹಳಷ್ಟು ಸಾರಿ ಅವರ ಜೊತೆ ಫೋನ್‌ನಲ್ಲಿ ಮಾತನಾಡಿದ್ದೇನೆ. ಬಹಳ ಸರಳ ವ್ಯಕ್ತಿತ್ವ ಅವರದು. ಬೆಂಗಳೂರಿಗೆ ಬಂದ್ರೆ ತಪ್ಪದೇ ಮನೆಗೆ ಬರುವಂತೆ ಆಹ್ವಾನಿಸಿದ್ರು. ಆದರೆ ಅವರನ್ನು ಬಂದು ಭೇಟಿ ಮಾಡಲು ಸಾಧ್ಯವೇ ಆಗಿರಲಿಲ್ಲ. ಇಂದು ನಾನು ಅವರನ್ನ ಭೇಟಿಯಾಗಲು ಬಂದ್ರೆ ಅವರೇ ಇಲ್ಲ. ನಮ್ಮ ಮನದಲ್ಲಿ ಯಾವತ್ತೂ ಅವರು ಇರ್ತಾರೆ. ನನಗೆ ಇನ್ನೂ ನಂಬಲು ಸಾಧ್ಯವಾಗುತ್ತಿಲ್ಲ. ಅಂಥದರಲ್ಲಿ ಅಭಿಮಾನಿಗಳು, ಕುಟುಂಬದವರು ಹೇಗೆ ನಂಬುತ್ತಾರೆ. ಅವರ ಕುಟುಂಬಕ್ಕೆ ಭಗವಂತ ದುಃಖ ಭರಿಸುವ ಶಕ್ತಿ ನೀಡಲಿ' ಎಂದು ಭಾವುಕವಾಗಿ ಮಾತನಾಡಿದ್ದಾರೆ. ❖



ಅಪ್ಪು ಸಮಾಧಿಗೆ ನಮನ ಸಲ್ಲಿಸಿದ ಶಿವಕಾರ್ತಿಕೇಯನ್

ಹಬ್ಬಕ್ಕಿರಲಿ ಉಗುರಿನ ಸಿಂಗಾರ...!



ಸುಕೃತ ಎಸ್.

ದೀಪಾವಳಿ ಹಬ್ಬಕ್ಕೆ ಬಟ್ಟೆ ಖರೀದಿಸಿ ಆಯಿತು. ಅದಕ್ಕೊಪ್ಪುವ ಒಡವೆಯನ್ನೂ ಹೊಂದಿಸಿಕೊಂಡಾಯ್ತು. ಅಂದಹಾಗೆ ಉಗುರುಗಳ ಅಂದಕ್ಕೆ ಏನು ಮಾಡೋದು ಅಂತ ಯೋಚಿಸಿದ್ದೀರಾ? ಉಡುಪಿಗೆ ಹೊಂದುವ ಬಣ್ಣಗಳನ್ನು ಹಾಕಿಕೊಂಡರೆ ಸಾಕೇ?... ನೀವು ಹೀಗೆ ಯೋಚಿಸಿರಬಹುದು. ಟ್ರೆಂಡ್‌ಗೆ ಹೊಂದುವ ನೈಲ್ ಆರ್ಟ್ ಅನ್ನು ಮನೆಯಲ್ಲಿಯೇ ಮಾಡಿಕೊಳ್ಳಬಹುದು.

ಡಿಪ್ ನೈಲ್ಸ್ (ಕೆಂಪು ಮತ್ತು ಬಂಗಾರದ ಬಣ್ಣ)

ಕೆಂಪು ಮತ್ತು ಬಂಗಾರದ ಬಣ್ಣಗಳಿಂದ ನಿಮ್ಮ ಉಗುರಗಳನ್ನು ಸಿಂಗರಿಸಿಕೊಳ್ಳಬಹುದು. ಡಿಪ್ ನೈಲ್ಸ್‌ನ ಉಪಯೋಗ ಎಂದರೆ, ಎರಡು- ಮೂರು ಬಣ್ಣಗಳನ್ನು ಬಳಸಬಹುದು. ಉಗುರುಗಳಿಗೆ ನೀವು ಹಚ್ಚಿದ ಮೊದಲ ಕೋಟ್ ನೈಲ್ ಪಾಲಿಷ್‌ನ ಮೇಲೆ ಡಿಪ್ ನೈಲ್ಸ್ ಮೂಲಕ ವಿವಿಧ ಬಣ್ಣಗಳನ್ನು ಹಚ್ಚಿಕೊಳ್ಳಬಹುದು.

ಕ್ಯಾಂಡಿ ಕೇನ್ ನೈಲ್ ಆರ್ಟ್

ಈ ವಿನ್ಯಾಸ ರಜಾ ದಿನಗಳಲ್ಲಿ ಹೆಚ್ಚು ಒಪ್ಪುತ್ತದೆ. ಕೆಂಪು ಮತ್ತು ಹಸಿರು ಬಣ್ಣದ ಕಾಂಬಿನೇಷನ್ ಈ ರೀತಿಯ ನೈಲ್ ಆರ್ಟ್‌ಗೆ ಹೆಚ್ಚು ಸೂಕ್ತ. ಇದರೊಂದಿಗೆ ಕೆಂಪು ಬಿಳಿ, ಹಸಿರು ಬಿಳಿ.. ಈ ರೀತಿಯ ಕಾಂಬಿನೇಷನ್ ಕೂಡ ಬಳಸಬಹುದು. ಹಬ್ಬದ ರಜಾವನ್ನು ಮಜಾ ಮಾಡಲು, ಉಗುರನ್ನು ಅಂದವಾಗಿಸಿಕೊಳ್ಳಲು ಈ ವಿನ್ಯಾಸ ಸೂಕ್ತ.

ಸ್ನೋಫ್ಲೇಕ್ ಟಿಪ್ಸ್

ಇದು ಎಲ್ಲಾ ಬಗೆಯ ಔಟ್‌ಫಿಟ್‌ಗೂ ಹೊಂದುವಂಥ ಉಗುರು ವಿನ್ಯಾಸ. ಸಮಯ ಕಡಿಮೆ ಇದೆ, ಬೇಗ ತಯಾರಾಗಬೇಕು ಎಂದರೆ ಈ ವಿನ್ಯಾಸವನ್ನು ಮಾಡಿಕೊಳ್ಳಬಹುದು. ಒಂದೇ ಬೆರಳಿಗೆ ಈ ವಿನ್ಯಾಸ ಮಾಡಿಕೊಂಡರೂ ಚೆನ್ನಾಗಿ ಒಪ್ಪುತ್ತದೆ. ಹಳದಿ ಮತ್ತು ಕಂದು, ಗುಲಾಬಿ ಮತ್ತು ಬಿಳಿ ಹೀಗೆ ವಿವಿಧ ಬಣ್ಣಗಳ ವಿನ್ಯಾಸದಿಂದ ಸ್ನೋಫ್ಲೇಕ್ಸ್ ನೈಲ್ ಆರ್ಟ್‌ಯನ್ನು ಮಾಡಿಕೊಳ್ಳಬಹುದು.

ಡಾಟ್ ಸ್ನೋಫ್ಲೇಕ್

ಹೆಸರೇ ಹೇಳುವಂತೆ ಚಳಿಗಾಲದ ಫ್ಯಾಷನ್‌ಗೆ ಒಪ್ಪುವಂಥ ಉಗುರು ವಿನ್ಯಾಸವಿದು. ಸ್ನೋಫ್ಲೇಕ್ ಟಿಪ್ಸ್ ವಿನ್ಯಾಸದ ರೀತಿಯಲ್ಲೇ ಇರುವ ಆದರೆ, ಸಣ್ಣ ಬದಲಾವಣೆ ಇರುವ ಉಗುರು ವಿನ್ಯಾಸ ಇದಾಗಿದೆ. ಯಾವ ಬಣ್ಣಗಳ ಕಾಂಬಿನೇಷನ್‌ಗೂ ಇದು ಹೊಂದುತ್ತದೆ. ಸ್ವಲ್ಪ ಗಾಢ ಬಣ್ಣಗಳು ಈ ವಿನ್ಯಾಸಕ್ಕೆ ಹೆಚ್ಚು ಹೊಂದುತ್ತವೆ.

ರೆನ್‌ಡಿಯರ್ ಆ್ಯನ್‌ತ್ಲರ್ಸ್

ಹೆಸರೇ ಹೇಳುವಂತೆ ಜಿಂಕೆಯ ಕೊಂಬುಗಳಂತೆ ಈ ವಿನ್ಯಾಸವು ಇರಲಿದೆ. ಇದು ತುಂಬಾ ಟ್ರೆಂಡಿ ಆಗಿದ್ದು, ರಜಾ ದಿನಗಳಿಗೆ ಹೇಳಿ ಮಾಡಿಸಿದ ನೈಲ್ ಆರ್ಟ್ ಆಗಿದೆ. ಒಂದೇ ಬೆರಳಿಗೂ ಹೊಂದುತ್ತದೆ ಅಥವಾ ಎಲ್ಲಾ ಬೆರಳಿಗೆ ಈ ವಿನ್ಯಾಸ ಮಾಡಿಕೊಂಡರೂ ಅಂದವಾಗಿರುತ್ತದೆ.

ತುಂಬಾ ಕಡಿಮೆ ಸಮಯದಲ್ಲಿ ಅಂದವಾದ ವಿನ್ಯಾಸ ಬೇಕಾದರೆ ಹೀಗೆ ಮಾಡಿಬಹುದು. ತುಂಬಾ ಸುಲಭ ಮತ್ತು ತುಂಬಾ ಅಂದವಾಗಿ ಕಾಣಬೇಕು ಅಂತಾದರೆ ಹೀಗೆ ಮಾಡಿ- ಯಾವ ಬಣ್ಣಗಳನ್ನು ಬೇಕಾದರೂ ಆಯ್ದುಕೊಳ್ಳಿ, ಉಗುರಿಗೆ ಹಚ್ಚಿಕೊಳ್ಳಿ ಅದರ ಮೇಲೆ ಗ್ಲಿಟರ್ ಅನ್ನು ಹಾಕಿಕೊಳ್ಳಿ. ಇದು ವಿನ್ಯಾಸಕ್ಕೆ ಹೊಸ ಲುಕ್ ತಂದುಕೊಡುತ್ತದೆ ಮತ್ತು ತುಂಬಾ ಸುಲಭದಲ್ಲೂ ಮಾಡಿಕೊಳ್ಳಬಹುದು.

56ರ ಹರೆಯದಲ್ಲಿ ಕಿಂಗ್ ಖಾನ್



ಬಾಲಿವುಡ್ ನಟ ಶಾರುಕ್ ಖಾನ್ (ನವೆಂಬರ್ 2) 56ನೇ ವಯಸ್ಸಿಗೆ ಕಾಲಿರಿಸಿದ್ದಾರೆ. ಕಿಂಗ್ ಖಾನ್ ಹುಟ್ಟುಹಬ್ಬಕ್ಕೆ ಅಭಿಮಾನಿಗಳು, ಸ್ನೇಹಿತರು ಹಾಗೂ ಸಹ ನಟ–ನಟಿಯರು ಸಾಮಾಜಿಕ ಜಾಲತಾಣದಲ್ಲಿ ಶುಭಾಶಯ ಕೋರಿದ್ದಾರೆ.

ಶಾರುಕ್ ಖಾನ್ ನಿವಾಸ ಮನ್ನತ್ ಮುಂದೆ ಪ್ರತಿ ವರ್ಷ ಅಭಿಮಾನಿಗಳು ಸೇರುತ್ತಾರೆ. ಈ ವೇಳೆ ಶಾರುಕ್ ಬಾಲ್ಕನಿಗೆ ಬಂದು ಅಭಿಮಾನಿಗಳತ್ತ ಕೈ ಬೀಸುತ್ತಾರೆ. ಆದರೆ ಈ ವರ್ಷ ಪುತ್ರ ಆರ್ಯನ್ ಖಾನ್ ಡ್ರಗ್ಸ್ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದಿರುವುದರಿಂದ ಶಾರುಕ್ ಬೇಸರದಲ್ಲಿದ್ದಾರೆ. ಈ ಸಲ ಬಾಲ್ಕನಿಗೆ ಬಂದು ಅಭಿಮಾನಿಗಳನ್ನು ನೋಡುವ ಸಾಧ್ಯತೆ ಕಡಿಮೆ ಎಂದು ಅವರು ಆಪ್ತರು ಹೇಳಿಕೊಂಡಿದ್ದಾರೆ.

ಇನ್ನು ಸಾಮಾಜಿಕ ಮಾಧ್ಯಮಗಳಲ್ಲೂ ಶಾರುಕ್ ಯಾವುದೇ ಪೋಸ್ಟ್ ಹಂಚಿಕೊಂಡಿಲ್ಲ, ಅಭಿಮಾನಿಗಳ ಕುರಿತಂತೆ ಯಾವುದೇ ಬರಹವನ್ನು ಬರೆದಿಲ್ಲ. ‘ಪ್ರತಿ ವರ್ಷದಂತೆ ಈ ವರ್ಷ ನನಗಾಗಿ ನನ್ನ ಮನೆಯ ಮುಂದೆ ಬಂದು ನಿಲ್ಲಬೇಡಿ, ಅಲ್ಲದೇ ಈ ವರ್ಷ ಅಂತರವನ್ನು ಕಾಪಾಡಿಕೊಳ್ಳುವುದು ಮುಖ್ಯ’ ಎಂದು ಅಭಿಮಾನಿಗಳಿಗೆ ಕಳೆದ ವರ್ಷ ಹೇಳಿದ್ದರು.

ಬಾಲಿವುಡ್ ಸಿನಿಮಾ ನಟ, ನಟಿಯರು, ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರು ಸೇರಿದಂತೆ ರಾಜಕೀಯ ನಾಯಕರು, ಉದ್ಯಮಿಗಳು ಹಾಗೂ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳ ಮೂಲಕ ಜನ್ಮದಿನದ ಶುಭಾಶಯಗಳನ್ನು ಕೋರುತ್ತಿದ್ದಾರೆ.

ಬಾಲಿವುಡ್‌ನ ಬಾದ್‌ಶಾ ಎಂದು ಅಭಿಮಾನಿಗಳಿಂದ ಪ್ರೀತಿಯಿಂದ ಕರೆಸಿಕೊಳ್ಳುವ ಶಾರುಕ್ ಕಳೆದ 3 ದಶಕಗಳಿಂದ ಬಾಲಿವುಡ್ ಸಿನಿರಂಗದಲ್ಲಿ ಸ್ಟಾರ್ ನಟರ ಪಟ್ಟಿಯಲ್ಲಿದ್ದಾರೆ. ಅನೇಕ ಬ್ಲಾಕ್‌ಬಸ್ಟರ್ ಸಿನಿಮಾಗಳನ್ನು ನೀಡಿರುವ ಕಿಂಗ್ ಖಾನ್ ರೊಮ್ಯಾಂಟಿಕ್ ಚಿತ್ರಗಳಿಂದಲೂ ಹೆಸರು ಗಳಿಸಿದ್ದಾರೆ.

‘ಆರ್‌ಆರ್‌ಆರ್’ ಸಿನಿಮಾ: ಅದ್ದೂರಿತನಕ್ಕೆ ಮತ್ತೊಂದು ಹೆಸರೇ ರಾಜಮೌಳಿ!

ಟಾಲಿವುಡ್

ಬಹುನಿರೀಕ್ಷಿತ ‘ಆರ್‌ಆರ್‌ಆರ್’ ಸಿನಿಮಾದ ‘ಗ್ಲಿಂಪ್ಸ್’ ಯುಟ್ಯೂಬ್‌ನಲ್ಲಿ ಬಿಡುಗಡೆಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸಿಕ್ಕಾಪಟ್ಟೆ ಸದ್ದು ಮಾಡುತ್ತಿದೆ.

ಗ್ಲಿಂಪ್ಸ್ (ವಿಡಿಯೊ ತುಣಕು) ಬಿಡುಗಡೆಯಾಗಿ 24 ಗಂಟೆಗಳಲ್ಲಿ 75 ಲಕ್ಷಕ್ಕೂ ಹೆಚ್ಚು ವೀಕ್ಷಣೆ ಪಡೆದಿದ್ದು ಅಭಿಮಾನಿಗಳಿಂದ ಮೆಚ್ಚುಗೆ ವ್ಯಕ್ತವಾಗಿದೆ. ಇದನ್ನು ನೋಡಿದರೆ ‘ಬಾಹುಬಲಿ’ ಸಿನಿಮಾವನ್ನೂ ಮೀರಿಸುವ ದೃಶ್ಯ ವೈಭವ ‘ಆರ್‌ಆರ್‌ಆರ್’ ಸಿನಿಮಾದಲ್ಲಿ ಇದೆ ಎಂಬ ಸುಳಿವನ್ನು ನಿರ್ದೇಶಕ ರಾಜಮೌಳಿ ನೀಡಿದ್ದಾರೆ.

ಕೇವಲ 45 ಸೆಕೆಂಡ್‌ನ ಈ ವಿಡಿಯೊದಲ್ಲಿ ಆ್ಯಕ್ಷನ್ ದೃಶ್ಯಗಳು ಮೈನವಿರೇಳುವಂತೆ ಇವೆ. ಗ್ರಾಫಿಕ್ಸ್ ಕೆಲಸ ಕೂಡ ಅದ್ಭುತವಾಗಿದೆ.

ಜ್ಯೂನಿಯರ್ ಎನ್‌ಟಿಆರ್ ಕಣ್ಣ ಮೇಲಿಂದ ನೆತ್ತರು ಜಾರಿದರೆ, ರಾಮ್ ಚರಣ್ ಕಣ್ಣ ಮುಂದೆ ಅಗ್ನಿ ನರ್ತಿಸುತ್ತದೆ. ಒಟ್ಟಾರೆ ಈ ಗ್ಲಿಂಪ್ಸ್ ಅದ್ದೂರಿತನದಿಂದ ಕೂಡಿದೆ.

2022 ರ ಜನವರಿ 7 ರಂದು ‘ಆರ್‌ಆರ್‌ಆರ್’ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದ್ದು, ಸಂಕ್ರಾಂತಿ ಹಬ್ಬಕ್ಕೆ ಸಿನಿಪ್ರಿಯರಿಗೆ ದೊಡ್ಡ ಉಡುಗೊರೆ ಸಿಕ್ಕಂತಾಗಿದೆ.

ಡಿವಿವಿ ಎಂಟರ್‌ಟೈನ್‌ಮೆಂಟ್ಸ್ ಸಂಸ್ಥೆಯು ಸುಮಾರು ₹400 ಕೋಟಿಯಲ್ಲಿ ನಿರ್ಮಿಸುತ್ತಿರುವ ಈ ಚಿತ್ರವು 20ನೇ ಶತಮಾನದ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರಾದ ಅಲ್ಲೂರಿ ಸೀತಾರಾಮರಾಜು ಮತ್ತು ಕೋಮರಂ ಭೀಮ್ ಅವರ ಜೀವನ ಕಥೆಯನ್ನು ಆಧರಿಸಿದೆ.

ಈ ಚಿತ್ರದಲ್ಲಿ ರಾಮ್‌ಚರಣ್ ಅಲ್ಲೂರಿ ಸೀತಾರಾಮರಾಜು ಪಾತ್ರದಲ್ಲಿ, ಜೂನಿಯರ್ ಎನ್‌ಟಿಆರ್ ಕೋಮರಂ ಭೀಮ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬಾಲಿವುಡ್ ನಟರಾದ ಅಜಯ್ ದೇವ್‌ಗನ್ ಮತ್ತು ಆಲಿಯಾ ಭಟ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಬಾಲಿವುಡ್ ನಟಿ ರವಿನಾ ಟಂಡನ್, ನಟ ಸಂಜಯ್ ದತ್ ಸೇರಿದಂತೆ ಭಾರತೀಯ ಚಿತ್ರರಂಗದ ಹಲವು ಸ್ಟಾರ್ ನಟ-ನಟಿಯರು ಈ ಸಿನಿಮಾದಲ್ಲಿ ನಟಿಸುತ್ತಿರುವುದು ವಿಶೇಷ. ರಾಜಮೌಳಿ ಅಭಿಮಾನಿಗಳು ಸಿನಿಮಾ ಬಿಡುಗಡೆಗಾಗಿ ಎದುರು ನೋಡುತ್ತಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Overseas

SAUDI ARABIA
LONG TERM JOB | BLOCK VISA READY
Required for MV & LV Factory / Metal Fabrication / Moulds / Cable Factory
- **Wireman** (For MV & LV Panels, Switchgear, MCC, etc)
- **Assemblers** (MV & LV Switchgear, MCC, RMU, MCCB, VCB etc)
- **Production Foreman**
- **Testing & Commissioning Technicians** (For MV Switchgear)
- **WEDM Operators**
- **CNC Operators** (Punching, Bending, Milling)
- **CNC Programmers**
- **Tool & Die Makers**
- **Tool Room Technician**
- **Press Technicians**
- **Production Technicians** - Cable
- **Lab Technicians** - Cable
- **Maintanance Foreman**(Mechanical/Electrical)
- **Maint Technicians** - Mechanical / Electrical / HVAC

Age Below 35 years Only
All above candidates must have ITI / Diploma with minimum 3 years work experience in similar field
Client Interview on 7th & 8th Nov 2021 for Immediate Shortlisting send Updated CV to hr@jobkraft.com
JOBKRAFT
#10, SLV Complex, Airport Main Road, Domlur, Bangalore-71
Tel: 9448081836 / 9845156868 / 9740451972
License No.B-0537/KAR/PER/1000+/5/7546/2006

ST SOPHIA'S Convent School, CBSE, Nagarabhavi, requires, Admissions Manager, Experienced & Trained Teachers for Science, English and Social Science to Primary & High School. principal@stsophiaconvent.org Contact: 9243031872

Teachers/ Professors

SVR COLLEGE
(Affiliated to Bangalore University & AICTE)
Samasandrapalya, HSR Layout Sector 2, Bangalore 560102
REQUIRES
Asst. Professors in Computer Science, Commerce & Management
Qualified Librarian
Computer Lab Technician
Tally Operator
9036590979 / 9448883586
Send resume to: svrfaculty@gmail.com

WANTED EXPERIENCE TEACHERS, Maths and Science For High School, For HEADMISTRESS Post and Computer Experience About STS and Primary D.Ed. Teachers and HOD. NEW CAMBRIDGE HIGH SCHOOL. Contact: 9448312549, 7899992107.

WANTED LADY TEACHERS: TCH/ D.Ed/ B.Sc, B.Ed. Attend with Original Certificates between 10.00 am to 1.00 pm SREE VENKATESHWARA ENGLISH PRIMARY SCHOOL, #1, V.S.Layout, Krishnarajapuram, Bangalore- 560036. Contact: 080-25611873, 7411135627

LADY PE Teachers needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 Email: chitrakootajobs@gmail.com WALK-IN Welcome

ARVIND
Residential School & PU College, Kunigal
Ph: 08132-210000/ 01
Mob: 9483683002/ 005
Website: www.arvindinternationalschool.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
PRIMARY TEACHERS (1 to 5th std all Subjects)
MIDDLE & HIGH SCHOOL (English & Social) and
PU LECTURER (English)
Also required WARDEN (M/F), NURSE (Female)
Experienced in all streams with desired qualification
Send your resume to: airsjobs@gmail.com within 7 days
OR Walk-in interview from Mon to Sat between 10am to 2pm

WANTED LADY TEACHER'S for Primary forall Subjects Coffee Board Layout, Hebbal. Contact: 9008981637/ 22330003

REQUIRED PRIMARY, Middle and High School TEACHERS. Call and Walk-in, immediate appointment. 1). Pilana Garden/ Frazer Town- 9845538513, 2). Shampura/ R.T.Nagar- 9902952254, 3). Bagalgunte/ Hesarghatta- 7760121910, 4). Hosur/ Attibele- 9677399525, 5). T.C.Palya/ K.R.Puram- 8884178602, 6). Horamavu/ Rampura- 9980497804

SJES COMPOSITE PU COLLEGE Medahally, Bengaluru-560049 Highly Dedicated and Experienced FACULTY required for COMPUTER SCIENCE and BUSINESS STUDIES to teach I&II PU STUDENTS. #9980299880 9449266566

BHARATHI GROUP OF INSTITUTIONS
Babanagar, Near Reva University, KIA Airport road Yelahanka Ph:7012165635
K H B Road, Kanakanagar, R.T.Nagar Ph: 23650458
Walk-in interview for
Primary Head Mistress Heads of Department & Co-ordinators for Montessori English Maths Science and P A to the Principal with Experience.
Lady Teachers for Montessori/ Primary/ Higher primary/ High school in English Kannada Hindi EVS Maths Science Social studies.
Candidates from Yelahanka Kempapura & Thanisandra road preferred for Bagalur road campus.
Contact: 7847037927 7012165635 9900046660
Email id: headmistressbgi@gmail.com

TEACHER Required for Primary & High School Maths, Science Quali: B.Sc, B.Ed & M,Sc Exp/ Freshers. M.S.Convent R.T.Nagar, Sultanpalya, 9844456549 /080-23651001

KENNETH GEORGE ENGLISH SCHOOL, Teacher's Wanted for all Subjects, R.T.Nagar & Kempapura Branch Call:9980671934/ 9663398209 Email: kennethgeorgeschool@gmail.com

Accounts & Finance

WANTED SR Accountant and accounts assistant, send your resume to info@excelwirecut.com contact: 9686198499.

Call Centre

WE ARE hiring telecallers (Female) for Banking Process Freshers or Exp, Sal 12K to 25k CTC, Locn : Wilson Garden Ph; 8310729325 / 9964946195

Engg/ Production Technical

WANTED
Work Location – Bangalore
ITI / Diploma/ BE, B-tech in Electronics. With 2 – 6 years' Exp
Repairs Technicians L3 & L4
- Repair Engineer
- Failure Analysis
- Technician
- Debug Repair Technician

Customer support officer - Any Degree
Min 1 to 3 yrs. Exp in solving customer issues.
- Excellent knowledge in MS Excel
- Excellent communication with English and Hindi

9900807520, 7829572680
info@shinems.in

Hospital & Medical Jobs

REQUIRED EXPERIENCED Staff-Nurses & Pharma-Aid for Shekhar Hospital,Bull temple-Road, Bangalore-19, Good-Salary offered.Contact: 08022421144/ 9901927970

Hotel

REQUIRED EXPERIENCED OPERATION MANAGER to run BAR & PUB with good,Salary and Accommodation, Contact- 8867255121

Multiple Vacancy

REQUIRED FIELD executives & Telecaller (M&F) For Banking Loan Collections. NOTE: Not a consultancy, direct company appointment: 8951450742, 7019700755, 080-42115669.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

VIVA TOYOTA
JOB OPENING AT VIVA TOYOTA, BENGALURU FOR ITS GROWTH PLAN
Sales: Team Leader, Sales Officer
Service: Asst.Manager (Gen & Bodyshop), Job Controller, Floor Leader, Service Advisor (Gen & Bodyshop), Service Marketing Executives, Chief General Technicians, Technicians (Gen & Bodyshop)
USED CAR (U-TRUST): Procurement Officer, Sales Officer
SUPPORT TEAM: Accounts Manager, Asst. Accounts Manager, Accounts Executive, Digital Marketing Manager, Digital Tele caller, Manager (Call Centre), Facility & Admin Manager, HR Asst. Manager, Lady Driving Instructor, Audit executive, Drivers
CALL OR SEND YOUR RESUME TO US!
9900035302
9900021150
hr@vivatoyota.co.in
hr_mysorerd@vivatoyota.co.in

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

WANTED PRIMARY TEACHERS (English medium) BUS DRIVERS, COOKS, GENERAL STAFF. Contact: Sri Rakum School, Indiranagar, Bangalore. Email: rakumrakum@yahoo.com Tel: 7019254844, 8050153119, 8310128324.

Part-Time Jobs

WORK FROM HOME Age 25- 65, PUC, Above Those who are Interested Malleshwarm: 7019215243/ 9886641282

Security & Detectives

SENTINEL SECURITY, a reputed Security Agency Urgent requirement for Field Officers Total package: Rs.25,000/- Contact 9035221652

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph:2553 4194.
TENDER NOTICE
Quotations are invited from authorised **Microsoft Gold and Silver partners** for the **supply of Microsoft Cloud Campus** agreement to Vemana Institute of Technology.
For more details vist: www.reddyjanasangha.org
Quotations should be addressed to "The General Secretary" at the above address within **7 days** from this advertisement.
General Secretary KRJS — President KRJS

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph:2553 4194.
TENDER NOTICE
Tenders are invited from reputed firms for construction of Compound wall at KRJS Medical Hospital premises Kasavanahalli at Rs. 14.80 Lakhs.
For more details vist: www.reddyjanasangha.org
Tenders should be addressed to "The General Secretary" at the above address within **7 days** from this advertisement.
General Secretary — President

BUSINESS

Business Offers

Distributors

PARTNER TO manage the teamat Rajajinagar with zero investment. Call 7019246661

Finance

FINANCE AGAINST Land & Building Properties Industries Schools Hospitals Projects & NRI Funds.7358729820

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411275189

RENTAL PROPERTIES

Accommodation Available

Industrial And Factory

AVAILABLE RENT 12,400 Sqft Factory Shed [Looking Good] 45HP Power, Peenya 2nd Stage: 9019526108/ 9448654450

REAL ESTATE SELLING

Sites

Sunkadakatte

SUNKADKATTE NEAR Anjali School South Facing 30X50 Available for Sale. Rate 5300/Sqft (Negotiable) Contact: 9880439138

Sadashiva Nagar

SITE FOR Sale RMV Sadashivanagar 2250 sft East and south corner contact -9353612304 Brokers excuse

ADMISSION CORNER

ADMISSION OPEN
3 Years Course **LL.B**
PANCHAMI College of LAW
Chikka Kodigehalli, Magadi Road, Bengaluru-560112
(M) 9343799528 / 9740380588

PERSONAL

Change of Name

I, R. Jayanit Mala D/o #24060 Ex-SGT, Late Ramdass.K.V, Presently R/at #203, South Road, Austin Town, Bengaluru-47, Have Changed my name to R. JAYANTHI MALA vide affidavit dated 12.10.2021 before notary Gangaraju. B.N., Bangalore.

I, GIRISHA MUNEGOWDA, Residing at, Bengaluru-562149, have changed my name as GIRISH MUNEGOWDA, vide affidavit dated 2/11/2021 before Notary P.C. Ramaiah, Bengaluru

I, JAYASHREE, residing at Bengaluru-79 have changed my name as JAYASHREE THIMMAIAH, vide affidavit dated 2/11.2021 before,Notary P.C.Ramaiah, Bengaluru

I, K. HIMABINDU W/o No. 16111647L, Rank: L/NK, Kethamreddy Shreedhar Reddy R/a No. 78/1, Eguva Abbavaram (Vill&Po), Rayachoti (Tk), Cuddapah, Andhra Pradesh- 516269 have changed my name to KETHAMREDDY HIMABINDU affidavit dated 02.11.2021 notary A.R. Muneer Ahmed, Bangalore.

I, THRISHALADEVI LAKSHMI JAGADISH, R/at Ward No.139, Ward No.9, Gangammagudi Road, Chickballapur 562101 have changed my name to LAKSHMI JAGADISH, vide affidavit dated 30-10-2021 sworn to before notary K.H. Venkatappa, Chickballapur.

I, AYEESHA FATHIMA MOHAMAD YOUSUFF, Residing at #154/15, 15th Main, BTM Layout 2nd Stage, Madina Nagar, Bengaluru-560076. Have Changed my name to AYEESHA FATHIMA Vide affidavit dated 02/11/2021 before Notary L. Gopalakrishna, Bangalore

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE | NAME CHANGE | JOB | EDUCATION | HEALTH | MATRI | AUTO | ASTRO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH DECCAN HERALD — ಪ್ರಜಾವಾಣಿ ಕ್ಲಾಸಿಫೈಡ್ಸ್